ಶ್ರೀ ಗುರುದೇವ ರಾನಡೆಯವರ

ಸಮನ್ವಯ ದರ್ಶನ

(Philosophy of Synthesis)



ಲೇಖಕರು

ಶ್ರೀ ಮನೋಹರ ಶ್ರೀನಿವಾಸ ದೇಶಪಾಂಡೆ ಎಂ.ಎ.

ಅಥಣಿ

ಪ್ರಕಾಶಕರು

ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ, (ACPR)

ಬೆಳಗಾವಿ.

ದ್ವಿತೀಯ ಆವೃತ್ತಿ - 2006

ಓಂ

ಸಾ ವಿದ್ಯಾ ಯಾ ವಿಮುಕ್ತಯೆ।

ಶ್ರೀ ಗುರುದೇವ ರಾನಡೆಯವರ

ಸಮನ್ವಯ ದರ್ಶನ

(Philosophy of Synthesis)

ಲೇಖಕರು

ಶ್ರೀ ಮನೋಹರ ಶ್ರೀನಿವಾಸ ದೇಶಪಾಂಡೆ ಎಂ.ಎ.

ಅಥಣಿ

ದ್ವಿತೀಯ ಆವೃತ್ತಿ

ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ,

ಬೆಳಗಾವಿ.

Academy of Comparative Philosophy &
Religion, Belagavi
2006

ಶ್ರೀ ಗುರುದೇವ ರಾನಡೆಯವರ ಸಮನ್ವಯ ದರ್ಶನ
ಲೇಖಕರು : ಮ. ಶ್ರೀ. ದೇಶಪಾಂಡೆ
ಪ್ರಕಾಶಕರು : ತುಲನಾತ್ಮಕ ಧರ್ಮ- ದರ್ಶನ ವಿದ್ಯಾಪೀಠ,
ಬೆಳಗಾವಿ.
ಪುಟ ಸಂಖ್ಯೆ :

ಪ್ರಥಮ ಆವೃತ್ತಿ : 1982
ದ್ವಿತಿಯ ಆವೃತ್ತಿ : 2006

ಬೆಲೆ : ರೂ. 100/-

ಪ್ರಕಾಶಕರು :
ಶ್ರೀ ಎಂ. ಬಿ. ಝಿರಲಿ, ಬಿ.ಕಾಂ. ಎಲ್.ಎಲ್.ಎಮ್.
ಸೆಕ್ರೆಟರಿ : ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ,
ಬೆಳಗಾವಿ.

ಮುದ್ರಕರು :
ದೇಸಾಯಿ ಪ್ರಿಂಟರ್ಸ,
1264, ಶಿವಸಾಗರ ಆರ್ಕೆಡ, ರಾಮಲಿಂಗ ಖಿಂಡ ಗಲ್ಲಿ,
ಬೆಳಗಾವಿ.

ಒಳ್ನುಡಿ

ನಿಂಬರಗಿಯ ಗುರುಲಿಂಗಜಂಗಮ ಮಹಾರಾಜರು ಹತ್ತೊಂಬತ್ತನೆಯ ಶತಮಾನದಲ್ಲಿ ಆಗಿಹೋದ ತಪೋಧನರು, ಅಂತರ್ಮುಖಿಗಳು, ಸ್ಥಿತಪ್ರಜ್ಞರು ಕುಳಿತಲ್ಲಿ ನಿಂತಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಅನುಭವಿಸಬಲ್ಲ ಮಹಾನುಭಾವರು. ಅವರ ಅನುಗ್ರಹ - ಆತ್ಮಾನುಭವವು ಗುರು - ಶಿಷ್ಯ - ಪರಂಪರೆಯಲ್ಲಿ ಪ್ರವಹಿಸಿತು; ಅದನ್ನು ಯಥಾವತ್ತಾಗಿ ಗ್ರಹಿಸಿದವರಲ್ಲಿ ಗುರುದೇವ ರಾನಡೆ ಅವರು ಸಮರ್ಥರು.

ಅವರು ಬರೀ ತತ್ವಜ್ಞಾನಿಗಳಲ್ಲ, ತತ್ವ ಸಾಕ್ಷಾತ್ಕಾರಿಗಳು, ಶೇಷ್ಠ ಚಿಂತಕರು, ಸಾಧಕರು, ಸಮಾಧಿಪುರುಷರು. ಅವರ ಹೃದಯದಲ್ಲಿ ಗುರುಶ್ರದ್ಧೆ; ಅವರ ದೃಷ್ಟಿಯಲ್ಲಿ ಈಶಾವಾಸ್ಯ; ಅವರ ಮಾತಿನಲ್ಲಿ ಅರಿವಿನ ಬೆಳಕು. ಅವರು ಭಿನ್ನತೆಯಲ್ಲಿ ಏಕತೆ ಕಂಡವರು. ಸೀಮೆಗೊಂಡುದರಲ್ಲಿ ನಿಸ್ಸೀಮಪರಮಸ್ತುವ ಗುರುತಿಸಿದವರು. ಅವರಿಗೆ ಯಾವುದೂ ಅಸಾಂಗತ್ಯವಲ್ಲ; ಎಲ್ಲವೂ ಶಿವಸತ್ಯದ ವಿಸ್ತಾರ.

ಅವರ ಅನುಭಾವ - ಚಿಂತನೆಯ ಸಾರ ಈ 'ಸಮನ್ವಯ ದರ್ಶನ'! ಸುಂದರ ವಿವೇಚನೆ ಶಾಸ್ತ್ರಶುದ್ಧ ಪ್ರತಿಪಾದನೆ ಇದು ಸಾಮಾನ್ಯನಿಗೆ ಕೈಪಿಡಿ; ಸಾಧಕನಿಗೆ ಮಾರ್ಗದರ್ಶಿ; ಚಿಂತಕ ವಿದ್ವಾಂಸರಿಗೆ ಬೋಧ ದೀಪ; ಅನುಭಾವಿಗಳಿಗೆ ಸುಭೋಜ್ಯ. ಇಲ್ಲಿ ವಿಶ್ವಸಂದೇಶವಿದೆ; ಜಾಗತಿಕ ಸಮಸ್ಯಗಳಿಗೆ ಪರಿಹಾರವಿದೆ.

ಈ ಕೃತಿ ರಚಿಸಿದವರು ದಿ. ಮನೋಹರ ದೇಶಪಾಂಡೆ ಅಧ್ಯಯನ ಶೀಲರು, ಆಧ್ಯಾತ್ಮಿಕ ಸಾಹಿತಿಗಳು, ನಯ ವಿನಯ ನಡೆ ನುಡಿಯಲ್ಲಿ ಗುರುದೇವ ರಾನಡೆಯವರ ತತ್ವಗಳನ್ನು ಯಥಾವತ್ತಾಗಿ ಮೂಡಿಸಿದ್ದಾರೆ. ಕಾಲು ಶತಕದ ಹಿಂದೆ ರೂಪ ತಾಳಿದ ಈ ಹೊತ್ತಿಗೆಯು ಪುನರ್ಮುದ್ರಣ ಗೊಳ್ಳುತ್ತಿರುವದು ಸಂತಸದ ಸಂಗತಿ. ಗುರುದೇವತತ್ವ ವಿದ್ಯಾಲಯದ ಪ್ರಕಾಶಕರು ಅಭಿನಂದನಾರ್ಹರು.

ದಿ. 8-4-2006

ಜುಗುಳ

ಶ್ರೀ ಸಿದ್ಧೇಶ್ವರ ಮಹಾ ಸ್ವಾಮಿಗಳು

ಪ್ರಕಾಶಕರ ಎರಡು ಮಾತು

(ಎರಡನೇ ಆವೃತ್ತಿ)

ಪ್ರಸುತ್ತ 'ಸಮನ್ವಯ ದರ್ಶನ'ವು ಶ್ರೀ ಗುರುದೇವ ಡಾ॥ ಆರ್. ಡಿ. ರಾನಡೆ ಯವರ ವಿಚಾರಧಾರೆಯ ಸಂಗ್ರಹರೂಪವಾದ ಕೃತಿ. ಇದರ ಎರಡನೇ ಆವೃತ್ತಿಯನ್ನು ಓದುಗರ ಕೈಗಿಡುವ ಈ ಶುಭ ಸಂದರ್ಭವು ಅವರೇ ಸ್ಥಾಪಿಸಿದ, 'ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ'ದ (Academy of Comparative Philosophy and Religion, Belgaum) ಜೀವನದಲ್ಲಿಯ ಒಂದು ಮಹತ್ತರ ಮೈಲಿಗಲ್ಲು.

ಭರತಖಂಡವು ಕಂಡ ಅಗ್ರಗಣ್ಯ ತತ್ತ್ವವೇತ್ತರಲ್ಲಿ ಒಬ್ಬರಾದ **ಶ್ರೀ ಗುರುದೇವರು ಇಹಪರದ ಸಮನ್ವಯದಲ್ಲಿ ಬಾಳಿದ ಒಬ್ಬ ಸಂತಶ್ರೇಷ್ಠರು.** ತಮ್ಮ ಅತ್ಯಂತ ಗೌರವಾನ್ವಿತ ವ್ಯಕ್ತಿಸಂಪನ್ನತೆಯನ್ನು ಎಲೆಮರೆಯ ಹೂವಿನಂತೆ ರಹಸ್ಯವಾಗಿಟ್ಟು ಪ್ರಚಾರವನ್ನು ಬಯಸದೆ, ತಮ್ಮ "ನಿಂಬರಗಿ" ಸಂಪ್ರಾದಾಯದ ಲಕ್ಷಾಂತರ ಸಾಧಕರಿಗೆ ಗುರುದೇವರಾಗಿದ್ದರು.

ತಮ್ಮ ಲೋಕ ಮಂಗಳಕರವಾದ ಬದುಕಿನುದ್ದಕ್ಕೂ, ವಿವಿಧ ಧರ್ಮ-ದರ್ಶನಗಳ ಏಕ ಸೂತ್ರತೆಯನ್ನು, ತಮ್ಮ ಹೃದಯ ಮೂಲದಲ್ಲಿ ಕಂಡು ಅವುಗಳ ಸಾರಸೂತ್ರತೆಯನ್ನು ಆಧುನಿಕ ಪರಿಭಾಷೆಯಲ್ಲಿ ಹೇಳಿದರು. ತಮ್ಮ ಪಾಶ್ಚಿಮಾತ್ಯ - ಪೌರ್ವಾತ್ಯ ಶಾಸ್ತ್ರಪಾಂಡಿತ್ಯದ ಒರೆಗಲ್ಲಿನಲ್ಲಿ ಅವುಗಳನ್ನು ಸ್ಫುಟಗೊಳಿಸಿ ಹೊರಜಗತ್ತಿಗೆ ನೀಡಿದ ಏಕಮೇವ ದಾರ್ಶನಿಕರಾಗಿದ್ದರು.

ಪ್ರಸುತ್ತ ನಾವು ಬದುಕುತ್ತಿರುವ ಗೊಂದಲಮಯ ವಾತಾವರಣದಲ್ಲಿ ಸಮಾಜಕ್ಕೆ ಅಗತ್ಯವಾಗಿ ಬೇಕಾದ, ಧರ್ಮ ಮತ್ತು ದರ್ಶನಗಳೆಡೆಗಿನ, ನಿಖರ ಮತ್ತು ಅನುಭವ ಸಾಧ್ಯ ವಿಚಾರಗಳ ಹೊತ್ತಿಗೆ ಈ "ಸಮನ್ವಯ ದರ್ಶನ". ಇದನ್ನು ರಚಿಸಿದ ಮಹಾನುಭಾವರು ಡಿ॥ ಮನೋಹರ, ಶ್ರೀ. ದೇಶಪಾಂಡೆಯವರು. ಆಸಕ್ತರೆಲ್ಲರೂ ಸದಾಸ್ಮರಿಸುವಂಥ ಮೌಲಿಕವಾದ ಕಾರ್ಯವನ್ನು ಅವರು ಈ ಮೂಲಕ ಮಾಡಿದ್ದಾರೆ.

ಶ್ರೀ ಗುರುದೇವರ ಆಪ್ತಶಿಷ್ಯರಾಗಿ, ಅವರ ಹೃದಂತರಂಗವನ್ನು ಬಲ್ಲವರಾಗಿ ಅವರ ಅಗಾಧ ಚಿಂತನೆಯ ಸಾರರೂಪವನ್ನು ಲೋಕದೆದುರು ಈ ಗ್ರಂಥದ ಮೂಲಕ ಇರಿಸಿ

ಹೊಸಪೀಳಿಗೆಗೆ ಮಹದುಪಕಾರವನ್ನು ಮಾಡಿದ್ದಾರೆ. ಶ್ರೀ ಗುರುದೇವರ ತತ್ತ್ವ ಹಾಗೂ ಆದರ್ಶಗಳನ್ನು ತ್ರಿಕರಣ ಪೂರ್ವಕವಾಗಿ ಪಾಲಿಸಿದ ಈ ಲೇಖಕರು ಶ್ರೀ ಗುರುದೇವರ ಸಮಗ್ರ ಉಪದೇಶವನ್ನು ಅರಿತುಕೊಳ್ಳುವ, ಸಹಾಯಕಾರಿಯಾಗುವಂಥ ಈ ಸುಂದರ ಕೃತಿಯನ್ನು ಕನ್ನಡ ಜಗತ್ತಿಗೆ ನೀಡಿದ್ದಾರೆ.

ಇಂಥಹ ಮೌಲಿಕ ಪ್ರಕಟಣೆಯಲ್ಲಿ ಸಹಕರಿಸಿದ ಎಲ್ಲ ಮಹನೀಯರನ್ನು ಆಢಳಿತ ಮಂಡಳಿಯು ಹೃದಯ ಪೂರ್ವಕವಾಗಿ ವಂದಿಸುತ್ತದೆ. ವಿಶೇಷತ: ಶ್ರೀ ಗೋವಿಂದ ಮ. ದೇಶಪಾಂಡೆಯವರು, (ಲೇಖಕ ದಿ|| ಮನೋಹರ ದೇಶಪಾಂಡೆಯವರ ಪುತ್ರರು), ಅವರು ಇದರ ಕರಡನ್ನು ತಿದ್ದಿಕೊಟ್ಟದ್ದಲ್ಲದೇ, ಈ ಪ್ರಕಟಣೆಗೆ ಧನ ಸಹಾಯ ಮಾಡಿ ಉಪಕರಿಸಿದ್ದಾರೆ. ಇನ್ನೊಬ್ಬ ಸಹೃದಯದ ಸ್ನೇಹಿತರು ಶ್ರೀ ಬಸವರಾಜ ಸಿದಲಿಂಗಪ್ಪ ನಿಂಬಾಳ ಇವರೂ ಸಹ ಪ್ರಕಟಣೆಗೆ ಆರ್ಥಿಕ ಸಹಾಯವನ್ನು ಸಲ್ಲಿಸಿ ಸಹಕರಿಸಿದ್ದಾರೆ. ಅದೇರೀತಿ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲ ಮಹನಿಯರಿಗೂ ನಾವು ಕೃತಜ್ಞರು. ಕರಡು ಪ್ರತಿಯನ್ನು ತಿದ್ದಿದ ಶ್ರೀ ಸುಬ್ರಹ್ಮಣ್ಯ ಭಟ್ ಇವರಿಗೆ ನಾವು ಅತ್ಯಂತ ಉಪಕೃತರಾಗಿರುವೆವು.

ಸರ್ವೆ ಜನಾ : ಸುಖಿನೋ ಭವಂತು

ಇತಿ ಸಜ್ಜನ ವಿಧೇಯ
ಮಾರುತಿ. ಭಿ. ಝಿರಲಿ
ಗೌ|| ಕಾರ್ಯದರ್ಶಿ ಹಾಗೂ ಟ್ರಸ್ಟಿಗಳು
ತುಲನಾತ್ಮಕ ಧರ್ಮ- ದರ್ಶನ ವಿದ್ಯಾಪೀಠ,
ಬೆಳಗಾವಿ.

ಬೆಳಗಾವಿ
6-6-2006
(ಶ್ರೀ ಗುರುದೇವರ ಪುಣ್ಯತಿಥಿ)

ಪ್ರಕಾಶಕರ ನುಡಿ

(ಪ್ರಥಮ ಆವೃತ್ತಿ)

Academy of Comparative Philosophy and Religion, Belgaum(ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ, ಬೆಳಗಾವಿ) ಇದರ ಪರವಾಗಿ, "ಶ್ರೀ ಗುರುದೇವ ರಾನಡೆ ಸ್ಮಾರಕ ಉಪನ್ಯಾಸ ಸರಣಿಯಲ್ಲಿ ಶ್ರೀಮಾನ್ ಮನೋಹರರಾವ ದೇಶಪಾಂಡೆ, M.A. ಅವರು ಶ್ರೀಗುರುದೇವರ ಸಮನ್ವಯ ದರ್ಶನ"ವೆಂಬ ವಿಷಯವನ್ನು ಕುರಿತು ದಿನಾಂಕ 29-5-1980 ರಿಂದ 2-6-1980ರ ವರೆಗೆ ಐದು ಉಪನ್ಯಾಸಗಳನ್ನಿತ್ತರು. ಇವೆಲ್ಲ ಉಪನ್ಯಾಸಗಳು ಬೆಳಗಾವಿಯಲ್ಲಿ ಶ್ರೀಗುರುದೇವ ಮಂದಿರದಲ್ಲಿ ನಡೆದವು. ಶ್ರೀಮಾನ್ ಡಿ. ಬಾಲಗೋಪಾಲನ್, I.A.S. ವಿಭಾಗ ಕಮೀಶನರ, ಬೆಳಗಾವಿ ಅವರು ಈ ಉಪನ್ಯಾಸ ಸರಣಿಯನ್ನು ಉದ್ಘಾಟಿಸಿದರು. ಶ್ರೀ ಕೆ. ಡಿ. ಸಂಗೋರಾಮ್ (ಈ ವಿಶ್ವಸ್ತ ಮಂಡಳಿಯ ಚೇರಮನ್) ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀಮಾನ್ ಮನೋಹರರಾವ ದೇಶಪಾಂಡೆ ಅವರು ಶ್ರೀಗುರುದೇವರ ತತ್ತ್ವಜ್ಞಾನವನ್ನು ಆಳವಾಗಿ ಅಭ್ಯಸಿಸಿದವರಿದ್ದು, ಶ್ರೀಗುರುದೇವರ ನಿಕಟ ಸಹವಾಸದ ಲಾಭವನ್ನು ಬಹುಕಾಲ ಪಡೆದವರಿರುವರು. ಶ್ರೀಗುರುದೇವರ ಜೀವನವನ್ನು ಕುರಿತು ಕನ್ನಡ ಹಾಗೂ ಇಂಗ್ಲೀಷ ಭಾಷೆಗಳಲ್ಲಿ ಗ್ರಂಥಗಳನ್ನು ಬರೆದಿರುವರಲ್ಲದೆ, ಇತರ ಅನೇಕ ಸಾಹಿತ್ಯ ಕೃತಿಗಳನ್ನು ನಿರ್ಮಿಸಿರುವರು. ಆದುದರಿಂದ ಈ ಸರಣಿಯಲ್ಲಿಯ ಅವರ ಉಪನ್ಯಾಸಗಳು ವಿದ್ವಜ್ಜನರಿಂದ ಹಾಗೂ ಭಾವಿಕ ಭಕ್ತರಿಂದ ಒಳ್ಳೇ ಮೆಚ್ಚುಗೆಯನ್ನು ಪಡೆದಿರುವವು. ಈ ಸರಣಿಯಲ್ಲಿಯ ಅವರ ಉಪನ್ಯಾಸಗಳು ಪರಮಾರ್ಥದಲ್ಲಿ ಹಾಗೂ ಪರಮಾರ್ಥದ ತತ್ತ್ವಜ್ಞಾನದಲ್ಲಿ ಆಸಕ್ತಿಯುಳ್ಳವರಿಗೆ ಬಹಳ ಉಪಯುಕ್ತವಾಗಿರುವುದರಿಂದ, ಅವುಗಳನ್ನು ಈ ಗ್ರಂಥರೂಪದಲ್ಲಿ ಪ್ರಕಟಿಸಲು ನಮಗೆ ತುಂಬ ಸಂತೋಷವೆನಿಸುವುದು.

ಬೆಳಗಾವಿ
1-1-1982

ಪ್ರಕಾಶಕರು

ಓಂ

ನನ್ನ

ಪರಾತ್ಪರ ಸದ್ಗುರುಗಳಾದ

ಶ್ರೀ ಸಮರ್ಥ ಭಾವೂ ಸಾಹೇಬ ಮಹಾರಾಜರವರಿಗೆ

ಅನನ್ಯ ಭಾವದಿಂದ

ಅರ್ಪಣ

ಮನೋಹರ

ಶ್ರೀ ಗುರುದೇವ ರಾನಡೆ ಸ್ಮಾರಕ ಉಪನ್ಯಾಸ ಸರಣಿ

ಉದ್ಘಾಟನೆ : 29-5-1980



1) ಗ.ಶಂ.ಕುಲಕರ್ಣಿ, 2) ಕೃ.ದಾ. ಸಂಗೋರಾಮ, 3) ಡಿ. ಬಾಲಗೋಪಾಲನ್, I.A.S. 4) ಮ.ಶ್ರೀ ದೇಶಪಾಂಡೆ, 5) ನಾ.ಸಿ.ಮೆಟ್ರಾಣಿ.

ಹಿಂದಿನಬಾಜು - 1) ಜ.ವಾ. ಪರುಳೆಕರ. 2) ದಿ.ಬಾ. ಪರುಳೇಕರ.
3) ಪ್ರೊ. ತಂಗೋಡ.

ಲೇಖಕರ ಪರಿಚಯ

(1899 - 1990)

ಶ್ರೀ ಮನೋಹರರಾವ ದೇಶಪಾಂಡೆಯವರ ಜನ್ಮ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸಂಬರಗಿ ಎಂಬ ಚಿಕ್ಕ ಗ್ರಾಮದಲ್ಲಿ ಆಯಿತು. ಇವರ ಮಾಧ್ಯಮಿಕ ಹಾಗೂ ಮಹಾವಿದ್ಯಾಲಯದಲ್ಲಿಯ ಶಿಕ್ಷಣ ಪುಣೆ ನಗರದಲ್ಲಿ ಪೂರ್ಣಗೊಂಡವು ಪುಣೆಯಲ್ಲಿ ವಾಸ್ತವ್ಯದಲ್ಲಿ ಅವರು ಲೋಕ ಮಾನ್ಯ ತಿಲಕ, ಮಹಾತ್ಮಾಗಾಂಧಿ ಹಾಗೂ ಅರವಿಂದ ಘೋಷ ಅವರ ಪ್ರಭಾವಕ್ಕೆ ಒಳಗಾದರು. ಅಂದಿನಿಂದ ರಾಷ್ಟ್ರೀಯ ಶಿಕ್ಷಣ ಪ್ರಸಾರದ ಮಾಧ್ಯಮದಿಂದ ರಾಷ್ಟ್ರಸೇವೆಯನ್ನು ಮಾಡಬೇಕೆಂಬ ವಿಚಾರ ಅವರ ತಲೆಯಲ್ಲಿ ಸುಳಿಯಹತ್ತಿತು.

ಇ. ಸಂ. 1925 ರಲ್ಲಿ ಮೊದಲ ಸಲ ನಿಂಬಾಳಕ್ಕೆ ಹೋದಾಗ, ಶ್ರೀ ಗುರುದೇವ ರಾನಡೆಯವರ ಎದುರು ಈ ವಿಷಯ ಪ್ರಸ್ತಾಪಕ್ಕೆ ಬಂತು. ಆಗ ಗುರುದೇವರು ಅವರನ್ನುದ್ದೇಶಿಸಿ ಹೀಗೆ ಹೇಳಿದರು ಮೊದಲು ಈಶ ಸೇವೆ ಆಮೇಲೆ ದೇಶಸೇವೆ ಭಗವಂತನ ಬೆಂಬಲವಿಲ್ಲದೇ ನೀವು ಏನನ್ನೂ ಸಾಧಿಸಲಾರಿರಿ.

ಶ್ರೀ ಗುರುದೇವರ ವ್ಯಕ್ತಿತ್ವಕ್ಕೆ ಮಾರು ಹೋದ ಶ್ರೀ ಮನೋಹರರಾಯರು ಅವರ ಈ ಅಭಿಪ್ರಾಯ ವನ್ನುಕೇಳಿ, ತಮ್ಮ ಈ ಮೊದಲಿನ ವಿಚಾರವನ್ನು ಬದಲಿಸಿದರು. ಅವರ ಸಲಹೆಯಂತೆ ಇಂಚಗಿರಿಗೆ ಹೋಗಿ, ಶ್ರೀ ಅಂಬುರಾವ ಮಹಾರಾಜರಿಂದ ಅನುಗ್ರಹವನ್ನು ಪಡೆದುಕೊಂಡು, ನಾಮ ಸಾಧನೆಗೆ ಪ್ರಾರಂಭಮಾಡಿದರು. (ಆಗಸ್ಟ - 1920)

ಈ ಮಧ್ಯೆ ಅಥಣಿಯಲ್ಲಿಯ ಕೆಲವು ಹಿರಿಯರು ಒಟ್ಟಿಗೆ ಸೇರಿ ಸ್ಥಾಪಿಸಿದ ಜಾಧವಜಿ ಶಿಕ್ಷಣ ಸಂಸ್ಥೆಯಲ್ಲಿ ಆಜೀವ ಸದಸ್ಯರಾಗಿ ಶಿಕ್ಷಕ ವೃತ್ತಿಯನ್ನು ಸ್ವೀಕರಿಸಿಯಾಗಿತ್ತು. ಆದರೆ ಅನುಗ್ರಹ ಪ್ರಾಪ್ತಿಯಾದ ನಂತರ, ಮನೋಹರರಾಯರು ಅಧ್ಯಾಪನ ಕಾರ್ಯದ ಜೊತೆಗೆ, ಅಧ್ಯಯನ ಹಾಗೂ ಲೇಖನ ಕಾರ್ಯಗಳನ್ನು ಪ್ರಾರಂಭಿಸಿದರು. ಅವರು ಒಟ್ಟಿನಲ್ಲಿ ನಲವತ್ತಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ರಚಿಸಿದ್ದಾರೆ ಅವರ ಪ್ರಭುವಿನ ಪ್ರಭೆ ಎಂಬ ಗ್ರಂಥಕ್ಕೆ ಶ್ರೀಗುರುದೇವರು ಹಾಗೂ ಸನ್ಮಾನ್ಯ ಶ್ರೀ ಬಿ. ಡಿ. ಜತ್ತಿಯವರು ಮುನ್ನುಡಿಯನ್ನು ಬರೆದಿದ್ದು ಅದರಲ್ಲಿ ಆ ಗ್ರಂಥದ ಬಗ್ಗೆ ತಮ್ಮ ಅತಿಯಾದ ಮೆಚ್ಚುಗೆಯನ್ನು ವ್ಯಕ್ತ

ಪಡಿಸಿದ್ದಾರೆ. ಬಸವಣ್ಣನವರ ದಿವ್ಯಜೀವನ ಎಂಬ ಗ್ರಂಥಕ್ಕೆ ಭಾರತ ಸರಕಾರದ ಪ್ರಶಸ್ತಿ ದೊರಕಿದೆ.

ಶ್ರೀ ಮನೋಹರರಾಯ ರಲ್ಲಿ ಕವಿತ್ವಶಕ್ತಿಯೂ ಮನೆಮಾಡಿಕೊಂಡಿತ್ತು. ಅಕ್ಕರದ ಅಂಜಲಿಗಳು ಎಂಬುದು ಅವರ ಕಾವ್ಯಸಂಗ್ರಹ. ಮರಾಠಿಯಲ್ಲಿ ಅವರು ಅಂಬುರಾವ ಮಹಾರಾಜ ಚರಿತಾಮೃತ, ಗುರುದೇವ ಚರಿತಾಮೃತ ಹಾಗೂ ಗೀತಗುರುದೇವ ಎಂಬ ಮೂರು ಕಾವ್ಯಗ್ರಂಥಗಳನ್ನು ರಚಿಸಿದ್ದಾರೆ.

ಶ್ರೀ ಮನೋಹರರಾಯರಲ್ಲಿಯ ಈ ಕಾವ್ಯಶಕ್ತಿಯನ್ನು ಚೆನ್ನಾಗಿ ಗುರುತಿಸಿದ ಶ್ರೀಗುರುದೇವರು ತಮ್ಮ ಕನ್ನಡ ಸಂತರ 'ಪರಮಾರ್ಥಪಥ' ಎಂಬ ಗ್ರಂಥದಲ್ಲಿ ಅವರನ್ನು 'A Rising Mystical Poet' (ಉದಯಿಸುತ್ತರುವ ಅನುಭಾವಯತ ಕವಿ) ಎಂಬುದಾಗಿ ವರ್ಣಿಸಿದ್ದಾರೆ.

ಶ್ರೀಮನೋಹರರಾಯರ ಇಂಗ್ಲೀಷ ಗ್ರಂಥಗಳಲ್ಲಿಅತ್ಯಂತ ಜನಪ್ರಿಯವಾದವುಗಳೆಂದರೆ "Light of India - Message of Mahatmaji" "Dr. Ranade's Life of Light" "Dr. Ranade's Dhyana Gita" ಹಾಗೂ "St. Ekanatha's Gospel of God Devotion"

ಈ ರೀತಿ, ನಿಷ್ಣಾತ ಶಿಕ್ಷಕರು, ಪ್ರತಿಭಾವಂತ ಲೇಖಕರು ಹಾಗೂ ಕವಿಗಳು ಮತ್ತು ಶ್ರೇಷ್ಠ ಸಾಧಕರು ಆಗಿದ್ದ ಶ್ರೀ ಮನೋಹರಾಯರು. ರವಿವಾರ ದಿನಾಂಕ 26-07-1990 ರಂದು ಅಥಣಿಯಲ್ಲಿಯ ತಮ್ಮ ಸ್ವಗೃಹದಲ್ಲಿ ಶಾಂತ ಚಿತ್ತರಾಗಿ ದೇಹವನ್ನು ತ್ಯಜಿಸಿದರು.

ಹಾರ್ದಿಕ ಕೃತಜ್ಞತೆಗಳು

ಗೋವಿಂದರಾವ್ ಮ. ದೇಶಪಾಂಡೆ
ಎಂ.ಎ.,ಎಂ.ಎಡ್.
(ನಿವೃತ್ತ ಪ್ರಿನ್ಸಿಪಾಲರು, ಜೆ. ಎ. ಪದವಿ ಪೂರ್ವ ಮಹಾ ವಿದ್ಯಾಲಯ ಅಥಣಿ)

'ಸಮನ್ವಯ ದರ್ಶನ'ದ ಈ ಹೊಸ ಆವೃತ್ತಿಯನ್ನು ಹೊರತರುವ ಕಾರ್ಯದಲ್ಲಿ ನಮಗೆ ಅನೇಕ ವಿಧ ಸಹಾಯವನ್ನು ಸಲ್ಲಿಸಲು ಸ್ವಯಂ ಪ್ರೇರಣೆಯಿಂದ ಮುಂದೆ ಬಂದ ದಿ. ಮನೋಹರರಾಯರ ಜಿರಂಜೀವರಾದ, ಶ್ರೀ ಗೋವಿಂದರಾಯರಿಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಶ್ರೀ ಬಿ. ಎಸ್. ನಿಂಬಾಳ್
(ಸಹಾಯಕ ಕಮೀಶನರ್ ವಾಣಿಜ್ಯ ತೆರಿಗೆ ಇಲಾಖೆ, ಬೆಳಗಾವಿ.)

"ಕೆರೆಯ ನೀರನ್ನು ಕೆರೆಗೆ ಚೆಲ್ಲಿ" ಎಂಬಂತೆ ಬದುಕುತ್ತಿರುವ, ಬಾಳಿನಲ್ಲಿ ಭಗವಂತ ಕೊಟ್ಟಿದ್ದನ್ನು ಸದಿಚ್ಛಾಕಾರ್ಯಗಳಿಗೆ ವ್ಯಯಿಸುತ್ತಲಿರುವ, ಶ್ರೀ ಬಸವರಾಜ ಸಿದಲಿಂಗಪ್ಪ ನಿಂಬಾಳ್. ತಾಂಬಾ ಬಿಜಾಪುರಜಿಲ್ಲೆ ಮುಕ್ಕಾಂ, ಬೆಳಗಾವಿ ಇವರಿಗೆ ದೇವರು ಚತುರ್ಭದ್ರವನ್ನು ನೀಡಲೆಂದು ಕೃತಜ್ಞತಾಪೂರ್ವಕವಾಗಿ ಹಾರೈಸುತ್ತೇವೆ.

•

ವಿಶ್ವಸ್ಥ ಮಂಡಳಿ,
ತುಲನಾತ್ಮಕ ಧರ್ಮ-ದರ್ಶನ ವಿದ್ಯಾಪೀಠ,
ಬೆಳಗಾವಿ.

ಪ್ರಸ್ತಾವನೆ

ಓಂ ನಮೋ ಸದ್ಗುರು ವರನೆ
ಪರಮಾತ್ಮ-ತೇಜದ ನಿಲಯನೇ ।
ಎನ್ನ ಸುಮನವನರಳಿಸೈ
ಕಾರುಣ್ಯದಿಂ ಚಿತ್ಸೂರ್ಯನೇ ॥
ಎನ್ನ ಹೃದಯದಿ ನೆಲೆಸಿ ನಿನ್ನಯ
ದಿವ್ಯ ಪ್ರಭೆಯನು ಬೆಳಗಿಸೈ ।
ನಿನ್ನ ಸಂದೇಶವನು ಈ
ಮತಿಮಂದನಿಂದಲಿ ತಿಳಿಯಿಸೈ ॥

ಶ್ರೀ ಗುರುದೇವರಿಂದ ಸ್ಥಾಪಿತವಾದ "ತುಲನಾತ್ಮಕ ಧರ್ಮದರ್ಶನ ವಿದ್ಯಾಪೀಠದ" ಪರವಾಗಿ ಪ್ರತಿವರುಷ "ಶ್ರೀಗುರುದೇವ ಸ್ಮಾರಕ ಉಪನ್ಯಾಸ"ಗಳನ್ನು ಅದರ ಧರ್ಮದರ್ಶಿಗಳು ಏರ್ಪಡಿಸುತ್ತಿರುವುದು ತಮಗೆ ತಿಳಿದ ವಿಷಯ. ಅದನ್ನು ಈ ಸಲ ಕೊಡಲು ಅವರು ನನ್ನನ್ನು ಆಮಂತ್ರಿಸಿ, ಶ್ರೀಗುರುದೇವರಿಗೆ ನನ್ನ ಅಳಿಲು ಸೇವೆಯನ್ನು ಸಲ್ಲಿಸುವ ಸುಸಂಧಿಯನ್ನು ಒದಗಿಸಿ ಕೊಟ್ಟಿರುವರು. ಅದಕ್ಕಾಗಿ ಅವರಿಗೆ ನನ್ನ ಹಾರ್ದಿಕ ವಂದನೆಗಳು.

ಈ ವರೆಗೆ ಈ ಉಪನ್ಯಾಸಗಳನ್ನು ಕೊಟ್ಟವರು ತುಂಬ ಪ್ರಚಂಡ ಪಂಡಿತರು. ಅಂಥವರು ಅಲಂಕರಿಸಿದ ವೇದಿಕೆಯನ್ನು ಏರುವ ಯೋಗ್ಯತೆಯು ನನ್ನಲ್ಲಿ ಇಲ್ಲ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ನಾನೇನೂ ಹಿರಿಯ ವಿದ್ವಾಂಸನಲ್ಲ, ದರ್ಶನದ ವಿದ್ಯಾರ್ಥಿ ಅಲ್ಲ. ಅದನ್ನು ಆಳವಾಗಿ ಅಧ್ಯಯನ ಮಾಡಿದವನಲ್ಲ. ಶ್ರೀಗುರುದೇವರ ಪಾದದ ಬಳಿ ಕುಳಿತು ಅವರಿಂದ ಕೆಲವು ವಿಷಯವನ್ನು ಕಲಿತಿರುವೆ. ಅವರ ಹಾಗೂ ಬೇರೆ ಸತ್ಪುರುಷರ ಉದ್ಗ್ರಂಥಗಳನ್ನು ಓದಿಕೊಂಡಿರುವೆ. ಅವರ ವಿಚಾರಗಳ ಅಲ್ಪ ಮನನ-ಅವರ ಸಂದೇಶವನ್ನು ಕುರಿತು ಅಲ್ಪ ಲೇಖನ-ಇದು ನನ್ನ ಕಿರಿದಾದ ಬಂಡವಾಳ, ಅದನ್ನು ಬಳಸಿ ಇಂದು ನಾಲ್ಕು ಮಾತುಗಳನ್ನು ಹೇಳಲು ಯತ್ನಿಸುವೆ.

ಸರಿ ! ಹೀಗಿರಲು ಈ ಹಿರಿದಾದ ಹೊಣೆಯನ್ನು ಸ್ವೀಕರಿಸಿರುವುದು ಏತಕ್ಕೆ ? ಎಂದು ನೀವು ಕೇಳಬಹುದು. ಅದಕ್ಕೆ ಒಂದೆರಡು ಕಾರಣಗಳು ಇಲ್ಲದಿಲ್ಲ. ಮೊದಲನೆಯದಾಗಿ, ಈ ಅನಿರೀಕ್ಷಿತ ಜಿತಣವು ಶ್ರೀಗುರುದೇವರ ಪ್ರೇರಣೆಯ ಫಲ ಎಂಬುದು ನನ್ನ ಭಾವನೆ. ಈ ಭಾವನೆಯನ್ನು ಬೆಂಬಲಿಸುವ ಕೆಲ ಸ್ವಪ್ನ ಸಂದೇಶಗಳೂ ಲಭಿಸಿವೆ. ಆದುದರಿಂದ ಇದು ಗುರುಗಳ ಆಜ್ಞೆ ಅದನ್ನು ನೆರವೇರಿಸಲು ಬಲವನ್ನು ಎಂದಿನಂತೆ ಅವರೇ ದಯಪಾಲಿಸಬಹುದು

ಎಂಬುದು ನನ್ನ ಶ್ರದ್ಧೆ. ಯಾಕೆಂದರೆ ಈವರೆಗೆ ಅವರ ಕರುಣದ ಬೆಂಬಲವೇ ನನ್ನಿಂದ ಅವರ ಹಾಗೂ ಬೇರೆ ಹಿರಿಯ ಸಂತರ ಪಾರಮಾರ್ಥಿಕ ಬೋಧನೆಯನ್ನು ಕನ್ನಡ, ಮರಾಠಿ ಹಾಗೂ ಆಂಗ್ಲ ಭಾಷೆಗಳಲ್ಲಿ ಅರುಹಿಸಿರುವದು. ಅಂದಿನಂತೆ ಇಂದು ಕೂಡ ಅದು ನನಗೆ ಬೆಳಕು, ಬಲವನ್ನು ನೀಡದಿರದು ಎಂಬ ಭರವಸೆ. ನಿಜವಾಗಿ, ಹಿರಿಯರು ತಮ್ಮ ಕಾರ್ಯವನ್ನು ತಮ್ಮ ಅಂತ:ಸತ್ವದಿಂದಲೇ ನೆರವೇರಿಸುವರು. ಉಪಕರಣಗಳು ನಿಮಿತ್ಯಮಾತ್ರ. **ಕ್ರಿಯಾಸಿದ್ಧಿ:ಸತ್ವೇ ಭವತಿ ಮಹತಾಂ ನೋಪಕರಣೇ ।** ಅಲ್ಲವೇ? ಈ ನಂಬಿಕೆಯೇ ಈ ಜೀತಣವನ್ನು ಸ್ವೀಕರಿಸಲು ನನ್ನನ್ನು ಪ್ರೇರಿಸಿತು.

ಮೇಲಾಗಿ ಗುರುಕರುಣಕ್ಕೆ ಅಸಾಧ್ಯವಾದುದು ಆವುದು ? ಅದು ಮೂಕನನ್ನು ಮಾತನಾಡಿಸಬಲ್ಲದು, ಕುಂಟನನ್ನು ಕುಣಿಸಬಲ್ಲದು.

ಮೂಕಂ ಕರೋತಿ ವಾಚಾಲಂ।
ಪಂಗುಂ ಲಂಘಯತೇ ಗಿರಿಂ ॥

ಹೇಳಿ ಕೇಳಿ ನಾನೊಂದು ಪೊಳ್ಳು ಬಿದಿರು ನಳಿಕೆ. ಅದರೂ ಗುರುದೇವರ ತುಟಿಗಳ ಸ್ಪರ್ಶವಾದರೆ ಅದು ಸುಮುಧುರ ಸಂಗೀತವನ್ನು ಉಸುರಲರಿಯದೇ ? ನನ್ನ ಸ್ವಂತ ದೌರ್ಬಲ್ಯವನ್ನು ಅರಿತ ನಾನು ಗುರುಗಳ ಕರುಣವನ್ನು ನಂಬಿ ತಮ್ಮ ಎದುರು ನಿಂತಿರುವೆ. ಸರ್ವಜ್ಞನು ಉಸುರಿರುವಂತೆ.

ಹೇಳಲರಿಯನು ನಾನು-ಹೇಳಿನಲು ಹೇಳುವೆನು.
ಭಾಲ-ಲೋಚನನ ಶರಣರ ಆಳಾಗಿ।
ಹೇಳುವೆನು ನೋಡಾ ॥

ಇನ್ನೊಂದು ಮಾತು : **ಮಾಮನುಸ್ಮರ ಯುದ್ಧ್ಯ ಚ ।** ನನ್ನನ್ನು ನೆನೆದು ಯತ್ನವನ್ನು ಮಾಡು, ಗೆಲ್ಲುವೆ! ಎಂದು ಭಗವಂತನು ಅರುಹಿಲ್ಲವೇ ? ಶ್ರೀರಾಮನನ್ನು ನೆನೆದು ಮಾಡಿದ ಕಾರ್ಯವು ಕೂಡಲೇ ಕೈಗೂಡದಿರದು. ಅದಕ್ಕಾಗಿ ಕರ್ತೃ ರಾಮನೆಂದು ಬಗೆದು ಕಾರ್ಯಮಾಡು ಎಂದು ಶ್ರೀ ಸಮರ್ಥರು ಹೇಳಿಲ್ಲವೇ ? ಈ ರೀತಿಯ ಪ್ರಬೋಧವನ್ನು ನೆನೆದು, ನಂಬಿ, ಈ ಹಿರಿಯ ಹೊಣೆಯನ್ನುವಹಿಸಿರುವೆ. ಅದಕ್ಕೆ ಗೆಲುವನ್ನು ನೀಡುವುದು ಶ್ರೀ ಗುರುದೇವರ ಹೊಣೆ. ಇದು ನನ್ನ ಮನೋಭಾವ. **ಕೃತಜ್ಞತೆಗಳು :**

ಶ್ರೀ ಗುರುದೇವರು ತಮ್ಮ ಈ 'ಭಕ್ತ'ನ ಮೇಲೆ ಎಂದಿನಂತೆ ಕೃಪಾಪ್ರಸಾದದ ಮಳೆಯನ್ನೇ ಕರೆದಿರುವರು. ನನ್ನ ಬುದ್ಧಿಗೆ ಬೆಳಕನ್ನು ದಯಪಾಲಿಸಿ, ತಾವೇ ಪ್ರೇರಿಸಿದ ಈ ಉಪನ್ಯಾಸಗಳನ್ನು ನನ್ನಿಂದ ಬರೆಸಿರುವರು. ಅವುಗಳ ಬರಹವು ಮುಗಿದ ಮೇಲೆ, ಅವನ್ನು ಅವರು ತುಂಬಕೊಂಡಾಡಿದರು. ಅವುಗಳಲ್ಲಿಯ ಕೆಲ ವಿಷಯಗಳನ್ನು ಕಡಿಮೆ ಮಾಡಲು, ಹಾಗೂ ಕೆಲ ಹೊಸ ವಿಷಯಗಳನ್ನು ಸೇರಿಸಲು ಆಜ್ಞಾಪಿಸಿದರು. ಮತ್ತು ಕೊನೆಗೆ ತಮ್ಮ (ಹರಕೆಯನ್ನು) ದಿವ್ಯ ಸಂದೇಶವನ್ನು ನೀಡಿ, ಅವುಗಳ ಹಿರಿಮೆಯನ್ನು ಬೆಳೆಸಿರುವರು. ಈ ಬಗೆಯಾಗಿ ಇವು ಕೇವಲ ಶ್ರೀ ಗುರುದೇವರ ಪ್ರೇರಣೆ, ಪ್ರೋತ್ಸಾಹ,ಹಾಗು ಮಾರ್ಗದರ್ಶನಗಳ ಫಲ, ನಮ್ಮ ಹಿರಿಯ ಭಕ್ತ-ಕವಿ ಕುಮಾರವ್ಯಾಸನು ಅರುಹಿದ ಮೇರೆಗೆ :

"ಕರುಣಿಸಲು ಗುರುದೇವ ಬೆಳಕನು।
ಬರೆದಿಹನು ಕಿರಿ ಮತಿಯ ಕುವ ರನು॥"

ಆದುದರಿಂದ ಪರಮಪೂಜ್ಯ ಶ್ರೀಗುರುದೇವರಿಗೆ ಅವರ ಪ್ರಿಯ ಭಕ್ತನ ಅನಂತ ಅನನ್ಯ ವಂದನೆಗಳು !

ಈ ಗ್ರಂಥದ ಮುದ್ರಣ ಪ್ರತಿಯನ್ನು ಪ್ರೀತಿಯಿಂದ ಬರೆದುಕೊಟ್ಟದ್ದಕ್ಕಾಗಿ ನನ್ನ ಸ್ನೇಹಿತರಾದ ಶ್ರೀ ಕುಲಕರ್ಣಿ ಅಣ್ಣಾಸಾಹೇಬರಿಗೂ, ಶ್ರೀ ಹಲ್ಯಾಳ ಲಕ್ಷ್ಮಣರಾಯರಿಗೂ ನನ್ನ ಹಾರ್ದಿಕ ಧನ್ಯವಾದಗಳು.

ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ದೇಸಾಯಿ ಮುದ್ರಣಾಲಯದ ಒಡೆಯರಾದ ಶ್ರೀ ದೇಸಾಯಿಯವರಿಗೆ ನಾನು ತುಂಬ ಆಭಾರಿಯಾಗಿರುವೆನು.

ಲೇಖಕರು
ಶ್ರೀ ಮನೋಹರ ಶ್ರೀನಿವಾಸ ದೇಶಪಾಂಡೆ ಎಂ.ಎ.
ಅಥಣಿ

.....ಅನುಕ್ರಮಣಿಕೆ .....

		ಪುಟಗಳು
ಪ್ರಸ್ತಾವನೆ		
i-iii	ಪ್ರಕಾಶಕರ ನುಡಿ	
iv	ಪ್ರಕರಣ ಒಂದು ಪೀಠಿಕೆ	1-17
	ವಿಷಯ-ಸ್ವರೂಪ-ಅದರ ಅವಶ್ಯಕತೆ-ಅದನ್ನು ಕಾಣುವ-ಕಾಣಿಸುವ ಯೋಗ್ಯತೆ-ಶ್ರೀ ಗುರುದೇವರ ಅಧಿಕಾರ-ಮಾಲೆಯ ರೂಪರೇಷೆ.	
ಪ್ರಕರಣ ಎರಡು	ದರ್ಶನ-ಸಮನ್ವಯ	
18-79	ವಿಷಯ ಪ್ರವೇಶ : ದರ್ಶನದ-ಅಧ್ಯಯನ-ಉದ್ದೇಶ-ಪದ್ಧತಿ; ದರ್ಶನದ ಹಿರಿಮೆ-ದರ್ಶನ-ಧರ್ಮ-ವಿಜ್ಞಾನ (Science) i) ದರ್ಶನ-ದರ್ಶನಸಮನ್ವಯ, ii) ದರ್ಶನ-ಧರ್ಮ ಸಮನ್ವಯ, iii) ಧರ್ಮ-ಧರ್ಮ ಸಮನ್ವಯ, iv) ಧರ್ಮ-ವಿಜ್ಞಾನ ಸಮನ್ವಯ; ದರ್ಶನದ ಪ್ರಧಾನ ಅಂಗಗಳು : ಪರತತ್ವಶಾಸ್ತ್ರ- i) ದೇವರು, ii) ಜೀವ, iii) ಜಗತ್ತು ನೀತಿಶಾಸ್ತ್ರ- ಅನುಭೂತಿಶಾಸ್ತ್ರ-ಪ್ರಸ್ಥಾನತ್ರಯ-ಸಂತರ ಪರಮಾರ್ಥಪಥ.	
ಪ್ರಕರಣ ಮೂರು	ಆದರ್ಶ-ಸಮನ್ವಯ	
80-148	ವಿಷಯ ಪ್ರವೇಶ ; ಆದರ್ಶಗಳ ಹಿರಿಮೆ-ನಮ್ಮ ಸನಾತನ ಆದರ್ಶಗಳು-ಆಧುನಿಕ ಆದರ್ಶಗಳು: ಅ) ಭೋಗಪ್ರಧಾನ, ಆ) ತ್ಯಾಗಪ್ರಧಾನ, ವಯಕ್ತಿಕ ಆದರ್ಶಗಳು : i) ಸದ್ವರ್ತನ, ii) ಪ್ರಪಂಚ-ಪರಿಪಾಲನ, iii) ಸತ್ಯ-ಸಂಶೋಧನೆ, iv) ಸೌಂದರ್ಯ- ಉಪಾಸನೆ, v) ಕಲ್ಯಾಣ-ಕರಣ; ಸಾಮಾಜಿಕ ಆದರ್ಶಗಳು : i) ಸ್ವಾತಂತ್ರ್ಯ, ii) ಸಮತೆ, iii) ಬಂಧುಭಾವ; ರಾಷ್ಟ್ರೀಯ ಆದರ್ಶಗಳು : ನವಭಾರತ-ನಿರ್ಮಾಣ, ರಾಷ್ಟ್ರದ ಪ್ರಧಾನ ಅಂಗಗಳು-ಶೈಕ್ಷಣಿಕ ಅಂಗ-ಆರ್ಥಿಕ ಅಂಗ ರಾಜನೈತಿಕ ಅಂಗ-ಜಾಗತಿಕ ಆದರ್ಶ.	
ಪ್ರಕರಣ ನಾಲ್ಕು	ಸಾಧನ-ಅನುಭೂತಿ-ಸಮನ್ವಯ	
149-191		

ವಿಷಯ ಪ್ರವೇಶ; ಪೋಷಕ ಸಾಧನಗಳು; ವಿವೇಕ ಶ್ರದ್ಧೆ-ಸಮನ್ವಯ; ರಾಗ-ವಿರಾಗ-ಸಮನ್ವಯ; ಏಕಾಂತ-ಲೋಕಾಂತ-ಸಮನ್ವಯ; ಪ್ರಯತ್ನ-ಪ್ರಸಾದ-ಸಮನ್ವಯ; ಜ್ಞಾನೇಂದ್ರಿಯಗಳ ಸಮನ್ವಯ; ಯೋಗ-ಸಮನ್ವಯ; ಪ್ರಧಾನಸಾಧನ; ಸದ್ಗುರುಗಳು-ಸತ್ ಶಿಷ್ಯ-ದಿವ್ಯನಾಮ-ಧ್ಯಾನಪದ್ಧತಿ. (ಅ) ಪಂಚಸಾಮಾನ್ಯ ಗುಣಗಳು, (ಆ) ಪಂಚ ವಿಶೇಷ ಅಂಗಗಳು.

ಅನುಭೂತಿ ಸಮನ್ವಯ: ಸ್ವರೂಪ ವೈಭವಗಳು-ಅಸಂಪಾತ ಅನುಭೂತಿ (Asympotic Realisation); ಪ್ರಕಾರಗಳು-ಸಮನ್ವಯ ; i) ಸಾಂತ-ಅನಂತ-ಸಮನ್ವಯ, ii) ನವ್ಯ-ಭವ್ಯ ಸಮನ್ವಯ, iii) ಆನಂದ-ಶಾಂತಿ-ತಾರತಮ್ಯ, iv) ಅನುಭಾವ ಸೋಪಾನ-ಪರಿಣಾಮ- ಆತ್ಮೋದ್ಧಾರ-ಲೋಕೊದ್ಧಾರ-ಆದರ್ಶ ಮಹಾತ್ಮರು; ಅವರ ಸಾಮ್ಯದರ್ಶನ.

ಪ್ರಕರಣ ಐದು **ಉಪಸಂಹಾರ**

192-204 ವಿಷಯ ಪ್ರವೇಶ -ಸಿಂಹಾವಲೋಕನ-ವಿಶ್ವಸಂದೇಶ; ಸಂತರಿಗೆ-ದಾರ್ಶನಿಕರಿಗೆ-ಭಾವಿಕ ಭಕ್ತರಿಗೆ-ನೀತಿನಿಪುಣರಿಗೆ-ಕಲಾವಂತರಿಗೆ-ವಿಜ್ಞಾನಿಗಳಿಗೆ-ಸರ್ವೋದಯದವರಿಗೆ,

ಸಂಕ್ಷೇಪಗಳು 205

ಒಪ್ಪೋಲೆ 206

ಗ್ರಂಥಕರ್ತನ ಬೇರೆ ಗ್ರಂಥಗಳು

207-208

★

ಭಗವದಾನಂದ ಗುರಿ-ಭಗವದ್ಭಕ್ತಿಗೆ ದಾರಿ

-ಶ್ರೀ ಗುರುದೇವ

★

"ಸಮನ್ವಯ"

ಸಹನೆ-ಸೌಹಾರ್ದ -ಸಹಕಾರ
ಸಾಮರಸ್ಯ
ಶಾಂತಿ
ಇವುಗಳ ನೆಲೆ

★

ದರ್ಶನ

ಸದ್ಬುದ್ಧಿ-ಸದ್ಭಾವ-ಸತ್‌ಶೀಲ
ಸದ್ಭಕ್ತಿ
ಆತ್ಮದರ್ಶನ-ಆತ್ಮಾನಂದ
ಇವುಗಳ ನೆಲೆ

ಓಂ

ಪ್ರಕರಣ ಒಂದು

ಪೀಠಿಕೆ

ವಿಷಯದ ಸ್ವರೂಪ.

"ಶ್ರೀ ಗುರುದೇವರ ಸಮನ್ವಯ ದರ್ಶನ" (Philosophy of Synthesis) ಎಂಬುದು ಈ ಉಪನ್ಯಾಸ ಮಾಲೆಯ ವಿಷಯ. ಇಂದಿನ 'ಪೀಠಿಕೆ' ಯಲ್ಲಿ ಮೊದಲು "ಸಮನ್ವಯದ" ಸ್ವರೂಪವನ್ನೂ "ದರ್ಶನ" ದ ಸ್ವರೂಪವನ್ನೂ ಅರುಹಲಿರುವೆ. 'ಸಮನ್ವಯ' ಎಂದರೆ 'ಸಮ್ಯಕ್ ಅನ್ವಯ', ಸರಿಯಾದ ಹೊಂದಿಕೆ. ಅದು ಅನೇಕತೆಯಲ್ಲಿಯ ಏಕತೆಯ ದರ್ಶನವನ್ನೂ, ಏಕತೆಯಲ್ಲಿಯ ಅನೇಕತೆಯ ಸ್ಥಳ-ಮೂಲ್ಯಗಳ ಪರಿಚಯವನ್ನೂ ಒಳಗೊಂಡಿರುವದು. ಏಕನು ಭಗವಂತನು, ಅನೇಕತೆಯು ಆತನ ನಿರ್ಮಿತಿಯಾದ ವಿಶ್ವದಲ್ಲಿಯ ವಿವಿಧತೆ, ಇವುಗಳ ಜತೆಯಲ್ಲಿ ಸಮನ್ವಯವು ಈ ವಿವಿಧತೆಯಲ್ಲಿಯ ತಾರತಮ್ಯವನ್ನೂ ಸಮಾನತೆಯನ್ನೂ ಕಾಣಿಸುವುದು.

ನಮ್ಮ ವಿಶ್ವವು ವಿವಿಧತೆಯಿಂದ ಕಂಗೊಳಿಸುವುದು. ಅದೊಂದು ಸೌಂದರ್ಯ ಗಾಂಭೀರ್ಯಗಳ ಮಂದಿರ. ಅದರಲ್ಲಿಯ ಪ್ರತಿಯೊಂದು ವಿಷಯವು ಬೆಲೆಯುಳ್ಳದ್ದು. ಒಂದೂ ತ್ಯಾಜ್ಯವಿರುವದಿಲ್ಲ. ವಿಶ್ವದಲ್ಲಿಯ ಅಣುರೇಣುಗಳಲ್ಲಿ ಭಗವಂತನು ಅಂತರ್ಯಾಮಿಯಾಗಿ ನೆಲೆಸಿರುವ. ಆದುದರಿಂದ ಅರಿವುಳ್ಳ ಕಂಗಳಿಗೆ ಅದರಲ್ಲಿಯ ಎಲ್ಲ ವಸ್ತುಗಳೂ ಅಂದವಾಗಿ ಕಾಣಿಸುತ್ತವೆ.

ನಮ್ಮ ವರಕವಿಗಳು ಹೂಗಳನ್ನು ಬಣ್ಣಿಸಿರುವ ಮೇರೆಗೆ ಅವು,

ಒಂದರೊಳು ಒಂದಿಲ್ಲ,
ಒಂದರೊಳು ಕುಂದಿಲ್ಲ.
ಒಂದೊಂದು ಅಂದವು
ತನತನಗೆ ಚಂದ,

ಚಂದಕ್ಕೆ ಒಂದೆ ಮೈ
ಸಾಲದೆಂಬಂತೆ, ನೂ-
ರೊಂದು ಮೈದಳೆದು
ಕುಣಿಯುವದು ಸ್ವಚ್ಛಂದ.

ಆದುದರಿಂದ ಅವುಗಳ ಸ್ಥಳ-ಮೂಲ್ಯಗಳನ್ನು ಆದಷ್ಟು ಸರಿಯಾಗಿ ಬಳಸಲು ಯತ್ನಿಸುವ ರೀತಿಯನ್ನು ಅರಿತರೆ, ಅವು ನಮ್ಮ ಜೀವನದಲ್ಲಿ ಸುಖ-ಸಮಾಧಾನ ಹರಡಲು ನೆರವಾಗುವವು, ಇದನ್ನು ತಿಳಿಸುವುದೇ ಸಮನ್ವಯದ ಹಿರಿದಾದ ಗುರಿ. ಈ ರೀತಿಯ ವಿವಿಧತೆಯ ಸರಿಯಾದ ಸ್ಥಳ-ಮೂಲ್ಯಗಳನ್ನು ಕಾಣುವುದು ಸಮನ್ವಯ ಸಿದ್ಧಾಂತದ ತಳಹದಿ. ಅದೇ ಮೇರೆಗೆ ಇಂಥ ಏಕತಾ-ದರ್ಶನ, ಸ್ಥಳ-ಮೂಲ್ಯದರ್ಶನಗಳ ಜೊತೆಯಲ್ಲಿ ಸಮನ್ವಯವು ಸಾಮ್ಯದರ್ಶನ, ತಾರತಮ್ಯದರ್ಶನಗಳನ್ನು ಒಳಗೊಂಡಿರುವುದು. ಈ ಬಗೆಯಾಗಿ ಸಮನ್ವಯದ ಸ್ವರೂಪವು ಇಷ್ಟು ವಿಶಾಲವಾದದ್ದು.

ಆದರೆ ಇದರ ಪ್ರಾರಂಭವು ವ್ಯಕ್ತಿಜೀವನದಲ್ಲಿ ಆಗಬೇಕಾಗುವುದು. ಅದು ವಿಚಾರ ಕ್ಷೇತ್ರದಲ್ಲಿ ಮೊಳೆತು, ಭಾವ ಕ್ಷೇತ್ರದಲ್ಲಿ ಹೊಳೆದು, ಇಂದ್ರಿಯಗಳಲ್ಲಿಯೂ ಕೃತಿಗಳಲ್ಲಿಯೂ ಇಳಿಯಬೇಕಾಗುವುದು. ಈ ಬಗೆಯ ಸಮನ್ವಯ-ಜೀವನವನ್ನು ಬಾಳುವ ವ್ಯಕ್ತಿಗಳು ಅದನ್ನು ಸಮಾಜದಲ್ಲಿಯೂ, ರಾಷ್ಟ್ರದಲ್ಲಿಯೂ ಹರಡಬಲ್ಲರು. ಅಂಥ ರಾಷ್ಟ್ರಗಳ ಸಮನ್ವಯ-ಜೀವನವೇ ವಿಶ್ವದಲ್ಲಿ ಸೌಹಾರ್ದ-ಶಾಂತಿಗಳನ್ನು ನೆಲೆಗೊಳಿಸಬಲ್ಲದು.

ಇನ್ನು "ದರ್ಶನದ" ಸ್ವರೂಪವನ್ನು ಅರಿಯುವಾ. ದರ್ಶನ ಶಬ್ದಕ್ಕೆ ಎರಡು ಅರ್ಥಗಳು. ಒಂದು ಕಾಣ್ಕೆ (Vision) ಎರಡನೆಯದು ತತ್ವಜ್ಞಾನ (Philosophy), ದರ್ಶನವೆಂದರೆ ಸತ್ಯದ-ಪರತತ್ವದ ಪಾರಮಾರ್ಥಿಕ ಕಾಣ್ಕೆ (Spiritual Vision). ಅದನ್ನು ಕಂಡವರು ಋಷಿಗಳು ದ್ರಷ್ಟಾರರು. ಅವರು ಪಾರಮಾರ್ಥಿಕ ದಾರ್ಶನಿಕರು (Spiritual Philosophers). ಅದೇ ಮೇರೆಗೆ ದರ್ಶನವೆಂದರೆ ಬೌದ್ಧಿಕ ತತ್ವಜ್ಞಾನ (Intellectual Philosophy). ಅದನ್ನು ಅರಿತವರು ಬೌದ್ಧಿಕ ದಾರ್ಶನಿಕರು (Intelectual Philosophers). ಅವರದು ಬೌದ್ಧಿಕ ದರ್ಶನ, ತತ್ವಜ್ಞಾನ (Intectual Philosophy) ಈ ಬಗೆಯಾಗಿ ಸಮನ್ವಯ ದರ್ಶನವು ತುಂಬ ವಿಶಾಲವಾದ ಅರ್ಥದಲ್ಲಿ ಮುಂದೆ ಬಳಸಲಾಗುವದು.

ಅದರ ಅವಶ್ಯಕತೆ :

ಇಂದು ವಿಶ್ವಜೀವನದ ಎಲ್ಲ ಕ್ಷೇತ್ರಗಳಲ್ಲಿ ಕಲಹಜನಿತ ಕೋಲಾಹಲವು ಎದ್ದಿದೆ. ವ್ಯಕ್ತಿ-ವ್ಯಕ್ತಿಗಳಲ್ಲಿ, ವ್ಯಕ್ತಿ-ಸಮಾಜದಲ್ಲಿ, ಸಮಾಜ-ಸಮಾಜಗಳಲ್ಲಿ, ಸಮಾಜ-ರಾಷ್ಟ್ರಗಳಲ್ಲಿ, ರಾಷ್ಟ್ರ-ರಾಷ್ಟ್ರಗಳಲ್ಲಿ ಎಲ್ಲೆಲ್ಲಿಯೂ ಕಲಹವೇ ಕಲಹ, ಗೊಂದಲವೇ ಗೊಂದಲ. ಶಾಂತಿಯ ನೆಲೆಬೀಡಾಗಬೇಕಾದ ಧರ್ಮ-ದರ್ಶನಗಳಲ್ಲಿ ಆದರೂ ಇದರ ಅಭಾವವಿರಬೇಕು. ಆದರೆ ಅಲ್ಲಿಯೂ ಇದರ ಪ್ರಭಾವವೇ ನಮ್ಮನ್ನು ಎದುರಿಸುವುದು. ಈ ಕಲಹದ ಕಿಡಿಗಳೇ ಜೀವನದ

ಎಲ್ಲ ಕ್ಷೇತ್ರಗಳಲ್ಲಿ ಪ್ರಜ್ವಲಿಸಿ, ಮಹಾಜ್ವಾಲೆಯಾಗಿ, ಇಡೀ ಮಾನವತೆಯನ್ನೆಯೇ ಆಕ್ರಮಿಸಿವೆ. ಅದರ ಮೂಲಕ ಎಲ್ಲೆಡೆ ಭರದಿಂದ ಸಾಗಿದ ಶೀತಯುದ್ಧವು ಎಂದು ಉಷ್ಣತೆ ತಳೆಯುವುದೋ ಹೇಳಲು ಬರುವಂತಿಲ್ಲ. ಬರಲಿರುವ ಭೀಕರ ಅಣುಯುದ್ಧವು ಇಡಿ ಮಾನವತೆಯನ್ನೇ ನಾಮಶೇಷ ಮಾಡದಿರದು ಎಂದು ಬಲ್ಲವರಾದ ಹಿರಿಯರು ತುಂಬ ಹೆದರಿದ್ದಾರೆ.

ಇಂಥ ಸರ್ವನಾಶವನ್ನು ಉಂಟು ಮಾಡಲಿರುವ ಭಯಂಕರ ವಿಪತ್ತನ್ನು ಸರಿಯಾಗಿ ಎದುರಿಸಲು ನಾವು ವ್ಯಕ್ತಿಗಳ ಜೀವನದಿಂದಲೇ ಪ್ರಾರಂಭಿಸಬೇಕು, ಎಂದು ನಮ್ಮ ರಾಷ್ಟ್ರ-ಸಂಘದ (UNO) ಶಿಕ್ಷಣ, ವಿಜ್ಞಾತಿ, ಸಂಸ್ಕೃತಿ, (UNESCO) ವಿಭಾಗವು ಈ ಬಗೆಯಾಗಿ ಸಾರಿರುವುದು.

"Wars begin in the minds of men and in the minds of men, the defences of Peace should be laid". "ಯುದ್ಧಗಳು ಮೊದಲು ಮಾನವನ ಮನೋಭೂಮಿಯಲ್ಲಿ ಮೊಳೆಯುತ್ತವೆ. ಆದುದರಿಂದ ಮೊದಲು ಅದರಲ್ಲಿಯೇ ಶಾಂತಿಯ ರಕ್ಷಾಕೋಟೆಗಳನ್ನು ನಿರ್ಮಿಸಬೇಕು."

ಅದಕ್ಕಾಗಿ ಮಾನವನ ಮನೋರಂಗದಲ್ಲಿ ಯುದ್ಧಗಳು ಹೇಗೆ ನಡೆಯುವವು ! ಯಾಕೆ ನಡೆಯುವವು ? ಅಲ್ಲಿ ಯುದ್ಧಮಾಡುವ ಶಕ್ತಿಗಳಾವುವು ? ಅವನ್ನು ತಡೆಯುವದೆಂತು ? ನಿಯಂತ್ರಿಸುವವರಾರು ? ಎಂಬುದನ್ನು ಅರಿಯುವದು ಅವಶ್ಯ. ಈ ವಿಷಯವನ್ನು ಕುರಿತು ನಾನು ಬೇರೊಂದು ಪ್ರಬಂಧದಲ್ಲಿ ಇಂತು ಬರೆದಿರುವೆ.

'God has created man after his own image, no doubt. But he has added an element of ego to his own spark, in order to give individuality to man....The primary qualities of Divinity try to express themselves through the ego-centred man. God is External, All-knowing, All-powerful and All-bliss. So, man wants enternal life, infinite knowledge, power and bliss, through his finite medium and in the finite creation. How can he get them there ? Naturally those primary urges come in conflict with one another and produce conflicts in man. His infinite wants are thus never satisfied in the finite world; in fact, they are, in the very nature of things, incapable of being satisfied fully. But his ignorance does not allow him to realise this. So, he goes on struggling, making himself and others infinitely miserable. Very often these internal conflicts are carried to groups of individuals and nations, bringing into existence class wars or wars among the nations."[1]

1) Kalyan Kalataru Nov. 1954

"ಪರಮಾತ್ಮನು ಮಾನವನಿಗೆ ತನ್ನ ರೂಪವನ್ನು ಕಲ್ಪಿಸಿ ನಿರ್ಮಿಸಿರುವನು ನಿಜ. ಆದರೆ ಅವನು ತನ್ನಸ್ಫುಲಿಂಗಕ್ಕೆ ಅಹಂಕಾರದ ಒಂದು ಅಂಶವನ್ನು ಅಂಟಿಸಿರುವನು. ಮತ್ತು ಅದರ ಮೂಲಕ ಮಾನವನಿಗೆ ಒಂದು ವ್ಯಕ್ತಿತ್ವವನ್ನು ನೀಡಿರುವನು. ಪರಮಾತ್ಮನ ಮೂಲಗುಣಗಳು ಅವನಲ್ಲಿ ಈ ಅಹಂಕಾರದ ಮುಖಾಂತರ ಹೊರ ಹೊಮ್ಮುತ್ತಿವೆ. ಪ್ಯೆದಳೆಯುತ್ತಿವೆ. ಪರಮಾತ್ಮನು ಶಾಶ್ವತನು, ಸರ್ವಜ್ಞನು ಸರ್ವಸಮರ್ಥನು, ಆನಂದಮಯನು, ಆದುದರಿಂದ ಅವನ ಅಂಶನಾದ ಮಾನವನು ಶಾಶ್ವತ ಜೀವನವನ್ನು, ಅನಂತ ಜ್ಞಾನ-ಸಾಮರ್ಥ್ಯ- ಆನಂದಗಳನ್ನು ಸಾಂತ ಶರೀರದ ಮುಖಾಂತರ, ಈ ಸಾಂತ ಸಷ್ಟಿಯಲ್ಲಿಪಡೆಯಲು ಬಯಸುವನು. ಆತನ ಈ ಅನಂತ ಬಯಕೆಗಳು ಸಾಂತ ಪ್ರಪಂಚದಲ್ಲಿ ತೃಪ್ತಿಯನ್ನುಪಡೆಯುವುದು ಎಂದೂ ಸಾಧ್ಯವಾಗಲರಿಯದು. ನಿಜವಾಗಿ ಅವು ಪೂರ್ತಿಯಾಗಿ ತೃಪ್ತಿ ಪಡೆಯುವುದು ನಿಸರ್ಗತ: ಶಕ್ಯವೇ ಇರುವುದಿಲ್ಲ. ಆದರೆ ಮಾನವನ ಅಜ್ಞಾನವು ಅವನಿಗೆ ಇದನ್ನು ತಿಳಿಯಗೊಡುವುದಿಲ್ಲ. ಆದುದರಿಂದ ಅವನು ಅವನ್ನು ಪಡೆಯಲು ಹೆಣಗುತ್ತಲೇ ಇರುವನು. ಮತ್ತು ಅನ್ಯರನ್ನೂ ವ್ಯಥಿತಗೊಳಿಸುತ್ತಿರುವನು. ಅನೇಕ ಸಲ ಈ ಅಂತರಂಗದಲ್ಲಿಯ ಕಲಹಗಳು ಸಮಾಜದಲ್ಲಿಯೂ, ರಾಷ್ಟ್ರಗಳಲ್ಲಿಯೂ ಪಸರಿಸಿ, ಅದರ ಫಲವಾಗಿ ವರ್ಗಗಳಲ್ಲಿ ಯುದ್ಧಗಳೂ, ರಾಷ್ಟ್ರಗಳಲ್ಲಿ ಯುದ್ಧಗಳೂ ಜರುಗುವವು.

ಈ ಬಗೆಯಾಗಿ, ಮಾನವನ ಅಂತರಂಗದಲ್ಲಿಯ ಮೂಲ ಅನುವಂಶಿಕ ಪ್ರೇರಣೆಗಳು ಆತನ ವಿಚಾರಗಳಲ್ಲಿ, ಭಾವನೆಗಳಲ್ಲಿ ತಿಕ್ಕಾಟವನ್ನು ಹುಟ್ಟಿಸಿ, ಆತನ ಶಾಂತಿ-ಸಮಾಧಾನಗಳನ್ನುಕದಡಿಸಿ, ಅಂತರಂಗವನ್ನೇ ರಣರಂಗವನ್ನಾಗಿ ಮಾರ್ಪಡಿಸುವವು. ಅಲ್ಲದೆ ಅಲ್ಲಿತುಂಬ ಅಶಾಂತಿಯ ನೆಲೆಯನ್ನು ನಿಲ್ಲಿಸುವವು.

ಆದರೆ ಈ ಹೋರಾಡುವ ಶಕ್ತಿಗಳನ್ನು ತಡೆಯುವುದು ಸಾಧ್ಯವಿಲ್ಲವೆ ? ಇವನ್ನು ನಿಯಂತ್ರಿಸಬಲ್ಲ ಸಾಮರ್ಥ್ಯವು ಅದರಲ್ಲಿ ನೆಲೆಸಿರುವುದು ? ಅವುಗಳಲ್ಲಿ ಸರಿಯಾದ ಮಾರ್ಪಾಡನ್ನು ಮಾಡುವ ಸಾಧನಗಳಾವವು ? ನಮ್ಮ ರಾಷ್ಟ್ರ-ಸಂಘದ ಮೇಲ್ಕಾಣಿಸಿದ ಸಾಂಸ್ಕೃತಿಕ ಸಂಸ್ಥೆಯು ಮುಂಬರುವ ಬಾಲಕರಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟು, ಉದಾತ್ತವಾದ ಸಂಸ್ಕಾರವನ್ನು ನೀಡಿ, ಅವರಿಗೆ ವೈಜಾನಿಕ ಪದ್ಧತಿಯಿಂದ ಜೀವನವನ್ನು ಸಾಗಿಸಲು ಕಲಿಸಿ, ವಿಶ್ವಪ್ರಿಯ(World-minded) ಮಾನವರನ್ನಾಗಿ ಪರಿವರ್ತಿಸಲು ಬಯಸುವದು, ಯತ್ನಿಸುವದು. ಇದೆಲ್ಲ ಸ್ತುತ್ಯವಾದ ಯತ್ನವೇ ಸರಿ! ಇದು ಬೆಳೆಯಲಿರುವ ಎಳೆಯರ ಮನೋರಂಗಕ್ಕೆ ವೈಶಾಲ್ಯವನ್ನು ಕೆಲಮಟ್ಟಿಗೆ ನೀಡಬಹುದು. ಆದರೆ ಅದು ಅವರಲ್ಲಿಯ ಸಂಕುಚಿತ ಸ್ವಾರ್ಥವನ್ನು ಪೂರ್ತಿಯಾಗಿ ಅಳಿಸಲರಿಯದು. ಅದಾಗಲು ಮಾನವರನ್ನು ದೇವಪ್ರಿಯರನ್ನಾಗಿ (God-minded) ಮಾಡಲೂಬೇಕು. ನಿಜವಾಗಿ ದೇವಪ್ರಿಯರೇ ವಿಶ್ವಪ್ರಿಯರಾಗಬಲ್ಲರು. ಅವರ ಅಂತ:ಕರಣವೇ ವಿಶಾಲ-ಉದಾತ್ತ ಆಗಬಲ್ಲದು. ಅದಕ್ಕೆ ಬೇರೆ ಬಗೆಯ ಇಂಥ ಪ್ರಭಾವಯುತ ಸಾಧನವೇ ಅವಶ್ಯವಾದುದು.

ಶ್ರೀ ಗುರುದೇವರು ಅದನ್ನುಕುರಿತು ಅರುಹಿರುವದೇನೆಂದರೆ :

"The world is torn with dire conflicts to-day. There is no hope for

humanity except on the basis of spiritual experience, whose power when write large upon the world, can assuage ascerbated feelings, reconcile warring interests and make humanity a true mirror of peace, joy and glory which is in God"[2] (Message)

"ಇಂದು ಪ್ರಪಂಚವು ಭೀಕರವಾದ ಸಂಘರ್ಷಗಳಿಂದ ವಿದೀರ್ಣವಾಗಿದೆ. ಪಾರಮಾರ್ಥಿಕ ಅನುಭೂತಿಯ ಪ್ರಭಾವವನ್ನುಳಿದು ಮಾನವತೆಗೆ ಬೇರೆ ಆಶಾಕಿರಣವಿರುವದಿಲ್ಲ. ಈ ಅನುಭೂತಿಯ ಪ್ರಭಾವವು ಪ್ರಪಂಚವನ್ನು ಪ್ರಬಲವಾಗಿ ಆವರಿಸಿತೆಂದರೆ, ಅದು ನೊಂದ ಭಾವನೆಗಳನ್ನು ಸಂತೈಸಬಲ್ಲದು, ಕಾದಾಡುವ ಹಿತಸಂಬಂಧಗಳನ್ನು ಸಮನ್ವಯಿಸಬಲ್ಲದು, ಹಾಗೂ ಮಾನವತೆಯಲ್ಲಿ ಪರಮಾತ್ಮನ ಶಾಂತಿ-ಆನಂದ-ವೈಭವಗಳ ಪ್ರತಿಬಿಂಬವನ್ನು ಕಾಣಿಸಬಲ್ಲದು."

ಅವರು ಮತ್ತೂ ಹೇಳಿರುವದೇನೆಂದರೆ:

"It is only when all humanity comes to recognise the one Spiritual Principle, which underlies all things, that we can bring about harmony between different creeds, nations and races."[3]

"ಇಡಿ ಮಾನವತೆಯು ವಿಶ್ವದಲ್ಲಿ ಅಂತರ್ಯಾಮಿ ಆಗಿರುವ ಏಕಮೇವ "ಪಾರಮಾರ್ಥಿಕ ಚೈತನ್ಯವನ್ನು" (ಪರಮಾತ್ಮನನ್ನು) ಮನ್ನಿಸಿದಾಗಲೇ, ಜೀವನದಲ್ಲಿ ಪರ ಮಾತ್ಮನ ಅಸ್ತಿತ್ವವನ್ನು ಅರಿತು ಆತನನ್ನು ಭಜಿಸಿದಾಗಲೇ, ಬೇರೆ ಬೇರೆ ಪಂಥಗಳು ರಾಷ್ಟ್ರಗ ಳು, ಜನಾಂಗಗಳು, ಇವುಗಳಲ್ಲಿ ನಾವು ಸಾಮರಸ್ಯವನ್ನು ಉಂಟು ಮಾಡಬಲ್ಲೆವು."

ಈ ಬಗೆಯ ಪರಮಾತ್ಮನ ಸಾಕ್ಷಾತ್ಕಾರವು ನಿಜವಾದ ಸಮನ್ವಯದ ತಳಹದಿ. ಈ ಸಾಕ್ಷಾತ್ಕಾರದ ಸಮಸ್ಯೆಯು ಎಲ್ಲಕಾಲದಲ್ಲಿಪ್ರಧಾನವಾಗಿಯೇ ಪರಿಗಣಿಸಲ್ಪಟ್ಟಿದೆ. ಅದು ಹಿಂ ದೆಯೂ ಇದ್ದಿತು. ಇಂದೂ ಇದೆ, ಮುಂದೆಯೂ ಇರಬಲ್ಲದು. ಅದು ಪ್ರತಿಯೊಬ್ಬ ಪ್ರತಿಭಾ ವಂತ ದೃಷ್ಟಾರನ ಅವಧಾನವನ್ನುಸೆಳೆದಿರುವದು. ಶ್ರೀಗುರುದೇವರ ಅಭಿಮತದ ಮೇರೆಗೆ.

"The problem of finding the universal in the midst of particulars, the unchanging in the midst of change, has attracted the attention of every man of vision..... Knowledge has taken immense strides with the growth of time. Scientific inventions have enormously enriched the patrimony of man. The old order has changed and a new one has taken its place. Nevertheless, the goal of human life, as well as the means of its attainment have remained the same. Unquestionably, the search after God, remains the highest problem even today and a philosophical justification of our spiritual

2) Thus Spake Gurrudev PP. 20-21 3) P.E.P 120

life is as necessary today as it was hundreds of years ago."[4]

"ವಿಶ್ವದಲ್ಲಿಯ ವಿಶೇಷಗಳಲ್ಲಿಯ ಸಾಮಾನ್ಯವನ್ನೂ ಅನಿತ್ಯಗಳಲ್ಲಿಯ ನಿತ್ಯವನ್ನೂ ಕಾಣುವ ಸಮಸ್ಯೆಯು, ಪ್ರತಿಯೊಬ್ಬ ಪ್ರತಿಭಾಶಾಲಿ ದಾರ್ಶನಿಕನ ಗಮನವನ್ನು ಸೆಳೆದಿದೆ..... ಕಾಲವು ಕಳೆದಂತೆ ಜ್ಞಾನವು ತುಂಬ ಬೆಳೆದಿದೆ. ವೈಜ್ಞಾನಿಕ ಸಂಶೋಧನೆಗಳು ಮಾನವನ ಸಂಪತ್ತನ್ನು ಅತಿಶಯವಾಗಿ ಹೆಚ್ಚಿಸಿವೆ. ಹಳೆಯ ನೀತಿಯು ಅಳಿದು ನವನೀತಿಯು ಅದರ ಸ್ಥಳವನ್ನು ಪಡೆದಿದೆ. ಆದರೂ ಮಾನವ ಜೀವನದ ಗುರಿಯೂ, ಅದನ್ನು ಪಡೆಯುವ ದಾರಿಯೂ, ಇವೇನೂ ಬದಲಾಗಿರುವದಿಲ್ಲ. ಇವು ಇದ್ದಂತೆಯೇ ಇರುವವು. ಪರಮಾತ್ಮನನ್ನು ಪಡೆಯುವ ಸಮಸ್ಯೆಯು ಅಂದಿನಂತೆ ಇಂದಿಗೂ ಅತ್ಯುನ್ನತವಾಗಿಯೇ ಉಳಿದಿದೆ. ಇದರಲ್ಲಿ ಯಾವ ಬಗೆಯ ಸಂದೇಹವಿಲ್ಲ. ಆದ್ದರಿಂದ ನಮ್ಮ ಪಾರಮಾರ್ಥಿಕ ಜೀವನದ ದಾರ್ಶನಿಕ ಸಮರ್ಥನವು ಎಂದಿನಂತೆ ಇಂದೂ ತೀರ ಅವಶ್ಯವಾದುದೇ ಇರುವುದು."

ಈ ಬಗೆಯಾಗಿ ಮಾನವನ ಅಂತರಂಗ, ಬಹಿರಂಗಗಳಲ್ಲಿಯ ಸಂಘರ್ಷಗಳನ್ನು ಅಳಿಸಿ, ಅಲ್ಲಿ ಶಾಂತಿ-ಸಾಮರಸ್ಯಗಳ ಸಾಮ್ರಾಜ್ಯವು ನೆಲೆಗೊಳ್ಳಬೇಕಾದರೆ, ಮಾನವನು ಮೊದಲು ದೇವಪ್ರಿಯ (God-minded) ಆಗಲು ಬೇಕು. ಅಂದಾಗಲೇ ಅವನು ವಿಶ್ವಪ್ರಿಯ (World-minded) ಆಗಬಲ್ಲ. ಅದು ಸಾಧ್ಯವಾಗಲು ಅವನ ಬುದ್ಧಿ-ಭಾವ-ಅನುಭಾವಗಳ ಸಮನ್ವಯದ ಪ್ರಭಾವಯುತ ಪ್ರಚಾರವು ಅವನ ಇಡಿ ಜೀವನರಂಗವನ್ನು ಆವರಿಸಬೇಕು. ಆದರೆ ಅದಾಗುವದೆಂತು ? ಅದನ್ನು ಸರಿಯಾಗಿ ಪರಿಣಾಮಕಾರಿಯಾಗಿ ನೆರವೇರಿಸುವರಾರು. ?

ಅದನ್ನು ಕಾಣುವ-ಕಾಣಿಸುವ ಯೋಗ್ಯತೆ.

ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ಅನುಭಾವಿಗಳೇ ಸರಿಯಾದ ಸಮನ್ವಯವನ್ನು ಕಾಣಬಲ್ಲರು-ಕಾಣಿಸಬಲ್ಲರು. ಅವರು ಜ್ಞಾನ-ವಿಜ್ಞಾನ ಸಂಪನ್ನರು. ಆತ್ಮಜ್ಞಾನವನ್ನು ಪರಮಾತ್ಮನ ಜ್ಞಾನವನ್ನು ಚೆನ್ನಾಗಿ ಅರಿತ ಅನುಭಾವಿಗಳು ವಿಶ್ವದ ಜ್ಞಾನವನ್ನು ಸಹಜವಾಗಿ ಪಡೆಯಬಲ್ಲರು. ಯಾಕೆಂದರೆ ಈ ಇಡೀ ವಿಶ್ವವು **"ಈಶಾವಾಸ್ಯಂ"**. ಈತನು ಅಂತರ್ಯಾಮಿಯಾಗಿ ವಿಶ್ವದಲ್ಲಿ ನೆಲೆಸಿರುವದರಿಂದ ಅದು ಆತನ ನೆಲೆಯು. ಮತ್ತು ವಿಶ್ವವು ಈಶನಿಂದ ವ್ಯಾಪಿಸಿರುವದರಿಂದ ಈಶನು ವಿಶ್ವದ ನೆಲೆಯು.(**"ಈಶಸ್ಯ ಆವಾಸ್ಯಂ"**) ಅದು ಈಶನ ನೆಲೆಯು. (**"ಈಶ:ಆವಾಸ್ಯಂ ಯಸ್ಯ"**) ಈಶನು ಅದರ ನೆಲೆಯು. ಈ ಬಗೆಯಾಗಿ ಅವರೀರ್ವರ ನಿಕಟ ಸಂಬಂಧವಿರುವದರಿಂದ ಈಶನನ್ನು ಅರಿತವರು ವಿಶ್ವವನ್ನು ಅರಿಯುವರು. "ಒಂದರಾ ಒಡಲೊಳಗೆ ನಿಂದಿಹುದು ಜಗವೆಲ್ಲ, ಒಂದರಾ ಒಡಲಿನಿಂ ಬಂದಿಹುದು ಜಗವೆಲ್ಲ." ಅದಕ್ಕಾಗಿ "ಒಂದರಾ ಒಡಲನರಿತರೆ ಜಗ ಕಣ್ಣಮುಂದೆ ನಿಲ್ಲುವುದು" ಕಾಣಾ।

ಈ ರೀತಿ ಈಶ-ವಿಶ್ವಗಳ ಸ್ವರೂಪ-ಸಂಬಂಧಗಳ ಪ್ರತ್ಯಕ್ಷ ಅರಿವುಳ್ಳ ಅನುಭಾವಿಗಳೇ ಅವುಗಳ ಸಮನ್ವಯವನ್ನು ಅರುಹಬಲ್ಲರು. ಅಂಥವರು ದಾರ್ಶನಿಕರಿರಬಹುದು, ಇರಲಿಕ್ಕಿಲ್ಲ. ಶ್ರೀ ಗುರುದೇವರು ಅರುಹಿದ ಮೇರೆಗೆ:

4) Prospectus - Preamble P. 1

"A mystic may be a philosopher but not necessarily so. His mystic experience is sufficient for his own elevation into Divinity: but if he philosophises, he may raise thinking humanity into a Divine Kingdom of Ends."[5]

"ಅನುಭಾವಿಯು ದಾರ್ಶನಿಕನಾಗಿರಬಹುದು. ಆದರೆ ಅವನು ದಾರ್ಶನಿಕನಿರ ಲೇಬೇಕೆಂದಲ್ಲ. ಆತನ ಅನುಭಾವವು ಅವನಿಗೆ ಉನ್ನತವಾದ ದೇವತ್ಯವನ್ನು ನೀಡಲು ಸಾಕಾ ಗುವುದು. ಆದರೆ ಆತನು ದಾರ್ಶನಿಕನಿದ್ದರೆ ವಿಚಾರಶೀಲ ಮಾನವನನ್ನು ದೈವೀ ಆದರ್ಶ ಸಾಮ್ರಾಜ್ಯದಲ್ಲಿ ಒಯ್ದುನಿಲ್ಲಿಸಬಲ್ಲನು."

ಶ್ರೀ ಗುರುದೇವರು ಧರ್ಮ-ಪಂಥಗಳಲ್ಲಿಯ ಏಕತೆಯನ್ನು ಕುರಿತು ಅರುಹಿರು ವದೇನೆಂದರೆ-

"I, as a philosopher, who has given about forty years of his life to the study of philosophy and therefore can legitimately claim to be a philosophical citizen of the world, know, there is no difference between religions or any branches of religions provided they are in the service of God."[5(a)]

"ನಾನು ನಲವತ್ತು ವರುಷ ದರ್ಶನದ ಅಧ್ಯಯನ ಮಾಡಿರುವದರಿಂದ ದರ್ಶನ ಕ್ಷೇತ್ರದಲ್ಲಿಯ ಜಾಗತಿಕ ನಾಗರಿಕನಾಗಿರುವೆನು. ಆದುದರಿಂದ ಧರ್ಮಪಂಥಗಳು-ಭಗವಂ ತನ ಆರಾಧನೆಯಲ್ಲಿನಿರತವಾಗಿದ್ದರೆ ಅವುಗಳಲ್ಲಿ ಭಿನ್ನತೆಯು ಉಳಿಯಲರಿಯದು ಎಂಬು ದನ್ನು ನಾನು ಚೆನ್ನಾಗಿ ಬಲ್ಲೆ."

ಅವರು ಮತ್ತೂ ಅರುಹಿರುವುದೇನಂದರೆ:

"This reconciliation could be based only on a view of Reality which regards the realisation of God as the be-all and end-all of all existence. This mystical view of Reality alone will enable us to reconcile all the intellectual dogmas that have infested the philosophies of the world .What we experience, what we feel, and what we realise should alone constitute our philosophy. "[6]

"ಪರಮಾತ್ಮನ ಸಾಕ್ಷಾತ್ಕಾರವೇ ಜೀವನದ ಅಂತಿಮ ಗುರಿ ಎಂದು ಬಗೆಯುವ ಸತ್ಯದ ರ್ಶನವೇ ಸಮನ್ವಯದ ತಳಹದಿ. ಈ ಸಾಕ್ಷಾತ್ಕಾರದ ಸತ್ಯದರ್ಶನವೇ ಪ್ರಪಂಚದಲ್ಲಿಯ ದರ್ಶನ ಗಳಲ್ಲಿಯ ಬೌದ್ಧಿಕ ಸಿದ್ಧಾಂತಗಳನ್ನು ಸಮನ್ವಯಿಸಬಲ್ಲದು. ನಮ್ಮ ಅನುಭವಗಳೇ, ಭಾವನಗಳೇ. ಅನುಭೂತಿಗಳೇ ನಮ್ಮ ದರ್ಶನಗಳಾಗಿ ಪರಿಣಮಿಸಬೇಕು." ಅನುಭಾವದ ಆಧಾರವಿಲ್ಲದ ದರ್ಶ ನ ಗಾಳಿಗೋಪುರ, ಗಾಳಿ-ಪಟ. ಈ ಬೌದ್ಧಿಕ ಗಾಳಿಪಟಗಳು ಕೆಲಕಾಲ ಮನರಂಜನೆಯನ್ನು ಮಾಡ

5 M. M. P. 394 5(a) I.K.M.P 3 6) B.P.G. 191

ಬಲ್ಲವು. ಅವು ಜೀವನಕ್ಕೆ ಅತ್ಯಗತ್ಯವಾದ ಸಮನ್ವಯವನ್ನು, ಆತ್ಮಾನಂದವನ್ನು ನೀಡಲರಿಯವು. ಅವುಗಳ ಸೂತ್ರವು ಸಾಕ್ಷಾತ್ಕಾರದ ಕೈಯಲ್ಲಿ ಬಂದಾಗಲೇ ಅವುಗಳಲ್ಲಿ ಸಮನ್ವಯ ನೆಲೆಸಿರುವುದು ಅನೇಕತೆಯಲ್ಲಿಯ ಏಕತೆಯ ದರ್ಶನದಲ್ಲಿ. ಇಡೀ ವಿಶ್ವವು ಪರಮಾತ್ಮನಿಂದ ಮೊಳೆತು, ಆತನಲ್ಲಿಯೇ ಬೆಳೆದು ಅಳಿಯುವ ಮೂಕ ಪರಮಾತ್ಮನೇ ವಿಶ್ವದ ಏಕಮೇವ ಮೂಲ ವಸ್ತು-ಚೈತನ್ಯ. ಏಕತೆಯಿಂದಲೇ ಅನೇಕತೆಯು ಅರಳುವುದರಿಂದ ಈ ಅದ್ವಿತೀಯವಾದ ಏಕತೆಯನ್ನು ಸಾಕ್ಷಾತ್ಕರಿಸಿಕೊಂಡವರೇ ಅನೇಕತೆಯಲ್ಲಿ ಸಮನ್ವಯವನ್ನು ಕಾಣಬಲ್ಲರು, ಕಾಣಿಸಬಲ್ಲರು.

ಶ್ರೀ ಗುರುದೇವರ ಅಧಿಕಾರ :

ಶ್ರೀ ಗುರುದೇವರು ಇಂಥ ಅನುಭಾವಿ ದಾರ್ಶನಿಕರು. ಅವರು ಉಭಯ ಸಮ್ರಾಟರು. "ಶಾಬ್ದೇ ಪರೇ ಚ ನಿಷ್ಣಾತರು". ಬೌದ್ಧಿಕ ದರ್ಶನ ಹಾಗು ಅನುಭಾವ ದರ್ಶನದಲ್ಲಿ ಪರಿಣತರು. ಬೌದ್ಧಿಕ ಹಾಗೂ ಅನುಭಾವ ದರ್ಶನಗಳು ಅವರಲ್ಲಿ ಸರಿ ಬೆರಕೆಯಾಗಿ ನೆಲೆಸಿದ್ದ ಕಾರಣ, ಅವರು ಜೀವನದ ವಿವಿಧಾಂಗಗಳಲ್ಲಿ ಸಮನ್ವಯಗಳನ್ನು ಕಂಡು ಕಾಣಿಸಿಹರು. ಪರಮಾತ್ಮನ ಪೂರ್ಣ ಸಾಕ್ಷಾತ್ಕಾರವು ಅವರಿಗೆ ಇಡೀ ಜೀವನದ ಅಂಗಾಂಗಗಳ ಯಥಾರ್ಥ ದರ್ಶನ ನೀಡಿತು. ಮತ್ತು ಅದರ ನೆರವಿನಿಂದ ಅವರು ಸಮನ್ವಯ-ದರ್ಶನದ ಸರಿಯಾದ ಸಂದೇಶವನ್ನು ಸಲ್ಲಿಸಲು ಸಮರ್ಥರಾದರು.

ಸಮನ್ವಯದ ಸಂಸ್ಕಾರಗಳು ಶ್ರೀ ಗುರುದೇವರ ಜೀವನದಲ್ಲಿ ಮೊದಲಿನಿಂದ ಹಾಸುಹೊಕ್ಕಾಗಿಯೇ ನೆಲೆಸಿದ್ದವು. ಕೊಂಚ ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿದವರಿಗೆ ಇದರ ಪರಿಚಯವಾಗದಿರದು. ಅವರ ಬೌದ್ಧಿಕ, ಪಾರಮಾರ್ಥಿಕ ಜೀವನವು ಸಮನ್ವಯ-ಸಂಸ್ಕಾರಗಳಿಂದ ಪುನೀತವಾಗಿರುವುದು. ಅವರು ಪ್ರೀತಿಯಿಂದ ಕಲಿತುದುದು ಸಂಸ್ಕೃತ ಹಾಗೂ ಆಂಗ್ಲಭಾಷೆಗಳನ್ನು, ಆಳವಾಗಿ ಅಧ್ಯಯನ ಮಾಡಿದುದು ಅವುಗಳಲ್ಲಿಯ ಹಿರಿದಾದ ಉದ್ಗ್ರಂಥಗಳನ್ನು, ಜೀವನದಲ್ಲಿ ಅರಗಿಸಿಕೊಂಡುದು ಉಭಯ ಭಾಷೆಗಳಲ್ಲಿಯ ಉಜ್ವಲ-ಉದಾತ್ತ ವಿಚಾರಗಳನ್ನು ಅವುಗಳ ಜತೆಯಲ್ಲಿ ಅವರು ವೇದಾಂತ-ದರ್ಶನ ಹಾಗೂ ಪಾಶ್ಚಾತ್ಯದರ್ಶನ ಇವುಗಳ ಅಧ್ಯಯನವನ್ನು ಆಳವಾಗಿ ಮಾಡಿದರು. ತಮ್ಮ ಗುರುಗಳ ಬಗೆಗೆ ಅವರಲ್ಲಿ ಅಪಾರವಾದ ಪ್ರೀತಿ-ಆದರಗಳು ನೆಲೆಸಿದ್ದವು. ತಮ್ಮ ಗುರುಗಳ ಬಗೆಗೆ ಅವರು ಅರುಹಿದುದೇನೆಂದರೆ, "I recognise only two masters and never a third one. Prof. Bain was my intellectual master and Sri Bhausaheb Maharaj my Spiritual Master." "ನಾನು ಇಬ್ಬರೇ ಗುರುಗಳನ್ನು ಮನ್ನಿಸುವೆ, ಮೂರನೆಯವರನ್ನಲ್ಲ. ಪ್ರೊ. ಬೇನ ಅವರು ನನ್ನ ಬೌದ್ಧಿಕ ಗುರುಗಳು. ಮತ್ತು ಶ್ರೀ ಭಾವುಸಾಹೇಬ ಮಹಾರಾಜರವರು ನನ್ನ ಪಾರಮಾರ್ಥಿಕ ಸದ್ಗುರುಗಳು." "Prof. Bain, a Prof. of history and economics, taught me more philosophy than was taught by the Professor of Philosophy and more literature than was taught by the Professor of literature."

"ಪ್ರಾ. ಬೇನರವರು ಇತಿಹಾಸ-ಅರ್ಥಶಾಸ್ತ್ರಗಳನ್ನು ಕಲಿಸುತ್ತಿದ್ದರು, ನನಗೆ ದರ್ಶನದ ಪ್ರಾಧ್ಯಾಪಕರು ಕಲಿಸುವುದಕ್ಕಿಂತ ಹೆಚ್ಚಿನ ದರ್ಶನವನ್ನು, ಸಾಹಿತ್ಯದ ಪ್ರಾಧ್ಯಾಪಕರು ಕಲಿಸುವುದಕ್ಕಿಂತ ಹೆಚ್ಚಿನ ಸಾಹಿತ್ಯವನ್ನು ಕಲಿಸಿದರು." "He also taught me the art of original researh" "ಅವರು ನನಗೆ ಸ್ವತಂತ್ರವಾಗಿ ಸಂಶೋಧನೆ ಮಾಡುವ ಕಲೆಯನ್ನು ಕಲಿಸಿದರು." "He had a unique personality" "ಅವರದು ಅಸಾಮಾನ್ಯ ವ್ಯಕ್ತಿತ್ವ."ತಮ್ಮ ಆಂಗ್ಲವಿದ್ಯಾಗುರುಗಳ ಬಗೆಗೆ ಅದೆಂಥ ಆದರ ಅವರದು!

ಶ್ರೀ ಗುರುದೇವರ ಬೌದ್ಧಿಕ ಜೀವನದಲ್ಲಿ ಈ ಬಗೆಯ ಸಂಸ್ಕೃತಿ-ಸಂಸ್ಕಾರಗಳ ಸುಮಧುರ ಸಂಗಮ-ಸಮನ್ವಯವಾಗಿರುವಂತೆ ಅವರ ಪಾರಮಾರ್ಥಿಕ ಜೀವನದಲ್ಲಿಯೂ ಅದು ಚೆನ್ನಾಗಿ ಕಂಗೊಳಿಸುವದು. ಅವರು ಬೆಳೆದುದು ಸಮನ್ವಯ ಸಂಪ್ರದಾಯದಲ್ಲಿ ಅದರಲ್ಲಿ ಸಮನ್ವಯವು ಬಗೆ ಬಗೆಯಾಗಿ ಒಳಗೊಂಡಿರುವುದು, ಮೈದಳೆದಿರುವುದು. ಈ ಸಂಪ್ರದಾಯದ ಮೂಲ ಪುರುಷನಾದ ಶ್ರೀ ನಿಂಬರಗಿ ಮಹಾರಾಜರು ವೀರಶೈವರು. ಅವರ ಪ್ರಧಾನ ಶಿಷ್ಯರು ಶ್ರೀ ಭಾವೂಸಾಹೇಬ ಮಹಾರಾಜರವರು ಬ್ರಾಹ್ಮಣರು. "They were both ornaments to Spiritual life" "ಅವರು ಪಾರಮಾರ್ಥಿಕ ಜೀವನಕ್ಕೆ ಅಲಂಕಾರ ಭೂತರು" ಎಂದು ಗುರುದೇವರು ಹೇಳುತ್ತಿದ್ದರು. "ಶ್ರೀ ನಿಂಬರಗಿ ಮಹಾರಾಜರು ಆಧುನಿಕ ಭಾರತದಲ್ಲಿಯ-ಅದೇಕೆ ಇಡೀ ಪ್ರಪಂಚದಲ್ಲಿಯ ಶ್ರೇಷ್ಠತಮ ಮಹಾಪುರುಷರಲ್ಲಿ ಒಬ್ಬರು." "He was one of the greatest Saints of the modern India, nay of the whole world" ಎಂಬುದು ಗುರುದೇವರ ಹೇಳಿಕೆ. ಶ್ರೀ ನಿಂಬರಗಿ ಮಹಾರಾಜರವರನ್ನು ಅವರು ಶ್ರೀ ವಿವೇಕಾನಂದರ ಶಬ್ದಗಳಿಂದ ಕೆಳಗೆ ಕಾಣಿಸಿದಂತೆ ಬಣ್ಣಿಸಿರುವರು.

"The greatest of men in the world have passed away unknown. The Buddhas and Christs, whom we know, are but second-rate heroes, in comparision with the greatest men of whom the world knows nothing. Silently they live and silently they pass away; and in time, their thoughts find expression in Buddhas and Christs and it is these latter that become known to us."[7]

"ಪ್ರಪಂಚದಲ್ಲಿಯ ಅತಿ ಶ್ರೇಷ್ಠತಮರಾದ ಪುರುಷೋತ್ತಮರು ಬಾಳಿದುದು ತೀರ ಅಜ್ಞಾತರಾಗಿ. ಅವರು ಬಾಳಿ ಹೋದುದು ಯಾರಿಗೂ ತಿಳಿಯದಂತೆ. ಪ್ರಪಂಚಕ್ಕೆ ತೀರ ಅಜ್ಞಾತರಾದ ಈ ಪುರುಷೋತ್ತಮರೊಡನೆ ಸರಿಹೋಲಿಸಿದರೆ, ನಮಗೆ ಅಜ್ಞಾತರಾದ ಬುದ್ಧ-ಕ್ರಿಸ್ತಾದಿ ಮಹಾಪುರುಷರು ಕೇವಲ ಎರಡನೆಯ ತರಗತಿಯ ಹಿರಿಯರು. ಈ ಪುರುಷೋತ್ತಮರು ಮೌನದಿಂದ ಬಾಳುವರು, ಮೌನದಿಂದ ತೆರಳುವರು. ಅವರ ವಿಚಾರಗಳು ಸರಿಯಾದ ಸಮಯದಲ್ಲಿ ಬುದ್ಧ-ಕ್ರಿಸ್ತರಂಥವರಲ್ಲಿ ಮೈದಳೆವವು. ಮತ್ತು ಇವರೇ ನಮಗೆ ಜ್ಞಾತರಾಗುವರು."

ಶ್ರೀ ಗುರುದೇವರು ಶ್ರೀ ನಿಂಬರಗಿ ಮಹಾರಾಜರನ್ನು ಕುರಿತು ಮತ್ತೂ ಹೇಳಿರುವ

7) On Freedom

ದೇನಂದರೆ, "He is like a Bakula tree, whose flowers though planted in a corneer, would send their fragrance throughout the length and breadth of Karnataka." "ಅವರು ಒಂದು ಬಕುಲ ವೃಕ್ಷದಂತೆ ಇರುವರು. ಅದು ಒಂದು ಮೂಲೆಯಲ್ಲಿ ನೆಡಲಾಗಿದ್ದರೂ ಅದರ ಹೂಗಳು ತಮ್ಮ ಪರಿಮಳವನ್ನು ಕನ್ನಡ ನಾಡಿನ ಮೂಲೆ ಮೂಲೆಗಳಿಗೆ ಕಳುಹಬಲ್ಲವು." ಶ್ರೀ ಗುರುದೇವರ ಅಭಿಮತದ ಮೇರೆಗೆ. "It is the Sampradaya of Sri Nimbargi Maharaj that can be foundation of unity of all the religious systems in Karnataka." "ಶ್ರೀ ನಿಂಬರಗಿ ಮಹಾರಾಜರ ಪರಮಾರ್ಥ-ಸಂಪ್ರದಾಯವೇ ಕರ್ನಾಟಕದಲ್ಲಿಯ ಧರ್ಮ-ಪಂಥಗಳ ಏಕತೆಯ ತಳಹದಿಯಾಗಬಲ್ಲದು." ಇಂಥ ಹಿರಿ ಗುರುಗಳ ಪರಮ ಶಿಷ್ಯರಾದ ಶ್ರೀ ಭಾವುಸಾಹೇಬ ಮಹಾರಾಜರ ಹಿರಿಮೆಯನ್ನು ಅವರ ಶಿಷ್ಯರಾದ ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು. "ಭಗವಂತನೊಡನೆ ತಮ್ಮ ತಾದಾತ್ಮ್ಯವಾದ ಕಾರಣ ತಮಗೆ 'ಆತ್ಮದೇವ' ಎಂದು ಕರೆಯಲು ಏನು ಅಡ್ಡಿ! ಇತ್ತೀಚೆಗೆ ಜಗತ್ತಿನಲ್ಲಿ ಬಹಳ ಜನರನ್ನು, ಸಾಧುಸಂತರನ್ನು ಕಂಡೆ, ಆದರೆ ಆತ್ಮಜ್ಞಾನವೆಂದರೇನು? ಎಂಬುದನ್ನು ಆತ್ಮಜ್ಞಾನದ ಹಾಗೂ ಅದರ ಮೂಲಕ ತಮ್ಮ ಯೋಗ್ಯತೆ ಅದೆಂತಹದು ಎಂಬುದನ್ನು ಅರಿಯುವವರು ತೀರ ವಿರಳ."(8-3-1913)

ಇಂಥ ಹಿರಿಯ ಸದ್ಗುರು ಸತ್‌ಶಿಷ್ಯರಿಂದ ಪ್ರಚುರಗೊಳಿಸಲಾದ ಈ ಸಮನ್ವಯ-ಸಂಪ್ರದಾಯದ ಮಂಗಲ ಮಂದಿರವನ್ನು ನನ್ನ ಗೆಳೆಯನೋರ್ವನು ಇಂತು ಬಣ್ಣಿಸಿರುವ,

ನಿಂಬರಗಿ ನಾಥರು ಇರಿಸಿದರು ಸ್ಥಿರಪಾಯ
ಕಟ್ಟಿದರು ಮಂದಿರವ ಉಮದೀಶರು ।
ಗೋಪುರವ ನಿಲ್ಲಿಸಿದರು ಅಂಬುರಾಯರು, ಅಕ್ಕ
ಕಳಸವಿಟ್ಟರು ಹೊಳೆವ ಗುರುದೇವರು ॥

ಈ ಸಂಪ್ರದಾಯವು ಬಗೆಬಗೆಯ ಸಮನ್ವಯವನ್ನು ಕಾಣಿಸುವುದು. ಇದರ ಸಾಧ್ಯ-ಸಾಧನಗಳಲ್ಲಿ, ಜಾತಿ-ಪಂಥಗಳಲ್ಲಿ ಅಲ್ಲಲ್ಲಿ ಸಮನ್ವಯವು ಒಡಮೂಡಿರುವುದು. ಆತ್ಮದರ್ಶನ-ಆತ್ಮಾನಂದ-ಇದು ಸಾಧ್ಯ. ನೀತಿಯ ನಡತೆ, ದಿವ್ಯನಾಮದ ಅನನ್ಯ ಸ್ಮರಣ. ಇದು ಸಾಧನ. ಎಲ್ಲ ಜಾತಿ ಪಂಥದವರಿಗೆ ಈ ಮಂದಿರದಲ್ಲಿ ಪ್ರವೇಶ. ಯಾವ ಬಗೆಯ ವಿಷಮತೆಗೆ ಇಲ್ಲಿ ಎಡೆ ಇರುವುದಿಲ್ಲ.

ಶ್ರೀ ಗುರುದೇವರ ಸಾಹಿತ್ಯವೂ, ಸಮನ್ವಯದ ಸಂದೇಶವನ್ನು ಬೀರುವುದು. ಆಂಗ್ಲ ಭಾಷೆಗಳಲ್ಲಿ ಬರೆಯಲಾದ ಅವರ ಆರು ಹಿರಿಯ ಗ್ರಂಥಗಳು ಭಾರತದಲ್ಲಿಯೂ, ಇಡಿ ಪ್ರಪಂಚದಲ್ಲಿಯೂ ಈ ಸಂದೇಶವನ್ನೇ ಸಾರುವವು. ಮೂರು ಗ್ರಂಥಗಳು ನಮ್ಮ ಋಷಿ ಮುನಿಗಳ ಸಂದೇಶವನ್ನೂ, ಮತ್ತೆ ಮೂರು ಗ್ರಂಥಗಳು ಸಂತ ಶರಣರ ಸಂದೇಶವನ್ನೂ ಒಳಗೊಂಡಿರುವವು. ಅವರ ಸಮನ್ವಯ ಸಿದ್ಧಾಂತಗಳನ್ನು ಮುಂದಿನ ಉಪನ್ಯಾಸಗಳಲ್ಲಿ ವಿವರಿಸಲಾಗುವುದು.

ಉಪನಿಷತ್ತುಗಳಲ್ಲಿ ಕಾಣಿಸಲಾದ ಆತ್ಮನ ಅನುಭಾವವು, ಧರ್ಮ-ದರ್ಶನ, ವಿಜ್ಞಾನಗಳನ್ನು ಹೇಗೆ ಸಮನ್ವಯಿಸುವದೆಂಬುದನ್ನು ಅವರು ಈ ರೀತಿ ಅರುಹಿರುವರು.

"We in India who are the inheritors of great spiritual past that has been left to us by our Upanishadic ancestars, stand face to face with a difficult problem, namely that of reconciling mysticism with intellectualism in such a way that may thought-construction that we might put forth on the basis of the external truths of Atmanic experience, suggested to us by the Upanishads, might harmonisously synthesise the claims of Science and Philosophy and Religion..... The present writer believes that the Upanishads are capable of giving us a view of reality which would satisfy the scientific, the philosophic, and the religious aspirations of man; because they give us a view which may be seen to be supported by a direct, first hand, intuitive, mystical experience, which no science can impeach, which all philosophy may point to, as the ultimate goal of its endeavour and which may be seen at once to be the imminent truth in the various forms of religion which only quarrel because they cannot converge".[8]

"ನಮ್ಮ ಪ್ರಾಚೀನ ಉಪನಿಷತ್ಕಾರರ ಪೂರ್ವಜರು ನಮಗೆ ಸಲ್ಲಿಸಿದ ಅನುಭಾವದ ವಾರಸ ಪಡೆದ ಭಾರತೀಯರಾದ ನಮಗೆ ಒಂದು ಕಠಿಣ ಸಮಸ್ಯೆಯು ಎದುರಾಗಿದೆ. ಅದಾವುದೆಂದರೆ, ಉಪನಿಷತ್ತುಗಳಲ್ಲಿ ಕಾಣಿಸಲಾದ ಆತ್ಮಾನುಭವದ ಸನಾತನ ಸತ್ಯಗಳ ತಳಹದಿಯ ಮೇಲೆ, ನಾವು ಈಗ ರಚಿಸಲಿರುವ ತತ್ವಜ್ಞಾನವು ಅನುಭೂತಿವಾದವನ್ನೂ, ಬುದ್ಧಿವಾದವನ್ನೂ ಸಮನ್ವಯಿಸಬೇಕು. ಅದರ ಜತೆಯಲ್ಲಿ ಅದು ಧರ್ಮ-ದರ್ಶನ-ವಿಜ್ಞಾನಗಳನ್ನು ಸಮನ್ವಯಿಸಬೇಕು..... ಮಾನವನ ವೈಜ್ಞಾನಿಕ, ದಾರ್ಶನಿಕ ಹಾಗೂ ಧಾರ್ಮಿಕ ಅಭೀಪ್ಸೆಗಳನ್ನು ತೃಪ್ತಿಪಡಿಸುವಂತ ಸತ್‌ತತ್ವದ ದರ್ಶನವನ್ನು ಸಲ್ಲಿಸುವ ಸಾಮರ್ಥ್ಯವು ಉಪನಿಷತ್ತುಗಳಲ್ಲಿ ಇರುವುದು ಎಂಬುದು ಪ್ರಸುತ ಗ್ರಂಥಕರ್ತನ ನಂಬಿಕೆ. ಯಾಕೆಂದರೆ, ಅವು ನೀಡಿದ ದರ್ಶನವನ್ನು ಪ್ರಥಮ, ಪ್ರತ್ಯಕ್ಷ ಪ್ರಾತಿಭ, ಅನುಭಾವವು ಸಮರ್ಥಿಸುವದು. ಅದನ್ನು ವಿಜ್ಞಾನವು ಅಲ್ಲಗಳೆಯಲರಿಯದು. ಎಲ್ಲ ದರ್ಶನಗಳು ಅದನ್ನೆ ತಮ್ಮ ಪ್ರಯತ್ನಗಳ ಗುರಿ ಎಂದು ನಿರ್ದೇಶಿಸಬಲ್ಲವು, ಮೂಲ ಸತ್‌ತತ್ವವು. ಧರ್ಮಗಳೆಲ್ಲ ಈ ಕೇಂದ್ರದಲ್ಲಿ ಬೆರೆಯದ ಮೂಲಕವೇ ಅವು ತಮ್ಮ ತಮ್ಮಲ್ಲಿ ಕಾದಾಡುತ್ತವೆ.

ಶ್ರೀ ಗುರುದೇವರು ಸ್ಥಾಪಿಸಿದುದು ಎರಡು ಸಾಂಸಾಂಸ್ಕೃತಿಕ ಸಂಸ್ಥೆಗಳನ್ನು: ಒಂದು "ಧರ್ಮದರ್ಶನಗಳ ವಿದ್ಯಾಪೀಠ" "Academy of Philosophy and

8) C.S.P. 1-2

Religion" ಎರಡನೆಯದು **"ತುಲನಾತ್ಮಕ ಧರ್ಮದರ್ಶನಗಳ ವಿದ್ಯಾಪೀಠ"** "Academy of Comparative Philosophy & Religion" ಇವು ಧರ್ಮದರ್ಶನಗಳ ಸಂಶೋಧನೆ ಹಾಗೂ ಪರಮಾರ್ಥ-ಸಂಸ್ಕೃತಿಗಳ ಪ್ರಚಾರಕ್ಕಾಗಿ ಹೊರಡಿಸಲಾದವು. ಅವುಗಳಲ್ಲಿಮೊದಲನೆಯದರ ಉದ್ದೇಶವು ಈ ಬಗೆಯದಿರುವುದು.

"The Aim of the Academy is to bring together all those who are interested in a philosophical investigation of the Problem of God."

"ಪರಮಾತ್ಮನ ಸಮಸ್ಯೆಯನ್ನು ದಾರ್ಶನಿಕ ದೃಷ್ಟಿಯಿಂದ ಸಂಶೋಧನೆ ಮಾಡುವುದರಲ್ಲಿಅಭಿರುಚಿಯುಳ್ಳ ಮಹನೀಯರನ್ನು ಒಂದೆಡೆ ಬರಮಾಡಿಕೊಳ್ಳುವುದು ಈ ವಿದ್ಯಾಪೀಠದ ಉದ್ದೇಶವು." ಈ ವಿದ್ಯಾಪೀಠದ ಹಿರಿದಾದ ಕಾರ್ಯವನ್ನು ಗುರುದೇವರು ಅದಕ್ಕೆ ಸಹಾಯವನ್ನು ನೀಡಲು ಹೊರಡಿಸಿದ 'ಬಿನ್ನಹ-ಪತ್ರದಲ್ಲಿ(Appeal)' ಈ ರೀತಿ ಬಣ್ಣಿಸಿರುವರು.

"The Academy will try to combine what is valuable both in European and Indian Philosphy and let me hope, may offer thought-constructions for the future, in the originality of which and in theopolitan foundation of which alone, may lie the hope of India as a spiritual nation. If a real Philosophic Love of God which the Academy would create, be regarded as a sufficient incentive to the welding of all humanity together, irrespective of race, caste or creed, then surely the Academy is an institution which would well be worthy of the support of all India."[9]

"ಈ ವಿದ್ಯಾಪೀಠವು ಭಾರತೀಯ ಹಾಗೂ ಯುರೋಪಿನ ದರ್ಶನಗಳಲ್ಲಿಯ ಬೆಲೆಯುಳ್ಳದ್ದನ್ನು ಸಂಯೋಜಿಸಿ, ಭವಿಷ್ಯಕಾಲಕ್ಕಾಗಿ ವಿಚಾರ ಪ್ರಣಾಲಿಯನ್ನು ನಿರ್ಮಿಸಬಹುದು. ಅದರ ನೂತನತೆಯು **'ದೇವರಾಜ್ಯ'**ದ ತಳಹದಿಯನ್ನು ಹಾಕಬಲ್ಲದು. ಭಾರತದ ಪಾರಮಾರ್ಥಿಕ ರಾಷ್ಟ್ರವೆಂಬ ಕೀರ್ತಿಯು ಅದನ್ನೇ ನಂಬಿರುವುದು. ಈ ವಿದ್ಯಾಪೀಠವು ನಿರ್ಮಿಸಲಿರುವ ಪರಮಾತ್ಮನ ದಾರ್ಶನಿಕ ಭಕ್ತಿಯು ಇಡೀ ಮಾನವತೆಯನ್ನು, ಅದರಲ್ಲಿಯ ಎಲ್ಲವಂಶ, ಜಾತಿ, ಪಂಥಗಳನ್ನು ಒಂದೆಡೆ ತರಲು-ಏಕೀಕೃತ ಮಾಡಲು, ಸಾಕಷ್ಟುಪ್ರೇರಕವಾಗಬಲ್ಲದು, ಎಂದು ಬಗೆಯುವಂತಾದರೆ ಈ ಸಂಸ್ಥೆಯು ಇಡೀ ಭಾರತದ ಸಹಾಯವನ್ನು ಪಡೆಯಲು ಅರ್ಹವಾಗದಿರದು."

ಎರಡನೆಯ ವಿದ್ಯಾಪೀಠದ ಉದ್ದೇಶವು ಕೆಳಗಿನಂತೆ ಇರುವುದು.

"The aim is to work for the spiritual unity of mankind and

9) Prospectus PP 7-8-17

consequent peace and good-will upon earth, by bringing together intellectual and spiritual minded persons through spiritual symposiums etc."

"ಮಾನವತೆಯ ಪಾರಮಾರ್ಥಿಕ ಏಕತೆಗಾಗಿಯೂ ಮತ್ತು ಅದರ ಮುಖಾಂತರವಾಗಿ ಪ್ರಪಂಚದಲ್ಲಿ ಶಾಂತಿ-ಸೌಹಾರ್ದವನ್ನು ಉಂಟು ಮಾಡುವುದಕ್ಕಾಗಿಯೂ, ಬುದ್ಧಿಶಾಲಿಗಳೂ, ಪರಮಾರ್ಥಪ್ರಿಯರೂ ಆದ ಮಹನೀಯರನ್ನು ಪಾರಮಾರ್ಥಿಕ ವಿಚಾರ ಸಂಕೀರಣ ಇತ್ಯಾದಿಗಳ ಮುಖಾಂತರವಾಗಿ ಒಂದೆಡೆ ಬರಮಾಡಿಕೊಂಡು, ಯತ್ನಿಸುವುದು ಈ ಸಂಸ್ಥೆಯ ಉದ್ದೇಶ."

ಈ ಬಗೆಯಾಗಿ ಉಭಯ ಸಂಸ್ಥೆಗಳು ಸಮನ್ವಯ-ದರ್ಶನದ ಪ್ರಸಾರಕ್ಕಾಗಿಯೇ-ಪ್ರಚಾರಕ್ಕಾಗಿಯೇ ಸ್ಥಾಪಿತವಾಗಿದ್ದವು.

ದರ್ಶನದ ಅಧ್ಯಯನದಿಂದ ತಮಗೆ ಲಭಿಸಿದ ನೂತನ (ಸಮನ್ವಯ) ದೃಷ್ಟಿಯನ್ನು ಕುರಿತು ಗುರುದೇವರು ಈ ರೀತಿ ಹೇಳಿರುವರು.

"My pursuit of philosophical studies extending over more than forty years has given me a point of view which tries to reconcile..... different interpretations ."[10]

"ನಲವತ್ತು ವರ್ಷಗಳನ್ನು ಮೀರಿದ ನನ್ನ ದರ್ಶನದ ಅಧ್ಯಯನವು ನನಗೊಂದು ನೂತನ ದೃಷ್ಟಿಯನ್ನು ನೀಡಿರುವದು. ಅದರ ಫಲವಾಗಿ ನಾನು ಬೇರೆ ಬೇರೆ ಅರ್ಥ ವಿವರಗಳನ್ನು ಸಮನ್ವಯ ಗೊಳಿಸಬಲ್ಲೆ."

ಸಮನ್ವಯ ದರ್ಶನವನ್ನು ಕುರಿತು ತಮ್ಮ ನನಸಾಗದ ವಿಶಾಲವಾದ ಕನಸನ್ನು ಕುರಿತು ಗುರುದೇವರು ಈ ಬಗೆಯಾಗಿ ವಿವರಿಸಿರುವರು.

"I wish to write a book- **Pathway to God**-with a critical intellect by taking into consideration the thoughts and experiences of Western and Eastern Philosophers and Saints and applying the test of scientific outlook as well as my own experience, so that the book may be specially useful to the modern people ."[11]

"ಪಾಶ್ಚಾತ್ಯ ಹಾಗೂ ಪೌರ್ವಾತ್ಯ ದಾರ್ಶನಿಕರ ಹಾಗೂ ಸಂತರ ವಿಚಾರಗಳನ್ನು ಅನುಭವಗಳನ್ನು ಗಮನಿಸಿ, ವೈಜ್ಞಾನಿಕ ದೃಷ್ಟಿಯಿಂದಲೂ ನನ್ನ ಸ್ವಂತ ಅನುಭವಗಳಿಂದಲೂ ಅವನ್ನು ಪರೀಕ್ಷಿಸಿ, ವಿಮರ್ಶಾತ್ಮಕ ಬುದ್ಧಿಯಿಂದ **"ಪರಮಾರ್ಥಪಥ"** ಎಂಬ ಉದ್ಗ್ರಂಥವನ್ನು ಬರೆಯಬೇಕೆಂದು ನಾನು ಬಗೆದಿರುವೆ. ಅದು ವಿಶೇಷವಾಗಿ ಆಧುನಿಕ ಜನರಿಗೆ ಉಪಯುಕ್ತವಾಗಬಹುದು.

10) P.G.K. P 26 11) Kaivalya Vaibhava P - 2.

ಅವರು ಮತ್ತೂ ಅರುಹಿರುವದೇನೆಂದರೆ :

"It has been a long cherished aim of the present writer togather the multi-coloured flowers of the mystic garden and to present a garland of them to the Lord. It has been also his ambition to write a general work on the **"Pathway to God"** with reference to the philosophies and Religions of the East and West to which subject he has devoted the major part of his life."[12]

"ಪರಮಾರ್ಥದ ಉದ್ಯಾನದಲ್ಲಿಯ ವಿವಿಧ ಬಣ್ಣಗಳ ಸುಮನಗಳನ್ನು ಆಯ್ದು ಅವುಗಳ ಮಾಲೆಯನ್ನು ಪರಮಾತ್ಮನಿಗೆ ಅರ್ಪಿಸಬೇಕು, ಎಂಬುದು ಲೇಖಕರ ಬಹುದಿನದ ಬಯಕೆ ಇರುವುದು. ಅದೇ ಮೇರೆಗೆ ಪೌರ್ವಾತ್ಯ-ಪಾಶ್ಚಾತ್ಯ ದೇಶಗಳ ದರ್ಶನ-ಧರ್ಮಗಳನ್ನು ಅನುಲಕ್ಷಿಸಿ, **"ಪರಮಾರ್ಥಪಥ"** ಎಂಬ ಸರ್ವಸಾಮಾನ್ಯವಾದ ಗ್ರಂಥವೊಂದನ್ನು ಬರೆಯುವ ಆಕಾಂಕ್ಷೆಯನ್ನು ನಾನು ತಳೆದಿರುವೆನು. ಯಾಕೆಂದರೆ, ನನ್ನ ಜೀವನದ ಬಹುಭಾಗವನ್ನು ಈ ವಿಷಯದ ಅಧ್ಯಯನಕ್ಕಾಗಿಯೇ ಮೀಸಲಾಗಿರಿಸಿರುವೆನು."

ಮಾಲೆಯ ರೂಪರೇಷೆ :

ಕೊನೆಗೆ ಈ ಉಪನ್ಯಾಸ ಮಾಲೆಯ ರೂಪರೇಷೆಯನ್ನು ಅರುಹಿ ವಿರಮಿಸುವೆ. ಇದರಲ್ಲಿ ಒಟ್ಟಿಗೆ ಐದು ಉಪನ್ಯಾಸಗಳು ಕೊಡಲಾಗುವವು. ತಾವು ಈ ವರೆಗೆ ಕೇಳಿದುದು "ಪೀಠಿಕೆಯ" ಉಪನ್ಯಾಸ. ಎರಡನೆಯ ಉಪನ್ಯಾಸದ ವಿಷಯ "ದರ್ಶನ ಸಮನ್ವಯ". ಅದರಲ್ಲಿ ಗುರುದೇವರು ದರ್ಶನದ ಅಂಗಾಂಗಗಳಲ್ಲಿ ಕಾಣಿಸಿದ ಸಮನ್ವಯವನ್ನು ವಿವರಿಸಲಾಗುವುದು. ಮೂರನೆಯ ಉಪನ್ಯಾಸದಲ್ಲಿ "ಆದರ್ಶ-ಸಮನ್ವಯ"ವನ್ನು ಕಾಣಿಸಲಿರುವೆ. ನಾಲ್ಕನೆಯದರಲ್ಲಿ ಜೀವನದ ಪ್ರಧಾನ ಆದರ್ಶದ, ಸಾಕ್ಷಾತ್ಕಾರದ "ಸಾಧನ ಸಮನ್ವಯ"ವೂ "ಅನುಭೂತಿ-ಸಮನ್ವಯ"ವೂ ಅರುಹಲಾಗುವದು. ಕೊನೆಯ ಐದನೆಯದರಲ್ಲಿ ಮಾಲೆಯ "ಉಪಸಂಹಾರ"ವನ್ನು ಮಾಡಲಾಗುವುದು. ಅದರ "ಸಿಂಹಾವಲೋಕನ"ದೊಡನೆ ಶ್ರೀಗುರುದೇವರ **ವಿಶ್ವಸಂದೇಶವನ್ನು** ಸಾರಲಾಗುವದು.

12) P.G.H. P-I

ಪ್ರಕರಣ ಎರಡು

ದರ್ಶನ-ಸಮನ್ವಯ

ವಿಷಯ ಪ್ರವೇಶ :

ಇಂದಿನ ವಿಷಯ ಸಮನ್ವಯಾಚಾರ್ಯರಾದ ಶ್ರೀ ಗುರುದೇವರು ತೋರಿಸಿದ "ದರ್ಶನ-ಸಮನ್ವಯ". ದರ್ಶನ ಸಮನ್ವಯಕ್ಕೆ ಎರಡು ಅರ್ಥಗಳು. 1) ದರ್ಶನ ಜನಿತ ಸಮನ್ವಯ. 2) ದರ್ಶನದ ಸಮನ್ವಯ, ದರ್ಶನಗಳ ಆಳವಾದ ಅಧ್ಯಯನದ ಫಲವಾಗಿ ಗುರುದೇವರು ಭಿನ್ನ ಭಿನ್ನ ವಿಚಾರ ಪ್ರಣಾಲಿಗಳಲ್ಲಿ, ಭಾವನೆಗಳಲ್ಲಿ, ಸಿದ್ಧಾಂತಗಳಲ್ಲಿ ಕಂಡು ಕಾಣಿಸಿದ ಹೊಂದಿಕೆ. ಅದೇ ಮೇರೆಗೆ ಅವರು ಬೇರೆ ಬೇರೆ ದರ್ಶನಗಳಲ್ಲಿ ಕಂಡು ಹಿಡಿದ ಸಾಮ್ಯ-ತಾರತಮ್ಯಗಳು. ಇವುಗಳಲ್ಲಿ ಕೆಲ ಪ್ರಧಾನವಾದವುಗಳನ್ನು ಇಂದು ಅರುಹಲಿರುವೆ. ತತ್ಪೂರ್ವದಲ್ಲಿ ಗುರುದೇವರು ದರ್ಶನವನ್ನು ಅಭ್ಯಸಿಸಲು ಪ್ರಾರಂಭಿಸಿದುದು ಎಂತು ? ಏತಕ್ಕಾಗಿ ? ಎಂಬುದನ್ನು ಕಂಡು ಮುಂದುವರೆಯುವಾ. ಅದು ಅವರ ಸಮನ್ವಯ ದರ್ಶನದ ಹಿರಿದಾದ ಕಾರ್ಯದ ಮೇಲೆ ಚೆನ್ನಾಗಿ ಬೆಳಕನ್ನು ಬೀರಬಹುದು.

ದರ್ಶನ ಅಧ್ಯಯನ :-ಉದ್ದೇಶ-ಪದ್ಧತಿ :

ಗುರುದೇವರು ಮೊದ ಮೊದಲು ದರ್ಶನವನ್ನು ಅಷ್ಟೊಂದು ಗೌರವಿಸುತ್ತಿರಲಿಲ್ಲ. "ಅಂದು ದರ್ಶನವನ್ನು ವಿವರಿಸುವ ಸರಿಯಾದ ಪಠ್ಯ ಗ್ರಂಥಗಳು ಇರಲಿಲ್ಲ. ಆ ವಿಷಯದ ಬಗೆಗೆ ಯೋಗ್ಯ ಅಭಿರುಚಿಯು ಹುಟ್ಟುವಂತೆ ಅದನ್ನು ಕಲಿಸುವ ಪ್ರಾಧ್ಯಾಪಕರೂ ಇರಲಿಲ್ಲ. ಇದು ಅದರ ಬಗೆಗೆ ತಮ್ಮಲ್ಲಿ ಜನಿಸಿದ ಅಪ್ರೀತಿ, ಅಗೌರವಗಳ ಕಾರಣ." ಎಂದು ಗುರುದೇವರೇ ಹೇಳುತ್ತಿದ್ದರು. ಆದರೆ ಅವರಲ್ಲಿ ಮೊದಲಿನಿಂದ ಪರಮಾತ್ಮನ ಬಗೆಗೆ ನಿತಾಂತ ಆದರ, ಸದ್ಗುರುಗಳ ಅನುಗ್ರಹ ಕರುಣಗಳು ಅವರ ಅನನ್ಯ ಸಾಧನಕ್ಕೆ ಉಜ್ವಲ ಅನುಭಾವಗಳನ್ನು ದಯಪಾಲಿಸಿದ್ದವು. ಅದೇ ಅವರ ದರ್ಶನದ ಅಧ್ಯಯನಕ್ಕೆ ಪ್ರಧಾನವಾದ ಮೂಲವಾಗಿದ್ದಿತು. ಇದನ್ನು ಕುರಿತು ಅವರು ಹೇಳುವದೇನೆಂದರೆ :

"Spiritual life has been the begining of my Philosophic career

and let me hope it will be its culmination as well."

"ಪಾರಮಾರ್ಥಿಕ ಜೀವನವೇ ನನ್ನ ದಾರ್ಶನಿಕ ವೃತ್ತಿಯ ಮೂಲ. ಅದೇ ಅದರ ಪರಿಣತ ಫಲವಾಗಿ ಪರಿಣಮಿಸುವುದು ಎಂಬುದು ನನ್ನ ಭಾವನೆ."

ತಮ್ಮ ಪಾರಮಾರ್ಥಿಕ ಜೀವನಕ್ಕೆ ಬೌದ್ಧಿಕ ಸಮರ್ಥನೆಯನ್ನು ಪಡೆಯುವದಕ್ಕೆ ಗುರುದೇವರು ದರ್ಶನವನ್ನು ಅಭ್ಯಸಿಸಲು ಪ್ರಾರಂಭಿಸಿದರು. ಅದಕ್ಕೆ ಬೇರೆ ಕಾರಣಗಳೂ ಇಲ್ಲದಿರಲಿಲ್ಲ. ಆದರೆ, ಇದು ಪ್ರಧಾನ ಕಾರಣ. ಇದರ ಜತೆಗೆ ತಮ್ಮಲ್ಲಿ ಜನಿಸಿದ ಕೆಲ ಸಂದೇಹಗಳನ್ನು ಅಳಿಸುವುದು ಹಾಗೂ ಭಾರತೀಯ ಧರ್ಮ-ದರ್ಶನಗಳ, ಅದರಲ್ಲಿಯೂ ವಿಶೇಷವಾಗಿ ನೈಜ ಪರಮಾರ್ಥದ ಗೌರವವನ್ನು ಬೆಳೆಸುವದು. ಬೆಳಗಿಸುವದು. ಇವೂ ಅವರ ದರ್ಶನ ಅಧ್ಯಯನದ ಉದ್ದೇಶಗಳಾಗಿದ್ದವು.

ತಮ್ಮ ಪಾರಮಾರ್ಥಿಕ ಅನುಭವಗಳ ಸತ್ಯತೆಯನ್ನು ಪರೀಕ್ಷಿಸಿ, ತಮ್ಮ ಶ್ರದ್ಧೆಗೆ ಬುದ್ಧಿಯ ಆಧಾರವನ್ನು ಪಡೆಯಲು ಅವರು ದರ್ಶನಗಳ ಅಧ್ಯಯನವನ್ನು ಪ್ರಾರಂಭಿಸಿದರು. "I studied Philosophy to find intellectual justification for my faith." "ಪಾರಮಾರ್ಥಿಕ ಅನುಭವಗಳ ಸತ್ಯತೆಯ ಬಗ್ಗೆ ನನ್ನಲ್ಲಿ ನೆಲೆಗೊಂಡ ಶ್ರದ್ಧೆಗೆ ಬುದ್ಧಿಯ ಬೆಂಬಲವನ್ನು ಪಡೆಯಲು ನಾನು ದರ್ಶನವನ್ನು ಅಭ್ಯಸಿಸಿದೆ" ಎಂದು ಅವರೇ ಒಂದೆಡೆ ಅರುಹಿರುವರು. ಅದರ ನೆರವಿನಿಂದ ಅವರು ತಮ್ಮ ಅನುಭವಗಳ ಸತ್ಯತೆಯನ್ನು ಅರಿತು ತಮ್ಮ ಶ್ರದ್ಧೆಯನ್ನು ದೃಢಪಡಿಸಿದರು. ಹಾಗೂ ಮುಂದೆ ಅವರು ವಿಜ್ಞಾನಪ್ರಿಯ ಬುದ್ಧಿನಿಷ್ಠರು ಒಪ್ಪುವಂತೆ ಆ ವಿಷಯವನ್ನು ಸರಿಯಾಗಿ, ಸುಲಭವಾಗಿ ವಿವರಿಸಲು ಸಮರ್ಥರಾದರು. ಈ ಪ್ರಧಾನ ಉದ್ದೇಶದ ಜತೆಯಲ್ಲಿ ಅವರ ಅವಧಾನವನ್ನು ದರ್ಶನದ ಅಧ್ಯಯನದೆಡೆಗೆ ಮುಂದಿನ ಎರಡು ಕಾರಣಗಳು ಸೆಳೆದವು. ಸಾಧಕಾವಸ್ಥೆಯ ಪ್ರಾರಂಭದಲ್ಲಿ ಗುರುದೇವರಿಗೆ ಎರಡು ಬಗೆಯ ಸಂದೇಹಗಳನ್ನು ಎದುರಿಸಬೇಕಾಯಿತು. ಒಂದು ಬಗೆಯ ಸಂದೇಹವನ್ನು ಕಳೆಯಲು ಅವರು ಪೌರ್ವಾತ್ಯ ದರ್ಶನಗಳನ್ನು ಅಭ್ಯಸಿಸಿದರು. ಎರಡನೆಯದನ್ನು ನಿವಾರಿಸಲು ಪಾಶ್ಚಾತ್ಯ ದರ್ಶನ ಅಭ್ಯಸಿಸಿದರು. ಅದು ಹೇಗಾಯಿತು ನೋಡಿ.

ತಮ್ಮ ಉಜ್ವಲ ಪಾರಮಾರ್ಥಿಕ ಅನುಭವಗಳ ಸ್ವರೂಪ-ಸತ್ಯತೆಗಳನ್ನು ಅನುಭಾವಿ ತಜ್ಞರಿಂದ ಅರಿಯಲು ಅವರು ಒಮ್ಮೆ ತಮ್ಮ ದರ್ಶನ ಪ್ರಾಧ್ಯಾಪಕರಾದ Prof. Wodehouse (ಪ್ರೊ. ವುಡ್‌ಹಾವುಸ) ಇವರೊಂದಿಗೆ ಶ್ರೀಮತಿ ಬೆಝುಂಟಮ್ಮನವರನ್ನು ಕಾಣಲು ಬನಾರಸಕ್ಕೆ ತೆರಳಿದರು. ಆ ಸಮಯದಲ್ಲಿ ಅವರು ಅಲ್ಲಿಯ ಶ್ರೀ ಶಂಕರಾಚಾರ್ಯರ ಮಠಕ್ಕೆ ದರ್ಶನಕ್ಕಾಗಿ ಹೋಗಿದ್ದರು. ಅಲ್ಲಿ ಭಕ್ತರು **"ಭಜಗೋ ವಿಂದಂ ಭಜ ಗೋಪಾಲಂ"** ಇತ್ಯಾದಿ ಶಂಕರಾಚಾರ್ಯರ ಭಕ್ತಿ ಸ್ತೋತ್ರಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. **"ಚಿದಾನಂದ ರೂಪ: ಶಿವೋಹಂ ಶಿವೋಽಹಂ।"** ಎಂಬಂತೆ ಅದ್ವೈತ ಅನುಭೂತಿಯನ್ನು ಬಣ್ಣಿಸುವ ಆಚಾರ್ಯರು ಇಂಥ ಸ್ತೋತ್ರಗಳನ್ನು ಬರೆದುದು ಎಂತು? ಅದ್ವೈತದಲ್ಲಿ ಭಕ್ತಿಗೆ ಆಸ್ಪದವೆಲ್ಲಿ? ಈ ಸಂದೇಹವು ಅವರಿಗೆ ಭಾರತೀಯ ದರ್ಶನವನ್ನು ಅಭ್ಯಸಿಸಲು ಪ್ರೇರಿಸಿತು.

"That to me was a crux impelled me to study Indian Philosophy all the more." "ಅದೊಂದು ನನಗೆ ಒಗಟಾಗಿ ಪರಿಣಮಿಸಿ, ನನ್ನನ್ನು ಭಾರತೀಯ ದರ್ಶನವನ್ನು ವಿಶೇಷವಾಗಿ ಅಭ್ಯಸಿಸಲು ಒತ್ತಾಯ ಪಡಿಸಿತು." ಎಂದು ಅವರು ಓಲೆಯೊಂದರಲ್ಲಿ ತಿಳಿಸಿದ್ದಾರೆ. (Oct.1908) "

ಗುರುದೇವರ ಸದ್ಗುರುಗಳಾದ ಶ್ರೀ ಭಾವೂಸಾಹೇಬ ಮಹಾರಾಜರು ನಿಷ್ಠುರ ಬುದ್ಧಿ ನಿಷ್ಠರಿದ್ದರು..... ಅಂಧ ಶ್ರದ್ಧೆಯನ್ನು ತುಂಬ ತಿರಸ್ಕರಿಸುತ್ತಿದ್ದರು. ಶಕುನ, ಪವಾಡಗಳನ್ನು ಅವರು ಎಂದೂ ನಂಬುತ್ತಿರಲಿಲ್ಲ. ಅವರು ಒಮ್ಮೆ "ಜ್ಞಾನದೇವರು ಗೋಡೆಯನ್ನು ನಡೆಸಿದರು, ಕೋಣದಿಂದ ವೇದವನ್ನು ನುಡಿಸಿದರು, ಇದೆಲ್ಲಸುಳ್ಳು" ಎಂದು ಹೇಳಿದರು. ಗುರುದೇವರು ಅಂದು ಆ ಪವಾಡಗಳನ್ನು ನಂಬುತ್ತಿದ್ದರು. ಶ್ರೀಯುತರ ಮಾತು ಸುಳ್ಳಿರಲರಿಯದು. ಅದರಿಂದ ತನ್ನ ನಂಬಿಕೆಯ ಸತ್ಯತೆಯನ್ನು ತಾನೇ ಪರೀಕ್ಷಿಸಬೇಕು ಎಂದು ಬಗೆದು ಅವರು ಪಾಶ್ಚಾತ್ಯ ದರ್ಶನಗಳನ್ನು ಅಭ್ಯಸಿಸಲು ಪ್ರಾರಂಭಿಸಿದರು. ಇದನ್ನು ಕುರಿತು ಅವರೇ ಈ ರೀತಿ ಹೇಳಿರುವರು.

" I began a serious study of European Philosphy with the intent of finding a justification for my spiritual life."

"ನನ್ನ ಪರಮಾರ್ಥಕ್ಕೆ ಬೌದ್ಧಿಕ ಆಧಾರಗಳನ್ನು ಪಡೆಯಲು ನಾನು ಯುರೋಪದ ದರ್ಶನವನ್ನು ಆಳವಾಗಿ ಅಭ್ಯಸಿಸಲು ಪ್ರಾರಂಭಿಸಿದೆ." ಇದರ ನೆರವಿನಿಂದ ತನ್ನ ನಂಬಿಕೆಯೇ ತಪ್ಪು ಎಂಬುದನ್ನು ಅವರು ಅರಿತರು. ತರುವಾಯ ನಿಸರ್ಗನಿಯಮಗಳಿಗೆ ಅವಿರೋಧವಾದ ಕೆಲ ಚಮತ್ಕಾರಗಳು ಜರುಗಬಹುದು. ಆದರೆ ಅವುಗಳ ವಿರುದ್ಧವಾದವು ಆಗಲರಿಯವು ಎಂದು ಹೇಳುತ್ತಿದ್ದಡು.

ಮೇಲ್ಕಾಣಿಸಿದ ಉದ್ದೇಶಗಳ ಜತೆಯಲ್ಲಿ ಅವರ ದರ್ಶನಾಧ್ಯಯನಕ್ಕೆ ಮತ್ತೂ ಕೆಲ ಉದ್ದೇಶಗಳು ಇದ್ದಂತೆ ಕಾಣುವುದು. ಅಂದು ಕೆಲ ಪಾಶ್ಚಾತ್ಯ ಪಂಡಿತರು ಹಾಗೂ ಅವರ ಅಂಧಾನುಕರಣ ಮಾಡಲಿರುವ ಕೆಲ ಭಾರತೀಯ ವಿದ್ವಾಂಸರು, ಅಜ್ಞಾನಜನಿತ ಸದ್ಭಾವನೆಯಿಂದಲೂ, ದುರಭಿಮಾನಜನಿತ ದುರ್ಭಾವನೆಯಿಂದಲೂ, ಭಾರತೀಯ ಧರ್ಮ, ಸಂಸ್ಕೃತಿ, ದರ್ಶನಗಳನ್ನು ಹಳಿಯುತ್ತಿದ್ದರು. ಅದನ್ನು ಎದುರಿಸಲು ನಮ್ಮ ಕೆಲ ವಿದ್ವಾಂಸರು ಯತ್ನಿಸುತ್ತಿದ್ದರು. ಅವರ ಆಕ್ಷೇಪಗಳನ್ನು ಪ್ರಮಾಣ ಸಹಿತವಾಗಿ ಖಂಡಿಸುತ್ತಿದ್ದರು. ಗುರುದೇವರು ಈ ಕಾರ್ಯವನ್ನು ಯಶಸ್ವಿಯಾಗಿ ಮುಂದುವರೆಸಲು ಬಯಸಿ, ಉಭಯ ಧರ್ಮ-ದರ್ಶನಗಳ ಆಳವಾದ ಅಧ್ಯಯನವನ್ನು ಮಾಡಿದರು. ಅದರ ಫಲವಾಗಿ ಅವರು ಈ ಟೀಕಾಕಾರರನ್ನು ಚೆನ್ನಾಗಿ ಸದೆಬಡೆದರು. ಗುರುದೇವರು ಇಂಥ ಟೀಕಾಕಾರರಿಗೆ ನೀಡಿದ ಉತ್ತರದ ಮಾದರಿಯನ್ನು ಅವರ "A Vindication of Indian Philosophy" "ಭಾರತೀಯ ದರ್ಶನದ ಸಮರ್ಥನೆ" ಎಂಬ ಖಂಡ ತುಂಡಾದ ಬರಹದಲ್ಲಿ ಚೆನ್ನಾಗಿ ಕಾಣಬಹುದು. ಒಂದೇ ಉದಾಹರಣೆಯನ್ನು ಕಾಣಿಸಲಿರುವೆ, ತಮ್ಮ "ಉಪನಿಷತ್ ರಹಸ್ಯ" ಗ್ರಂಥದ ಪ್ರಸ್ತಾವನೆಯಲ್ಲಿ ಅವರು ಈ ರೀತಿ ಅರುಹಿರುವರು -

"It has been customary with European writers on Indian subjects to suppose that all was pessimism and sorrow before the days of Tagore in India and that Tagore brought the evanel of joy from the West. It is nothing of the kind. Tagore's Philosophy of joy and bliss is only the crest wave of that great huge ocean of blissful existence depicted in Upanishadic Philosophy."[1]

"ಭಾರತೀಯ ವಿಷಯಗಳನ್ನು ಕುರಿತು ಬರೆಯುವ ಯುರೋಪಿಯನ್ನರದು ಒಂದು ರೂಢಿಯಾಗಿದೆ. ಅದಾವುದೆಂದರೆ ಟಾಗೋರರ ಉದಯದ ಪೂರ್ವದಲ್ಲಿ ಭಾರತದಲ್ಲಿನಿರಾಶಾವಾದದ ಹಾಗೂ ದು:ಖದ ವಾತಾವರಣವೇ ಎಲ್ಲೆಡೆ ಪಸರಿಸಿತ್ತು ಮತ್ತು ಟಾಗೋರರು ಆನಂದದ ಸಂದೇಶವನ್ನು ಪಶ್ಚಿಮದಿಂದ ತಂದರು. ಹಾಗೇನೂ ಇರಲಿಲ್ಲ. ಇದೆಲ್ಲವೂ ಅಜ್ಞಾನದ ಫಲ. ಉಪನಿಷತ್ತುಗಳಲ್ಲಿ ಬಣ್ಣಿಸಲಾದ ಸ್ವಾನಂದದ ವಿಶಾಲ ಸಾಗರದಲ್ಲಿ ಏಳುವ ತೆರೆಗಳ ನೊರೆಯು, ಟಾಗೋರರ ಆನಂದದ ದರ್ಶನ."

ಈ ಬಗೆಯಾಗಿ ಗುರುದೇವರು ಪಾಶ್ಚಾತ್ಯರ ವಿಪರೀತ ವಿಧಾನಗಳನ್ನು ಅಲ್ಲಲ್ಲಿ ತಳ್ಳಿಹಾಕಿರುವರು. ಭಾರತೀಯ ಸಂಸ್ಕೃತಿಯ ಧರ್ಮದರ್ಶನಗಳ ತೆಗಳಿಕೆಯನ್ನು ಕಂಡು ನೊಂದ ಗುರುದೇವರು, ಅವುಗಳ ಗೌರವವನ್ನು ರಕ್ಷಿಸಿ, ವೈಭವವನ್ನು ಪ್ರಪಂಚಕ್ಕೆ ಕಾಣಿಸುವುದು ತಮ್ಮ ಕರ್ತವ್ಯವೆಂದು ಬಗೆದಿದ್ದರು. ಅದಕ್ಕಾಗಿ ಅವನ್ನು ಹಳಿಯುವವರ ತೀವ್ರ ಖಂಡನೆಯ ಜತೆಗೆ, ಅವುಗಳ ತಿರುಳಿನ ಉಜ್ವಲತೆಯನ್ನು ತಮ್ಮ ಆಂಗ್ಲ ಬರಹಗಳಲ್ಲಿಯೂ, ಗ್ರಂಥಗಳಲ್ಲಿಯೂ ಪ್ರಭಾವಯುತವಾಗಿ ಕಾಣಿಸಲು ಅವರು ಯತ್ನಿಸಿದರು. ಅದರ ರೀತಿಯನ್ನು ಕುರಿತು ಅವರು ಅರುಹಿರುವುದೇನೆಂದರೆ: "It is only when the pith of our Philosophy is exhibited in modern garb that the world will come to know the worth of Indian Philosophy."[2] "ಈ ನಮ್ಮ ದರ್ಶನದ ತಿರುಳನ್ನು ಆಧುನಿಕ ಉಡುಪಿನಲ್ಲಿ ಪ್ರದರ್ಶಿಸಿದಾಗಲೇ ಜಗತ್ತಿಗೆ ಭಾರತೀಯ ದರ್ಶನದ ಬೆಲೆಯು ಗೊತ್ತಾಗುವುದು." ಅದಕ್ಕಾಗಿ ಅವರು ಪ್ರಪಂಚದಲ್ಲಿಯ ಸುಮಾರಾಗಿ ಎಲ್ಲ ಪ್ರಧಾನ-ಧರ್ಮ-ದರ್ಶನಗಳ ಆಳವಾದ ವಿಶಾಲವಾದ ಲೌಲನಿಕ ಅಧ್ಯಯನ ಮಾಡಿ, ಆರ್ಯ ಧರ್ಮ-ದರ್ಶನಗಳ ವೈಭವವನ್ನು ಕಾಣಿಸಿ, ಎಲ್ಲರನ್ನು ಬೆರಗುಗೊಳಿಸಿದರು. ಅದರ ಜತೆಯಲ್ಲಿ ಬೇರೆ ಬೇರೆ ಧರ್ಮ-ದರ್ಶನಗಳ ಜೀವನದಲ್ಲಿಯ ಬೆಲೆಗಳನ್ನು ಅರುಹಿ, ಅವುಗಳ ಸರಿಯಾದ ಸಮನ್ವಯವನ್ನು ಸಾಧಿಸಿದರು. ಅದರ ವಿವರಗಳನ್ನು ಮುಂದೆ ಕಾಣಿಸಲಿರುವೆ.

ಬೌದ್ಧಿಕ ದರ್ಶನ ಹಾಗೂ ಅನುಭೂತಿ ಇವುಗಳಲ್ಲಿ ಗುರುದೇವರು ಕಂಡ ಸಮನ್ವಯವು ಅವರಿಗೆ ಜೀವನದಲ್ಲಿಯ ವಿವಿಧಾಂಗಗಳ, ವಿವಿಧ ಸಮಸ್ಯೆಗಳ ಸ್ಥಳ-ಮೂಲ್ಯಗಳನ್ನು ಕಾಣಿಸಿತು. ಮತ್ತು ಅವುಗಳ ಸಮನ್ವಯದ ರೀತಿಯನ್ನು ಅರುಹಿತು. ಈ ಮೂಲಭೂತ ಸಮನ್ವಯವನ್ನು ಕುರಿತು ಅವರು ಬರೆದಿರುವದೇನೆಂದರೆ:

"It would be a problem for the Philosophy of the Immediate

1) C. S. Preface P. xiv 2) P.E.P. 173

Future to place Mysticism on a truly philosophic basis. Rational Mysticism which has been hitherto regarded as a contradiction in terms, must be a truism."[3]

"ಪರಮಾರ್ಥವನ್ನು ಅನುಭೂತಿಯನ್ನು ನೈಜದರ್ಶನದ ತಳಹದಿಯ ಮೇಲೆ ಹೇಗೆ ನಿಲ್ಲಿಸಬೇಕೆಂಬುದೇ, ಮುಂದಿನ ದಾರ್ಶನಿಕರು ಎದುರಿಸುವ ಸಮಸ್ಯೆ. ಬುದ್ಧಿಮಾನ್ಯ ಅನುಭೂತಿ ದರ್ಶನ (Rational Mysticism) ಎಂಬುದು ಈ ವರೆಗೆ ಸ್ವಗತವಿರೋಧದಿಂದ ಕೂಡಿದ ಪದ, ಎಂದು ಭಾವಿಸಲಾಗಿತ್ತು. ಅದೀಗ ಒಂದು ಸ್ವತ:ಸಿದ್ಧ ಸತ್ಯವಾಗಬೇಕು." ಅದರ ಸತ್ಯತೆಯನ್ನು ಕಾಣಿಸುವದು ಗುರುದೇವರ ಎಲ್ಲ ಗ್ರಂಥಗಳ ಗುರಿಯಾಗಿದ್ದಿತು.

ಈ ಅವರ ಗುರಿಯ ಮೇಲೆ, ಅವರ ಅಧ್ಯಯನ, ಲೇಖನ-ಪದ್ಧತಿಯು ಚೆನ್ನಾಗಿ ಬೆಳಕನ್ನು ಬೀರಬಲ್ಲದು. ಆದುದರಿಂದ ಅದರ ಪರಿಚಯವನ್ನು ಮಾಡಿಕೊಡುವುದು ಅನುಚಿತವಾಗಲರಿಯದು. ಗುರುದೇವರು ತಾವು ಅಭ್ಯಸಿಸಲಿರುವ, ಬರೆಯಲಿರುವ ಎಲ್ಲ ವಿಷಯಗಳನ್ನು ನಾಲ್ಕು ದೃಷ್ಟಿಯಿಂದ ಪರೀಕ್ಷಿಸುತ್ತಿದ್ದರು. ಅವುಗಳಲ್ಲಿ ಮೊದಲನೆಯದು **ಐತಿಹಾಸಿಕ ದೃಷ್ಟಿ** : ಅದು ಅವರಿಗೆ ಆಯಾ ಕಾಲ-ಸ್ಥಳ-ಪರಿಸ್ಥಿತಿಗಳ ಪರಿಚಯವನ್ನು ನೀಡುತ್ತಿತ್ತು. ಎರಡನೆಯದು, **ವಿಮರ್ಶಾತ್ಮಕ ದೃಷ್ಟಿ** : ಅದು ಅವರಿಗೆ ವಿಷಯಗಳ ಬೇರೆ ಬೇರೆ ಅಂಗಗಳ ಬೆಲೆಯನ್ನು ಅವುಗಳಲ್ಲಿಯ ತಾರತಮ್ಯವನ್ನು ಅರುಹುತ್ತಿತ್ತು. ಮೂರನೆಯದು **ತುಲನಾತ್ಮಕ ದೃಷ್ಟಿಯು** ಬೇರೆ ಬೇರೆ ಗ್ರಂಥಗಳಲ್ಲಿಯ ಅಂಥ ವಿಷಯಗಳನ್ನು ಅವರೆದುರು ನಿಲ್ಲಿಸಿ, ಅವುಗಳಲ್ಲಿಯ ಸಾಮ್ಯ-ವೈಷಮ್ಯಗಳನ್ನು ಅವರಿಗೆ ತಿಳಿಸುತ್ತಿದ್ದಿತು. ತರುವಾಯ ಅವರ ನಾಲ್ಕನೆಯ **ವೈಜ್ಞಾನಿಕ ದೃಷ್ಟಿಯು** ಅದರಲ್ಲಿಯ ವಿಚಾರಗಳ ತರ್ಕಶುದ್ಧತೆಯನ್ನು, ಯಥಾರ್ಥತೆಯನ್ನು ಅರುಹುತ್ತಿತ್ತು. ಈ ರೀತಿ ಅವರು ಆಧುನಿಕ ವಿದ್ವಾಂಸರಿಗೆ ಸಮ್ಮತವಾದ, ಅವರಿಂದ ಗೌರವಿಸಲ್ಪಟ್ಟ, ಈ ನಾಲ್ಕು ದೃಷ್ಟಿಗಳಿಂದ ತಮ್ಮ ಎಲ್ಲ ಗ್ರಂಥಗಳಲ್ಲಿ ತಾವು ಬರೆಯಲಿರುವ ವಿಷಯಗಳನ್ನು ಕಂಡು, ತಮ್ಮ ಸ್ವಂತ ಅನುಭವದ ನಿಕಷದಿಂದ ಅವನ್ನು ಪರೀಕ್ಷಿಸುತ್ತಿದ್ದರು. ತರುವಾಯ ಅವನ್ನು ಗ್ರಂಥಗಳಲ್ಲಿ ವಿವರಿಸುತ್ತಿದ್ದರು. ಆದ್ದರಿಂದಲೆ ಅವರ ಗ್ರಂಥಗಳೆಲ್ಲ ಪ್ರಪಂಚದಲ್ಲಿಯ ತಜ್ಞ ಪಂಡಿತರ ಗೌರವವನ್ನು ಪಡೆದವು. ಅವುಗಳಲ್ಲಿ ಪ್ರತಿಪಾದಿತವಾದ ಬುದ್ಧಿ-ಅನುಭೂತಿಗಳ ಸಮನ್ವಯರೂಪಿಯಾದ ಅವರ **"ಬುದ್ಧಿಮಾನ್ಯ ಅನುಭೂತಿ ದರ್ಶನವು"** (Rational Mysticism) ವಿಶೇಷವಾಗಿ ಬಲ್ಲವರ ಹಾರ್ದಿಕ ಮನ್ನಣೆಯನ್ನು ಪಡೆಯಿತು.

ಗುರುದೇವರ ಗ್ರಂಥ-ರಚನೆಯು ಪದ್ಧತಿಯ **ಮೂಲಗ್ರಾಹೀ ಪದ್ಧತಿ** (Genetic Method) **ಸಮೂಲ ಪದ್ಧತಿ** (Source and Exposition Method). ಮೂಲ ಗ್ರಂಥದಲ್ಲಿಯ ವಿಚಾರಾಂಶಗಳ ಆಯ್ಕೆ, ವರ್ಗೀಕರಣ, ವೈಚಾರಿಕ ಬೆಳವಣಿಗೆಯ ರೀತಿಯಲ್ಲಿ ಪುನರ್ರಚನೆ, ಅವುಗಳ ತಿಳಿಯಾದ ವಿವರಣೆ, ಇವು ಈ ಪದ್ಧತಿಯ ಮುಖ್ಯ ಅಂಗಗಳು.

3) C. S. Preface xiv

ದರ್ಶನದ-ಹಿರಿಮೆ :

ದರ್ಶನದ ಹಿರಿಮೆಯು ಮಾನವನ ಜೀವನಕ್ಕೆ ದಿವ್ಯತೆಯನ್ನು, ಧನ್ಯತೆಯನ್ನು ನೀಡುವ ಅದರ ಸಾಮರ್ಥ್ಯವನ್ನು ಅವಲಂಬಿಸಿರುವುದು. ಶ್ರೀಗುರುದೇವರು ಅರುಹಿರುವದೇನೆಂದರೆ:

"The veracity and virility of any metaphysical theory is to be guaged by its power of making life more divine and therefore more worth-while living."[4]

"ಯಾವುದೇ ದಾರ್ಶನಿಕ ಸಿದ್ಧಾಂತದ ಸತ್ಯತೆಯೂ,ಸತ್ವಯುತತೆಯೂ, ಜೀವನವನ್ನು ದಿವ್ಯ ಹಾಗೂ ಧನ್ಯ ಮಾಡುವ ಅದರ ಸಾಮರ್ಥ್ಯದಿಂದ ಅಳೆಯಬೇಕಾಗುವುದು."

ಅವರು ಮತ್ತೂ ಹೇಳಿರುವುದೇನೆಂದರೆ :

"I always believed that the function of philosophy is for consolidation and consumption of spiritual experience and it is only the acquisition of this spiritual experience which makes a man worthy of being the handiwork of God."[5] (Message)

"ಪಾರಮಾರ್ಥಿಕ ಅನುಭವವನ್ನು ಗಟ್ಟಿಗೊಳಿಸುವುದೂ, ಪರಿಪೂರ್ಣಗೊಳಿಸುವುದೂ, ದರ್ಶನದ ಕಾರ್ಯ ಎಂಬುದು ನನ್ನ ಸ್ಥಿರವಾದ ನಂಬಿಗೆ; ಮತ್ತು ಪಾರಮಾರ್ಥಿಕ ಅನುಭವ ಒಂದೇ ಮಾನವನಿಗೆ ಭಗವಂತನ ಸತ್‌ಕೃತಿಯಾಗುವ ಯೋಗ್ಯತೆಯನ್ನು ನೀಡಬಲ್ಲದು."

ಆದರೆ ಈ ಸಾಮರ್ಥ್ಯವು ಅದಕ್ಕೆ ಅದರ ಮರ್ಯಾದಿತವಾದ ಬೌದ್ಧಿಕ ಕ್ಷೇತ್ರದಲ್ಲಿಯೇ ಲಭಿಸಲರಿಯದು. ಕೇವಲ ಬೌದ್ಧಿಕ ವಿಚಾರವಿಲಸಿತವು. ಕಲ್ಪನಾ ವಿಲಾಸವು, ತರ್ಕ ಕೌಶಲ್ಯವು, ಕೆಲವರಿಗೆ ಕೆಲಕಾಲ ರಂಜನೆಯನ್ನು ನೀಡಬಹುದಲ್ಲದೆ, ಜೀವನಕ್ಕೆ, ಅದರ ಉನ್ನತಿಗೆ ಬೇಕಾದ ಬೆಳಕನ್ನೂ ಬಲವನ್ನೂ ನೀಡಲರಿಯದು. ಆದುದರಿಂದ ಅಂಥ ದರ್ಶನವು ಬಲ್ಲವರ ಅವಹೇಳನಕ್ಕೆ ಗುರಿಯಾಗುವದು. ಕೆಲವರು ಅದರಲ್ಲಿಯ ವಿಷಯವನ್ನು "It is a search for a black cat in a dark room where it is not". "ಅದು ಕತ್ತಲು ಕೋಣೆಯಲ್ಲಿಇಲ್ಲದ ಕಡೆ ಬೆಕ್ಕಿನ ಶೋಧ." ಎಂದು ಗೇಲಿ ಮಾಡಿದರೆ, ಬೇರೆ ಕೆಲವರು ಅದರ ತರ್ಕಕೌಶಲ್ಯವನ್ನು"It is like a spider's web, very beautiful to look at, but having no substance." "ಅದು ಜೇಡರ ಹುಳದ ಜಾಲದಂತೆ ಕಾಣಲು ಅಂದವಾದದ್ದು ಇದ್ದರೂ ಹುರುಳಿಲ್ಲದಿರುವುದು." ಎಂದು ಹಳಿದಿರುವರು. ಮತ್ತೆ ಕೆಲವರು "ತರ್ಕಶಾಸ್ತ್ರವನೋದಿ ತಗರು ತಗರುಗಳಂತೆ ಮಾರ್ಕೊಂಡು ಬಡಿದಾಡುವ" ದಾರ್ಶನಿಕರನ್ನು "ಕಲೌ ವೇದಾಂತಿನೋ ಭಾಂತಿ ಫಾಲ್ಗುನೇ ಬಾಲಕಾ ಇವ" ಈ ಕಲಿಯುಗದಲ್ಲಿ

4) C. S. Preface P. xiv 5) Thus Spake Gurudev P. 120

ವೇದಾಂತಿಗಳು ಹೋಳೀ ಹಬ್ಬದಲ್ಲಿಯ ಬಾಲಕರಂತೆ ಕಾಣುವರು ಎಂದು ತಿರಸ್ಕರಿಸುವರು. ಆದ್ದರಿಂದ ಬೌದ್ಧಿಕ ದಾರ್ಶನಿಕರು ಇಂಥ ನಿಂದೆಗೆ ಗುರಿಯಾಗದೆ ನಿಜವಾದ ಗೌರವಕ್ಕೆ ಪಾತ್ರರಾಗಬೇಕಾದರೆ, ಅವರು ತಮ್ಮ ಬುದ್ಧಿ ವೈಭವದ ಹಾಳು ಹೆಮ್ಮೆಯನ್ನು ತೊರೆದು, ಅನುಭೂತಿಯ ಬೆಂಬಲವನ್ನು ಪಡೆಯಬೇಕು.

ಬೌದ್ಧಿಕ ದರ್ಶನವು ಅನುಭೂತಿಯೊಡನೆ ಸಮನ್ವಯವಾಯಿತೆಂದರೆ- ಅದು ಬುದ್ಧಿನಿಷ್ಟ ಅನುಭೂತಿ- ದರ್ಶನವಾಯಿತೆಂದರೆ ಪರಮಾರ್ಥದರ್ಶನವಾಯಿತೆಂದರೆ- ಅದರ ಸರಿಯಾದ ಪ್ರಸಾರದಿಂದ ಅನುಭಾವಿ ದಾರ್ಶನಿಕರು ಮಾನವರ ಅವಧಾನವೃತವನ್ನು ಭಗವಂತನೆಡೆಗೆ ಸೆಳೆಯಬಲ್ಲರು. ಇಷ್ಟೇ ಅಲ್ಲ "Their only vocation is to fill the world with the praise and glory of God." "ಭಗವಂತನ ವೈಭವವನ್ನು, ಸ್ತುತಿಯನ್ನು, ವಿಶ್ವದಲ್ಲಿ ಪಸರಿಸುವುದೇ ಅವರ ಏಕಮೇವ ಕಾರ್ಯವಿರುವ ಮೂಲಕ, ಅದರ ಫಲವಾಗಿ ಮಾನವರಲ್ಲಿ ಭಗವಂತನ ಭಕ್ತಿಯು ಬೆಳೆಯುವುದು. ಮತ್ತು ನಾವು ಈ ಮೊದಲು ಅರುಹಿದಂತೆ ಮಾನವತೆಯು ಎಲ್ಲ ಚರಾಚರದಲ್ಲಿ ಅಂತರ್ಯಾಮಿಯಾದ ಆ ಏಕಮೇವ ಪಾರಮಾರ್ಥಿಕ ತತ್ವವನ್ನು ಆದರಿಸಲು ಪ್ರಾರಂಭಿಸಿದಾಗಲೇ ನಾವು ಬೇರೆ ಬೇರೆ ಪಂಗಡಗಳಲ್ಲಿ, ರಾಷ್ಟ್ರಗಳಲ್ಲಿ ಹಾಗೂ ಜನಾಂಗಗಳಲ್ಲಿ ಸಾಮರಸ್ಯವನ್ನು ನಿರ್ಮಿಸಬಲ್ಲೆವು."

"His (philosopher's) supreme business is to bring about peace and harmony in the society, state and the world at large. From this point of view, it may be said without exaggeration that the future of the world rests with philosophers."[6]

"ಆದುದರಿಂದ ಸಮಾಜದಲ್ಲಿ, ರಾಷ್ಟ್ರದಲ್ಲಿ ಹಾಗೂ ಇಡೀ ಪ್ರಪಂಚದಲ್ಲಿ ಶಾಂತಿಯನ್ನು, ಸಾಮರಸ್ಯವನ್ನು ನೆಲೆಗೊಳಿಸುವದು, ದಾರ್ಶನಿಕರ ಶ್ರೇಷ್ಠತಮ ಕಾರ್ಯವಿರುವದು. ಈ ದೃಷ್ಟಿಯಿಂದ ಪ್ರಪಂಚದ ಭವಿಷ್ಯವು ದಾರ್ಶನಿಕರನ್ನು ಅವಲಂಬಿಸಿರುವುದು. ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು."

ದರ್ಶನದ ಹಾಗೂ ದಾರ್ಶನಿಕರ ಮಹಾಕಾರ್ಯವು ಇಂಥದಿರುವದರಿಂದ ಅವರ ಹಿರಿಮೆಯು ತುಂಬ ಅಪ್ರತಿಮವಾದುದು ಎಂಬುದರಲ್ಲಿ ಸಂದೇಹವಿಲ್ಲ. ದರ್ಶನವು ಇನ್ನೊಂದು ಮಹತ್ವದ ಕಾರ್ಯವನ್ನು ಮಾಡುವದು. ಅದು ಧರ್ಮವನ್ನು ಪರಿಶುದ್ಧಗೊಳಿಸುವದು ಅದರಲ್ಲಿ ಕಾಲಕ್ರಮೇಣ ಉಂಟಾದ-ಸೇರಿದ ದೋಷಗಳನ್ನು ಅಲ್ಲಗಳೆಯುವದು ಎಂದು ಗುರುದೇವರು ಹೇಳುವರು.

"Religion is to steer clear of two rocks that surround it on both sides. For, on the one hand there is the danger of Superstition, which is an unworthy view of God; on the other, there is Scepticism, which is denial of God. True Religion has to steer itself clear of both these dangers, and it is only the helm of Philosophy which

6) P.E.P. 120

can steer it straight to a safe and happy heaven."[7]

"ಧರ್ಮದ ದೋಣಿಯು ಎರಡು ಬಂಡೆಗಳ ನಡುವಿನಿಂದ ಹಾಯ್ದು ಹೋಗಬೇಕಾಗುವುದು. ಒಂದೆಡೆ ಅಂಧಶ್ರದ್ಧೆಯ ಗಂಡಾಂತರ. ಅದು ಪರಮಾತ್ಮನ ಬಗೆಗೆ ಅಯೋಗ್ಯ ಕಲ್ಪನೆ. ಇನ್ನೊಂದೆಡೆಗೆ ಅಶ್ರದ್ಧೆಯ ಗಂಡಾಂತರ. ಅದು ಪರಮಾತ್ಮನ ನಿರಾಕರಣ. ನಿಜ-ಧರ್ಮವು(Spiritual Religion) ಈ ಗಂಡಾಂತರಗಳೆರಡರಿಂದಲೂ ಪಾರಾಗಬೇಕಾಗಿದೆ. ಅದನ್ನು ದರ್ಶನದ ಚುಕ್ಕಾಣಿಯೇ ನೇರವಾಗಿ, ಸುರಕ್ಷಿತವಾಗಿ ಆನಂದಮಯ ಬಂದರಕ್ಕೆ ಒಯ್ದುತಲುಪಿಸಬಹುದು."

ಮೇಲಾಗಿ ಇಂಥ ಪಾರಮಾರ್ಥಿಕ ದರ್ಶನವು ಪರಮಾತ್ಮನ ಸಾಕ್ಷಾತ್ಕಾರವೇ ಜೀವನದ ಸಾರಸರ್ವಸ್ವವೆಂದು ಬಗೆಯುವದರಿಂದ, ಅದೇ ಪ್ರಪಂಚದಲ್ಲಿಯ ದರ್ಶನಗಳನ್ನು ಆವರಿಸಿರುವ ಬೌದ್ಧಿಕ ಸಿದ್ಧಾಂತಗಳನ್ನು ಸಮನ್ವಯಿಸಲು ನೆರವಾಗುವುದು.

ಇನ್ನು ಗುರುದೇವರು ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಮನ್ವಯವನ್ನು ಹೇಗೆ ಸಾಧಿಸಲು ಅರುಹಿಸುವರು ಎಂಬುದನ್ನು ಅರಿಯುವಾ.

ದರ್ಶನ-ಧರ್ಮ-ವಿಜ್ಞಾನ : (Science)

ಇನ್ನು ಗುರುದೇವರು ದರ್ಶನ-ದರ್ಶನಗಳಲ್ಲಿ, ದರ್ಶನ-ಧರ್ಮದಲ್ಲಿ, ಧರ್ಮ-ಧರ್ಮಗಳಲ್ಲಿ ಹಾಗೂ ಧರ್ಮ-ವಿಜ್ಞಾನಗಳಲ್ಲಿ ಕಾಣಿಸಿದ ಸಮನ್ವಯವನ್ನು ಸ್ವಲ್ಪ -ದರಲ್ಲಿಸಾಧ್ಯವಿದ್ದ ಮೇರೆಗೆ ಅವರ ಮಾತಿನಲ್ಲಿಯೇ ವಿವರಿಸಲು ಯತ್ನಿಸುವೆ.

I) ದರ್ಶನ-ದರ್ಶನ ಸಮನ್ವಯ :

ಶ್ರೀ ಗುರುದೇವರು "On the study of Indian and European philosophy" "ಭಾರತೀಯ ಹಾಗೂ ಯುರೋಪಿಯ ದರ್ಶನದ ಅಧ್ಯಯನವನ್ನು ಕುರಿತು" ಎಂಬ ನಿಬಂಧವನ್ನು ಕ್ರಿ.ಶ. 1914ರಲ್ಲಿ ಬರೆದಿರುವರು. ಅವರ ಅಭಿಮತದ ಮೇರೆಗೆ.

"The Problem of Philosophy to me, was one and identical all the world over and there was no distinction of country or race in the world of thought."

"ದರ್ಶನದ ಸಮಸ್ಯೆಯು ಇಡೀ ಪ್ರಪಂಚದಲ್ಲಿ ಏಕರೂಪವಾದದ್ದೂ ಅನನ್ಯವಾದುದೂ ಇದ್ದಿತು. ವಿಚಾರ ಕ್ಷೇತ್ರದಲ್ಲಿ ದೇಶ-ವಂಶಗಳ ಭಿನ್ನತೆ ಇರುವದಿಲ್ಲ."

ಈ ದೃಷ್ಟಿಯಿಂದ ಪೂರ್ವ-ಪಶ್ಚಿಮಗಳಲ್ಲಿಯ ದರ್ಶನಗಳಲ್ಲಿ ತಾವು ಕಂಡ ವೈಚಾರಿಕ ಸಾಮ್ಯವನ್ನು ಅವರು ಚೆನ್ನಾಗಿ ವಿಶದಗೊಳಿಸಿರುವರು. ಅದರ ಕೆಲ ಮುಖ್ಯಾಂಶಗಳನ್ನು ಇಲ್ಲಿಕಾಣಿಸಿರುವೆ.

---

7) Prospectus P-1

"ಭಾರತೀಯ ದರ್ಶನವು ಪಾಶ್ಚಾತ್ಯದರ್ಶನದಷ್ಟೇಸಂಪನ್ನವೂ, ವೈವಿಧ್ಯಪೂರ್ಣವೂ ಇರುವುದು. ಇದನ್ನು ಕಾಣಿಸುವದಕ್ಕಾಗಿಯೇ ನಾನು ಈ ತುಲನಾತ್ಮಕ ಬರಹವನ್ನು ಬರೆದಿರುವೆ, ಎಂದು ಅವರು ಉಸುರಿರುವರು." ಅದು ಹೇಗೆಂದರೆ:

"The Absolutism of Bradley has numerous points of contact with the Advaitism of Shankaracharya. Both suppose that the Absolute is the only ultimate real. With both, God is different from the Absolute. With both. God is unreal as compared with the Absolute. Both consider that our souls, our bodies, the worldly objects that we see, are ultimately appearances. And both, hold that Space and Time are only Phenomenal and are transcended in the Absolute."

"ಬ್ರೆಡ್ಲೇ ಅವರ ಅಭೇದವಾದವು ಅನೇಕ ಅಂಶಗಳಲ್ಲಿ ಶಂಕರಾಚಾರ್ಯರ ಅದ್ವೈತವನ್ನು ಹೋಲುವದು. ಈರ್ವರೂ ಪರತತ್ವವೇ ಅಂತಿಮ ಸತ್ಯವೆಂದು ಬಗೆವರು. ದೇವರು ಈ ಪರತತ್ವದಿಂದ ಭಿನ್ನವಿರುವ ಎಂಬುದೇ ಈರ್ವರ ಅಭಿಮತ..... ಈ ಪರತತ್ವದೊಡನೆ ಹೋಲಿಸಿದರೆ ದೇವರು ಅಸತ್ಯ ಎಂದು ಇಬ್ಬರೂ ಭಾವಿಸುವರು. ನಮ್ಮ ಜೀವಾತ್ಮರು, ದೇಹಗಳು, ನಾವು ಕಾಣಲಿರುವ ಜಾಗತಿಕ ಒಡವೆಗಳು, ಇವೆಲ್ಲ ಅಂತಿಮವಾಗಿ ತೋರಿಕೆಗಳು ಎಂದು ಈರ್ವರೂ ಬಗೆವರು. ಇಬ್ಬರೂ ದಿಕ್, ಕಾಲಗಳು ಕೇವಲ ಇಂದ್ರಿಯಗೋಚರ, ಪರತತ್ವದಲ್ಲಿ ಅವು ಇಲ್ಲದಂತಾಗುವವು ಎಂದು ಬಗೆವರು." ಈ ಬಗೆಯ ಸಾಮ್ಯದರ್ಶನದ ಜತೆಯಲ್ಲಿ ಜೇಮ್ಸವಾರ್ಡ ಮತ್ತು ರಾಮಾನುಜಾಚಾರ್ಯ, ಮೆಕ್‌ಟಿಗಾರ್ಟ ಮತ್ತು ಸಾಂಖ್ಯದಾರ್ಶನಿಕರು, ಇವರ ವಿಚಾರಗಳಲ್ಲಿಯ ಸಾಮ್ಯ-ವೈಷಮ್ಯಗಳನ್ನು ಕಾಣಿಸಿ ಗುರುದೇವರು-

East is East and West is West
And never the twain shall meet. (R.Kipling)

"ಪೂರ್ವವು ಪೂರ್ವ ಹಾಗೂ ಪಶ್ಚಿಮವು ಪಶ್ಚಿಮ, ಅವೆರಡು ಎಂದೂ ಕೂಡಲರಿಯವು" ಎಂದು ಸಾರುವ ಕಿಪ್ಲಿಂಗನ ಉನ್ಮತ್ತ ಕಂಗಳಲ್ಲಿ ಚೆನ್ನಾಗಿ ಅಂಜನವನ್ನು ಹಾಕಿರುವರು.

ಇದಾಯಿತು. ಪೂರ್ವ-ಪಶ್ಚಿಮದ ದರ್ಶನಗಳಲ್ಲಿಯ ಸಮಾಜ ಸಿದ್ಧಾಂತಗಳ ಕಿರಿನೋಟ.

II) ದರ್ಶನ-ಧರ್ಮ-ಸಮನ್ವಯ :

ಇನ್ನು ಗುರುದೇವರು ದರ್ಶನ-ಧರ್ಮಗಳಲ್ಲಿಯ ನಿಕಟ ಸಂಬಂಧವನ್ನೂ, ಅವು ಪರಸ್ಪರರನ್ನು ಪೋಷಿಸುವ ಬಗೆಯನ್ನು ಹೇಗೆ ಕಾಣಿಸಿರುವರು ಎಂಬುದನ್ನು ಸ್ವಲ್ಪದರಲ್ಲಿ

ವಿವರಿಸುವೆ. ಗುರುದೇವರ ಅಭಿಮತದ ಮೇರೆಗೆ ಧರ್ಮವೆಂದರೆ **"ಪಾರಮಾರ್ಥಿಕ ಧರ್ಮ"**(Spiritual Religion) ಲೌಕಿಕ ಧರ್ಮವಲ್ಲಎಂಬುದನ್ನು ಗಮನಿಸಬೇಕು. ಅದು ದೇವ ಮಾನವರಲ್ಲಿಯ ಸಾಕ್ಷಾತ್ ಸಂಬಂಧ. "It is direct relation between God and Man" ಇಂಥ ಧರ್ಮದರ್ಶನಗಳ ಸಂಬಂಧವನ್ನು ಅವರು ಈ ಬಗೆಯಾಗಿ ಅರುಹಿರುವರು.

"The Problem of supreme importance to mankind is the problem of the existence of God and His relation to Man and Nature. Philosophy and Religion both concern themselves with the solution of this problem; but while philosophy pengages itself with the intellectual side of this solution. Religion concerns itself with the practical side. It may thus be seen that Philosophy and Religion, so far from contradicting each other, only support and supplement each other. The problem they undertake to solve is identical but the methods of approach are different. We may even say that Philosophy and Religion are related to each other as Form and Matter. While Philosophy supplies us with the logical framework for the solution of the Supreme Problem, Religion supplies us with the inset to be enclosed inside this framework. Philosophy with out the content of Religion would be empty. Religion without the guidance of philosophy would be shapeless and amorphous. It would thus be necessary to combine the dictates of Philosophy and Religion in the interest of the highest solution of the problem."[8]

"ಪರಮಾತ್ಮನ ಅಸ್ತಿತ್ವದ ಹಾಗೂ ಮಾನವ ನಿಸರ್ಗಗಳೊಡನೆ ಇರುವ ಅವನ ಸಂಬಂಧದ ಸಮಸ್ಯೆಯು ಮಾನವತೆಯ ಎದುರು ಇರುವ ಅತಿ ಮಹತ್ವದ ಸಮಸ್ಯೆಯು. ಧರ್ಮ-ದರ್ಶನಗಳೆರಡೂ ಈ ಸಮಸ್ಯೆಯನ್ನು ಬೌದ್ಧಿಕ ದೃಷ್ಟಿಯಿಂದ ಬಿಡಿಸಲು ಯತ್ನಿಸುವುದು. ಈ ಬಗೆಯಾಗಿ ಧರ್ಮ-ದರ್ಶನಗಳು ಪರಸ್ಪರರನ್ನು ವಿರೋಧಿಸುವುದಿಲ್ಲ. ಇಷ್ಟೇ ಅಲ್ಲ; ಅವು ಪರಸ್ಪರರನ್ನು ಪೋಷಿಸುತ್ತವೆ. ಅವು ಒಂದಕ್ಕೊಂದು ಪೂರಕವಾಗಿವೆ. ಅವು ಬಿಡಿಸಲಿರುವ ಸಮಸ್ಯೆಯು ಏಕರೂಪದ್ದಾಗಿದೆ; ಆದರೆ ಅವುಗಳ ಬಿಡಿಸುವ ಪದ್ಧತಿಗಳು ಭಿನ್ನವಾಗಿವೆ. ದರ್ಶನ-ಧರ್ಮಗಳ ಸಂಬಂಧವು, ರೂಪವಸ್ತುಗಳ ಸಂಬಂಧದಂತೆ ಇರುವದು ಎಂಬುದಾಗಿಯೂ ನಾವು ಹೇಳಬಹುದು. ಈ ಪ್ರಧಾನ ಸಮಸ್ಯೆಯನ್ನು ಬಿಡಿಸಲು ತರ್ಕಯುತ ಚೌಕಟ್ಟನ್ನು ದರ್ಶನವು ಸಲ್ಲಿಸಿದರೆ, ಧರ್ಮವು ಅದರಲ್ಲಿ ಕೂಡಿಸಬೇಕಾದ ಪ್ರತಿಮೆಯನ್ನು-ಚಿತ್ರವನ್ನು ನೀಡುವದು. ಧರ್ಮದ ತಿರುಳಿಲ್ಲದ ದರ್ಶನವು ಬರಿದು; ದರ್ಶನದ

8) Prospectus P - 2.

ಮಾರ್ಗದರ್ಶನವಿಲ್ಲದ ಧರ್ಮ ಆಕಾರರಹಿತ-ರೂಪರಹಿತವಾದುದು. ಆದುದರಿಂದ, ಈ ಸಮಸ್ಯೆಯ ಶ್ರೇಷ್ಠತಮ ಪರಿಹಾರವನ್ನು ಪಡೆಯಬೇಕಾದರೆ ಧರ್ಮ-ದರ್ಶನಗಳ ನಿರ್ದೇಶಗಳನ್ನು ಸರಿಯಾಗಿ ಹೊಂದಿಸಬೇಕಾಗುವದು."

ಗುರುದೇವರು ಈ ಸಂಬಂಧವನ್ನು ಇನ್ನೊಂದು ಬಗೆಯಿಂದ ಬಣ್ಣಿಸಿರುವರು. "I believe that Philosophy without Religion is like Form without Spirit and that Religion without Philosophy is like Spirit which cannot work without Form. It is in the supreme combination of Form and Spirit; of Philosophy and Religion that the true salvation of a nation lies.

"ಧರ್ಮ ವಿರಹಿತ ದರ್ಶನವು ಚೈತನ್ಯರಹಿತ ರೂಪದಂತೆ. ದರ್ಶನರಹಿತ ಧರ್ಮ, ರೂಪರಹಿತ ಚೈತನ್ಯದಂತೆ ಅಕಾರ್ಯಕ್ಷಮ. ಆದ್ದರಿಂದ ರೂಪ-ಚೈತನ್ಯಗಳ, ಧರ್ಮ ದರ್ಶನಗಳ, ಸರಿಯಾದ ಸಂಗಮದಲ್ಲಿಯೇ ರಾಷ್ಟ್ರದ ಉದ್ಧಾರ ನೆಲೆಗೊಂಡಿರುವದು."

ದರ್ಶನವು ಇನ್ನೊಂದು ಬಗೆಯಾಗಿ ಧರ್ಮಕ್ಕೆ ನೆರವಾಗುವದು. It puts a ringfence round Religion to prevent the inroads of stray cattle like superstition in the field." "ಅದು ಧರ್ಮ-ಕ್ಷೇತ್ರದ ಸುತ್ತಲು ಬೇಲಿಯನ್ನು ನಿಲ್ಲಿಸಿ ಅದರಲ್ಲಿ ಅಂಧ ಶ್ರದ್ಧೆಯಂಥ ದನಗಳನ್ನು ಸೇರಗೊಡುವದಿಲ್ಲ."

III) ಧರ್ಮ-ಧರ್ಮ ಸಮನ್ವಯ :

ಧರ್ಮಗಳಲ್ಲಿ ಗುರುದೇವರು ಎರಡು ಬಗೆಗಳನ್ನು ಕಲ್ಪಿಸಿರುವರು. "ಪಾರಮಾರ್ಥಿಕ ಧರ್ಮ(Spititual Religion) ಒಂದು; ಲೌಕಿಕ ಧರ್ಮ(Temporal Religion) ಇನ್ನೊಂದು. ಒಂದು ನಿವೃತ್ತಿ ಧರ್ಮ ಇನ್ನೊಂದು ಪ್ರವೃತ್ತಿ ಧರ್ಮ. ಒಂದು ದೇವ-ಮಾನವನ ಪ್ರತ್ಯಕ್ಷ ಸಂಬಂಧವನ್ನು ಒಳಗೊಂಡಿರುವದು; ಇನ್ನೊಂದು ದೇವರನ್ನು ಕುರಿತು ಕೆಲವು ನಂಬಿಕೆ, ಆಚಾರ, ಇತ್ಯಾದಿಗಳನ್ನು ನಂಬಿರುವುದು. ಒಂದನೆಯದು 'ಚೈತನ್ಯ ಎರಡನೆಯದು 'ರೂಪ.' ಅವೆರಡರ ಸ್ವರೂಪ ಸಂಬಂಧಗಳನ್ನು ಶ್ರೀ ಗುರುದೇವರು ಈ ಬಗೆಯಾಗಿ ಕಾಣಿಸಿರುವರು.

"We must destiguish Religion from its various "Forms';..... "Religion" Stands at the top of all "religions". We may even say that it is immanent in its various forms. Religion is for all humanity, its manifestations are for different races and climes. Religion is a matter of eternity; its forms have only an existence in time. Religion concerns itself with the essential; its forms with the accidental. Religion is the embodiment of the universal; its forms are individual

manifestations of it. The relation of one and many is nowhere better exhibited than in the relation of Religion and its various forms."[9]

"ಧರ್ಮ" ಹಾಗೂ ಅದರ ವಿವಿಧ "ರೂಪಗಳು" ಇವುಗಳಲ್ಲಿಯ ಭೇದವನ್ನು ನಾವು ಅರಿಯಬೇಕು. "ಧರ್ಮವು" ಈ ಎಲ್ಲ "ಧರ್ಮಗಳ" ರೂಪಗಳನ್ನು ಮೀರಿರುವದು. ಅದು ಈ ವಿವಿಧ ರೂಪಗಳ ಅಂತರಂಗದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವದು. ಧರ್ಮವು ಇಡೀ ಮಾನವತೆಗಾಗಿ ಇರುವದು; ಅದರ ವ್ಯಕ್ತರೂಪಗಳು ಆಯಾ ಜಾತಿ ಕಾಲಗಳಿಗಾಗಿ ಇರುವವು. ಧರ್ಮವು ಸನಾತನವಾದುದು; ಅದರ ರೂಪಗಳು ಆಯಾ ಕಾಲಕ್ಕೆ ಸೀಮಿತವಾದ ಇರುವಿಕೆಯುಳ್ಳವು. ಧರ್ಮವು ಸಾರಭೂತವಾದುದು; ಅದರ ರೂಪಗಳು ಆಕಸ್ಮಿಕವಾದವು. ಧರ್ಮವು ಸಾರ್ವತ್ರಿಕತೆಯ ಪ್ರತೀಕ; ಅದರ ರೂಪಗಳು ಅದರ ವೈಯಕ್ತಿಕ ಅವಿರ್ಭಾವಗಳು. 'ಒಂದು' 'ನೂರೊಂದರ' ಸಂಬಂಧವು ಧರ್ಮ-ರೂಪಗಳ ಸಂಬಂಧದಲ್ಲಿ ಚೆನ್ನಾಗಿ ಕಾಣುವಂತೆ ಬೇರೆಡೆ ಕಾಣಬರುವದಿಲ್ಲ."

IV) ಧರ್ಮ-ವಿಜ್ಞಾನಗಳ ಸಮನ್ವಯ :

ಧರ್ಮ ವಿಜ್ಞಾನಗಳ ಸಮನ್ವಯವನ್ನು ಕುರಿತು ಶ್ರೀ ಗುರುದೇವರು ತಮ್ಮ ಅಭಿಪ್ರಾಯವನ್ನು ಈ ಬಗೆಯಾಗಿ ಅರುಹಿರುವರು.

"I hold that there is perfect reconciliation between the discoveries of science and the truths of religion. Science merely deals with the work of God. It supplements, instead of supplanting, religion."[10]

"ವಿಜ್ಞಾನದ ಶೋಧಗಳಲ್ಲಿಯೂ, ಧರ್ಮದ ಸತ್ಯಗಳಲ್ಲಿಯೂ ಪೂರ್ತಿಯಾಗಿ ಸಮನ್ವಯವಿರುವದು ಎಂಬುದು ನನ್ನ ಅಭಿಪ್ರಾಯ. ವಿಜ್ಞಾನವು ಪರಮಾತ್ಮನ ಸೃಷ್ಟಿಯನ್ನು ಕುರಿತು ವಿಚಾರಿಸುವದು. ಅದು ಧರ್ಮವನ್ನು ಅಲ್ಲಗಳೆಯುವದರ ಬದಲು ಅದಕ್ಕೆ ಪೂರ್ಣತೆಯನ್ನು ನೀಡುವದು."

"The whole biology is an illustration of the work of God, just as physics is. Science is the demonstration of the power of God."[11]

"ಭೌತಶಾಸ್ತ್ರದಂತೆ ಇಡೀ ಜೀವಶಾಸ್ತ್ರವೂ ಭಗವಂತನ ಕರ್ತೃತ್ವದ ಉದಾಹರಣೆ. ವಿಜ್ಞಾನವು ಭಗವಂತನ ಸಾಮರ್ಥ್ಯವನ್ನು ಸಾರುತ್ತದೆ.

"Science and Religion respond to two different aspects of universe and therefore, there must be a fundamental harmony between them."[12]

9) Prospectus P-2 10) P. E. P-183 11) P.G.K. P-40 12. Souvenir Vol. II P-16

"ವಿಜ್ಞಾನ-ಧರ್ಮಗಳು ವಿಶ್ವದ ಎರಡು ಭಿನ್ನ ಪಾರ್ಶ್ವಗಳನ್ನು ವಿಚಾರಿಸುತ್ತಿವೆ. ಆದುದರಿಂದ ಅವುಗಳಲ್ಲಿ ಮೂಲಭೂತ ಸಾಮರಸ್ಯವು ಇರಲೇಬೇಕು."

ಧರ್ಮವು ವಿಶ್ವದ ಅಂತರ್ಯಾಮಿಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ವಿಧಾನಗಳ ಸಂಶೋಧನೆಯನ್ನೂ ಪ್ರಯೋಗಗಳನ್ನೂ ಮಾಡಲಿದೆ. ಅದು ಪರಮಾರ್ಥಕ್ಷೇತ್ರದಲ್ಲಿಯ ವಿಜ್ಞಾನ, ಎನ್ನಬಹುದು. ಈರ್ವರ ಗುರಿ ಸತ್ಯ-ಶೋದನೆ. ಒಂದರ ಕ್ಷೇತ್ರ ಪರಮಾರ್ಥ-ಸೃಷ್ಟಿ, ಅಂತ:ಸೃಷ್ಟಿ; ಇನ್ನೊಂದರದು ಭೌತಸೃಷ್ಟಿ, ಬಹಿ:ಸೃಷ್ಟಿ, ಈರ್ವರ ಸಂಶೋಧನ-ಪದ್ಧತಿಯಲ್ಲಿಯೂ ತುಂಬ ಸಾಮ್ಯವಿರುವದು. ಮೊದಲು ಒಂದು ವಿಷಯವನ್ನು ಗೃಹೀತ ಕೃತ್ಯವೆಂದು (Hypothesis) ಬಗೆದು, ಅದನ್ನು ವಿಜ್ಞಾನ ಸತ್ಯವೆಂದು ಸ್ವೀಕರಿಸುವದು; ಇಲ್ಲದಿದ್ದರೆ ಅದನ್ನು ಬಿಟ್ಟು ಬಿಡುವದು. ವಿಜ್ಞಾನದಂತೆ ಧರ್ಮವೂ ಕೂಡ ಇದನ್ನೆಯೇ ಮಾಡುವದು. ಧರ್ಮದ ಪ್ರಯೋಗಶಾಲೆಯು ಮಾನವನ ಶರೀರ-ಅಂತರಂಗ. ಅಲ್ಲಿ ಅವನ ಮನಸ್ಸಿನ ಸಾಧನದಿಂದ ಅದು ಪ್ರಯೋಗಗಳನ್ನು ನಡೆಸುವದು. ಪರಾತ್ಪರ ಸತ್ಯವನ್ನು ಅರಿಯಲು-ಕಾಣಲು ಯತ್ನಿಸುವದು... ಗುರುದೇವರು ಇದನ್ನು ಕುರಿತು ಅನ್ನುವರು. :

"Ours is a Laboratory Religion. Our body is our Laboratory. We experiment with our minds." "ನಮ್ಮದು ಪ್ರಯೋಗಶಾಲೆಯ ಧರ್ಮ. ನಾವು ಮನಸ್ಸಿನಿಂದ ಪ್ರಯೋಗ ಮಾಡುತ್ತೇವೆ." ಧರ್ಮ ವಿಜ್ಞಾನಗಳಲ್ಲಿ ಈ ಬಗೆಯ ಸಂಬಂಧ-ಸಹಯೋಗವಿರುವದು.

ತಮ್ಮ **"ಆತ್ಮ ಚೈತನ್ಯದ ದರ್ಶನ"** (Philosophy of the Spirit) ಎಂಬ ಭಾಷಣದಲ್ಲಿ ಅವರು ಆಧುನಿಕ ಭೌತಶಾಸ್ತ್ರ (Physics) ಜೀವಶಾಸ್ತ್ರ (Biology) ಮತ್ತು ನರಶಾಸ್ತ್ರ (Neurology) ಇವು ಆತ್ಮಚೈತನ್ಯವೇ ಪರಾತ್ಪರ ಸತ್ಯವೆಂಬುದನ್ನು ಕಾಣಿಸುತ್ತವೆ ಎಂಬುದನ್ನು ಅರುಹಿರುವರು. ಭೌತಶಾಸ್ತ್ರಜ್ಞರಾದ ಸರ್ ಜೇಮ್ಸ ಜೀನ್ಸರವರು, ಕಾಲ (Time) ಅವಕಾಶ (Space) ಇವು ಮನೋನಿರ್ಮಿತ ರಚನೆಗಳೆಂದೂ (Mental Constructs) ಇಡೀ ನಿಸರ್ಗದಲ್ಲಿ ಒಂದೇ ಜೀವನಪ್ರವಾಹವು ಸತತವಾಗಿ ಪ್ರವಹಿಸಿ, ಅದನ್ನು ವ್ಯಾಪಿಸಿರುವದೆಂದೂ ಅರುಹಿರುವರು. ಇದರಲ್ಲಿ ಕಾಣಬರುವ ಧ್ಯೇಯವಾದದ (Idealism) ಮುಂದಿನ ಹೆಜ್ಜೆಯೇ ವಿಶ್ವವನ್ನು ಆವರಿಸುವ ಆತ್ಮಚೈತನ್ಯವನ್ನು ಸಾರುವ ಪರಮಾರ್ಥವಾದವು (Spiritualism). **ಡ್ರೀಶ್** ಎಂಬ ಜೀವಶಾಸ್ತ್ರಜ್ಞರು "ಜೀವವು ಒಂದು ಸ್ವಯಂಶಾಸಕ ತತ್ವ" (Life is an autonomous Principle) ಎಂಬುದನ್ನು ತಮ್ಮ ಪ್ರಯೋಗಗಳಿಂದ ಸಿದ್ಧಪಡಿಸಿರುವರು. ಅದನ್ನವರು "Entelechy Psychoid" ಎಂದು ಕರೆದಿರುವರು. ಶ್ರೀ ಗುರುದೇವರು ಇದನ್ನು "Spiritioid" ಇಲ್ಲವೆ "Spirition" ಎಂಬ ಹೊಸ ಹೆಸರಿನಿಂದ ಸಂಬೋಧಿಸಿರುವರು. ಅದೇ ನಮ್ಮ ಸಂತರ **'ಬಿಂದು'**. ಅದೇ ಮೇರೆಗೆ ನರರೋಗಶಾಸ್ತ್ರದಲ್ಲಿ **ಶ್ರೀಮತಿ ಹೀಡ** ಅವರು ನಡೆಯಿಸಿದ ಪ್ರಯೋಗಗಳಿಂದ "ಬುದ್ಧಿಯು ಭಾವನೆಯನ್ನು ನಿಯಂತ್ರಿಸುವದು ಹಾಗೂ ಭಾವನೆಯು ಅಂತರತರವಿರುವದು. ಆತ್ಮಚೈತನ್ಯದ ತೀರ ಸಮೀಪವಿರುವದು ಎಂಬುದನ್ನು ಕಾಣಿಸಿರುವರು.

ಇದರಿಂದ ಬುದ್ಧಿಭಾವನೆಗಳಲ್ಲಿ, ಜ್ಞಾನ-ಭಕ್ತಿಗಳಲ್ಲಿ ಸಾಮರಸ್ಯವಿರಬೇಕೆಂಬುದನ್ನು ನಾವು ಅರಿಯಬೇಕು ಎಂದು ಶ್ರೀ ಗುರುದೇವರು ಹೇಳಿರುವರು.

ಇಂದು ಧರ್ಮ-ವಿಜ್ಞಾನಗಳು ಒಂದನ್ನೊಂದು ಹಳಿಯತೊಡಗಿವೆ. ಇದರ ಮೂಲಕ ಎರಡೂ ದುರ್ಬಲಗೊಂಡಿರುವವು. ಅವುಗಳ ಸಂಯೋಗ-ಸಹಕಾರಗಳಿಂದ ಜರುಗಬೇಕಾದ ಕಲ್ಯಾಣ ಕಾರ್ಯವು ನಿಂತುಬಿಟ್ಟಿದೆ. ಎರಡೂ ಕ್ಷೇತ್ರಗಳಲ್ಲಿ ಅರಾಜಕತೆ, ಕಲಹ, ಅಶಾಂತಿ ಬೆಳೆದಿದೆ. ಅವನ್ನು ಅಳಿಸಿ, ಎಲ್ಲೆಡೆ ಮರಳಿ ಸೌಹಾರ್ದ ಶಾಂತಿಗಳು ನೆಲೆಗೊಳ್ಳಬೇಕಾದರೆ ಧರ್ಮ-ವಿಜ್ಞಾನಗಳಲ್ಲಿ ಸಾಮರಸ್ಯ ಉಂಟಾಗಬೇಕು. ಅದಕ್ಕಾಗಿ ಅವು ಆಧುನಿಕ ಮಹಾನ್ ವಿಜ್ಞಾನಿಗಳಾದ "ಐನ್‌ಸ್ಟನ್" ಮಹನೀಯರು ಅರುಹಿದ ಅವುಗಳ ನೈಜಸ್ವರೂಪ ಸಂಬಂಧಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. "Science without Religion is lame; Religion without Science is blind" "ಧರ್ಮರಹಿತ ವಿಜ್ಞಾನವು ಕುಂಟು; ವಿಜ್ಞಾನ ರಹಿತ ಧರ್ಮವು ಕುರುಡು." ಇದೊಂದು ತುಂಬ ಅರ್ಥಪೂರ್ಣ ಸೂತ್ರ. ವಿಜ್ಞಾನವು ಧರ್ಮದ ತಿರುಳಾದ ನೈತಿಕ ಹಾಗೂ ಪಾರಮಾರ್ಥಿಕ ಕಾಲುಗಳ ಮೇಲೆ ಸ್ಥಿರವಾದ ತಳಹದಿಯ ಆಧಾರದಿಂದ-ತನ್ನ ಸಂಶೋಧನದ ಗುರಿ-ದಾರಿಗಳನ್ನು ನಿಶ್ಚಯಿಸಬೇಕು, ಮತ್ತು ಅವುಗಳ ಫಲಗಳನ್ನು ಬಳಸಬೇಕು. ಧರ್ಮವು ವಿಜ್ಞಾನದ ತರ್ಕನಿಷ್ಠೆಯನ್ನು, ಪ್ರಯೋಗ ಪದ್ಧತಿಯನ್ನು ಅನುಸರಿಸಿ, ತನ್ನಲ್ಲಿಯ ಲೋಪದೋಷಗಳನ್ನು ಕಳೆದು, ತನ್ನ ಪರಿಶುದ್ಧ ಆತ್ಮತೇಜವನ್ನು ತಳೆಯಬೇಕು.

ಇಂದು ಧರ್ಮವು ತನ್ನ ತಿರುಳನ್ನು ಕಳೆದುಕೊಂಡಿದೆ. ಅಭ್ಯುದಯವನ್ನು ಗಳಿಸಬಲ್ಲ ನೀತಿಯೂ, ನಿ:ಶ್ರೇಯಸ್ಸನ್ನು ಪಡೆಯಬಲ್ಲ ಭಕ್ತಿ-ಧ್ಯಾನಗಳೂ ಧರ್ಮದ ಜೀವಾಳ. ಇವನ್ನು ತೊರೆದ ಧರ್ಮ, ಕಾಳಿಲ್ಲದ ಹೊಟ್ಟಿನಂತೆ, ಹಣ್ಣಿಲ್ಲದ ಬುಟ್ಟಿಯಂತೆ ಪೊಳ್ಳಾಗಿದೆ, ಜೊಳ್ಳಾಗಿದೆ. ಅದಕ್ಕೆ ಮರಳಿ ಪರಮಾರ್ಥದ ಯೋಗವಾಗದೆ ಅದು ಚೈತನ್ಯಪೂರ್ಣ ಆಗಲರಿಯದು. ವಿಜ್ಞಾನದ ಹಾಡೂ ಅದೇ ಆಗಿದೆ. ಅದಿನ್ನೂ ತನ್ನ ಭೌತಿಕ ಕ್ಷೇತ್ರವನ್ನು ದಾಟಿ ಹೊರಬಂದಿಲ್ಲ. ಅದಿನ್ನೂ ಅಲ್ಲಿಯೇ ಮೆರೆಯಲಿದೆ. ಅದರ ಮೂಲಕ, ಅದರಿಂದ ವಿಶ್ವಶಾಂತಿಗೆ ಸಲ್ಲಬೇಕಾದ ಉಪಯೋಗವು ಸಲ್ಲದಾಗಿದೆ. ಬದಲು, ಅದು ಅಶಾಂತಿಯ ಸೆಲೆಯಾಗಿ ಪರಿಣಮಿಸಲಿದೆ. ವಿಜ್ಞಾನವು ತನ್ನ ಸಲಕರಣೆಗಳಿಂದ ಅಧ್ಯಾತ್ಮ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿತೆಂದರೆ ಅದು ವಿಶ್ವಶಾಂತಿಗೆ ಅನಂತ ಉಪಕಾರವನ್ನು ಸಲ್ಲಿಸಬಲ್ಲದು. ಪರಮಾರ್ಥದ ಸಂಸ್ಪರ್ಶವಿಲ್ಲದ ಧರ್ಮ-ವಿಜ್ಞಾನಗಳು ಮಾನವನ ಬುದ್ಧಿಯನ್ನು ಬೆಳೆಸಿದವು. ಭಾವವನ್ನು ಬೆಳೆಸಲಿಲ್ಲ. ಅದರಿಂದ ಅವನ ಭೌತಿಕ ಬಲ ಬೆಳೆಯಿತು. ಆತ್ಮಿಕ ಬಲ ಬೆಳೆಯಲಿಲ್ಲ. ಇಂಥ ಒಂದಾಗದ ಬೆಳವಣಿಗೆಯು ಮಾನವ ಕುಲದ ಮೂಲಕ್ಕೆಯೇ ಕೊಡಲಿಯನ್ನು ಇಡಲಿರುವದು.

ಆದುದರಿಂದ ಇನ್ನು ಮುಂದಾದರೂ, ಪರಮಾರ್ಥದ ಪ್ರಭಾವವು ಧರ್ಮ ವಿಜ್ಞಾನಗಳೆರಡನ್ನೂ ಚೈತನ್ಯಯುತ ಮಾಡಲು ಬೇಕು. ಈ ಸಚೇತನ ಧರ್ಮವು ವಿಜ್ಞಾನಕ್ಕೆ ಅವಿರೋಧಿಯಾಗಿ ಬಾಳಲಿ, ಮತ್ತು ಸಚೇತನ ವಿಜ್ಞಾನವು ಧರ್ಮಕ್ಕೆ ಉಪಕಾರಕವಾಗಿ ಬೆಳೆಯಲಿ, ಧರ್ಮ ವೈಜ್ಞಾನಿಕವಾಗಲಿ, ವಿಜ್ಞಾನ ಧಾರ್ಮಿಕವಾಗಲಿ, ಬುದ್ಧಿಗೊಪ್ಪದ ತತ್ವಗಳನ್ನು ಧರ್ಮ

ಸಾರದಿರಲಿ. ಅಧಾರ್ಮಿಕ-ಅನೈತಿಕ ಆದರ್ಶಗಳನ್ನು ವಿಜ್ಞಾನವು ಬೆಂಬಲಿಸದಿರಲಿ!

ಈ ಬಗೆಯಾಗಿ ಇಂದಿನ ವಿಚಾರವಂತರಾದ ಹಿರಿಯರು ಧರ್ಮ-ವಿಜ್ಞಾನಗಳ ಸುಮಧುರ ಸಾಮರಸ್ಯವನ್ನು ಪ್ರತಿಪಾದಿಸಿರುವರು. ಇಂಥ ಸಾಮರಸ್ಯದಿಂದಲೇ ವಿಶ್ವದಲ್ಲಿ ಶಾಂತಿ-ಸೌಹಾರ್ದದ ಸಾಮ್ರಾಜ್ಯವು ನೆಲೆಗೊಳ್ಳಬಲ್ಲದು ಎಂಬುದನ್ನು ಗುರುದೇವರು ಅರುಹಿರುವರು.

ದರ್ಶನದ ಪ್ರಧಾನ ಅಂಗಗಳು :

ದರ್ಶನದ ಪ್ರಧಾನ ಅಂಗಗಳು ಮೂರು I) ಪರತತ್ವಶಾಸ್ತ್ರ (Metaphysics) . II) ನೀತಿಶಾಸ್ತ್ರ (Ethics) ಮತ್ತು III) ಅನುಭೂತಿಶಾಸ್ತ್ರ ಇಲ್ಲವೆ ಸಾಕ್ಷಾತ್ಕಾರ ಶಾಸ್ತ್ರ (Mysticism). ಇವುಗಳ ಸಮನ್ವಯವನ್ನು- ಇವು ಪರಸ್ಪರ ಬೆಳವಣಿಗೆಗೆ ನೀಡುವ ನೆರವನ್ನು, ಕಾಣಿಸಲು ಯತ್ನಿಸುವೆ. ಪರತತ್ವ ಶಾಸ್ತ್ರವು ದೇವ, ಜೀವ, ಜಗತ್ತು ಇವುಗಳ ಸ್ವರೂಪ-ಸಂಬಂಧ-ಮೌಲ್ಯಗಳನ್ನು ಅರುಹುವದು. ದೇವನು ಸಚ್ಚಿದಾನಂದನು, ಜೀವನು ಅವನ ಅಂಶಭೂತನು, ಜಗತ್ತು ಅವನ ನಿರ್ಮಿತಿ, ಆದುದರಿಂದ ಜೀವನು ಜಾಗತಿಕ ಜೀವನವನ್ನು ಸರಿಯಾಗಿ ಬಳಸಿ, ದೇವನನ್ನು ಸಾಕ್ಷಾತ್ಕರಿಸಿಕೊಳ್ಳಲು ಪರತತ್ವಶಾಸ್ತ್ರ ಪ್ರೇರಿಸುವದು. ತರುವಾಯ ನೀತಿ ಶಾಸ್ತ್ರವು ಆತನಿಗೆ ತನ್ನಲ್ಲಿಯ ದುರ್ಗುಣಗಳನ್ನು, ಅವುಗಳ ಜನಕನಾದ ಕಾಮನನ್ನು ಅಳಿಸಿ, ಸದ್ಗುಣಗಳನ್ನು, ಅವುಗಳ ಜನನಿಯಾದ ಭಕ್ತಿಯನ್ನು ಬೆಳೆಸಲು ಕಲಿಸುವದು. ಕೊನೆಗೆ ಅನುಭೂತಿ ಶಾಸ್ತ್ರವು ಅನುಭೂತಿಯ ವೈಭವವನ್ನು ಬಣ್ಣಿಸಿ, ಆ ಪರತಮ ಗುರಿಯನ್ನು ಪಡೆಯುವ ಸಾಧನರತನಾಗಲು ಅವನನ್ನು ಆವ್ಹಾನಿಸುವದು. ಈ ಬಗೆಯಾಗಿ ಈ ಶಾಸ್ತ್ರಗಳು ಒಂದನ್ನೊಂದು ಬೆಂಬಲಿಸುವವು. ಒಂದು ಇನ್ನೊಂದರಲ್ಲಿ ಪರಿಣತಿಯನ್ನು ಪಡೆಯುವದು. ಒಂದನ್ನೊಂದು ಅಗಲಿ ಅವು ಇರಲರಿಯವು. ಅವುಗಳಲ್ಲಿಯ ನಿಕಟ ಸಂಬಂಧವನ್ನು ಗುರುದೇವರು ಈ ರೀತಿ ಬಣ್ಣಿಸಿರುವರು.

"If we take into account the integrity of man's consciousness as a whole, it would seem absolutely impossible in the interest of highest development of which man's consciousness is capable, to sunder the intellectual from the moral, as a moral from the mystical element. Intelligence without a moral background might only be a hideous creature who is a blot on the spiritual evolution of man. And again, just as morality, to be ratiocinative, must be firmly linked to the intellect, similarly, for its consumation it must end in the mystical attitude which alone is the goal and end of the life of man. In short, metaphics, morality, and mysticism are as inseparable from each other, in the interest of the highest spiritual development of man, as intellect. will and emotion are inseparable for his highest

psychological development."[13]

"ಮಾನವನ ಪ್ರಜ್ಞೆಯ ಸಮಗ್ರತೆಯನ್ನು ಲಕ್ಷಿಸಿದರೆ, ಅದರ ಪರತಮ ಬೆಳವಣಿಗೆಯ ದೃಷ್ಟಿಯಿಂದ, ಅದರ ನೈತಿಕ ಅಂಗದಿಂದ ಬೌದ್ಧಿಕ ಅಂಗವನ್ನೂ, ಪಾರಮಾರ್ಥಿಕ ಅಂಗದಿಂದ ನೈತಿಕ ಅಂಗವನ್ನೂ, ಬೇರ್ಪಡಿಸುವದು ತುಂಬ ಅಸಾಧ್ಯವಾದುದು ಎಂಬುದು ಕಂಡು ಬರಬಹುದು. ನೈತಿಕ ಆಧಾರವಿಲ್ಲದ ಜಾಣ್ಮೆಯು ಅತ್ಯಂತ ಕೌಶಲ್ಯಯು ತಕುತರ್ಕದ-ಮೋಸದ ಮಟ್ಟಕ್ಕೆ ಇಳಿಯಬಹುದು. ಮತ್ತು ನೀತಿಯಿಲ್ಲದ ಅನುಭವಿಯು-ಅಂಥವನು ಇರಬಹುದಾದರೆ-ಮಾನವನ ಪಾರಮಾರ್ಥಿಕ ವಿಕಸನಕ್ಕೆ ಕಲಂಕಪ್ರಾಯವಾದ ಅಸಹ್ಯ ಪ್ರಾಣಿಯಾಗಬಹುದು. ಅದೇ ಮೇರೆಗೆ, ನೀತಿಯು ತರ್ಕಶುದ್ಧವಾಗಬೇಕಾದರೆ, ಅದಕ್ಕೆ ಬುದ್ಧಿಯ ಸ್ಥಿರವಾದ ಸಂಪರ್ಕವು ಅವಶ್ಯವಿರುವಂತೆ, ಅದರ ಪೂರ್ಣತೆಗೆ, ಅದು ಪರಮಾರ್ಥದಲ್ಲಿ ಪರಿಣತವಾಗಲೇಬೇಕು. ಯಾಕೆಂದರೆ ಪರಮಾರ್ಥವೇ ಮಾನವನ ಜೀವನಾದರ್ಶ-ಜೀವನದ ಅಂತಿಮ. ಸಾರಾಂಶವೇನೆಂದರೆ ಮಾನವನ ಉನ್ನತತಮ ಮಾನಸಿಕ ಬೆಳವಣಿಗೆಯ ದೃಷ್ಟಿಯಿಂದ, ಬುದ್ಧಿ ಸಂಕಲ್ಪ ಭಾವನೆಗಳು ಒಂದನ್ನೊಂದು ಅಗಲಬಾರದಂತಹವು ಇರುವಂತೆ, ಪರತತ್ವಶಾಸ್ತ್ರ, ನೀತಿಶಾಸ್ತ್ರ ಹಾಗೂ ಅನುಭೂತಿಶಾಸ್ತ್ರ ಇವು ಮಾನವನ ಉನ್ನತತಮ ಪಾರಮಾರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಒಂದನ್ನೊಂದು ಅಗಲಬಾರದಂತಹವು ಇರುವವು.[1]

ಪರತತ್ವಶಾಸ್ತ್ರ :

ಪರತತ್ವಶಾಸ್ತ್ರವು ವಿವರಿಸುವ ವಿಷಯಗಳು ಮೂರು, ದೇವ, ಜೀವ, ಜಗತ್ತು. ಅದು ಇವುಗಳ ಸ್ವರೂಪ-ಸಂಬಂಧಗಳನ್ನು ಅರುಹುವದು. ಜೀವ, ಜಗತ್ತುಗಳು ದೇವರಲ್ಲಿಯೇ ಮೊಳೆತು, ಆತನಿಂದಲೇ ಬೆಳೆದು, ಕೊನೆಗೆ ಆತನಲ್ಲಿಯೇ ಅಳಿಯುವವು. ಆದುದರಿಂದ ಅವು ದೇವರಲ್ಲಿ ಸಹಜವಾಗಿಯೇ ಸಮನ್ವಯ ಪಡೆದಿರುವವು. ಅವುಗಳ ಸಮನ್ವಯವು ಸ್ವತಃಸಿದ್ಧವಾದುದು. ಆದುದರಿಂದ ಅದನ್ನು ಸ್ವತಂತ್ರವಾಗಿ ವಿವರಿಸುವ ಅಗತ್ಯವಿಲ್ಲ. ಆದರೆ ದೇವರು, ಜೀವ, ಜಗತ್ತುಗಳನ್ನು ಕುರಿತು ಪರಸ್ಪರ ವಿರುದ್ಧವಾದ ಸಿದ್ಧಾಂತಗಳು ದಾರ್ಶನಿಕರಲ್ಲಿ ಪ್ರಚಲಿತವಿರುವವು. ಅವುಗಳ ಸಮನ್ವಯವನ್ನು ಗುರುದೇವರು ಹೇಗೆ ಮಾಡಿರುವರು ಎಂಬುದನ್ನು ಕಿರಿದರಲ್ಲಿ ಅರುಹಬಯಸುವೆ.

I) ದೇವರು :

ದೇವರ ಬಗೆಗೆ ದಾರ್ಶನಿಕರು ಕೆಳಗಿನ ನಾಲ್ಕು ವಿರೋಧಾಭಾಸಗಳನ್ನು (Antinomies) ಕಾಣಿಸಿರುವರು.

i) ದೇವರು ಜ್ಞೇಯನೋ ? ಅಜ್ಞೇಯನೋ ?
ii) ದೇವರು ಸಗುಣನೋ ? ನಿರ್ಗುಣನೋ ?
iii) ದೇವರು ಸರ್ವಾಂತರ್ಯಾಮಿಯೋ ? ಸರ್ವಾತೀತನೋ ?
iv) ದೇವರು ದೃಷ್ಟಾರನೋ ? ಕರ್ತಾರನೋ ?

13) C. S. P - 211

ಅವರು ಕಾಣಿಸಿದ ಈ ವಿರೋಧಗಳನ್ನು ಗುರುದೇವರು ಸರಿಯಾಗಿ ಸಮನ್ವಯಗೊಳಿಸಿರುವರು. ಹೇಗೆ ? ನೋಡಿ.

II) **ದೇವರು ಜ್ಞೇಯನೋ ? ಅಜ್ಞೇಯನೋ !** :- ಎಂಬ ವಿರೋಧವನ್ನು ಅವನು ಉಭಯವಿಧನು ಎಂದು ಅರುಹಿ ಗುರುದೇವರು ಸಮನ್ವಯಗೊಳಿಸಿರುವರು. ದೇವರು ಜ್ಞೇಯನು, ಆತನನ್ನು ಕಾಣಬಹುದು. ಸಾಕ್ಷಾತ್ಕರಿಸಿಕೊಳ್ಳಬಹುದು. ಇದಕ್ಕೆ ಆ ಬಗೆಯ ಅನುಭವವನ್ನು ಪಡೆದ ಹಿಂದಿನ ಋಷಿಮನಿಗಳ, ಎಲ್ಲ ದೇಶಕಾಲಗಳ ಸಾಧು ಸತ್ಪುರುಷರ, ವಚನಗಳೇ ಸರಿಯಾದ ಪ್ರಮಾಣ. **ಆತ್ಮಾನಂ ವಿಜ್ಞಾನೀಯಾತ್ ।** ಆತ್ಮನನ್ನು, ಪರಮಾತ್ಮನನ್ನು ಅರಿಯಬೇಕು. **ಆತ್ಮಾದೃಷ್ಟವ್ಯ : ।** ಆತ್ಮನನ್ನು ಕಾಣಬೇಕು, ಎಂದು ಅರುಹಿರುವರು, ಋಷಿಗಳು. **ಪಶ್ಯಮೇ ಪಾರ್ಥ ರೂಪಾಣಿ ।** ನನ್ನ ರೂಪಗಳನ್ನು ನೋಡು ! ಎಂದನು ಶ್ರೀಕೃಷ್ಣ. "ಕಂಡೆನಯ್ಯಾ! ಕಂಡೆನಯ್ಯಾ! ಆ ದೇವರ ದೇವನನ್ನು" ಎಂದು ಉಸುರಿದರು ಜ್ಞಾನ ದೇವರು. "ನಾಗಶಯನನ ಮೂರುತಿ ಕಂಡೆ! ಭೋಗಿಭೂಷಣ ಶಿವನ ಕಂಡೆ! ಎಂದರು ಕನಕದಾಸರು. "ಕಣ್ಣಾರೆ ಕಂಡೆವು ಚಿನ್ಮಯನ ರೂಪ! " ಎಂದು ಹಾಡಿದವರು ಮಹಿಪತಿದಾಸರು. "ನಿನ್ನ ನೋಟ ಅನಂತ ಸುಖ, ನಿನ್ನ ಕೂಟ ಪರಮಸುಖವಯ್ಯಾ" ಎಂದು ಉದ್ಗರಿಸಿದರು ಬಸವಣ್ಣನವರು. ಪುರಂದರದಾಸರು "ಕೃಷ್ಣಮೂರ್ತಿಯ" ಕಂಡರು, ಪರಮಾತ್ಮನು ಜ್ಞೇಯನೆಂಬುದಕ್ಕೆ ಇಂಥ ಅನಂತ ಪ್ರಮಾಣಗಳನ್ನು ಉದಾಹರಿಸಬಹುದು.

ಹೀಗಿರಲು ಆತನು ಅಜ್ಞೇಯನೆಂತು ? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಗುರುದೇವರು ಎರಡು ವಿಧ ಉತ್ತರಗಳನ್ನು ನೀಡಿರುವರು. (i) ಪರಮಾತ್ಮನು ನಮ್ಮ ಇಂದ್ರಿಯಗಳಿಗೆ ಅಜ್ಞೇಯನು-ಪ್ರತಿಭೆಗೆ ಜ್ಞೇಯನು. (ii) ಆತನು ಅಂಶತ: ಜ್ಞೇಯನು ಪೂರ್ಣತ: ಅಜ್ಞೇಯನು. (i) ಪರಮಾತ್ಮನ್ನು ನಮ್ಮ ಪಾರ್ಥಿವ ಕಂಗಳು ಕಾಣಲರಿಯವು; ಮನ ಬುದ್ಧಿಗಳು ಅರಿಯಲರಿಯವು. ಆತನನ್ನು ಕಾಣಲು ದಿವ್ಯ ದೃಷ್ಟಿಬೇಕು. **ದಿವ್ಯಂ ದದಾಮಿ ತೇ ಚಕ್ಷು:।** ನಿನಗೆ ದಿವ್ಯವಾದ ಕಂಗಳನ್ನು ನೀಡುವೆ; ಎಂದು ಹೇಳಿ ಭಗವಂತನು ಪಾರ್ಥನಿಗೆ ಪ್ರತಿಭೆಯ ಅಂತ: ಚಕ್ಷುವನ್ನು ದಯಪಾಲಿಸಿದನು. **ನೈಷಾ ತರ್ಕೇಣ ಮತಿರಾಪನೀಯಾ । ನ ಮೇಧಯಾ !** ತರ್ಕದಿಂದಲೂ, ಬುದ್ಧಿಯಿಂದಲೂ ಈ ಅನುಭೂತಿಯು ಲಭಿಸಲರಿಯದು ಎಂದು ಉಪನಿಷತ್ತುಸಾರುವದು. ಅದಕ್ಕೆ ಪ್ರತಿಭೆಯ (Intuition) ನೆರವೇ ಅಗತ್ಯವಾದುದು. ಈ ದೃಷ್ಟಿಯಿಂದ ಪರಮಾತ್ಮನು ಅಜ್ಞೇಯನು.

ಆದರೂ ಪರಮಾತ್ಮನ ಜ್ಞಾನವು ಕೇವಲ ಅಂಶತ: ಆಗಬಲ್ಲದು. ಈ ಇಡೀ ವಿಶ್ವವೇ ಆತನ 'ಒಂದಂಶದ' ನಿಲಯ. ಅಂದ ಮೇಲೆ ಮಾನವನ ಪಾಡೇನು ? ಅವನಿಗೆ ಭಗವಂತನ ಪೂರ್ಣಜ್ಞಾನ ಆಗುವುದೆಂತು ? " What man is there who can say that he has known God completely?" "ಭಗವಂತನನ್ನು ಪೂರ್ತಿಯಾಗಿ ಅರಿತೆ ಎಂದು ಹೇಳಬಲ್ಲ ಮಾನವನಾರು ?" ಭಗವಂತನ ಪೂರ್ಣ ಜ್ಞಾನವು ಕೇವಲ ಭಗವಂತನಿಗೆ ಆಗಬಲ್ಲದು. **ಸ್ವಯಮೇವಾತ್ಮ ನಾತ್ಮಾನಂ ವೇತ್ಥ !** "ನೀನೇ ನಿನ್ನ ಪೂರ್ಣ ಸ್ವರೂಪವನ್ನು ಅರಿಯಬಲ್ಲೆ!" ಎಂದು ಅರ್ಜುನನು ಅರುಹುವನು. God is Unknowable in

His essential nature. ದೇವರ ಮೂಲಸ್ವರೂಪವು ಅರಿಯಬಾರದಂತಹದು. God is the greatest Miracle"ಭಗವಂತನ ಪರತಮ ಆಶ್ಚರ್ಯವೆಂದು ಮನುಜನು ಕಾಣುವನು. **ಮಾಂತು ವೇದ ನ ಕಶ್ಚನ ।** ನನ್ನನ್ನು ಯಾರೂ ಅರಿತಿಲ್ಲ. ಎಂಬುದಾಗಿ ಭಗವಂತನು ಗೀತೆಯಲ್ಲಿ ಉಸುರಿರುವನು.

ಪರಮಾತ್ಮನು ಅಜ್ಞೇಯನು ಎಂಬುದು ಒಂದು ಬಗೆಯ ದಾರ್ಶನಿಕ ವಿನಯ.Philosophical humility. ಯಸ್ಯಾ ಮತಂ, ತಸ್ಯ ಮತಂ। "ತಿಳಿದಿಲ್ಲ ವೆಂದವನಿಗೆ ತಿಳಿದಿರುವದು". "Experience defies Expression" "ಅನುಭವವು ಬಣ್ಣಿಸಲು ಬಾರದು," "ಸತ್ಯವನ್ನು ಅರಿತವನು ಸತ್ತಹಾಗಿರಬೇಕು." ಆದರೆ "ಸತ್ತಹಾಗಿರು" ಎಂಬುದು "ಮಹಾತತ್ವದ ಮಾತು." ಆದುದರಿಂದ "ಬಲ್ಲರೆ ಬಲ್ಲೆನೆನಬೇಡ; ಸುಮ್ಮನಿರಬಲ್ಲನೆ ಬಲ್ಲ". ಎಂದು ಸರ್ವಜ್ಞನು ಬೋಧಿಸಿರುವ.

ಈ ಬಗೆಯಾಗಿ ಭಗವಂತನು ಉಭಯವಿಧನು ಎಂದು ಗುರುದೇವರು ಅರುಹಿರುವರು.

ii) **ದೇವರು ಸಗುಣನೋ ? ನಿರ್ಗುಣನೋ ? :-**ಈ ವಿರೋಧಾಭಾಸವನ್ನು ಗುರುದೇವರು ಎರಡು ಬಗೆಯಾಗಿ ಸಮನ್ವಯಗೊಳಿಸಿರುವರು. ಸಗುಣ-ನಿರ್ಗುಣ ಲಕ್ಷಣಗಳನ್ನು ಕುರಿತು ನಾಲ್ಕು ಸಿದ್ಧಾಂತಗಳು ಪ್ರಚಲಿತವಿರುವವು. 1) ದೇವರು ಸಗುಣನು ಎಂದು ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿರುವರು. 2) ದೇವರು ಸಗುಣ-ನಿರ್ಗುಣನೆಂದು ಶ್ರೀ ರಾಮಾನುಜಾಚಾರ್ಯರ, ವಲ್ಲಭಾಚಾರ್ಯರ ಅಭಿಮತ ಹಾಗೂ 3) ದೇವರು ನಿರ್ಗುಣನೆಂದು ಶ್ರೀ ಶಂಕರಾಚಾರ್ಯರ ಅಭಿಮತ ಹಾಗೂ 4) ದೇವರು ಸಗುಣನೂ ಅಲ್ಲ ನಿರ್ಗುಣನೂ ಅಲ್ಲ ಅವನು ಗುಣಾತೀತನು ಎಂಬುದು ಶ್ರೀ ಬಾದರಾಯಣರ ಅಭಿಪ್ರಾಯ. ದೇವರು ಉಭಯವಿಧನೂ, ಗುಣಾತೀತನೂ ಎಂಬುದನ್ನು ಸಮರ್ಥಿಸಿ ಶ್ರೀ ಗುರುದೇವರು ಅವುಗಳ ಸಮನ್ವಯವನ್ನು ನೆರವೇರಿಸಿರುವರು.

ಶ್ರೀ ಗುರುದೇವರು ಗೀತೆಯಲ್ಲಿ ದೇವರ ಈ ಮೂರು ಬಗೆಯ ಬಣ್ಣನೆಯನ್ನು ಕಾಣಿಸಿರುವರು.

ಅನಾದಿಮತ್ ಪರಂ ಬ್ರಹ್ಮ ನ ಸತ್ ನಾಸದುಚ್ಯತೇ ॥13-12॥ "ಪರ ಬ್ರಹ್ಮವು ಅನಾದಿಯಿರುವದು. ಅದು ಸತ್ ಅಲ್ಲ ಅಸತ್ತೂ ಅಲ್ಲ." ಇದರಲ್ಲಿ ದೇವರ ನಿರ್ಗುಣ ರೂಪವು ಬಣ್ಣಿಸಲಾಗಿರುವದು. ಆದರೆ, **ಉತ್ತಮ: ಪುರುಷ: ತ್ವನ್ಯ:। ಪರಮಾತ್ಮೇತ್ಯುದಾಹೃತ:** ॥15-17॥ "ಬೇರೆ ಉತ್ತಮ ಪುರುಷನು ಪರಮಾತ್ಮನೆಂದು ಕರೆಯಲ್ಪಟ್ಟಿರುವನು." ಇದು ದೇವರ ಸಗುಣ ರೂಪವನ್ನು ಕಾಣಿಸುವದು. ಅದೇ ಮೇರೆಗೆ, **ಪಿತಾಹು ಅಸ್ಯ ಜಗತ: ಮಾತಾ ಧಾತಾ ಪಿತಾಮಹ:** ॥9-17॥

ಪ್ರಭವ: ಪ್ರಲಯ: ಸ್ಥಾನಂ ನಿಧಾನಂ ಬೀಜಮವ್ಯಯಂ ॥9-18॥

ಇಲ್ಲಿ ದೇವರನ್ನು "ತಂದೆ-ತಾಯಿ, ಉತ್ಪತ್ತಿ-ಸ್ಥಿತಿ-ಲಯ ಎಂಬುದಾಗಿ ಬಣ್ಣಿಸಲಾಗಿ

ರುವದು. ಇದರಲ್ಲಿ ದೇವರ ಸಗುಣ-ನಿರ್ಗುಣ ರೂಪಗಳ ಸಮನ್ವಯವನ್ನು ಕಾಣಬಹುದು. ಆದರೆ ಪರಬ್ರಹ್ಮನಲ್ಲಿ ನಿಜವಾಗಿ ಯಾವ ಗುಣಗಳೂ ಇಲ್ಲದಿರುವುದರಿಂದ ಆತನನ್ನು ಈ ಪರ ಸ್ಪರ ವಿರುದ್ಧ ಗುಣಗಳಿಂದ ಬಣ್ಣಿಸಲಾಗಿದೆ. ಅದಕ್ಕಾಗಿ ಆತನು ಗುಣಾತೀತನು ಎಂದು ಬಗೆ ಯುವದು ಸರಿಯಾದುದು. ಅದೇ ಸಗುಣ-ನಿರ್ಗುಣಗಳ ಅಂತಿಮ ಸಮನ್ವಯ, ಎಂಬುದು ಗುರುದೇವರ ಅಭಿಮತ.

ಈ ಸಂದರ್ಭದಲ್ಲಿ ಸಗುಣ-ನಿರ್ಗುಣ ಶಬ್ದಗಳಿಗೆ ಸಮಾನಾರ್ಥದಲ್ಲಿ ಸರೂ ಪ-ಅರೂಪ, ಸಾಕಾರ-ನಿರಾಕಾರ, ವ್ಯಕ್ತ-ಅವ್ಯಕ್ತ, ಮೂರ್ತ-ಅಮೂರ್ತ, ಇವು ಕೂಡ ಬಳ ಸಲಾಗಿರುವದನ್ನು ಗಮನಿಸಬೇಕು. ನಮ್ಮ ಸಂತ-ಶರಣರು ಕೂಡ ಮೇಲ್ಕಾಣಿಸಿದ ಉಭಯ ವಿಧ ಸಮನ್ವಯವನ್ನು ತಮ್ಮ ಪದ ಪದ್ಯಗಳಲ್ಲಿ ಕಾಣಿಸಿರುವರು. ಶ್ರೀ ತುಲಸೀದಾಸರು ಈ ರೀತಿ ಅರುಹಿರುವರು:

ಸಗುನಹಿ ಅಗುನಹಿ ನಹಿ ಕಛು ಭೇದಾ
ಗಾವಹಿ ಮುನಿ ಪುರಾನ ಬುಧ ವೇದಾ ॥
ಅಗುನ ಅರೂಪ ಅಲಖ ಅಜ ಜೋಈ
ಭಗತ ಪ್ರೇಮಬಸ, ಸಗುನ ಸೊ ಹೋಈ ॥
ಜೋ ಗುಣರಹಿತ, ಸೋ ಸಗುನ ಸೊಇ ಕೈಸೆ ?
ಜಲು ಹಿಮ ಉಪಲ ಬಿಲಗ ನಹಿ ಜೈಸೆ ॥ [14]

"ಸಗುಣ-ನಿರ್ಗುಣಗಳಲ್ಲಿ ಯಾವ ಬಗೆಯ ಭೇದವಿರುವದಿಲ್ಲ ಎಂದು ಮುನಿ ಗಳೂ, ಪಂಡಿತರೂ, ಪುರಾಣಗಳೂ, ವೇದಗಳೂ ಹಾಡಿರುವರು. ಯಾವನೂ ನಿರ್ಗುಣ ನೂ, ಆರೂಪನೂ, ಅಲಕ್ಷ್ಯನೂ, ಅಜನೂ, ಇರುವನೋ ಅವನೇ ಭಕ್ತರ ಪ್ರೇಮಕ್ಕೆ ವಶ ನಾಗಿ ಸಗುಣರೂಪ ತಳೆದಿರುವನು. ಗುಣರಹಿತನು ಹೇಗೆ ಸಗುಣನಾಗಬಲ್ಲ ? ಹಿಮ, ನೀರು, ಬರ್ಫ ಇವು ಬೇರೆ ಕಂಡರೂ ಒಂದೇ ಇರುವಂತೆ ಈ ರೂಪಗಳೂ ಒಂದೇ ಆಗಿರು ವವು:"

ಶ್ರೀ ತುಕಾರಾಮರೂ ಇದನ್ನೇ ಸಮರ್ಥಿಸಿರುವರು -

ತುಜ ಸಗುಣ ಮ್ಹಣೋ ಕೀ ನಿರ್ಗುಣರೇ ।
ಸಗುಣ ನಿರ್ಗುಣ ಏಕು ಗೋವಿಂದರೇ ॥

"ನಿನಗೆ ಸಗುಣನೆನ್ನಲಾ ? ನಿರ್ಗುಣನೆನ್ನಲಾ ? ಯಾಕೆಂದರೆ, ದೇವರೇ ನೀನೇ ಸಗುಣನೂ ಇರುವಿ, ನಿರ್ಗುಣನೂ ಇರುವಿ." ಶ್ರೀ ಪುರಂದರ ದಾಸರು "ಕೂಸನು ಕಂ ಡಿರಾ" ಎಂಬ ಪದದಲ್ಲಿ "ಆಕಾರವಿದ್ದು ನಿರಾಕಾರ ಕೂಸು" ಎಂದು ತಾವು ಕಂಡ ಪರಮಾತ್ಮ ನನ್ನು ಬಣ್ಣಿಸಿರುವರು. ಅದೇ ಮೇರೆಗೆ, ಶ್ರೀ ಮಹಿಪತಿದಾಸರು "ವಸ್ತು ಕಂಡೆನೋ ಒಂದು! ತೇಜ: ಪುಂಜದ ರೂಪಾ! ಆ ರೂಪಕ್ಕೆ ನೆಲೆಯಿಲ್ಲ! ಅವರು ತಮ್ಮ ಅನುಭವವನ್ನು ಬಣ್ಣಿಸಿರು ವರು. ಇವೆಲ್ಲ ದೇವರು ಉಭಯವಿಧನಿರುವ ಎಂಬುದನ್ನು ಸಮರ್ಥಿಸುತ್ತಿವೆ.

14) ಹಿಂದಿ ಪರಮಾರ್ಥ ಸೋಪಾನ - P - 238

ಕೊನೆಗೆ ಶ್ರೀ ಗುರುದೇವರ ಸಂಪ್ರದಾಯದಲ್ಲಿ ಪ್ರಚಲಿತವಿರುವ ಸಗುಣ-ನಿರ್ಗುಣಗಳ ಕಲ್ಪನೆಗಳನ್ನು ಅರುಹಿ, ಈ ವಿಷಯವನ್ನು ಮುಗಿಸುವೆ. ಈ ಸಂಪ್ರದಾಯದಲ್ಲಿ ಅನುಭಾವಿ ಸದ್ಗುರುಗಳನ್ನು ದೇವರ ಸಗುಣ ರೂಪವೆಂತಲೂ, ಸಾಧಕರಿಗೆ ಲಭಿಸುವ ಅತೀಂದ್ರಿಯ, ತೇಜ, ರೂಪಾದಿ ಅನುಭವಗಳು ಆತನ ನಿರ್ಗುಣ ರೂಪಗಳೆಂದೂ ಹಾಗೂ ಸದ್ಗುರುಗಳಿಗೆ ಪ್ರತೀತವಾದ ದಿವ್ಯನಾಮವು, ಸಗುಣ-ನಿರ್ಗುಣ ರೂಪವೆಂದೂ ಭಾವಿಸಲಾಗಿರುವವು.

"The Seer can only maintain an epoche about God. He can enjoy Him in Silence without characterising Him in words."[15]

"ಸಂತನು ದೇವರ ಬಗೆಗೆ ಮೌನವನ್ನೇ ತಳೆಯಬಲ್ಲನು. ಅವನು ಆನಂದವನ್ನು ಶಾಂತವೃತ್ತಿಯಿಂದ ಅನುಭವಿಸಬಲ್ಲನು. ಆದರೆ ಅವನ್ನು ಶಬ್ದಗಳಿಂದ ಬಣ್ಣಿಸಲರಿಯನು."

iii) ದೇವರು ಕರ್ತಾರನೋ ? ಅಕರ್ತಾರನೋ ?- ದೃಷ್ಟಾರನೋ ! :

ದೇವರು ಕರ್ತಾರನೂ ಅಹುದು, ದೃಷ್ಟಾರನೂ ಅಹುದು ಎಂದು ಬೇರೆ ಬೇರೆ ಸ್ಥಳಗಳಲ್ಲಿ ಅರುಹಿ, ಅವನು ಮೂಲಪ್ರೇರಕನಿರುವ ಎಂಬುದಾಗಿ ಅವರ ಸಮನ್ವಯವನ್ನು ಗೀತೆಯಲ್ಲಿ ಕಾಣಿಸಲಾಗಿದೆ, ಎಂದು **ಗುರುದೇವರು** ಅರುಹಿರುವರು. ದೇವರ ಕರ್ತೃತ್ವವನ್ನು ಕೆಳಗಿನ ಸುಪ್ರಸಿದ್ಧ ಶ್ಲೋಕದಲ್ಲಿ ಕಾಣಬಹುದು.

ಈಶ್ವರ ಸರ್ವಭೂತಾನಾಂ ಹೃದ್ದೇಶೇS ರ್ಜುನ ತಿಷ್ಠತಿ ।
ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥(18-61)

"ಭಗವಂತನು ಎಲ್ಲ ಪ್ರಾಣಿಗಳ ಅಂತರಂಗದಲ್ಲಿ ನಿಲ್ಲುವನು ಮತ್ತು ಅವನ್ನು ತನ್ನ ಮಾಯಾ ಶಕ್ತಿಯಿಂದ, ಯಂತ್ರಗಳ ಮೇಲೆ ಕುಳ್ಳಿರಿಸಿದಂತೆ ತಿರುಗಿಸುವನು."

ಇದಕ್ಕೆ ಪ್ರತಿಯಾಗಿ ಆತನ ಅಕರ್ತೃತ್ವವನ್ನು- ದೃಷ್ಟತ್ವವನ್ನು ಮುಂದಿನ ಶ್ಲೋಕದಲ್ಲಿ ಬಣ್ಣಿಸಲಾಗಿದೆ.

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥(5-14)

"ಭಗವಂತನು ಜನರಲ್ಲಿ ಕರ್ತೃತ್ವ-ಕರ್ಮಗಳನ್ನು ನಿರ್ಮಿಸುವದಿಲ್ಲ, ಅದೇ ಮೇರೆಗೆ ಅವರ ಕರ್ಮ-ಫಲಗಳ ಸಂಬಂಧವನ್ನುಂಟು ಮಾಡುವದಿಲ್ಲ, ಅದು ಅವರ ಸ್ವಭಾವವೇ ಆಗಿರುತ್ತದೆ."

ಈ ವಿರೋಧಾಭಾಸವನ್ನು ಮುಂದಿನ ಶ್ಲೋಕದಲ್ಲಿ ಸಮನ್ವಯಿಸಲಾದುದನ್ನು ಕಾಣಬಹುದು.

ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।

15) V.C.T.P. 75

ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ॥6-10॥

"ಪ್ರಕೃತಿಯು ಚರಾಚರ ಸೃಷ್ಟಿಯನ್ನು ನನ್ನ (ಭಗವಂತನ) ಅಧ್ಯಕ್ಷತೆಯಲ್ಲಿ ಹುಟ್ಟಿಸುವಳು. ಅದರ ಮೂಲಕ ಜಗತ್ತಿನಲ್ಲಿ ಪರಿವರ್ತನ ಉಂಟಾಗುವದು." ಪ್ರಕೃತಿಯು ಸೃಷ್ಟಿಯನ್ನು ನಿರ್ಮಿಸುವಳು ನಿಜ. ಆದರೆ ಮೂಲತ: ಆಕೆ ಜಡವಿರುವದರಿಂದ ಆಕೆಗೆ ಚೈತನ್ಯವನ್ನು ಸಲ್ಲಿಸುವವನು ಭಗವಂತನೇ ಇರುವನು. He is the unmoved mover of the universe. ಆತನೇ ಅಚಲನಿದ್ದು ವಿಶ್ವವನ್ನು ಚಲಿಸುವನು. ಸೂಜಿಗಲ್ಲಿನಲ್ಲಿಯ ಆಕರ್ಷಣಶಕ್ತಿಯಿಂದ ಕಣಗಳಲ್ಲಿ ಗತಿಯು, ಚಲನವು ಉಂಟಾಗುವಂತೆ, ಭಗವಂತನ ಚೇತನಯುತ ಸಾನಿಧ್ಯದಿಂದ ಜಡ ಪ್ರಕೃತ್ತಿಯಲ್ಲಿ ಚಲನ ಉಂಟಾಗುವದು. ಭಗವಂತನಲ್ಲಿಯ ಈ ಮೂಲಪ್ರೇರಣೆಯೇ ಈ ಬಗೆಯ ಸಮನ್ವಯವನ್ನು ಉಂಟು ಮಾಡುವದು ಎಂದು ಗುರುದೇವರು ವಿವರಿಸಿರುವರು.

ಬೇರೆ ಸಂತ-ಸತ್ಪುರುಷರ ಅನುಭವವು ಇದನ್ನೇ ಸಮರ್ಥಿಸುವದು.

ದೇವರು ಸರ್ವಕರ್ತನು, ಸರ್ವಸಮರ್ಥನು, ಕರ್ತುಮಕರ್ತುಮನ್ಯಥಾ ಕರ್ತುಂ ಸಾಮರ್ಥ್ಯವು ಆತನದು. **'ನಾಹಂ ಕರ್ತಾ ಹರಿ: ಕರ್ತಾ ।'** 'ಮಾಡುವವ ನಾನಲ್ಲ ಹರಿಯು' ಎಂಬುದು, ಎಲ್ಲ ಸಂತರ ಭಾವನೆ. ಅದರ ಫಲವಾಗಿಯೇ ಅವರು-

ನಿನ್ನನ್ನೆ ನಂಬಿದೆನೋ । ನೀನೆನ್ನ ಸಲಹಯ್ಯಾ ।
ತೊರೆದು ಜೀವಿಸಬಹುದೆ ಹರಿ, ನಿನ್ನ ಚರಣವನು ?
ಕರುಣಿಸಿ ಕಾಯಯ್ಯಾ, ಕಾಯಯ್ಯಾ ।

ಎಂದು ಭಗವಂತನನ್ನು ಅವರು ಅನನ್ಯರಾಗಿ ಪ್ರಾರ್ಥಿಸಿರುವರು. ಅದೇ ಮೇರೆಗೆ ಆತನ ದೃಷ್ಟಾರತ್ವವನ್ನು ಕೂಡ ಅವರು ತುಂಬ ಹೊಗಳಿರುವರು. "ನಿನ್ನ ಕರುಣಕಟಾಕ್ಷವ ಬೀರಿ ಉದ್ಧರಿಸಯ್ಯ ಎನ್ನನು" "ನಿನ್ನ ಕೃಪಾದೃಷ್ಟಿಯಿಂದ ಆನಂದದ ಮಳೆಯೇ ಕರೆಯುವದು ! ಅದರ ಫಲವಾಗಿ ಇಡೀ ಸೃಷ್ಟಿಯು ಆನಂದಭರಿತವಾಗುವದು !" ಎಂಬುದಾಗಿ ಅದನ್ನು ಕೊಂಡಾಡಿರುವರು. ಈ ಬಗೆಯಾಗಿ ಈ ಉಭಯವಿಧ ಸಮನ್ವಯವು ಎಲ್ಲರ ಮನ್ನಣೆಯನ್ನು ಪಡೆದಿರುವರು.

ಸೃಷ್ಟಿಯು ಆನಂದಭರಿತವಾಗುವದು!" ಎಂಬುದಾಗಿ ಅದನ್ನುಕೊಂಡಾಡಿರುವರು. ಈ ಬಗೆಯಾಗಿ ಈ ಉಭಯವಿಧ ಸನುನ್ವಯವು ಎಲ್ಲರ ಮನ್ನಣೆಯನ್ನು ಪಡೆದಿರುವರು.

iv) **ದೇವರು ಅಂತರ್ಗತನೋ ? ಅತೀತನೋ ?** :- ಆತನು ಉಭಯವಿಧನು-ಸರ್ವ ವ್ಯಾಪಕನು (All-pervading) ಅತೀತ-ಅಂತರ್ಗತನು (Transcendo-immanent)ಇರುವನು ಎಂದು ಅರುಹಿ, ಈ ವಿರೋಧಾಭಾಸವನ್ನು ಗುರುದೇವರು ಸಮನ್ವಯ ಗೊಳಿಸಿರುವರು. ಗೀತೆಯಲ್ಲಿ ಭಗವಂತನು ತಾನು "ಮಣಿಗಳಲ್ಲಿಯ ಸೂತ್ರದಂತೆ", "ಶಶಿ-ಸೂರ್ಯರಲ್ಲಿಯ ಪ್ರಭೆಯಂತೆ" "ಆಕಾಶದಲ್ಲಿಯ ಶಬ್ದದಂತೆ" ಸರ್ವಾಂತರ್ಗತನಾಗಿರುವನೆಂದು ಹೇಳಿರುವ, ಮತ್ತು ಆತನು ಸೂರ್ಯನಂತೆ

ಅತೀತನೂ, ಆಕಾಶದಂತೆ ಅಲಿಪ್ತನೂ ಇರುವಂತೆ, ಮೂರನೆಯ ಸ್ಥಲದಲ್ಲಿ ತಾನು "ಒಂದಂಶದಿಂದ ವಿಶ್ವದಲ್ಲಿಯೂ, ಬಹು ಅಂಶದಿಂದ ವಿಶ್ವಾತೀತನಾಗಿಯೂ ಇರುವನೆಂದು ಅರುಹಿರುವ - (**ಏಕಾಂಶೇನ ಸ್ಥಿತೋ ಜಗತ್**) (10-14). ಇಲ್ಲಿ ಆತನು ಒಳ ಹೊರಗೆ ಎಲ್ಲಡೆ ವ್ಯಾಪಿಸಿರುವದು ಕಾಣಬರುತ್ತದೆ. ಇದು ಸರ್ವವ್ಯಾಪಕತೆಯ ಸಮನ್ವಯ. ಗೀತೆಯ ಅವತಾರ-ಕಲ್ಪನೆಯೂ ಈ ಬಗೆಯ ಸಮನ್ವಯದ ನಿದರ್ಶನವು. ವಿಶ್ವಾತೀತನಾದ ಭಗವಂತನು ಅವತಾರ ತಳೆದು ವಿಶ್ವದಲ್ಲಿ ಅವತರಿಸುವನು. ಅತೀತನಾದವನು ಅಂತರ್ಯಾಮಿಯಾಗುವನು. ಇದು ಅತೀತಾಂತರ್ಯಾಮಿ ಸಿದ್ಧಾಂತವು.

II) ಜೀವ :

ಇನ್ನು ಜೀವನ ವಿಷಯವಾಗಿ ಪ್ರಚಲಿತವಿರುವ, ಕೆಲ ವಿರೋಧಾಭಾಸಗಳ ಸಮನ್ವಯವನ್ನು ಗುರುದೇವರು ಹೇಗೆ ಕಾಣಿಸಿರುವರೆಂಬುದನ್ನು ಅರುಹಲಿರುವೆ. ಈ ವಿರೋಧಾಭಾಸಗಳು ಮೂರು: ಅ) ಒಂದು ಜೀವನ ಸ್ವರೂಪಕ್ಕೆ ಸಂಬಂಧಿಸಿದುದು; ಆ) ಎರಡನೆಯದು ಜೀವನ ಸಾಮರ್ಥ್ಯಕ್ಕೆ ಸಂಬಂಧಿಸಿದುದು; ಇ) ಮೂರನೆಯದು ಜೀವನ ಮುಕ್ತಿಗೆ ಸಂಬಂಧಿಸಿದುದು.

ಅ) ಜೀವನು ಅಣುರೂಪನೋ ? ವಿಭುರೂಪನೋ ? : ಕೆಲವರು ಆತನು ಅಣುರೂಪನೆಂದೂ (Atomic) ಬೇರೆ ಕೆಲವರು ಆತನು ವಿಭುವೆಂತಲೂ ಅನಂತನೆಂತಲೂ (Infinite) ಬಗೆಯುವರು. ಆದರೆ **ಕಠೋಪನಿಷತ್ತಿನಲ್ಲಿ** ಆತನನ್ನು ಈ ಬಗೆಯಾಗಿ ಬಣ್ಣಿಸಲಾಗಿದೆ.

"ಪ್ರಾಣಿಯ ಜೀವನು ಸೂಕ್ಷ್ಮಕ್ಕಿಂತ ಸೂಕ್ಷ್ಮನೂ, ದೊಡ್ಡದಕ್ಕಿಂತ ದೊಡ್ಡವನೂ ಇರುವನು. ಮತ್ತು ಆತನು ಹೃದಯದ ಗವಿಯಲ್ಲಿನೆಲೆಸಿರುವನು." ಇಲ್ಲಿ ಅಣು ಎಂದರೆ ಸೂಕ್ಷ್ಮ; ಪರಮಾಣು (Atom) ಅಲ್ಲ.

ಆತನು ಅತಿ ಸೂಕ್ಷ್ಮನೂ ಅತಿ ವಿಶಾಲನೂ ಇರುವನೆಂದು ಇಲ್ಲಿ ಅರುಹಲಾಗಿದೆ. ಗುರುದೇವರು ಅದಕ್ಕಾಗಿ ಜೀವನಿಗೆ ಅವಕಾಶದ ನಿಯಂತ್ರಣವಿರುವದಿಲ್ಲ. ಆತನು ಅವಕಾಶ ರಹಿತನು (Non-spacial) ಎಂದು ನಿರ್ಣಯಿಸಿ ಈ ವಿರೋಧಾಭಾಸವನ್ನು ಸಮನ್ವಯಿಸಿರುವರು.

ಆ) ಜೀವನು ಸ್ವತಂತ್ರನೋ ? ಪರತಂತ್ರನೋ ? : ಆತನು ಉಭಯ ವಿಧನು. ಕೆಲಮಟ್ಟಿಗೆ ಸ್ವತಂತ್ರನು, ಹಲಮಟ್ಟಿಗೆ ಪರತಂತ್ರನು. "ಸ್ವಯಂಚಾಲಿತ" ಯಂತ್ರಗಳಿಗೆ ವಿಜ್ಞಾನಿಯು ಪರಿಮಿತ ಸ್ವಯಂ ಶಾಸನದ ಸ್ವಾತಂತ್ರ್ಯವನ್ನು ನೀಡುವಂತೆ ಸರ್ವಸಮರ್ಥ ಭಗವಂತನು ಜೀವಿಗಳಿಗೆ, ಅವರವರಿಗೆ ಸಲ್ಲಿಸಿದ ಕರ್ತವ್ಯ ನಿರ್ವಹಣೆಗಾಗಿ ಬೇಕಾಗಿರುವ ನಿಯತ-ಸ್ವಾತಂತ್ರ್ಯವನ್ನು ನೀಡಿರುವ. ಆದರೆ ಮರವುಳ್ಳ, ಜೀವಿಗಳು ತಾವು ಪೂರ್ಣ ಸ್ವತಂತ್ರರೆಂದು ಬಗೆದು, ತಮ್ಮ ಅಲ್ಪ ಸಾಮರ್ಥ್ಯದ ಬಗೆಗೆ ತುಂಬ ಅಭಿಮಾನ ತಾಳುವವು. ತಮಗದನ್ನು ದಯಪಾಲಿಸಿದ ಭಗವಂತನನ್ನೇ ಮರೆತುಬಿಡುವವು. ಇಂಥ ಮನುಜರ

ತಿಳಿಗೇಡಿತನವನ್ನು ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು.

"Man in the foolishness of the contemplation of his small success, regards himself to be the Lord of all he surveys; he believes that he may be the master of any situation in which he may be placed, and that he may compel nature any time to bend to his sovereign will; but events in life prove that these are after all false expectations, and that even though a little freedom is granted to man in small matters, he is not yet free in the highest sense of the term. Pent up within the gaol, he thinks like a prisoner that he is free, but he is free only to drink and eat and not to move about. Like a falcon to whose foot a string is tied, he can only fly in a limited sphere described by the length of the tether but he is bound beyond that region. Similarly man may imagine that he is free to do any actions he pleases, but his freedom is the freedom of the tethered falcon."[16]

"ಸಣ್ಣ ಪುಟ್ಟ ಗೆಲುವುಗಳನ್ನು ಪಡೆದಾಗ ಮರುಳು ಮಾನವನು ತಾನು ಎಲ್ಲದರ ಒಡೆಯನೆಂದು ಭಾವಿಸುವನು; ಯಾವ ಪರಿಸ್ಥಿತಿ ಒದಗಿದರೂ ತಾನು ಅದನ್ನು ಎದುರಿಸಬಲ್ಲೆನು, ಆಳಬಲ್ಲೆನು ಎಂದು ಅವನು ನಂಬಿರುವನು. ತನ್ನ ಸಮರ್ಥ ಸಂಕಲ್ಪ ಶಕ್ತಿಯಿಂದ ಪ್ರಕೃತ್ತಿಯನ್ನು ಮಣಿಸಿ ಅದನ್ನು ತನ್ನ ಬಯಕೆಯಂತೆ ವರ್ತಿಸಲು ಹಚ್ಚಬಹುದು ಎಂದು ತಿಳಿಯುವನು. ಆದರೆ ಜೀವನದಲ್ಲಿಯ ಕಟು ಅನುಭವಗಳು, ಇವೆಲ್ಲ ಬಯಲು ಬಯಕೆಗಳು ಎಂಬುದನ್ನು ಸಿದ್ಧಪಡಿಸುತ್ತವೆ. ಕೆಲ ಕಿರಿದಾದ ವಿಷಯಗಳಲ್ಲಿ ಮಾನವನಿಗೆ ಸ್ವಲ್ಪ ಸ್ವಾತಂತ್ರ್ಯ ನೀಡಲಾಗಿದ್ದರೂ, ಅಂತಿಮವಾದ ಅರ್ಥದಲ್ಲಿ ಅವನಿಗೆ ಸ್ವಾತಂತ್ರ್ಯ ಇರುವದಿಲ್ಲ. ಸೆರೆಯಲ್ಲಿ ಬಿದ್ದಿರುವ ಮಾನವನು ಸೆರೆಯಾಳು ಭಾವಿಸುವಂತೆ, ತಾನು ಸ್ವತಂತ್ರನೆಂದು ಭಾವಿಸುವನು. ಆದರೆ ಅವನಂತೆ ಇವನು ಕುಡಿಯಲು, ಉಣ್ಣಲು ಮಾತ್ರ ಸ್ವತಂತ್ರನೇ ಹೊರತು ಅತ್ತಿತ್ತ ಅಲೆದಾಡಲು ಸ್ವತಂತ್ರನಲ್ಲ. ಕಾಲಿಗೆ ದಾರ ಕಟ್ಟಿದ ಗಿಡಗವು ಆ ದಾರದ ಉದ್ದಳತೆಯ ಮರ್ಯಾದಿತ ಕ್ಷೇತ್ರದಲ್ಲಿಯೇ ಹಾರಬಲ್ಲದು; ಅದರ ಆಚೆಗೆ ಅದು ಹಾರಲರಿಯದು. ಅದೇ ಮೇರೆಗೆ ಮಾನವನು ತಾನು ಬೇಕಾದ ಕರ್ಮಗಳನ್ನು ಮಾಡಲು ಸ್ವತಂತ್ರನು ಎಂದು ಬಯಲು ಬಯಕೆಗಳನ್ನು ತಳೆದರೂ ಅವನ ಸ್ವಾತಂತ್ರ್ಯವು ಬಂಧನಕ್ಕೊಳಗಾದ ಗಿಡಗಿನ ನಿಯತ ಸ್ವಾತಂತ್ರ್ಯ, ಎಂಬುದನ್ನು ಮರೆಯಲಾಗದು."

ಮನುಜನಿಗೆ ಭಗವಂತನು ಅಲ್ಪ ಸ್ವಾತಂತ್ರ್ಯವನ್ನು ನೀಡಿರುವದು, ಅವನು ಅದನ್ನು ಬಳಸಿ, ತನ್ನ ಉದ್ಧಾರ ಮಾಡಿಕೊಳ್ಳಲು. ಆದರೆ ಮರುಳ ಮಾನವನು ಅದನ್ನು ತನ್ನ ವಿಲಾಸಕ್ಕಾಗಿಯೇ ಬಳಸಲಿರುವ. ಭಗವಂತನಲ್ಲಿಯ ಸ್ವಾತಂತ್ರ್ಯವನ್ನು ಪಡೆಯಲು, ಅದರ

16) C.S.P. 239_30.

ನಿತ್ಯಾನಂದವನ್ನು ಸವಿಯಲು ಯತ್ನಿಸದೆ, ವಿಷಯಗಳ ಸೆರೆಯಲ್ಲಿ ಬಿದ್ದು ತೊಳಲಾಡುತ್ತಿರುವ. ಅಧರಕ್ಕೆ ಸಿಹಿ, ಉದರಕ್ಕೆ ಕಹಿಯಾದ ಸೌಖ್ಯವೇ ಅಮೃತವೆಂದು ಬಗೆದು, ಅದನ್ನು ಉಣ್ಣಲು ಹಾತೊರೆಯುತ್ತಿರುವ. ಇದು ಸರ್ವನಾಶದ ವಿಪರೀತ ಬುದ್ಧಿಯಲ್ಲವೇ! ಅದರಿಂದ ನಿಜವಾದ ಸ್ವಾತಂತ್ರ್ಯ ಸುಖ ಲಭಿಸುವದೆಂತು ? ಪರಮಾತ್ಮನೊಬ್ಬನೇ ನಿಜವಾಗಿ ಪೂರ್ಣ ಸ್ವತಂತ್ರನು. ಆದುದರಿಂದ ಆತನನ್ನು ಸಾಕ್ಷಾತ್ಕರಿಸಿಕೊಂಡು ಅವನಲ್ಲಿ ಬೆರೆತಾಗಲೇ ಜೀವನಿಗೆ ನಿಜವಾದ ಸ್ವಾತಂತ್ರ್ಯವು ಲಭಿಸುವದು. "It is only after God-realisation that he will get real freedom."

ಈ ಬಗೆಯಾಗಿ ಒಂದೆಡೆ ಜೀವನು ಪೂರ್ಣ ಪರತಂತ್ರನು ಎಂಬ ವಾದ, ಅದು ಅರುಹುವುದೇನಂದರೆ : "Man is a mere puppet in the hands of God."ಅವನು ದೇವರ ಕೈಯಲ್ಲಿಯ ಆಟದ ಗೊಂಬೆ. "Like flies to wanton boys, so are we to gods; they kill us for their sport." "ಉಂಡಾಡಿಗರಾದ ಹುಡುಗರು ನೊಣಗಳೊಡನೆ ಚಿನ್ನಾಟವಾಡುವಂತೆ ದೇವತೆಗಳು ತಮ್ಮ ಮನರಂಜನೆಗಾಗಿ ನಮ್ಮನ್ನು ಕೊಲ್ಲುತ್ತವೆ."

ಇನ್ನೊಂದೆಡೆಗೆ ಅವನು ಪೂರ್ಣ ಸ್ವತಂತ್ರನು ಎಂಬುದು ಪ್ರತಿವಾದ. ಇದು ಈ ಬಗೆಯಾಗಿ ಪ್ರತಿಪಾದಿಸುವದು.

Man is the master of his own destiny ಮಾನವನು ತನ್ನ ಭಾಗ್ಯದ ವಿಧಾತನು, ಆತನ ಉನ್ನತಿಯೂ, ಅವನತಿಯೂ ಆತನನ್ನೇ ಕೂಡಿರುವದು. **"ಉದ್ದರೇತ್ ಆತ್ಮನಾತ್ಮಾನಮ್।"** "ನಿನ್ನನ್ನು ನೀನು ಉದ್ಧರಿಸು" ಎಂಬುದು ಗೀತೆಯ ಬೋಧೆ. ಇವೆರಡರ ಸಂವಾದವನ್ನು-ಸಮನ್ವಯವನ್ನು **ಬಾದರಾಯಣರಂತೆ ಗುರುದೇವರು** ಈ ರೀತಿ ಕಾಣಿಸುವರು.

"Man is neither a free agent, nor a mere automation in the hands of God; but he is an actor under the supervision of God and God assigns to him fruits according to the quality of his action. God has given autonomy to man. He does not interfere with man's freedom. This is Divine self-determination."[17]

"ಮನುಜನು ಕೇವಲ ಸ್ವತಂತ್ರ ಕರ್ತನು ಇರುವದಿಲ್ಲ. ಇಲ್ಲವೆ ಕೇವಲ ಭಗವಂತನ ಕೈಯಲ್ಲಿಯ ಸೂತ್ರದ ಗೊಂಬೆಯೂ ಇರುವದಿಲ್ಲ. ಆದರೆ ಅವನು ಭಗವಂತನ ಮೇಲ್ವಿಚಾರಣೆಯಲ್ಲಿ ಕರ್ಮ ಮಾಡುವ ಕರ್ತಾರನಿರುವ. ಆತನ ಕರ್ಮದ ಗುಣಕ್ಕೆ ಅನುಗುಣವಾಗಿ ಭಗವಂತನು ಆತನಿಗೆ ಸ್ವಯಂ ಶಾಸನವನ್ನು ಕೊಟ್ಟಿರುವ. ಆತನು ಮಾನವನ ಸ್ವಾತಂತ್ರ್ಯದಲ್ಲಿ ಕೈ ಹಾಕುವದಿಲ್ಲ. ಇದು ದೈವೀ ಆತ್ಮ ನಿಯಂತ್ರಣ-ದೈವೀ ಆತ್ಮಶಾಸನ."

17) V.C.T.P. 126

ಶ್ರೀ ನಿಂಬರಗಿ ಮಹಾರಾಜರು ಅರುಹಿದ ಮೇರೆಗೆ :

ಮನುಜರೆದೆಯಲಿ ದೇವ ವಣಿಜನೊಲು ತಾನಿರುವ
ಅವರ ಭಾವವ ತೂಗಿ ನೋಡುತ್ತಿರುವ ।
ಅವರ ನಡೆ ನುಡಿಗಳನು ಒಡನೆ ಪರಿಕಿಸಿ ಅದಕೆ
ಸಲುವ ಫಲವನು ತಾನು ನೀಡುತಿರುವ ॥ (ಬೋಧ ಸುಧೆ)

ಇನ್ನೊಂದು ವಿಷಯ. ಕರ್ಮಶಾಸನವು (Law of Karma) ನಮ್ಮ ದರ್ಶನಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಕಾಲಕ್ರಮೇಣ ಅದರ ಬೆಲೆಯುಳ್ಳ ತಿರುಳು ಮರೆಯಾದ ಕಾರಣ. ಅದು ಮಾನವನ ಆತ್ಮ-ಸ್ವಾತಂತ್ರ್ಯವನ್ನು ಅಳಿಸುವ ದೈವವಾದದ ಸ್ವರೂಪವನ್ನು ತಳೆದಿದೆ. ಆದರೆ ಅದರಲ್ಲಿ ಸ್ವಾತಂತ್ರ್ಯ-ಪಾರತಂತ್ರ್ಯಗಳ ಸುಮಧುರ ಸಮನ್ವಯವು ಹೇಗೆ ಆಗಿರುವದು ಎಂಬುದನ್ನು ಗುರುದೇವರು ಚೆನ್ನಾಗಿ ಕಾಣಿಸಿರುವರು. ಅವರು ಅರುಹಿರುವುದೇನಂದರೆ :

"The Law of Karma may be looked upon as the law of universal causation on the one hand and the law of conservation of moral values on the other..... That there is moral order in the universe is the first aspect of the Law. That no voluntary act goes unrewarded either positively or negatively..... is its second aspect.... . There is no denial of human freedom in this doctrine. As a mattter of fact, the Law of Karma holds the individual responsible for his acts. The moral tenor of this Law takes us out of despair. Its benign message is that no sinner is eternally damned and that it is never too late to mend. No doubt, so far as our past actions are concerned, we have to enjoy the fruits or suffer the consequences. But the future is in our hands. We are the architects of our destiny. So far as the future is concerned, we are free to determine it as we like. Thus the doctrine of Karma contains within it the two elements of determinism and indeterminism, determinism with reference to the past and indeterminism or freedom for the future."[18]

"ಕರ್ಮ ಶಾಸನದಲ್ಲಿ ನಾವು ಎರಡು ಅಂಗಗಳನ್ನು ಕಾಣಬಹುದು. ಸರ್ವ ವ್ಯಾಪಕವಾದ ಕಾರ್ಯಕಾರಣ ಸಂಬಂಧದ ಶಾಸನವು ಅದರ ಒಂದಂಗ; ಹಾಗೂ ನೈತಿಕ ಮೂಲ್ಯಗಳ ರಕ್ಷಣೆಯ ಶಾಸನವು ಇನ್ನೊಂದು ಅಂಗ..... ವಿಶ್ವದಲ್ಲಿ ಶಾಶ್ವತವಾದ ನೈತಿಕ-ನಿಯಮವು ಇರುವದು. ಇದು ಕರ್ಮ ಶಾಸನದ ಮೊದಲನೆಯ ಅಂಗ. ಅದೇ ಮೇರೆಗೆ ಉದ್ದೇ

18) P.G.K.P. 277-278

ಶ ಪೂರ್ವಕ ಮಾಡಲಾದ ಯಾವ ಕರ್ಮವೂ ಪ್ರತಿಫಲವನ್ನು ಪಡೆಯದಿರದು. ಅದು ಭಾವಾತ್ಮಕ ಇರಬಹುದು, ಇಲ್ಲವೇ ಅಭಾವಾತ್ಮಕ ಇರಬಹುದು..... ಇದು ಕರ್ಮಶಾಸನದ ಎರಡನೆಯ ಅಂಗ..... ಈ ಸಿದ್ಧಾಂತದಲ್ಲಿ ಆತ್ಮ-ಸ್ವಾತಂತ್ರ್ಯದ ನಿರಾಕರಣೆ ಇರುವದಿಲ್ಲ..... ವಾಸ್ತವಿಕವಾಗಿ, ಕರ್ಮ ಶಾಸನವು ಮನುಜನು ತನ್ನ ಕರ್ಮಗಳಿಗೆ ಹೊಣೆಗಾರನು ಎಂದು ಸಾರುವದು.... ಕರ್ಮಶಾಸನದ ಈ ನೈತಿಕ ಸ್ಥಿರತೆಯು ನಮ್ಮ ನೈರಾಶ್ಯವನ್ನು ಅಳಿಸುವದು. ಯಾವ ಪಾತಕಿಯೂ ಶಾಶ್ವತವಾಗಿ ಪತಿತನಾಗಲರಿಯ; ಹಾಗೂ ತನ್ನನ್ನು ತಿದ್ದಿಕೊಳ್ಳಲು ಅತೀತವಾದ ಕಾಲವು ಎಂದೂ ಇರಲರಿಯದು; ಎಂಬುದು ಅದರ ಶುಭ ಸಂದೇಶ. ನಮ್ಮ ಪೂರ್ವಜನ್ಮದ ಕರ್ಮಗಳ ಸಿಹಿ ಇಲ್ಲವೇ ಕಹಿ ಫಲಗಳನ್ನು ನಾವು ಉಣ್ಣಲೇಬೇಕಾಗುವದು, ಎಂಬುದರಲ್ಲಿ ಸಂದೇಹವಿಲ್ಲ, ಆದರೆ ನಮ್ಮ ಭವಿಷ್ಯವು ನಮ್ಮ ಅಧೀನವಿರುವದು. ನಾವು ನಮ್ಮ ದೈವದ ಶಿಲ್ಪಿಗಳಿರುವೆವು. ನಮ್ಮ ಬಯಕೆಯಂತೆ ನಮ್ಮ ಭವಿಷ್ಯವನ್ನು ರೂಪಿಸಲು ನಾವು ಸ್ವತಂತ್ರರಿರುವೆವು. ಈ ರೀತಿ ಕರ್ಮ-ಸಿದ್ಧಾಂತವು ನಿಯತಿ ಹಾಗೂ ಅನಿಯತಿ (ಸ್ವಾತಂತ್ರ್ಯ) ಎಂಬ ಎರಡೂ ಅಂಗಗಳನ್ನು ಒಳಗೊಂಡಿರುವದು. ಭೂತ ಕಾಲವನ್ನು ಕುರಿತು ನಿಯತಿ, ಮತ್ತು ಭವಿಷ್ಯಕಾಲವನ್ನು ಕುರಿತು ಅನಿಯತಿ ಇಲ್ಲವೆ ಸ್ವಾತಂತ್ರ್ಯ."

ಈ ಬಗೆಯಾಗಿ ಕರ್ಮಶಾಸನದಲ್ಲಿ ಸ್ವಾತಂತ್ರ್ಯ-ಪಾರತಂತ್ರ್ಯಗಳ ಸಮನ್ವಯವಿರುವದನ್ನು ಗುರುದೇವರು ಸರಿಯಾಗಿ ವಿವರಿಸಿರುವರು.

ಇ) **ಜೀವನ ಮುಕ್ತಿಯನ್ನು ಕುರಿತು** ಎರಡು ವಿರೋಧಾಭಾಸಗಳು ನೆಲೆಸಿರುವವು: i) **ಕ್ರಮಮುಕ್ತಿಯೋ ? ವಿದೇಹಮುಕ್ತಿ ಇಲ್ಲವೆ ಅಂತೇ ಮುಕ್ತಿಯೋ ?** ಎಂಬುದು ಒಂದು. ii) **ಏಕಮುಕ್ತಿಯೋ ? ಸರ್ವಮುಕ್ತಿಯೋ ?** ಎಂಬುದು ಎರಡನೆಯದು. iii) ಇವುಗಳ ಜತೆಯಲ್ಲಿ **ಪಂಚಮುಕ್ತಿಗಳ ತಾರತಮ್ಯ ವಿಚಾರ.** ಇವನ್ನು ವಿವರಿಸುವ ಪೂರ್ವದಲ್ಲಿ ಮುಕ್ತಿಯ ಸ್ವರೂಪವನ್ನು ಅರಿಯೋಣ. ಮುಕ್ತಿಗೆ ಎರಡು ಅಂಗಗಳು. ಒಂದು ಅಭಾವಾತ್ಮಕ (Negative) ಇನ್ನೊಂದು ಭಾವಾತ್ಮಕ (Positive). ಬಿಡುಗಡೆಯು (Liberation) ಮೊದಲನೆಯದು, ಸಾಕ್ಷಾತ್ಕಾರವು (Realisation) ಎರಡನೆಯದು. ದೇಹಭಾವದ ಅಭಾವ-ಅಯೋಗ ಒಂದು; ಆತ್ಮಭಾವದ ಪ್ರಭಾವ-ಸಂಯೋಗ ಇನ್ನೊಂದು, ಒಂದರಲ್ಲಿ ದೇಹದಾಸ್ಯದ ಅಳಿವು. ಇನ್ನೊಂದರಲ್ಲಿ ಆತ್ಮದರ್ಶನ-ಆತ್ಮಾನಂದದ ಹೊಳವು.

i) ಇಂಥ ಮುಕ್ತಿಯು ಒಮ್ಮೆಲೇ ದೊರೆಯಲರಿಯದು. ಅದು **ಬಹೂನಾಂ ಜನ್ಮನಾಂ ಅಂತೇ । ಅನೇಕಜನ್ಮಸಂಸಿದ್ಧ:॥** "ಬಹಳ ಜನ್ಮಗಳ ನಂತರ ಲಭಿಸಬಲ್ಲದು" ಎಂಬುದಾಗಿ ಗೀತೆಯು ಕ್ರಮಮುಕ್ತಿಯನ್ನು ಸಮರ್ಥಿಸುವದು. ಇದಕ್ಕೆ ಪ್ರತಿಯಾಗಿ ಅಂತ್ಯಕಾಲದಲ್ಲಿ ಭಗವಂತನನ್ನು ಅನನ್ಯ ಭಾವದಿಂದ ನೆನೆಯುತ್ತ ದೇಹವನ್ನು ತೊರೆದವರು ಕೂಡಲೇ ಮುಕ್ತರಾಗುವರು ಎಂಬುದನ್ನು ಅದು ಅರುಹುವದು.

ಅಂತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಮ್ ।
ಯ: ಪ್ರಯಾತಿ ಸಮದ್ಭಾವಂ ಯಾತಿ ನಾಸ್ತ್ಯತ್ರಸಂಶಯ: ॥8-5॥

"ಯಾವನು ಮೃತ್ಯು ಸಮಯದಲ್ಲಿ ನನ್ನನ್ನು (ಭಗವಂತನನ್ನು) ನೆನೆಯುತ್ತ ದೇಹವನ್ನು ತ್ಯಜಿಸಿ ತೆರಳುವನೋ ಅವನು ನನ್ನನ್ನು (ಭಗವಂತನನ್ನು) ಪಡೆಯುವನು." ಇದು **ಅಂತೆ ಇಲ್ಲವೆ ವಿದೇಹ ಮುಕ್ತಿಯನ್ನು** ಸಮರ್ಥಿಸುವದು.

ಗೀತೆಯು ಇನ್ನೊಂದೆಡೆಯಲ್ಲಿ ಇವೆರಡರ ಸಮನ್ವಯವನ್ನು ಜೀವನ್ಮುಕ್ತಿಯ ಸಿದ್ಧಾಂತದಿಂದ ಮಾಡಿರುವುದು.

ಯೋಂತ:ಸುಖೋಂತರಾರಾಮಸ್ತಥಾಂತರ್ಜ್ಯೋತಿರೇವ ಯ: ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಧಿಗಚ್ಛತಿ ।।5-24।।

"ಯಾವನ ಅಂತರಂಗವು ಆತ್ಮನ ಬೆಳಕಿನಿಂದ, ಶಾಂತಿ-ಆನಂದಗಳಿಂದ ತುಂಬಿರುವದೋ ಅಂಥ ಬ್ರಹ್ಮನಲ್ಲಿ ಬೆರೆತ ಯೋಗಿಯು ಬ್ರಹ್ಮಾನಂದದಲ್ಲಿ ತಲ್ಲೀನನಾಗುವನು."

ಇಂಥ ಬ್ರಾಹ್ಮಿಸ್ಥಿತಿಯೇ **ಜೀವನ್ಮುಕ್ತಿಯ** ಕುರುಹು. ಇದೇ ನಿಜವಾದ ಮುಕ್ತಿ. "ಜೀವನ್ಮುಕ್ತಿ ಇದೇ ಮುಕ್ತಿ." ಮರಣದ ತರುವಾಯ ಲಭಿಸುವ ಮುಕ್ತಿಯನ್ನು ಕಂಡವರಾರು ?

ಜಿತಾ ಕೇಲೀ ನಾಹೀ ಭಕ್ತಿ ।
ಮೇಲ್ಯಾ ಕೈಂಚೀ ಹೋಯೀಲ ಮುಕ್ತಿ ?

ಜೀವಿಸಿರುವಾಗಲೇ ಭಗವಂತನನ್ನು ಭಜಿಸಿ, ಮುಕ್ತಿಯನ್ನು ಪಡೆಯದಿದ್ದರೆ, ದೇಹ ಬಿಟ್ಟತರುವಾಯ ನೀವು ಮುಕ್ತಿಯನ್ನು ಹೇಗೆ ಪಡೆಯಬಲ್ಲಿರಿ ? "ಜೀವನ್ಮುಕ್ತರಾದವರೇ ವಿದೇಹಮುಕ್ತರಾಗಬಲ್ಲರು; ಅವರೇ ಮರಣದ ನಂತರ ಭಗವಂತನಲ್ಲಿ ಬೆರೆಯಬಲ್ಲರು" ಎಂದು **ಶ್ರೀ ಭಾವುಸಾಹೇಬ ಮಹಾರಾಜರು** ಮೇಲಿಂದ ಮೇಲೆ ಹೇಳುತ್ತಿದ್ದರು. ಶ್ರೀ ಗುರುದೇವರು ಇದನ್ನೆಯೆ ಸಮರ್ಥಿಸಿರುವರು.

"**Jivan-mukti** is liberation during life through God-vision. We have not to leave the world; we are full of joy when we are in the contemplation and realisation of God. That State of beatification is it self our liberation. Liberation is not to be found after death. But to know God, to do His work, to enjoy His presence and to devote oneself to His service are exactly what a **Jivan-mukta** ought to do."[19]

"ಜೀವನ್ಮುಕ್ತಿ ಎಂದರೆ ಭಗವಂತನ ಸಾಕ್ಷಾತ್ಕಾರದಿಂದ ಜೀವನದಲ್ಲಿಯೇ ಪಡೆಯುವ ಮುಕ್ತಿ-ಬಿಡುಗಡೆ. ಅದಕ್ಕಾಗಿ ನಾವು ಜಗತ್ತನ್ನು ತೊರೆಯುವ ಅವಶ್ಯಕತೆ ಇರುವದಿಲ್ಲ. ನಾವು ಭಗವಂತನ ಧ್ಯಾನದಲ್ಲಿಯೂ ಅನುಭೂತಿಯಲ್ಲಿಯೂ ಇರುವಾಗ ತುಂಬ ಆನಂದಭರಿತರಾಗಿರುವೆವು. ಈ ಪರಮಾನಂದ ಅವಸ್ಥೆಯೇ ನಮ್ಮ ಮುಕ್ತಿಯು. ಮುಕ್ತಿಯು ಮರಣೋತ್ತರ ದೊರೆಯುವಂತಹದಲ್ಲ. ಆದರೆ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು, ಆತನ ದರ್ಶ

19) B.P.G.P. 190

ನದ ಆನಂದವನ್ನು ಪಡೆದು, ಆತನ ಕಾರ್ಯವನ್ನು ನೆರವೇರಿಸಿ, ಆತನ ಸೇವೆಗಾಗಿ ತಮ್ಮನ್ನು ಮೀಸಲಾಗಿ ಇರಿಸುವದೇ ಜೀವನ್ಮುಕ್ತನು ಮಾಡಬೇಕಾದ ಹಿರಿಯ ಕಾರ್ಯ."

ಜೀವನ್ಮುಕ್ತಿಯಿಂದಲೇ ವಿದೇಹಮುಕ್ತಿ! ಅದನ್ನೇ ಪಡೆಯಲು ನಾವು ಯತ್ನಿಸತಕ್ಕದ್ದು.

ii) **ಏಕಮುಕ್ತಿ-ಸರ್ವಮುಕ್ತಿ** : ಇವು ವಾದ (Thesis), ಪ್ರತಿವಾದಗಳು (Antithesis), ಮತ್ತು **ಪರಿವಾರ ಮುಕ್ತಿ** ಇದು ಇವುಗಳ ಸಂವಾದ (Synthesis) ಸಮನ್ವಯ, ಎಂದು ಗುರುದೇವರು ಹೇಳಿರುವರು. ಏಕಮುಕ್ತಿಯು ಎಲ್ಲರೂ ಅರಿತ ವಿಷಯ. ಆದರೆ ಸರ್ವಮುಕ್ತಿಯು ತಿಳಿಯಲರಿಯದ ವಿಷಯ. ಓರ್ವನು ಮುಕ್ತನಾದನೆಂದರೆ ಎಲ್ಲರೂ ಮುಕ್ತರಾಗುವದೆಂತು ? ಎಲ್ಲರೂ ಮುಕ್ತರಾಗದೇ ಒಬ್ಬನೂ ಮುಕ್ತನಾಗಲರಿಯನೇ ? ಇವೆರಡೂ ಅಸಾಧ್ಯ ಮಾತುಗಳು. ಆದುದರಿಂದ **ಕಾರ್ಲಾಯಿಲ್‌ರು** ಹೇಳಿರುವಂತೆ "ನಾವು ನಮ್ಮನ್ನು ಉದ್ಧರಿಸಿಕೊಳ್ಳಬೇಕು. ಮತ್ತು ಜಗತ್ತಿನ ಉದ್ಧಾರವನ್ನು ಜಗದೀಶನಿಗೆ ಒಪ್ಪಿಸಬೇಕು" ಆದರೆ **ಪರಿವಾರ ಮುಕ್ತಿಯು** ಇವೆರಡನ್ನೂ ಸಮನ್ವಯಿಸಬಲ್ಲದು ಹೇಗೆಂದರೆ; **ಕಬೀರರ** ಹೇಳಿಕೆಯಂತೆ, "ಅನುಭಾವಿ ಸದ್ಗುರು ತನ್ನನ್ನು ಮುಕ್ತಗೊಳಿಸುವನಷ್ಟೇ ಅಲ್ಲದೇ ತನ್ನ ಸಂಗಡಿಗರನ್ನು ಕೂಡ ಮುಕ್ತಗೊಳಿಸುವನು. ತನಗೆ ಲಭಿಸಿದ ದೇವರ ದರ್ಶನ ಸಾಮರ್ಥ್ಯದ ಫಲವಾಗಿ, ಸುದೈವದಿಂದ ತನ್ನ ಕೂಡ ಪಾರಮಾರ್ಥಿಕ ಏಕತೆಯನ್ನು ಪಡೆದ ಶಿಷ್ಯವರ್ಗವನ್ನು ಕೂಡ ತನ್ನೊಡನೆ ಉದ್ಧರಿಸಬಲ್ಲ. ಲೇ ಪರಿವಾರ ತರೈ!"

iii) **ಪಂಚಮುಕ್ತಿಗಳ ತಾರತಮ್ಯ** : ಮುಕ್ತಿ ಚತುಷ್ಟಯವು ತುಂಬ ಸುಪರಿಚಿತವಾದುದು. **ಸಲೋಕತಾ, ಸಮೀಪತಾ, ಸರೂಪತಾ, ಸಾಯುಜ್ಯತಾ,** ಇವೇ ನಾಲ್ಕು ಮುಕ್ತಿಗಳು. ಜೀವನು ದೇವಲೋಕವನ್ನು ಸೇರುವುದು **ಸಲೋಕತಾ**; ಆತನು ದೇವರನ್ನು ಸಮೀಪಿಸುವುದು, ಆತನ ಸನ್ನಿಧಿಯಲ್ಲಿ ನಿಲ್ಲುವದು **ಸಮೀಪತಾ** ಆತನು ದೇವರ ರೂಪವನ್ನು ತಳೆಯುವದು **ಸರೂಪತಾ**; ಮತ್ತು ಜೀವನು ದೇವರಲ್ಲಿ ಬೆರೆಯುವುದು **ಸಾಯುಜ್ಯತಾ**. ಇವನ್ನು ಗುರುದೇವರು ಕೆಲವಡೆಯಲ್ಲಿ ಉಲ್ಲೇಖಿಸಿರುವರು. ಅವುಗಳಲ್ಲಿಯ ತಾರತಮ್ಯವನ್ನು ಅರುಹಿರುವರು.

ಆದರೆ **ಬಹಿರೊ** ಎಂಬ ಹಿಂದೀ ಸಂತರ ಮುಂದಿನ ಪದವನ್ನು ವಿವರಿಸುವಾಗ ಅವರು ಐದು ಬಗೆಯ ಮುಕ್ತಿಗಳನ್ನು ಅರುಹಿರುವರು. ಅವುಗಳಲ್ಲಿಯ ತಾರತಮ್ಯವನ್ನು ಕಾಣಿಸಿರುವರು. ಆ ಪದದಲ್ಲಿಯ ಕೆಲವು ಸಾಲುಗಳನ್ನು ಅವುಗಳ ಭಾವಾನುವಾದವನ್ನೂ ಕೆಳಗೆ ಕಾಣಬಹುದು.

ಪದ;

"ಇತನೀ ಕೃಪಾ ಹೋ ಸ್ವಾಮಿ; ಜಬ ಪ್ರಾಣ ತನಸೆ ನಿಕಲೇ ।"
ಇನಿತು ಕರುಣಿಸು ಸ್ವಾಮಿ, ದಯದಿಂದಲೀ ।
ತನುವಿನಿಂದೆನ ಪ್ರಾಣ ತೆರಳುತಿರಲು ॥

ತರುವಾಯ ಕವಿಯು ಈ ರೀತಿ ಪ್ರಾರ್ಥಿಸುವ :

"ಶ್ರೀ ಕೃಷ್ಣ ಕೃಷ್ಣ ಕಹಕರ, ಮೇರೆ ಜಾನ ತನಸೆ ನಿಕಲೇ ।"
ಶ್ರೀ ಕೃಷ್ಣ ಕೃಷ್ಣ ನೆ । ಎಂದು ನೆನೆಯುತಿರಲು ।
ತನುವಿನಿಂದೆನ ಪ್ರಾಣ ತೆರಳಲಿರಲಿ ॥

ಇದು ರಟನ ಮುಕ್ತಿ ಇಲ್ಲವೇ ಸ್ಮರಣ ಮುಕ್ತಿ. ಗೀತೆಯು ಇದನ್ನು ಕುರಿತು ಇಂತು ಹೇಳಿರುವುದು.

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯ: ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್
॥8-13॥

ಇನ್ನು ಎರಡನೆಯ ಬಗೆಯ ಮುಕ್ತಿ:

"ಜಬ ಸಾವರಾ ನಿಕಟಹೋ, ತಬ ಪ್ರಾಣ ತನಸೇ ನಿಕಲೇ ॥"
ಶ್ಯಾಮ ಸಖಿ ನಿಂತಿರಲು ಸನ್ನಿಧಿಯಲಿ । ತನುವಿನಿಂದೆನ ಪ್ರಾಣ
ತೆರಳಲಿರಲಿ ॥

ಇದನ್ನು ನಿಕಟ ಮುಕ್ತಿ ಇಲ್ಲವೆ ಸಾಮಿಪ್ಯ ಮುಕ್ತಿ ಎಂದು ಕರೆಯಲಾಗಿದೆ.

ಮೂರನೆಯ ಬಗೆಯ ಮುಕ್ತಿಯು ಅಂತರ್ಭಾವ ಮುಕ್ತಿ:
"ಚಿತ್ತವೇ ಜೋ ತೂ ಅಡಾಹೋ । ತಬ ಪ್ರಾಣ ತನಸೆ ನಿಕಲೇ ॥"
ನೀನು ನೆಲೆಸಿರೆ ಎನ್ನ ಚಿತ್ತದಲಿ । ತನುವಿನಿಂದೆನ ಪ್ರಾಣ ತೆರಳಲಿರಲಿ॥

ಇದು ಶ್ರೀ ರಾಮನುಜರ ಸಾರೂಪ್ಯ ಮುಕ್ತಿ "ನಿರಂಜನ: ಪರಮಂ ಸಾಮ್ಯಂ ಉಪೈತಿ: ಎಂದು ಉಪನಿಷತ್ತು ಸಾರುವುದು.

ತರುವಾಯ ನಾಲ್ಕನೆಯ ಆತ್ಮದರ್ಶನ ಮುಕ್ತಿ:

"ಆಪದಿ ದರಸ ದಿಖಾವೇ । ತಬ ಪ್ರಾಣ ತನಸೆ ನಿಕಲೇ ॥"
ಆತ್ಮದರ್ಶನ ಪಡೆದು ಬೆರೆತಾಗಲೇ । ತನುವಿನಿಂದೆನ ಪ್ರಾಣ
ತೆರಳಲಿರಲಿ ॥

ಇದು ಸಾಯುಜ್ಯ ಮುಕ್ತಿ ಯನ್ನು ಹೋಲುವದು.

ತರುವಾಯ ಕೊನೆಗೆ ಕವಿಯು ಶರಣಗಮನ ಮುಕ್ತಿಯನ್ನು ಬೇಡುವನು.

ಜಬ ಹೋ ತುಮ್ಹಾರಿ ಮರ್ಜಿ । ತಬ ಪ್ರಾಣ ತನಸೆ ನಿಕಲೇ ॥
ನೀನು ಬಯಸಿದ ಸರಿಯ ಸಮಯದಲ್ಲಿ : ತನುವಿನಿಂದೆನ ಪ್ರಾಣ
ತೆರಳಲಿರಲಿ ॥

ಇದನ್ನೇ ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದನು ;
ಸರ್ವಧರ್ಮಾನ್ ಪರಿತ್ಯಜ್ಯ । ಮಾಮೇಕಂ ಶರಣಂ ವ್ರಜ ॥

ಆತ್ಮಸಮರ್ಪಣವು, ಮುಕ್ತಿಯ ಶ್ರೇಷ್ಠ ಬಗೆ ಎಂಬುದು ಕವಿಯ ಅಭಿಮತ. ಸರ್ವಸಮರ್ಪಣದಿಂದ ಮುಕ್ತಿಯನ್ನು ಪಡೆಯಬೇಕೆಂಬುದು **ಕ್ರಿಸ್ತರ** ಸಿದ್ಧಾಂತವೂ ಇರುವುದು. **ಏಸುವಿನ** ಕೊನೆಯ ಪ್ರಾರ್ಥನೆಯು ಇದೇ ಇರುವದು.

"My Lord ! My Lord ! Why hast thou forsaken me ? I desire that my life be spared for spreading Thy Gospel, but if it be Thy will that, I should pass away, let Thy will be done !"

"ನನ್ನ ಪ್ರಭುವೇ ! ನನ್ನನ್ನು ಅದೇಕೆ ತೊರೆದಿರುವಿ ? ನಿನ್ನ ಪಾವನ ಸಂದೇಶವನ್ನು ಪಸರಿಸಲು ನನ್ನ ಜೀವನವನ್ನು ನೀನು ಕೆಲಕಾಲ ಉಳಿಸಬೇಕೆಂದು ನಾನು ಬಯಸುವೆ. ಆದರೆ ನಾನು ತೆರಳಬೇಕೆಂಬುದು ನಿನ್ನ ಬಯಕೆ ಇದ್ದರೆ ನಿನ್ನ ಬಯಕೆಯು ನೆರವೇರಲಿ!"

ಶರಣಗಮನ ಮುಕ್ತಿಯು ಎರಡು ವಿಧವಾಗಿ ಹಿರಿಯದಾದುದು: ಒಂದು ಸಾಧನ ದೃಷ್ಟಿಯಿಂದ, ಇನ್ನೊಂದು ಸಾಧ್ಯದೃಷ್ಟಿಯಿಂದ. ಶರಣಗಮನವೇ ಭಗವಂತನನ್ನು ಒಲಿಸುವ ಹಿರಿದಾದ ಸಾಧನ. ಆತನು ಒಲಿದಾಗಲೇ ಸಾಧಕನು ಬೇರೆ ಬಗೆಯ ಮುಕ್ತಿಗಳನ್ನು ಪಡೆಯಬಲ್ಲ. ಎರಡನೆಯದಾಗಿ ಪೂರ್ಣಶರಣಾಗತಿಯಿಂದಲೇ ಪೂರ್ಣ ತಲ್ಲೀನತೆ. **ಅನನ್ಯ ಆತ್ಮಾರ್ಪಣವೇ ಆತ್ಮೈಕ್ಯ.** Self-surrender is Self-identification. ಅದೇ **ಶ್ರೇಷ್ಠತಮ ಅನುಭೂತಿ.**

ದೇವ-ಜೀವರ ಸಂಬಂಧ :

ಇನ್ನು ದೇವ-ಜೀವರ ಸಂಬಂಧವನ್ನು ಅರುಹಿ ಈ ವಿಭಾಗವನ್ನು ಮುಗಿಸುವೆ. ಜೀವನು ಪರಮಾತ್ಮ-ಅಗ್ನಿಯ ಕಿಡಿ-a spark of the Divine Fire; ಅವನು ಪರಮಾತ್ಮ-ಸಾಗರದ ಹನಿ-a drop of the Divine Ocean. ಮಮೈವಾಂಶ: ಸನಾತನ:। 'ಅವನು ನನ್ನ ಸನಾತನ ಅಂಶ' ಎಂದು ಭಗವಂತನೇ ಗೀತೆಯಲ್ಲಿ ಅರುಹಿರುವ. ಈ **"ಅಂಶದ"** ಅರ್ಥವನ್ನು ಮೂರು ಬಗೆಯಾಗಿ ಮೂವರು ಆಚಾರ್ಯರು ಮಾಡಿರುವರು :- i) ಜೀವನು ದೇವರ **ಪ್ರತಿಬಿಂಬ** ಎಂದು ಶ್ರೀ ಮಧ್ವಾಚಾರ್ಯರ **ಬಿಂಬ-ಪ್ರತಿಬಿಂಬ-ಭಾವವು** ಅರಹುವದು. ii) ಜೀವನು ದೇವರ **ಅಂಗ** ಎಂದು ಶ್ರೀ ರಾಮಾನುಜಾಚಾರ್ಯರ ಅಂಗಾಂಗಿ ಭಾವವು ಅರುಹುವದು. ಮತ್ತು iii) ಜೀವನು-ದೇವರು **ಏಕರೂಪರು** ಎಂಬುದನ್ನು ಶ್ರೀ ಶಂಕರಾಚಾರ್ಯರ **ತಾದಾತ್ಮ್ಯಭಾವವು** ಸೂಚಿಸುವದು. **"ಜೀವೋಬ್ರಹ್ಮೈವ ನಾಪರ: ।"** "ಜೀವನು ಬ್ರಹ್ಮನೇ ಇರುವನು" ಎಂದು ಅವರು ಸಾರುವರು. ಅನುಭಾವಿಗಳೇ ಈ ಅಭಿಪ್ರಾಯಗಳ ನೈಜವನ್ನು ನಿರ್ಣಯಿಸಬಲ್ಲರು.

ಶ್ರೀ ಗುರುದೇವರು ಭಗವಂತ ಭಕ್ತರ ನಿಕಟ ಸಂಬಂಧವನ್ನು ಶ್ರೀ ಬಸವಣ್ಣನವರ ಕೆಳಗಿನ ವಚನದ ಮುಖಾಂತರ ಚೆನ್ನಾಗಿ ಬಣ್ಣಿಸಿರುವರು.

ಜಗವ ಸುತ್ತಿರುದು ನಿನ್ನ ಮಾಯೆಯಯ್ಯಾ !
ನಿನ್ನ ಸುತ್ತಿಹುದು ಎನ್ನ ಮನ ನೋಡಯ್ಯಾ !
ನೀನು ಜಗಕೆ ಬಲ್ಲಿದನು !
ನಾನು ನಿನಗೆ ಬಲ್ಲಿದನು ಕಂಡಯ್ಯಾ !
ಆನು ನಿನ್ನೊಳಗೆ, ನೀನು ಎನ್ನೊಳಗೆ,
ಕರಿಯು ಕನ್ನಡಿಯೊಳಗೆ ಅಡಗಿದಂತಯ್ಯಾ
ಎನ್ನೊಳಗೆ ನೀನಡಿಗಿದೆ ಕೂಡಲ ಸಂಗಮದೇವಾ.

ಇದರಲ್ಲಿ ಭಗವಂತನ ಸರ್ವವ್ಯಾಪಕತೆಯೂ ಸರ್ವಜ್ಞತೆಯೂ ಅರುಹಲಾಗಿದೆ. ಭಗವಂತನು ಜಗತ್ತನ್ನು ವ್ಯಾಪಿಸಿರುವನು. ಭಕ್ತನು ಸಹ ಭಗವಂತನನ್ನು ವ್ಯಾಪಿಸಿರುವನು. ಭಗವಂತನು ಜಗತ್ತನ್ನು ಅವಕಾಶದೃಷ್ಟಿಯಿಂದ ಸುತ್ತುವರಿದರೆ, ಭಕ್ತನು ಭಗವಂತನನ್ನು ಪ್ರೀತಿ, ಭಕ್ತಿಯಿಂದ ಸುತ್ತುವರಿಯುವನು. ಈ ರೀತಿ ಭಗವಂತನು ಭಕ್ತನ ಜಾಲದಲ್ಲಿ ಪೂರ್ತಿಯಾಗಿ ಸಿಲುಕಿರುವನು. ಭಗವಂತ-ಭಕ್ತರ ಅನ್ಯೋನ್ಯ ವ್ಯಾಪಕತೆಯು ಇದರಲ್ಲಿ ಸೂಚಿತವಾಗಿರುವದು. ಆದ್ದರಿಂದ ಅವರಿಬ್ಬರೂ ಅಭಿನ್ನರಿರಬೇಕು. ಇದರ ಜತೆಯಲ್ಲಿ "ಆನೆಯು ಕನ್ನಡಿಯಲ್ಲಿ ಪ್ರತಿಬಿಂಬಿತವಾಗುವಂತೆ ದೇವರು ತನ್ನಲ್ಲಿ ಪ್ರತಿಬಿಂಬಿತನಾಗಿರುವ", ಎಂದು ಬಸವಣ್ಣನವರು ಅರುಹಿರುವರು. ಇಲ್ಲಿ ಸಾಧರ್ಮ್ಯದ ಉದಾಹರಣೆಯನ್ನು ಕೊಟ್ಟಿದ್ದರೂ **ಬಸವಣ್ಣನವರು** ತಾದಾತ್ಮ್ಯವನ್ನೇ ಸೂಚಿಸಿರಬಹುದು, ಎಂದೆನಿಸುವದೆಂದು ಶ್ರೀ ಗುರುದೇವರು ಹೇಳಿರುವರು. ಭಗವಂತನ ಸರ್ವಜ್ಞತೆಯನ್ನು ಕುರಿತು **ಬಸವಣ್ಣನವರು** "ನೀನು ಜಗಕ್ಕೆ ಬಲ್ಲಿದನು, ನಾನು ನಿನಗೆ ಬಲ್ಲಿದನು ಕಂಡಯ್ಯಾ" ಎಂದು ಉಸುರಿರುವರು. ಭಗವಂತನು ಸರ್ವಜ್ಞನೇ ಇರುವ ನಿಜ. ಆದರೆ ಭಕ್ತನೂ ಭಗವಂತನನ್ನು ಬಲ್ಲನು. ಆದುದರಿಂದ ಅವನು ಸರ್ವಜ್ಞನಿಗಿಂತ ಮಿಗಿಲಾದವನು ಎಂದು ಬಸವಣ್ಣನವರು ಹೇಳಿರುವರು. ಇಂಥ ನಿಕಟ ಸಂಬಂಧ ಭಕ್ತ-ಭಗವಂತರಲ್ಲಿ ಇರುವದು; ಎಂಬುದನ್ನು ಶ್ರೀ ಗುರುದೇವರು ಇಲ್ಲಿ ಕಾಣಿಸಿರುವರು.[20]

ಆದರೆ ದೇವ-ಭಕ್ತರ ಸಂಬಂಧವನ್ನು **ಶ್ರೀ ಹನುಮಂತನಂಥ** ಮಹಾಭಕ್ತ ಶಿರೋಮಣಿಯು ಕೆಳಗಿನಂತೆ ಕಾಣಿಸಿರುವ. ಅದು ಗಮನಿಸಬೇಕಾದಂತಹದು.

ದೇಹಬುದ್ಧ್ಯಾ ತು ದಾಸೋ ಹಮ್ । ಜೀವ ಬುದ್ಧ್ಯಾತ್ವದಂಶಕ: ।
ಆತ್ಮಬುದ್ಧ್ಯಾತ್ವಮೇವಾಹಂ । ಇತಿ ಮೇ ನಿಶ್ಚಿತಾ ಮತಿ: ॥

"ದೇಹ ಬುದ್ಧಿಯಿಂದ ನಾನು ನಿನ್ನ ದಾಸನಿರುವೆ; ಜೀವ ಬುದ್ಧಿಯಿಂದ ನಾನು ನಿನ್ನ ಅಂಶನಿರುವೆ. ಆತ್ಮಬುದ್ಧಿಯಿಂದ ನಾನು ನೀನೇ ಇರುವೆ. ಇದು ನನ್ನ ನಿಶ್ಚಿತವಾದ ಅಭಿಮತವು." ಅದೇ ಮೇರೆಗೆ **"ಜೀವೋ ಬ್ರಹ್ಮೈವ"** ಎಂದು ಸಾರುವ **ಶ್ರೀ ಶಂಕರರು** ಅರುಹುವುದೇನೆಂದರೆ:-

ಯದ್ಯಪಿ ಭೇದಾಪಗಮೇ । ನಾಥ ತವಾಹಂ ನ ಮಾಮಕೀನ: ತ್ವಮ್।
ಸಾಮುದ್ರೋಹಿ ತರಂಗ: । ಕ್ವಚ ನ ಸಮುದ್ರೋ ಹಿ ತಾರಂಗ: ॥

20) P.G.K. PP 137, 138, 139

"ಪ್ರಭುವೇ! ನನ್ನಲ್ಲಿ ನಿನ್ನಲ್ಲಿ ಬೇಧವಿಲ್ಲದಿದ್ದರೂ, ನಾನು ನಿನ್ನವನಿರುವೆ. ನೀನು ನನ್ನವನಲ್ಲ. ತರಂಗವು ಸಾಗರದ ಅಂಗ, ಸಾಗರವು ತರಂಗದ ಅಂಗವಾಗಲರಿಯದು."

ದೇಹ ದೇವಾಲಯವು, ಜೀವವೇ ಶಿವಲಿಂಗ ।
ಭಾವ ಪುಷ್ಪದಿ ಭಜಿಪಂಗೆ, ಮುಕ್ತಿ ಸಂ- ।
ದೇಹವಿಲ್ಲೆಂದ ಸರ್ವಜ್ಞ ॥
ದೇಹ ದೇವುಳ ಆತ್ಮಾದೇವ । ಕೋಠೇ ಧರೂ ಪಾಹತಾ ಭಾವ ।
ದೇಹ ಓಳಖೋನಿ ಜೀವ । ತೇಥೇಚ ಘಾಲಾವಾ ॥

"ದೇಹ ದೇವಾಲಯವು; ಆತ್ಮನೇ ದೇವರು. ನೀವು ಯಾರನ್ನು ಭಜಿಸಲು ಬಯಸುವಿರಿ? ದೇವರನ್ನು ಗುರುತಿಸಿ, ಅಲ್ಲಿಯೇ ಅನನ್ಯರಾಗಬೇಕು" ಎಂದು ರಾಮದಾಸರು ಅರುಹಿರುವರು.

III) ಜಗತ್ತು :

ಸತ್ಯವೋ ? ಅಸತ್ಯವೋ ? :

ಈ ಸಮಸ್ಯೆಯು ಬಹುಕಾಲದಿಂದ ದಾರ್ಶನಿಕರ ಚರ್ಚೆಯ ವಿಷಯವಾಗಿರುವದು. **ಶ್ರೀ ಶಂಕರಾಚಾರ್ಯರು** ಜಗತ್ತು ಅಸತ್ಯವೆಂತಲೂ; **ಶ್ರೀ ಮಧ್ವಾಚಾರ್ಯರು** ಅದು ಸತ್ಯವೆಂತಲೂ ಪ್ರತಿಪಾದಿಸಿರುವರು. **ಶ್ರೀಗುರುದೇವರು** ಈ ವಿರೋಧಾಭಾಸವನ್ನು ಗೀತೆಯು ನೆರವಿನಿಂದ ಸಮನ್ವಯಗೊಳಿಸಿರುವರು. ಗೀತೆಯಲ್ಲಿ ಜಗತ್ತಿನ ಸತ್ಯತೆಯನ್ನು **"ಪರಾ-ಅಪರಾ"** ಪ್ರಕೃತಿಯ ಬಣ್ಣನೆಯು ಅರುಹುತ್ತದೆ. ಅದೇ ಮೇರೆಗೆ **"ಅಜ್ಞಾನ-ಮಾಯಾ"** ಎಂಬ ಶಬ್ದಗಳಿಂದ ಹಾಗು 'ಅಶ್ವತ್ಥ'ದ ಕಲ್ಪನೆಯಿಂದ ಜಗತ್ತಿನ ಅಸತ್ಯತೆಯು ಸೂಚಿಸಲಾಗಿದೆ. ಆದರೆ ಇವುಗಳ ಸಮನ್ವಯವನ್ನು ಮಾಡುವದೆಂತು ? ಗೀತೆಯು ಅದನ್ನು **"ಕ್ಷಣಭಂಗುರತೆ"** ಇಲ್ಲವೆ **"ವ್ಯಕ್ತ ಮಧ್ಯ"** ದ ಸಿದ್ಧಾಂತದಿಂದ ಮಾಡಿರುವದು.

"ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ" ॥2-28॥

ಭೂತಗಳು ಅವ್ಯಕ್ತದಿಂದ ಮೈದಳೆಯುತ್ತಿವೆ. ಕೆಲಕಾಲ ಬಾಳುತ್ತಿವೆ. ಮರಳಿ ಅವ್ಯಕ್ತದಲ್ಲಿ ಅಳಿಯುತ್ತಿವೆ. ಅವು ಬಾಳುವದು ಮಧ್ಯಕಾಲದಲ್ಲಿ (ವ್ಯಕ್ತ ಮಧ್ಯ) ಕೆಲಕಾಲ. ಅವುಗಳ ಆದಿಯೂ ಅನಂತ-ಅವ್ಯಕ್ತ; ಅವುಗಳ ಬಾಳುವೆ ಅತ್ಯಲ್ಪಕಾಲ. ಅದು **"ಕ್ಷಣಭಂಗುರ"**. ನಮ್ಮ ಸಂತರೂ ಇದನ್ನೆಯೇ ಸಾರಿರುವರು.

"ಕ್ಷಣ ಭಂಗುರ ಜೀವನಕೀ ಕಲಿಕಾ ।
ಕಲ ಪ್ರಾತ ನ ಜಾನೇ ಖಿಲೀ ನ ಖಿಲಿ ॥"

"ನಮ್ಮ ಜೀವನ-ಕಲಿಕೆಯು ಕ್ಷಣಭಂಗುರ. ಅದು ನಾಳೆ ಬೆಳಿಗ್ಗೆ ಅರುಳುವದೋ

ಇಲ್ಲವೋ ಹೇಳಲು ಬಾರದು."

ಸಿರಿಯ ಸಂಸಾರವದು, ಸಲಿಲ ಮೇಲಿನ ಗುಳ್ಳೆ
ಎಂದದೆಂತಾಗುವದು ತಿಳಿಯದಿಹುದು ।
ಹಿರಿಯ ಆತ್ಮ ನನುಳಿದು ಸಿರಿಸುಖವು ಸಿಗದದಿಲ್ಲಿ
ಮೃಗ ಜಲದಿ ನೆಲ್ಲು ತಾ ಬೆಳೆಯದಿಹುದು ॥ (ಬೋಧಸುಧೆ)
ಸಿರಿಯ ಸಂಸಾರವನು ಸ್ಥಿರವೆಂದು ನಂಬದಿರು ।
ಹಿರಿದಾದ ಸಂತೆ, ನೆರೆಗೊಂದು ಜಾವಕ್ಕೆ ।
ಹರಿದು ಹೋದಂತೆ ಸರ್ವಜ್ಞ ॥

ಕಾರ್ಲಾಯಿಲ್ ಮಹನಿಯರ "ಕ್ಷಣಭಂಗುರತೆ" ಯ ಸಿದ್ಧಾಂತವೂ ಇದನ್ನೆಯೇ ಸಾರುವದು.

"A little while ago and you were not; a little while after and you are not. You are only concerned with the specious present, the here and the now, the passing moment, which may be regarded either as real or unreal."[21]

"ಕೆಲಕಾಲ ಪೂರ್ವದಲ್ಲಿ ನೀನು ಇರಲಿಲ್ಲ; ಕೆಲಕಾಲ ನಂತರ ನೀನು ಇರುವದಿಲ್ಲ. ನೀನು ಈ ತೋರಿಕೆಯ ವರ್ತಮಾನದಲ್ಲಿಯಷ್ಟೇ-ಇಲ್ಲಿ ಮತ್ತು ಈಗ ಇರಬಲ್ಲೆ ಇದೊಂದು ಅಳಿಯುಲಿರುವ ಕ್ಷಣವು. ಅದನ್ನು ಸತ್ಯವೆಂತಲೂ ಬಗೆಯಬಹುದು; ಅಸತ್ಯವೆಂತಲೂ ಬಗೆಯಬಹುದು."

ಇದರ ಜತೆಯಲ್ಲಿ ಗುರುದೇವರು ಶ್ರೀ ಶಂಕರಾಚಾರ್ಯರು ಹೇಳಿದ ಸತ್ಯದ ನಾಲ್ಕು ತರಗತಿಗಳನ್ನು ಅರುಹಿ, ಅವುಗಳಲ್ಲಿಯ ತಾರತಮ್ಯವನ್ನು ವಿವರಿಸಿರುವರು. ಈ ತರಗತಿಗಳು ಇಂತು ಇರುವವು. 1) ಪ್ರಾತಿಭಾಸಿಕ ಸತ್ಯ. 2) ಸ್ವಾಪ್ನಿಕ ಸತ್ಯ, 3) ವ್ಯಾವಹಾರಿಕ ಸತ್ಯ ಮತ್ತು 4) ಪರಮಾರ್ಥಿಕ ಸತ್ಯ.

ಪ್ರಾತಿಭಾಸಿಕ ಜಗತ್ತು ಭ್ರಾಂತಿ-ಜನಿತ, ಅದರಲ್ಲಿಯ ಸತ್ಯಾಂಶಕ್ಕಿಂತ ಸ್ವಾಪ್ನಿಕ ಜಗತ್ತಿನಲ್ಲಿಯ ಸತ್ಯಾಂಶವು ಅಧಿಕವಿರುವದು. ಸ್ವಾಪ್ನಿಕ ಜಗತ್ತಿನಲ್ಲಿಯ ಸತ್ಯಾಂಶಕ್ಕಿಂತ ವ್ಯಾವಹಾರಿಕ ಜಗತ್ತಿನಲ್ಲಿಯ ಸತ್ಯಾಂಶವು ಅಧಿಕವಿರುವದು, ಮತ್ತು ವ್ಯಾವಹಾರಿಕ ಜಗತ್ತಿನಲ್ಲಿಯ ಸತ್ಯಾಂಶಕ್ಕಿಂತ ಪಾರಮಾರ್ಥಿಕ ಜಗತ್ತಿನಲ್ಲಿಯ ಸತ್ಯಾಂಶವು ಅತ್ಯಧಿಕವಿರುವದು. ಅದರಲ್ಲಿ ಸತ್ಯವು ಪೂರ್ಣತೆಯನ್ನು ಪಡೆದಿರುವದು. ಅದೇ **ಶಾಶ್ವತ-ಸನಾತನ ಸತ್ಯ.** ಉಳಿದವುಗಳೆಲ್ಲ ಸಾಪೇಕ್ಷ ಸತ್ಯಗಳು.

ನೀತಿ-ಶಾಸ್ತ್ರ :

ಈ ವರೆಗೆ **ಪರತತ್ವ-ಶಾಸ್ತ್ರ**ದಲ್ಲಿಯ ಪ್ರಧಾನ ಅಂಗಗಳ ಹಾಗೂ ಅವುಗಳ

21) B.P.G.P. 138

ಉಪಾಂಗಗಳ ಸಮನ್ವಯವನ್ನು ಗುರುದೇವರು ಹೇಗೆ ಮಾಡಿರುವರು ಎಂಬುದನ್ನು ನನಗೆ ತಿಳಿದ ಮಟ್ಟಿಗೆ ಅರುಹಿ ಆಯಿತು. ಇನ್ನು **ನೀತಿ ಶಾಸ್ತ್ರ**ದಲ್ಲಿಯ ಕೆಲ ವಿಷಯಗಳ ಸಮನ್ವಯವನ್ನು ವಿವರಿಸಬಯಸುವೆ. **ಪರತತ್ವಶಾಸ್ತ್ರವು** ದೇವ, ಜೀವ, ಜಗತ್ತಿನ ಸ್ವರೂಪ ಸಂಬಂಧಗಳನ್ನು ಅರುಹಿ ಮನುಜನಿಗೆ ತನ್ನ ಪರಮದರ್ಶನವನ್ನು (ಪರಮಾತ್ಮನು) ಕಂಡು ಹಿಡಿಯಲು. ಅದನ್ನು ಪ್ರೀತಿಸಲು, ಗೌರವಿಸಲು, ಭಜಿಸಲು ಪ್ರೇರಿಸುವದು. ತರುವಾಯ **ನೀತಿ ಶಾಸ್ತ್ರವು** ಆತನಿಗೆ ಕೆಲ ಪ್ರಾಥಮಿಕ ಸಾಧನಗಳನ್ನು ಸೂಚಿಸುವದು. **ನಯತೀತಿ ನೀತಿ:** । ಪರಮಾತ್ಮನೆಡೆಗೆ ಒಯ್ಯಲಿರುವುದೇ ನೀತಿಯು, ದೇಹದೆಡೆಗೆ ಒಯ್ಯುತ್ತಿರುವದೇ ಅನೀತಿಯು; ಆತ್ಮಾನಂದವನ್ನು ಪಡೆಯಬಯಸುವದೇ ನೀತಿಯು. ವಿಷಯ ಸುಖವನ್ನು ಪಡೆಯಲೆಳೆಸುವದೇ ಅನೀತಿಯು :

ನೀತಿಯು ಮನುಜನಿಗೆ ತನ್ನ ಕರ್ಮಗಳನ್ನು ತಿದ್ದಲು ಕಲಿಸುವದು. ಪರಮಾತ್ಮನೆಡೆಗೆ ಸಾಗಲು ಯಾವ ಕರ್ಮಗಳನ್ನು ಮಾಡಬೇಕು ? ಹೇಗೆ ಮಾಡಬೇಕು ? ಅದೇ ಮೇರೆಗೆ ಯಾವ ಗುಣಗಳನ್ನು ಬೆಳೆಸಬೇಕು ? ಹೇಗೆ ಬೆಳೆಸಬೇಕು ? ಎಂಬುದನ್ನು ಅದು ಅರುಹುವದು. ಅದಕ್ಕಾಗಿ ಇದರಲ್ಲಿ ಕರ್ಮಗುಣಗಳ ವಿಚಾರಕ್ಕೆ ಪ್ರಾಧಾನ್ಯವಿರುವದು.

ಕರ್ಮಗುಣಗಳ ಸಂದರ್ಭದಲ್ಲಿ ಗುರುದೇವರು ಮೂರು ಬಗೆಯ ಸಮನ್ವಯವನ್ನು ಕಾಣಿಸಿರುವರು. (i)ಕರ್ಮಸಮನ್ವಯ, (ii) ಗುಣಸಮನ್ವಯ, (iii) ನೀತಿವಾದ-ನೀತ್ಯತೀತ ಪವಾಡ ಸಮನ್ವಯ.

1) **ಕರ್ಮಸಮನ್ವಯ :**

ಇದರಲ್ಲಿ ಎರಡು ಬಗೆಗಳು. (ಅ) ಕರ್ಮ-ಅಕರ್ಮ, ಕರ್ಮ-ಸನ್ಯಾಸ, ಕರ್ಮ-ಜ್ಞಾನ ಸಮನ್ವಯ ಮತ್ತು (ಆ) ಕರ್ಮತರಗತಿ-ತಾರತಮ್ಯ (ಸಮನ್ವಯ)

ಅ) ಕರ್ಮ-ಅಕರ್ಮ ಸಮನ್ವಯ :

ಕರ್ಮಅಕರ್ಮಗಳ ವಿಚಾರವನ್ನು ಕುರಿತು, ಗೀತೆಯು ಅರುಹಿರುವುದೇನೆಂದರೆ

ಕರ್ಮಣ್ಯಕರ್ಮ ಯ: ಪಶ್ಯೇದಕರ್ಮಣಿ ಚ ಕರ್ಮ ಯ : ।
ಸ ಬುದ್ಧಿಮಾನ್ಮನುಷ್ಯೇಷು ಸ ಯುಕ್ತ: ಕೃತ್ಸ್ನ-ಕರ್ಮಕೃತ್ ॥4-18॥

"ಕರ್ಮದಲ್ಲಿ ಅಕರ್ಮವನ್ನು ಕಾಣುವವನು ಹಾಗೂ ಅಕರ್ಮದಲ್ಲಿ ಕರ್ಮವನ್ನು ಕಾಣುವವನು ಬುದ್ಧಿವಂತನು:" ಆದರೆ ಯಾವನೂ ಒಂದು ಗಳಿಗೆ ಕೂಡ ಕರ್ಮಮಾಡದಿರನು. **"ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯ ಕರ್ಮಕೃತ್ ।"** (3-5) ಎಂತಲೂ ಅದು ಅರುಹುವದು. ಆದುದರಿಂದ ಇಲ್ಲಿ ಹೇಳಲಾದ ಅಕರ್ಮದ ಅರ್ಥವೇನು ? ಕರ್ಮದಲ್ಲಿ ಅಕರ್ಮ ಕಾಣುವದೆಂದರೇನು ? ಇಲ್ಲಿ ಕರ್ಮದ ಎರಡು ಬಗೆಗಳನ್ನು ಗಮನಿಸಬೇಕಾಗುವದು. ಒಂದು ಮಾನಸಿಕ ಕರ್ಮ, ಇನ್ನೊಂದು ಶಾರೀರಕ ಕರ್ಮ. ಶರೀರವು ಕರ್ಮವನ್ನು ಮಾಡುತ್ತಿರುವಾಗ ಮನಸ್ಸು ಕರ್ಮವನ್ನು ನಿಲ್ಲಿಸುವದು, ಶಾಂತವಾಗಿರುವದು, "ಕರ್ಮದಲ್ಲಿಯ ಅಕರ್ಮ ದರ್ಶನ," ಮತ್ತು ಶರೀರವು ಕರ್ಮವನ್ನು

ನಿಲ್ಲಿಸಿದಾಗ ಮನಸ್ಸು ಕರ್ಮದಲ್ಲಿ ತೊಡಗಿರುವದು. "ಅಕರ್ಮದಲ್ಲಿ ಕರ್ಮವನ್ನು ಕಾಣುವದು" ಎಂಬುದು ಗೀತೆಯ ಅಭಿಪ್ರಾಯವಿರುವಂತೆ ಕಾಣುವದು.

ಇನ್ನು ಮನಸ್ಸಿನ ಕರ್ಮದ ಸ್ವರೂಪವೇನು ? ಅದನ್ನು ನಿಲ್ಲಿಸುವದೆಂತು ? ಮನಸ್ಸಿನಲ್ಲಿಯ ಕಾಮನೆ-ಬಯಕೆಗಳೆಲ್ಲ ಅದರ ಕರ್ಮಗಳು. ಅದನ್ನು ನಿಲ್ಲಿಸುವದೇ ನಿಷ್ಕಾಮತೆ. ಆಸಕ್ತಿಯನ್ನೂ ಫಲಾಶೆಯನ್ನು ತೊರೆದು ಮಾಡಿದ ಕರ್ಮವೇ ನಿಷ್ಕಾಮಕರ್ಮ ಎಂಬುದು ಗೀತೆಯ ಮತ. ಆದರೆ ಈ ನಿಷ್ಕಾಮ-ಕರ್ಮವು "Spineless negative action." "ಇದು ಬೆನ್ನುಮೂಳೆಯಿಲ್ಲದ ಅಭಾವಾತ್ಮಕ ಕರ್ಮ" ಎಂದು ಗುರುದೇವರು ಹೇಳಿರುವರು. ಕಾಮನೆಯನ್ನು ತೊರೆಯುವುದೆಂದರೇನು ? ಅದನ್ನು ಅಳಿಸಲು ಬರುವದೇ? ಮನಸ್ಸು ಅಂಥ ಶೂನ್ಯಾವಸ್ಥೆಯಲ್ಲಿ ಇರಬಲ್ಲುದೆ ? ಇರಲರಿಯದು. ಅದಕ್ಕಾಗಿ **"ಆತ್ಮಕಾಮ: ಅಕಾಮ : ನಿಷ್ಕಾಮ:"** "ಆತ್ಮಕಾಮನೇ ಅಕಾಮನು-ನಿಷ್ಕಾಮನು" ಎಂದು ಉಪನಿಷತ್ತು ಅರುಹುತ್ತದೆ. ಆದ್ದರಿಂದ ಮಾಡಲಾದ-ಕರ್ಮವೇ ನಿಷ್ಕಾಮ ಕರ್ಮವೇ-ಅನಾಸಕ್ತಕರ್ಮವು, ಎಂದು ಶ್ರೀಗುರು ದೇವರು ಅರುಹಿರುವರು. ಇದನ್ನು ಮಾಡುವ ಬಯಕೆಯು, ಆತ್ಮನ ಸ್ವರೂಪ,ವೈಭವದ ಜ್ಞಾನದಿಂದ ಉಂಟಾಗುವದು. ಈ ಬಗೆಯಾಗಿ ಆತ್ಮನ ಜ್ಞಾನಯುಕ್ತ ಹಾಗೂ ಆತ್ಮಾರ್ಪಣಯುಕ್ತ ಕರ್ಮವು ಗೀತೆಯು ಅರುಹಿರುವ **"ಯಜ್ಞಾಕರ್ಮ"**. ಆದುದರಿಂದ ಯಜ್ಞಾಕರ್ಮದಲ್ಲಿ ಕರ್ಮ-ಅಕರ್ಮಗಳ ಸಮನ್ವಯವನ್ನು ಗೀತೆಯು ಕಾಣಿಸಿರುವದು ಎಂದು ಗುರುದೇವರು ಉಸುರಿರುವರು.

ಕರ್ಮ-ಅಕರ್ಮಗಳ ಸಮನ್ವಯದಂತೆ, ಕರ್ಮಸನ್ಯಾಸ ಹಾಗೂ ಕರ್ಮ-ಜ್ಞಾನಗಳ ಸಮನ್ವಯವೂ ಯಜ್ಞಾದಲ್ಲಿಯೇ ಆಗಲಿರುವದು, ಎಂಬುದು ಅವರ ಹೇಳಿಕೆ. **ಸನ್ಯಾಸವೆಂದರೆ "ಕಾಮ್ಯಕರ್ಮಗಳ ತ್ಯಾಗ" - "ಕಾಮ್ಯಾನಾಂ ಕರ್ಮಣಾಂ ನ್ಯಾಸಂ"**। (18-2) ಅಂದರೆ ಕಾಮನೆಗಳನ್ನು ತೊರೆದು, ನಿಷ್ಕಾಮ ಬುದ್ಧಿಯಿಂದ ಕರ್ಮ ಮಾಡಲಿರುವದು ಸನ್ಯಾಸ. ಆದ್ದರಿಂದ ಕರ್ಮ ಅಕರ್ಮಗಳ ಸಮನ್ವಯದಂತೆ ಕರ್ಮ-ಸನ್ಯಾಸಗಳ ಸಮನ್ವಯವೂ ಕೂಡ ಯಜ್ಞಕರ್ಮದಲ್ಲಿ ಆಗುವದು. ಮೇಲಾಗಿ, ಯಜ್ಞಕರ್ಮ ಜ್ಞಾನ-ಅರ್ಪಣಗಳನ್ನು ಒಳಗೊಂಡಿರುವದರಿಂದ ಸಹಜವಾಗಿಯೇ ಅದು ಕರ್ಮ-ಜ್ಞಾನಗಳನ್ನೂ ಸಮನ್ವಯಗೊಳಿಸುವದು.

(ಆ) ಕರ್ಮತರಗತಿ-ತಾರತಮ್ಯ (ಸಮನ್ವಯ)

ಗೀತೆಯು ಕರ್ಮದ ಕೆಲ ತರಗತಿಗಳನ್ನು ಅರುಹುವದು : ಕಾಮ್ಯಕರ್ಮ, ಸ್ವಧರ್ಮಕರ್ಮ, ಪಾವನಕರ್ಮ, ನಿಷ್ಕಾಮಕರ್ಮ, ಯಜ್ಞಾಕರ್ಮ, ಇವೇ ಕೆಲ ಪ್ರಧಾನ ತರಗತಿಗಳು, ಕಾಮ್ಯ ಕರ್ಮಗಳನ್ನು ಅದು ತೊರೆಯಲು ಹೇಳುವದು. ಸ್ವಧರ್ಮ ಕರ್ಮಗಳನ್ನು ತೊರೆಯದಿರಲು ಬೋಧಿಸುವದು. **"ಶ್ರೇಯಾನ್ ಸ್ವಧರ್ಮೋ ವಿಗುಣ:" । ಸ್ವಧರ್ಮೇ ನಿಧನಂ ಶ್ರೇಯ:।** "ಸ್ವಧರ್ಮವು ವಿಗುಣವಿದ್ದರೂ ಅದನ್ನು ಕೊನೆಯವರೆಗೆ ತೊರೆಯದಿರುವದೇ ಒಳಿತು. ಯಾಕೆಂದರೆ ಎಲ್ಲ ಕರ್ಮಗಳೇ ಸದೋಷವಿರುವ ಮೂಲಕ ತಮಗೆ ಸಹಜವಾದ ಸ್ವಧರ್ಮದಲ್ಲಿ ಕೆಲ ದೋಷಗಳು ಇದ್ದರೂ

ಅದನ್ನು ಎಂದೂ ಬಿಡಕೊಡದು." (18-48)ಸಹಜವಿರುವದರಿಂದ ಅದನ್ನು ಸುಲಭವಾಗಿ ಮಾಡಲು ಬರುವದು. ಅದಕ್ಕಾಗಿ ಪ್ರತಿಯೊಬ್ಬರು ಸ್ವಧರ್ಮವನ್ನು ಆಚರಿಸುವದು ಒಳಿತು. ಮೂರನೆಯದು ಪಾವನ ಕರ್ಮ. **"ಯಜ್ಞ-ದಾನ-ತಪಗಳು ಪಾವನಾನಿ"** ಪವಿತ್ರವಾದವು ಇರುವದರಿಂದ ಅವನ್ನು ಮಾಡಲೇಬೇಕು ಎಂಬುದು ಗೀತೆಯ ಅರಿಕೆ. (18-5) **ತಪಸ್ಸು** ವ್ಯಕ್ತಿಯನ್ನು ಉದ್ಧರಿಸುವದು. ದಾನ ಸಮಾಜ ಕಲ್ಯಾಣವನ್ನು ನೆರವೇರಿಸುವದು. ಹಾಗು **ಯಜ್ಞವು** ವಿಶ್ವಚಕ್ರವು ಸರಿಯಾಗಿ ಸಾಗಲು ನೆರವಾಗುವದು. ಆದ್ದರಿಂದ ಈ ಕರ್ಮಗಳ ಹಿರಿಮೆಯೂ. ಅಗತ್ಯತೆಯೂ, ಇಡಿ ಜೀವನದ ಬೆಳವಣಿಗೆಗೆ ತುಂಬ ಇರುವದು. ಈ ಪಾವನ ಕರ್ಮಗಳನ್ನು ಕೂಡ ಫಲಾಸಕ್ತಿಯನ್ನು ತೊರೆದು ಮಾಡಬೇಕೆಂಬುದು ಗೀತೆಯ ಆಜ್ಞೆ. ಅಂದರೆ, ನಿಷ್ಕಾಮ ಕರ್ಮ ಇದರ ಮುಂದಿನ ಹೆಜ್ಜೆ. ಮತ್ತು ನಾವು ಈ ಮೊದಲು ಕಾಣಿಸಿದಂತೆ ಭಗವಂತನ ಪ್ರಾಪ್ತಿಗಾಗಿ ಆತ್ಮಾರ್ಪಣಬುದ್ಧಿಯಿಂದ ಮಾಡಿದ ಕರ್ಮವೇ **ನಿಷ್ಕಾಮಕರ್ಮ, ಯಜ್ಞ ಕರ್ಮ.** ಇಂಥ ಯಜ್ಞಕರ್ಮವು ಎಲ್ಲ ಕರ್ಮಗಳ ಶಿಖಾಮಣಿ. ಅದು ಎಲ್ಲ ಕರ್ಮಗಳಿಗಿಂತ ಮಿಗಿಲಾದುದು. ಅದರಲ್ಲಿಯೂ ಜ್ಞಾನ-ಯಜ್ಞವು ಶ್ರೇಷ್ಠತಮವಾದುದು. ಯಾಕೆಂದರೆ,

ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ।।4-33।।

"ಎಲ್ಲ ಕರ್ಮಗಳು ಜ್ಞಾನದಲ್ಲಿ-ಸಾಕ್ಷಾತ್ಕಾರದಲ್ಲಿ ಪರಿಣತವಾಗುವವು." ಆಗ ಜ್ಞಾನಿಗೆ ಯಜ್ಞಕರ್ಮವೆಲ್ಲ ಬ್ರಹ್ಮಮಯವಾಗುವದು ಎಂಬುದು ಗೀತೆಯ ಅಭಿಪ್ರಾಯ.

ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮಸಮಾಧಿನಾ ।।4-24।।

ಇಂಥ ಜ್ಞಾನಿಯೇ ಕರ್ಮಾತೀತನಾಗುವನು. ಅವನು **"ಆತ್ಮನ್ಯೇವ ಆತ್ಮನಾತುಷ್ಟ"**ಸ್ಥಿತ ಪ್ರಜ್ಞನೆನಿಸುವನು. ಮತ್ತೂ

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವ: ।
ಆತ್ಮನ್ಯೇವ ಚ ಸಂತುಷ್ಟಸ್ಯ ಕಾರ್ಯಂ ನ ವಿದ್ಯತೆ ।।3-17।।

"ಆತ್ಮನಲ್ಲಿ ತೃಪ್ತಿ-ಸಂತೋಷವನ್ನು ಪಡೆದು ಸದೈವ ಆತ್ಮನಲ್ಲಿಯೇ ರಮಮಾಣನಾಗಿರುವ ಯೋಗಿಗೆ ಕರ್ತವ್ಯವು ಇರುವದಿಲ್ಲ." ಅವನು ಕರ್ತವ್ಯವನ್ನು ಮೀರಿರುವನು. "There is no ought for a Self-realiser" ಆತ್ಮಾನುಭಾವಿಗೆ ಕರ್ಮದ ಕಟ್ಟಳೆಯು ಇರುವದಿಲ್ಲ ಎಂಬುದು ಗುರುದೇವರ ಅಭಿಮತ. ಇಂಥ ಕರ್ಮಾತೀತನೇ **ನೈಷ್ಕರ್ಮ್ಯ-ಸಿದ್ಧನು.**

ii) ಗುಣ ಸಮನ್ವಯ :

ಇನ್ನು ಗುಣಗಳ ಸಮನ್ವಯದ ವಿಚಾರ. ಗೀತೆಯು ಮೂರು ಪ್ರಧಾನ ಗುಣಗಳನ್ನು ಬಣ್ಣಿಸಿರುವದು.

ಸತ್ವಂ ರಜಸ್ತಮ ಇತಿ ಗುಣಾ: ಪ್ರಕೃತಿಸಂಭವಾ: ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ।14-5।।

"ಪರಮಾತ್ಮನ ಪ್ರಕೃತಿಯಿಂದ ಜನಿಸಿದ **ಸತ್ವ-ರಜ-ತಮ** ಎಂಬ ಗುಣಗಳು ಅವ್ಯಯವಾದ ಆತ್ಮನನ್ನು ದೇಹದಲ್ಲಿ ಬಂಧಿಸುತ್ತವೆ. ಇವುಗಳಿಂದಲೇ ಸದ್ಗುಣ-ದುರ್ಗುಣಗಳ ನಿರ್ಮಿತಿ. ಸತ್ವದಿಂದ ಸದ್ಗುಣಗಳು. ರಜ-ತಮ ಗುಣಗಳಿಂದ ದುರ್ಗುಣಗಳು ಹುಟ್ಟುವವು. ಕಾಮನು ದುರ್ಗುಣಗಳ ಜನಕನಾದರೆ, ಭಕ್ತಿಯು ಎಲ್ಲ ಸದ್ಗುಣಗಳ ಜನನಿ. ಗುರುದೇವರು ಎಲ್ಲ ಸದ್ಗುಣಗಳನ್ನು ಭಕ್ತಿಯಲ್ಲಿ ಸಮನ್ವಯಗೊಳಿಸಿರುವರು, ಕೇಂದ್ರೀಕರಿಸಿರುವರು. ಕೆಲ ಸದ್ಗುಣಗಳು ಭಕ್ತಿಯ ಕಾರಣಗಳು. ಬೇರೆ ಕೆಲವು ಭಕ್ತಿಯ ಆವಿಷ್ಕಾರಗಳು, ಭಕ್ತಿಯ ಪರಿಣಾಮಗಳು ಇರುವದನ್ನು ಅವರು ತಮ್ಮ **ಗೀತೆಯ ಸಾಕ್ಷಾತ್ಕಾರ ದರ್ಶನ** ಗ್ರಂಥದಲ್ಲಿ ಕಾಣಿಸಿರುವರು. ಅದಕ್ಕಾಗಿ ಅವರು 12 ಸದ್ಗುಣಗಳನ್ನು ಆಯ್ದಿರುವರು. ಹಾಗೂ ಅವುಗಳ ರತ್ನಮಾಲೆಯನ್ನು ತಯಾರಿಸಿರುವರು. ಅವನ್ನು ಕೆಳಗೆ ಕಾಣಿಸಿರುವೆ.

1) ಕರುಣೆ, 2) ಶುಚಿತ್ವ, 3) ಸಮತೆ, 4) ಅಹಿಂಸೆ, 5) ಸಂಯಮ, 6) ಅಸಕ್ತಿ 7) ಅಭಯ, 8) ಯಜ್ಞ, 9) ಶಾಂತಿ, 10) ತೇಜ, 11) ಈಶ್ವರ ಭಾವ, 12) ಸೇವೆ.

ಇವುಗಳಲ್ಲಿಯ 5 ಸದ್ಗುಣಗಳ ಆಯ್ದು ಅವುಗಳ ಸಂಬಂಧವನ್ನು ಭಕ್ತಿಯೊಡನೆ ಹೇಗೆ ಕಾಣಿಸಲಾಗಿದೆ ಎಂಬುದನ್ನು ವಿವರಿಸುವೆ. ಅದರಿಂದ ಉಳಿದ ಸದ್ಗುಣಗಳ ಸಂಬಂಧವೂ ತಿಳಿಯಬಹುದು.

1) **ಕರುಣೆ** : ಇದು ಭಗವಂತನ ಕೃಪೆಯನ್ನು ಪಡೆಯಲು ಮಾಡಲಾಗುವ ಪ್ರಾರ್ಥನೆಯ ಪ್ರತೀಕ. ಭಗವಂತನ ಕೃಪೆಗಾಗಿ ಪ್ರಾರ್ಥಿಸುವವನು, ತನ್ನಂತೆ ಅನ್ಯರನ್ನು ಬಗೆಯಬೇಕು. ಅವರಿಗೆ ತಾನೂ ಕರುಣವನ್ನು ನೀಡಬೇಕು. ಇದು ಅತಿ ಮಹತ್ವದ ಸಿದ್ಧಾಂತ.

2) ಶುಚಿತ್ವ : ಭಕ್ತಿಯಿಂದ ಅಂತ:ಕರಣವು ಪೂರ್ತಿಯಾಗಿ ಶುದ್ಧವಾಗುವದರಲ್ಲಿ ಸಂದೇಹವಿಲ್ಲ. ಅದು ಭಕ್ತಿಯ ಒಂದು ಪರಿಣಾಮ. ಅಂತ:ಕರಣವು ಭಗವಂತನಿಂದ ಪೂರಿತವಾಯಿತೆಂದರೆ, ಅದರಲ್ಲಿ ಕೆಟ್ಟ ಕಲ್ಪನೆಗಳು ಸೇರಲರಿಯವು. ನಮ್ಮ ಭಗವಂತನು ಬಹಳ ಮತ್ಸರ ಉಳ್ಳವನು. ಅವನು ಯಾವ ಡಾಂಭಿಕನಿಗೂ ಮೋಸಗಾರನಿಗೂ ತನ್ನ ಸಿಂಹಾಸನದ ಮೇಲೆ ಕೂಡಲು ಬಿಡನು.

3) ಸಂಯಮ : ಪೂರ್ತಿಯಾಗಿ ಇಂದ್ರಿಯ ಸಂಯಮವನ್ನು ಮಾಡದೇ ನಾವು ಭಗವಂತನನ್ನು ಪಡೆಯಲರಿಯೆವು. ತಮ್ಮ ಪ್ರಿಯತಮ ವಿಷಯವಾದ ಭಗವಂತನನ್ನು ಪಡೆಯಬಯಸುವವರು. ತಮ್ಮ ಇಂದ್ರಿಯಗಳ ಒತ್ತಡಕ್ಕೆ ಬಲಿಯಾಗಿ, ಅನಂತ ವಿಷಯಗಳನ್ನು ಹಿಂಬಾಲಿಸಕೂಡದು. "ಪ್ರೇಯೋ ಅನ್ಯಸ್ಮಾತ್ ಅಂತರತರೋ ಯದಯಮಾತ್ಮಾ" ಎಂಬುದು "ಆತ್ಮನು ಪ್ರಿಯತಮನಿದ್ದು ಅಂತರ ತರನಿರುವನು" ಎಂಬುದು ಬೃಹದಾರಣ್ಯಕೋಪನಿಷತ್ತಿನ ಹೇಳಿಕೆ. [22]

22) B.P.G. PP 213-14-15

4) ಅಭಯ : ಅನುಭೂತಿಯ ಉನ್ನತ ಸ್ಥಿತಿಯನ್ನು ಮುಟ್ಟಿದ ಮೇಲೆ ಅದರ ಫಲವಾಗಿ ಅಭಯವು ತಾನಾಗಿಯೇ ಹಿಂಬಾಲಿಸುವದು. "ಆನಂದಂ ಬ್ರಹ್ಮಣೋ ವಿದ್ವಾನ್‌ನ ಬಿಭೇತಿ ಕದಾಚನ । ನ ಬಿಬೇತಿ ಕುತಶ್ಚನ ।" ಇದರ ಮೂಲಕವೇ ಸಂತರು ಪೂರ್ತಿಯಾಗಿ ನಿರ್ಭೀತರಿರುವರು.

5) ಈಶ್ವರ ಭಾವ : ಭಗವಂತನನ್ನು ಸಾಕ್ಷಾತ್ಕರಿಸಿಕೊಂಡವನಲ್ಲಿ ಸರ್ವೇಶ್ವರತ್ವವು ಪ್ರಕಟವಾಗುವದು. ಆತನು ಎಲ್ಲೆಡೆ ತನ್ನ ಪ್ರಭುತ್ವವನ್ನು ಕಾಣುವನು. ಇದೇ ಸಾಕ್ಷಾತ್ಕಾರ ಪಡೆದ ಸಂತನ ಈಶ್ವರ ಭಾವ. ಆತನು ಉತ್ತುಂಗ ಗಿರಿಶಿಖರದಂತೆ ಇರುವನು. ಅವನು ತನ್ನ ಅನುಪಮ ವೈಭವದಲ್ಲಿ ಏಕಾಂಗಿಯಾಗಿ ಮೆರೆಯುವನು. ಮತ್ತು ತನಗೆ ಬೇಕಾದಲ್ಲಿ ಬೇಕಾದಾಗ ಜನರ ಕಲ್ಯಾಣವ ನ್ನು ಮಾಡಬಲ್ಲನು, ಈ ಬಗೆಯಾಗಿ ಸದ್ಗುಣಗಳ ಸಮನ್ವಯವು ಭಕ್ತಿಯಲ್ಲಿ ಆಗಿರುವದನ್ನು ಗುರುದೇವರು ಕಾಣಿಸಿರುವರು. ಭಕ್ತಿಯು ಅನನ್ಯವಾಯಿತೆಂದರೆ ಭಕ್ತನು ಗುಣಾತೀತನಾಗುವನು.

ಮಾಂ ಚ ಯೋ ವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।

ಸ ಗುಣಾನ್ಸಮತೀತ್ಯೈ ತಾನ್ ಬ್ರಹ್ಮಭೂಯಾಯ ಕಲ್ಪತೇ ॥14-26॥

"ಅನನ್ಯ ಭಕ್ತಿಯೋಗದಿಂದ ಭಗವಂತನನ್ನು ಭಜಿಸಿದವನು ಗುಣಾತೀತನಾಗಿ, ಪರಮಾದರ್ಶನಾದ ಭಗವಂತನನ್ನು ಪಡೆಯಲು ಸಮರ್ಥನಾಗುವನು." ಇಂಥ ಗುಣಾತೀತನೇ ನಿ:ಸ್ತ್ರೈಗುಣ್ಯನು.

iii) ನೀತಿವಾದ-ನಿತ್ಯತೀತವಾದ-ಆತ್ಮಾನಂದವಾದದಲ್ಲಿ ಸಮನ್ವಯ :

ಸದ್ಗುಣ-ಸತ್ಕರ್ಮಗಳನ್ನು ಬೆಳೆಸುವದು ನೀತಿಯು, ಅವುಗಳನ್ನು ಮೀರಿದ ಅವಸ್ಥೆಯು ನಿತ್ಯತೀತ ಸ್ಥಿತಿಯು. ಈ ಎರಡನ್ನು ಆತ್ಮಾನಂದವು ಸಮನ್ವಯಗೊಳಿಸುವದು. ಸ್ಥಿತಪ್ರಜ್ಞನಲ್ಲಿ ನೀತಿಶಾಸ್ತ್ರದ ಈ ಮೂರು ಬಗೆಗಳ ಸಂಯೋಗವಾಗಿರುವದು ಕಂಡು ಬರುವದು. ಆದರೂ ಅದರಲ್ಲಿ ಆತ್ಮಾನಂದದ ಭಾಗವು ಅತ್ಯುನ್ನತವಾದುದು. ಈ ಆತ್ಮಾನಂದವನ್ನು ಕುರಿತು ಗುರುದೇವರು ಅರುಹಿರುವುದೇನೆಂದರೆ :

"We may say that to the extent to which the happiness of Socrates rises above the pleasure of a pig, to the same extent does the bliss of a Saint rise above the happiness of Socrates" [23]

"ಸೂಕರದ (ಹಂದಿಯು) ಸುಖಕ್ಕಿಂತ ಸಾಕ್ರೇಟಿಸ್‌ನ ಸಮಾಧಾನವು ಯಾವ ಪ್ರಮಾಣದಲ್ಲಿ ಮಿಗಿಲಾದುದು ಇರುವದೋ ಅದೇ ಪ್ರಮಾಣದಲ್ಲಿ ಸಂತರ ಆತ್ಮಾನಂದವು ಸಾಕ್ರೇಟಿಸ್‌ನ ಸಮಾಧಾನವನವನ್ನು ಮೀರುವದು."

ಆತ್ಮಾನಂದವು "ಬ್ರಹ್ಮ ಸಂಸ್ಪರ್ಶ" ದಿಂದ ಉಂಟಾಗಿರುವದರಿಂದ ಅದು ಉಪಮಾತೀತವಿರುವದು.

23) Pr P. G. P. 223

"Thus the moral values are linked with mystical values. Just as there cannot be true mysticism unless it is based upon the foundation of morality, so morality to be perfect must end in mystical attitude." [24]

ಈ ರೀತಿ ನೈತಿಕ ಮೌಲ್ಯಗಳು ಹಾಗೂ ಪಾರಮಾರ್ಥಿಕ ಮೌಲ್ಯಗಳು ಇವುಗಳ ಸಂಯೋಗವಾಗಿರುವದು. ನೀತಿಯ ಆಧಾರವಿಲ್ಲದೆ ನಿಜವಾದ ಪರಮಾರ್ಥವಿರಲರಿಯದಂತೆ ನೀತಿಯು ಪೂರ್ಣತೆಯನ್ನು ಪಡೆಯಲು ಅದು ಪರಮಾರ್ಥದಲ್ಲಿ ಪರಿಣಿತ ಆಗಲುಬೇಕು."

ಅನುಭೂತ ಶಾಸ್ತ್ರ :

ಅನುಭೂತಿಗೆ ಎರಡು ಅಂಗಗಳು : ಒಂದು ಬೌದ್ಧಿಕ ಶಾಸ್ತ್ರಾಂಗ, ಇನ್ನೊಂದು ಪ್ರಾತಿಭ ಅನುಭವಾಂಗ. ಇಲ್ಲಿ ಶಾಸ್ತ್ರಾಂಗವನ್ನು ವಿಚಾರಿಸಿ, ಅನುಭವಾಂಗವನ್ನು ಮುಂದಿನ ಉಪನ್ಯಾಸದಲ್ಲಿ ವಿವರಿಸುವೆ. ಅನುಭೂತಿ ಶಾಸ್ತ್ರದಲ್ಲಿ ಮೂರು ಬಗೆಯ ಸಮನ್ವಯವನ್ನು ಕಾಣಬಹುದು. i) ಪರಮಾತ್ಮನ ಜ್ಞೇಯ-ಅಜ್ಞೇಯ ಸಮನ್ವಯ, ii) ದಾರ್ಶನಿಕ ಪ್ರಮಾಣಗಳ ಸಮನ್ವಯ, iii) ಅನುಭೂತಿಯ ನಿಕಷಗಳ ಸಮನ್ವಯ ಮತ್ತು iv) ಆತ್ಮನ ಅಮರತ್ವ.

ಇವುಗಳಲ್ಲಿ ಮೊದಲನೆಯ ಸಮನ್ವಯವನ್ನು ಈ ಮೊದಲು ವಿವರಿಸಲಾಗಿದೆ. ಪರಮಾತ್ಮನು ಜ್ಞೇಯನೂ ಇರುವ, ಅಜ್ಞೇಯನೂ ಇರುವ : ಅಂಶತ: ಜ್ಞೇಯ. ಪೂರ್ವತ : ಅಜ್ಞೇಯ; ಪ್ರತಿಭೆಗೆ ಜ್ಞೇಯ, ಇಂದ್ರಿಯಗಳಿಗೆ ಅಜ್ಞೇಯ ಎಂಬುದಾಗಿ ಅದನ್ನು ಅರುಹಲಾಗಿದೆ. ಮುಂದಿನ ಎರಡನ್ನೂ ಮತ್ತು ಆತ್ಮನ ಅಮರತ್ವವನ್ನೂ ಇಲ್ಲಿ ವಿವರಿಸುವೆ.

ii) ಪ್ರಮಾಣ ಸಮನ್ವಯ : (ಅ) ಭಾರತೀಯ ಪ್ರಮಾಣಗಳು. ಪ್ರಮಾ ಅಂದರೆ ಯಥಾರ್ಥ ಜ್ಞಾನ-ಸತ್ಯಜ್ಞಾನ. ಪ್ರಮಾಣ ಅಂದರೆ ಸತ್ಯಜ್ಞಾನದ ಮೂಲ. ಭಾರತೀಯ ದಾರ್ಶನಿಕರು ಆರು ಪ್ರಮಾಣಗಳನ್ನು ಅರುಹಿರುವರು. ಅವುಗಳಲ್ಲಿ ಈ ಮೂರು ಪ್ರಧಾನವಾದವುಗಳು. **ಪ್ರತ್ಯಕ್ಷ ಶಾಬ್ಧ ಅನುಮಾನ.** ಗುರುದೇವರು ಈ ಪ್ರಮಾಣಗಳನ್ನು ಪ್ರತ್ಯಕ್ಷದಲ್ಲಿ ವೀಲೀನಗೊಳಿಸಿರುವರು. ಅವರ ಅಭಿಮತದ ಮೇರೆಗೆ ಪ್ರತ್ಯಕ್ಷ ಅಂದರೆ ಅತೀಂದ್ರಿಯ ಪ್ರತ್ಯಕ್ಷ ಅಪರೋಕ್ಷಾನುಭೂತಿ-ಪ್ರಾತಿಭ ಅನುಭೂತಿ. ಇದೇ ನಿಜವಾದ ಏಕಮೇವ ಪ್ರಮಾಣ. ಶಾಬ್ದ ಪ್ರಮಾಣವೂ ಒಂದು ಬಗೆಯ ಪ್ರತ್ಯಕ್ಷವೇ. ಶಬ್ದಗಳು, ಅನುಭಾವಿಗಳು ಅನುಭೂತಿಯ ಉನ್ಮಾದದಲ್ಲಿರುವಾಗ ಅವರಿಗೆ ಲಭಿಸಿದ ಅತೀಂದ್ರಿಯ ಮಾತುಗಳಿರುವದರಿಂದ, ಅವು ಪ್ರಾತಿಭ ಅನುಭೂತಿಗಳೇ ಇರುವವು. ಇನ್ನು **ಅನುಮಾನವು** ಸ್ವತಂತ್ರವಾಗಿ ಸತ್ಯವನ್ನು ಪ್ರಮಾಣಿಸಲರಿಯದು. "It does not in itself provide a foot-stand for reality, but it can be ancillary to the other processes such as revelation" [25] ಅದು ಶಬ್ದವನ್ನು-ಶಾಸ್ತ್ರವನ್ನು ಅವಲಂಬಿಸಬೇಕಾಗುವದು.

24) C.S.P. 230 25) V.C.T.P. 183

ಈ ಬಗೆಯಾಗಿ ಪ್ರತ್ಯಕ್ಷ(Intuition), ಶಬ್ದ(Revelation), ಮತ್ತು ಅನುಮಾನ (Reason). ಇವು ಒಂದಕ್ಕಿಂತ ಒಂದು ಶ್ರೇಷ್ಠವಿರುವವು. ಪ್ರತ್ಯಕ್ಷವು ಸರ್ವಶ್ರೇಷ್ಠ. ಶಬ್ದವು ಋಷಿಗಳ ಅತೀಂದ್ರಿಯ ಶ್ರುತಿ. ಅದು ಅಪೌರುಷೇಯವಾದುದು. **"ಪುರುಷ ಪ್ರಯತ್ನಂ ವಿನಾ ಪ್ರಕಟೀಭೂತ"** ವಾದುದು. ಆದುದರಿಂದ ಅದು-ಪ್ರಾತಿಭ(Intuitive). ಅನುಮಾನ ಇವೆರಡನ್ನು ಅವಲಂಭಿಸಿರುವದು. ಇದು ಅವುಗಳಲ್ಲಿಯ ತಾರತಮ್ಯ-ಸಮನ್ವಯ.

ಅ) ಪಾಶ್ಚಾತ್ಯ-ಪ್ರಮಾಣಗಳು :

ಪಾಶ್ಚಾತ್ಯ ದಾರ್ಶನಿಕರು ಮುಂದಿನ ಮೂರುಪ್ರಧಾನ ಪ್ರಮಾಣಗಳನ್ನು ಅರುಹಿರುವರು. ಅವರಲ್ಲಿಯ ಧ್ಯೇಯವಾದಿಗಳು(Idealists), ಏಕಸಂಧತೆಯನ್ನು (Coherence), ವಾಸ್ತವವಾದಿಗಳು(Realists), ಏಕರೂಪತೆಯನ್ನು (Correspondence), ವ್ಯವಹಾರವಾದಿಗಳು. (Pragmatists), ಸುಖವನ್ನು ಪ್ರತಿಪಾದಿಸಿರುವರು. ಬೌದ್ಧಿಕ ಕ್ಷೇತ್ರದಲ್ಲಿಯ ಸತ್ಯತೆಯನ್ನು ಪರೀಕ್ಷಿಸಲು ಬಳಸಲಾದ ಜ್ಞಾನ-ಶಾಸ್ತ್ರದ ಈ ಪ್ರಮಾಣಗಳನ್ನು ಗುರುದೇವರು ಅನುಭೂತಿ-ಶಾಸ್ತ್ರದಲ್ಲಿಯೂ ಬಳಸಿರುವರು. ಅವು ಅನುಭೂತಿಯ ಸತ್ಯತೆಯನ್ನು ಕಾಣಿಸಬಲ್ಲವು, ಎಂಬುದನ್ನು ಅರುಹಿರುವರು. ಅನುಭೂತಿಯ ಅಂಗಾಂಗಗಳಲ್ಲಿ **ಏಕಸಂಧತೆ** ಇರುವದು. ಯಾಕೆಂದರೆ ಅವೆಲ್ಲ ಒಂದೇ ಆತ್ಮಚೈತನ್ಯದ ಅವಿರ್ಭಾವಗಳಿರುವವು. ಆತ್ಮಾನುಭವವು ಅಂತರಂಗದಲ್ಲಿಯೂ, ಬಹಿರಂಗದಲ್ಲಿಯೂ ಏಕರೂಪವಾಗಿ ಪ್ರತೀತವಾಗುವದರಿಂದ ಅವುಗಳಲ್ಲಿ **ಏಕರೂಪತೆ** ಇರದಿರದು. ಇನ್ನು **ಸುಖ** ಇಲ್ಲವೆ ಸಮಾಧಾನವನ್ನು ಕುರಿತು ಗುರುದೇವರು ಈ ರೀತಿ ಅರುಹಿರುವರು.

"On the one side, satisfaction leans towards the pleasure of the hedonists and on the other the beatification of the mystics. The satisfaction of a mystie is called beatification, bliss or ecstasy."[26]

"ಸಮಾಧಾನವು ಒಂದೆಡೆಯಲ್ಲಿ ಭೌತಿಕ ಸುಖವಾದಿಗಳ ಸುಖವನ್ನು ನೆಮ್ಮುವದು. ಇನ್ನೊಂದೆಡೆಯಲ್ಲಿ ಅದು ಅನುಭಾವಿಗಳ ಆನಂದದೆಡೆಗೆ ಹೊರಳುವದು. ಅನುಭಾವಿಗಳ ಸಮಾಧಾನವೇ ಆನಂದವು. ಆತ್ಮಾನಂದವು-ಹರ್ಷಾತಿರೇಕವು. ಈ ಬಗೆಯಾಗಿ ಅನುಭೂತಿಯಲ್ಲಿ ಈ ಪ್ರಮಾಣಗಳು ಒಳಗೊಂಡಿರುವವು, ಸಮನ್ವಿತವಾಗಿರುವವು.

III) ನಿಕಷ ಸಮನ್ವಯ :

ಪರಮಾತ್ಮನ ಅನುಭೂತಿಯನ್ನು ಪಡೆಯುವ ಇಂದ್ರಿಯವು **ಪ್ರತಿಭೆ** (Intuition). ಅದನ್ನೇ ದಿವ್ಯ-ಚಕ್ಷು -ಅಂತ:ಚಕ್ಷು-ಅಂತ:ಪ್ರಜ್ಞೆ-ಅಗ್ರಬುದ್ಧಿ ಎಂದು ಕರೆಯುವದುಂಟು.

---

26) P.G.K.P. 5

"It is the faculty of 'God-realisation'-a faculty of supersensuous experience, which is aroused in us by proper spiritual initiation and practice". [27]

"ಅದೊಂದು ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಬಲ್ಲ-ಅತೀಂದ್ರಿಯ ಅನುಭವವನ್ನು ಪಡೆಯಬಲ್ಲ ಶಕ್ತಿ. ಅದು ಸರಿಯಾದ ಪಾರಮಾರ್ಥಿಕ ಅನುಗ್ರಹ ಹಾಗೂ ಸಾಧನಗಳಿಂದ ನಮ್ಮಲ್ಲಿ ಜಾಗ್ರತವಾಗುವದುಂಟು." ಅದು ಒಂದು ಬಗೆಯಾಗಿ ಆತ್ಮನ ರೂಪವೇ ಇರುವದು ಆತ್ಮನೇ ತನ್ನನ್ನು ತಾನು ಕಾಣಬಲ್ಲ. ಆತ್ಮನಾ ಆತ್ಮನಂ ಪಶ್ಯನ್ನಾತ್ಮನಿ ತುಷ್ಯತಿ । ಆತ್ಮನು ತನ್ನನ್ನು ತಾನು ಕಂಡು ಆತ್ಮನಲ್ಲಿ ಆನಂದ ಪಡೆಯುವನು, (ಗೀತಾ 6-20)

"The Self is endowed with the supreme power of dichotomising Himself.... He can divide himself into the knower and the known." [28]

"ಆತ್ಮನಲ್ಲಿ ವಿಭಜಿಸಿಕೊಳ್ಳುವ ಅಲೌಕಿಕ ಸಾಮರ್ಥ್ಯವಿರುವದು. ತನ್ನನ್ನು ವಿಭಜಿಸಿಕೊಂಡು, ಅವನು ತಾನೇ ಜ್ಞಾತಾರನೂ ಜ್ಞೇಯನೂ ಆಗಬಲ್ಲ."

ಈ ಪ್ರತಿಭೆಯೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲದು. ಇದರ ಸತ್ಯತೆಯನ್ನು ಅರಿಯಲು, ಗುರುದೇವರು ಐದು ನಿಕಷಗಳನ್ನು ಅರುಹಿರುವರು. ಪರಮಾತ್ಮನ ಅನುಭೂತಿಯು i) ಅಂತ:ಸ್ಫುರಿತ (Centrally initiated), ii) ಅತೀಂದ್ರಿಯ (Supersensuous), iii) ಅಖಂಡ (Continuous), iv) ಸಾರ್ವತ್ರಿಕ (Universal), ಮತ್ತು v) ಆನಂದಮಯ (Beatific or Blissful) ಇರಬೇಕು.

i) ಅಂತ:ಸ್ಫುರಿತ ಎಂದರೆ ಒಳಗಿನಿಂದ ಬಂದವುಗಳು, ಹೊರಗಿನಿಂದ ಬಂದವುಗಳಲ್ಲ. ಸಂತತವಾದ ನಾಮಸ್ಮರಣದಿಂದ ಸಾಧಕನ ಮಿದುಳಿನಲ್ಲಿ ಆತ್ಮ ಚೈತನ್ಯ ತುಂಬಿ, ಅಲ್ಲಿಯ ಜ್ಞಾನಕೇಂದ್ರಗಳಿಗೆ ನಾದ, ರೂಪ, ರಸ, ಗಂಧ, ಸ್ಪರ್ಶಗಳ ರೂಪದಿಂದ ಅದು ಪ್ರತ್ಯಕ್ಷ ಪ್ರತೀತವಾಗುವದು. ಬಾಹ್ಯ ಅನುಭವಗಳಂತೆ ಕಂಡರೂ, ಈ ಅನುಭವಗಳು ಒಳಗಿನಿಂದಲೇ ಬಂದಿರುವವು.

ii) ಈ ಅನುಭವಗಳಿಗೆ ಇಂದ್ರಿಯಗಳ ಅಗತ್ಯವಿರುವದಿಲ್ಲ. ಇವನ್ನು "ಕುರುಡನು ಕಾಣಬಲ್ಲ, ಕಿವುಡನೂ ಕೇಳಬಲ್ಲ." ಅದಕ್ಕಾಗಿ ಇವು ಅತೀಂದ್ರಿಯಗಳು. ಪ್ರತಿಭೆಯ ಈ ಅನುಭವಗಳ ಅನುಭೋದ-ಕೇಂದ್ರದಲ್ಲಿ (Unity of Apperception) ಅವುಗಳೆಲ್ಲರ ಅಂತ:ಸಂಬಂಧವು (Inter-communication), ಉಂಟಾಗಬಲ್ಲದು. ಅದರ ಫಲವಾಗಿ, ಸಾಧಕನು "ಕಣ್ಣಲಿ ಕೇಳುವ ಕಿವಿಯಲಿ ಕಾಣುವೆ" ಎಂದು ಪುರಂದರದಾಸರು ಉಸುರಿರುವರು.

iii) ಆತ್ಮನಿಗೆ ಸ್ಥಳ-ಕಾಲಗಳ ಮರ್ಯಾದೆ ಇರದ ಕಾರಣ, ಆತನ ಪ್ರಾತಿಭಶಕ್ತಿಯ ಪಡೆಯುವ ಅನುಭವಗಳು ಅಖಂಡವಾದವುಗಳು. ಅವು ಎಲ್ಲ ಸ್ಥಳಕಾಲ-ಅವಸ್ಥೆಗಳಲ್ಲಿ ನಿರಂತರವಾಗಿ ಲಭಿಸುವವು. ಇವು ಪ್ರತಿದಿನ ಬೆಳೆಯುತ್ತಿರಬೇಕು. ಅದೂ ಒಂದು

27) P.G.K.P. 3 28) C.S.P. 200

ಅಖಂಡತೆಯ ಮಹತ್ವದ ಅಂಗವಿರುವದು.

iv) ಈ ಅನುಭವಗಳು ಎಲ್ಲ ದೇಶಗಳ-ಕಾಲಗಳ ಅನುಭಾವಿಗಳಿಗೆ ಸುಮಾರು ಒಂದೇ ಬಗೆಯಾಗಿ ಲಭಿಸುವದರಿಂದ ಅವು ಸಾರ್ವತ್ರಿಕವಾದವುಗಳು.

v) ಕೊನೆಯದಾಗಿ ಇವು ಸಚ್ಚಿದಾನಂದ ಪರಮಾತ್ಮನ ಅನುಭವಗಳಿರುವದರಿಂದ ಆನಂದಮಯವಾಗಿರುವವು.

ಈ ಬಗೆಯಾಗಿ ಇವೆಲ್ಲ ಜಾಗ್ರತ ಪ್ರತಿಭೆಯ ಆವಿಷ್ಕಾರಗಳು ಇರುವದರಿಂದ ಇವುಗಳ ಸಮನ್ವಯವು, ಪ್ರತಿಭೆಯಲ್ಲಿ ಆಗುವದೆಂದು ಗುರುದೇವರು ಅರುಹಿರುವರು.

IV) ಆತ್ಮನ ಅಮರತ್ವ :

ಆತ್ಮನ ಅಮರತ್ವವನ್ನು ಕುರಿತ ಉಪನಿಷತ್ತುಗಳ ವಿಚಾರಗಳನ್ನು ಶ್ರೀಗುರುದೇವರು ಈ ರೀತಿ ಅರುಹಿರುವರು,

"There is systematic evolution that could be traced through them (Upanishads) of the ideas that were held on the subject of Immortality. We are told..... that he(soul) should be "lifted to the region of the deity" whom be has loved and worshipped during life.... Another passage declares that eternal life consists in attaining to an absolute "likeness" to God and enjoying life of personal immoratality. On the other hand "absorption in divinity"-a life of impersonal immortality (is regarded as eternal life)..... Such a soul becomes a great diffusive power, whose voice is on the rolling air..... who may be seen ..... wherever the eye may be cast."[29]

"ಆತ್ಮನ ಅಮರತ್ವವನ್ನು ಕುರಿತ ಉಪನಿಷತ್ತುಗಳಲ್ಲಿಯ ವಿಚಾರಗಳಲ್ಲಿ ಒಂದೇ ಬಗೆಯ ಕ್ರಮಬದ್ಧ ವಿಕಸನವು ಕಂಡು ಬರುವದು. (ಮೊದಲನೆಯದಾಗಿ) ಆತ್ಮನು ಜೀವಿಸುವಾಗ ಯಾವ ದೇವತೆಯನ್ನು ಭಕ್ತಿಭಾವದಿಂದ ಆರಾಧಿಸಿರುವನೋ ಅದರ ಲೋಕವನ್ನು ಸೇರಿ ಅವನು ಅಲ್ಲಿ ವಾಸಿಸುವನು ಎಂದು ಅರುಹಲಾಗಿದೆ. ಇನ್ನೊಂದು ವಚನವು ಆತ್ಮನು ದೇವರ ರೂಪವನ್ನು ಪೂರ್ತಿಯಾಗಿ ತಳೆದು ಸಗುಣ ಅಮರತ್ವದ ಆನಂದವನ್ನು ಉಪಭೋಗಿಸುವದೇ ಅಮರ ಜೀವನ ಎಂದು ಸಾರುವದು. ಇದರ ಬದಲಾಗಿ ಭಗವಂತನಲ್ಲಿ ಬೆರತು-ನಿರ್ಗುಣ ಅಮರತ್ವವನ್ನು ಪಡೆಯುವದೇ ಅಮರ ಜೀವನವೆಂದು ಬಗೆಯಲಾಗಿದೆ. ಇಂಥ ಆತ್ಮನ ಚೈತನ್ಯವು ಎಲ್ಲಡೆ ಪ್ರಭಾವಶಾಲಿಯಾಗಿ ಪಸರಿಸುವದು. ಓರ್ವ ಕವಿಯು ಬಣ್ಣಿಸುವ ಮೇರೆಗೆ. "ಅವನ ವಾಣಿಯು ಚಲಿಸುವ ಗಾಳಿಯಲ್ಲಿ ಕೇಳಬರುವದು. ಮತ್ತು ಅವನು ಕಂಗಳನ್ನು ಹೊರಳಿಸಿದ ಎಡೆಯಲ್ಲಿ ಕಾಣಬರುವನು."

29) C.S.P. 118

ಮೇಲೆ ಕಾಣಿಸಿದ ಆತ್ಮನ ಅಮರತ್ವದ ಬಗೆಗೆ ಎರಡು ಸಿದ್ಧಾಂತಗಳು ದಾರ್ಶನಿಕರಲ್ಲಿ ಪ್ರಚಲಿತವಿರುವವು; ಒಂದು ಸಗುಣ ಅಮರತ್ವ (Personal Immortality) ಇನ್ನೊಂದು ನಿರ್ಗುಣ ಅಮರತ್ವ (Impersonal Immortality) ಮೊದಲನೆಯ ಸಿದ್ಧಾಂತದ ಮೇರೆಗೆ ಮುಕ್ತಿಯನ್ನು ಪಡೆದ ಆತ್ಮನು ತಾನು ಜೀವಿಸುವಾಗ ಯಾವ ದೇವತೆಯನ್ನು ಭಕ್ತಿಭಾವದಿಂದ ಭಜಿಸುವನೋ. ಆ ದೇವತೆಯ ಲೋಕದಲ್ಲಿ ದೇವತೆಯ ಸನ್ನಿಧಿಯಲ್ಲಿ ಆನಂದದಿಂದ ವಾಸಿಸುವನು, ಎಂಬುದು ಒಂದು ಮತ. ಮತ್ತೂ ಅವನು ಆ ದೇವತೆಯ ರೂಪ ತಳೆಯುವನು ಎಂಬುದು ಇನ್ನೊಂದು ಮತ. ಇವೆರಡು ಸಲೋಕತಾ, ಸಮೀಪತಾ, ಸರೂಪತಾ ಮುಕ್ತಿಗಳ ಪ್ರತೀಕಗಳು. ಅದ್ವೈತ-ಸಿದ್ಧಾಂತವು, ಮುಕ್ತಿಯನ್ನು ಪಡೆದ ಆತ್ಮನು ಪರಮಾತ್ಮನಲ್ಲಿ ಪೂರ್ತಿಯಾಗಿ ಬೆರೆತು, ಪರಮಾತ್ಮನೊಡನೆ ಐಕ್ಯವನ್ನು ಹೊಂದುವನು, ಎಂದು ಅರುಹುವದು. ಇದು ಸಾಯುಜ್ಯ ಮುಕ್ತಿಯನ್ನು ಹೋಲುವದು. ಈ ಉಭಯ ಸಿದ್ಧಾಂತಗಳನ್ನು ಉಪನಿಷತ್ತುಗಳಲ್ಲಿ ಕಾಣಬಹುದು ಎಂದು ಗುರುದೇವರು ಅರುಹಿರುವರು.

ಪ್ರಸ್ಥಾನತ್ರಯ-ಸಂಬಂಧ-ಸಮಾನಾಂಶಗಳು :

ಈ ವರೆಗೆ ದರ್ಶನದ ಪ್ರಧಾನಾಂಗಗಳ ಹಾಗೂ ಅವುಗಳ ಉಪಾಂಗಗಳ ಸಮನ್ವಯವನ್ನು ವಿವರಿಸಿದ್ದಾಯಿತು. ಇನ್ನು **ಪ್ರಸ್ಥಾನತ್ರಯಕ್ಕೆ** ಗುರುದೇವರು ಬರೆದ ಭಾಷ್ಯಗಳಲ್ಲಿ ಅರುಹಲಾದ ಈ ಮೂರು ಉದ್ಗ್ರಂಥಗಳ ಪರಸ್ಪರ ಸಂಬಂಧವನ್ನು ಅವುಗಳಲ್ಲಿಯ ಸಮಾನಾಂಶಗಳನ್ನು ಕಾಣಿಸಿ ವಿರಮಿಸುವೆ.

"ಪ್ರಸ್ಥಾನ" ವೆಂದರೆ ಪ್ರಧಾನ ಗ್ರಂಥ -ಶ್ರೇಷ್ಠತಮ ಉದ್ಗ್ರಂಥ. ನಮ್ಮ ಸನಾತನ ಆರ್ಯಧರ್ಮಗಳಲ್ಲಿ ಉಪನಿಷತ್ತುಗಳು, ಭಗವದ್ಗೀತೆ, ಹಾಗೂ ಬ್ರಹ್ಮಸೂತ್ರಗಳು-ಈ ಮೂರು ಗ್ರಂಥಗಳಿಗೆ ತುಂಬ ಗೌರವ ಸಲ್ಲಿಸಲಾಗಿದೆ. ಅವುಗಳಲ್ಲಿಯ ಸನಾತನ ಸಿದ್ಧಾಂತಗಳು ಎಲ್ಲ ವಿದ್ವಾಂಸರ ಮನ್ನಣೆಯನ್ನು ಪಡೆದಿರುವವು. ನಮ್ಮ ನಾಡಿನ ಹಿರಿಯ ಆಚಾರ್ಯರು ಅವುಗಳಿಗೆ ಭಾಷ್ಯಗಳನ್ನು ಬರೆದು, ತಾವು ಪ್ರತಿಪಾದಿಸಲಿರುವ ಸಿದ್ಧಾಂತಗಳಿಗೆ ಅವುಗಳ ಬೆಂಬಲವನ್ನು ಪಡೆಯಲು ಯತ್ನಿಸಿರುವರು. ಶ್ರೀ ಗುರುದೇವರು ಈ ಮೂರು ಗ್ರಂಥಗಳಿಗೆ ಆಂಗ್ಲ ಭಾಷೆಯಲ್ಲಿ "ಉಪನಿಷದ್ರಹಸ್ಯ", "ಗೀತೆಯ ಸಾಕ್ಷಾತ್ಕಾರ-ದರ್ಶನ" ಮತ್ತು "ಭಾರತೀಯ ದರ್ಶನದ ಮುಕಟಮಣಿ-ವೇದಾಂತ" ಎಂಬ ಭಾಷ್ಯಗಳನ್ನು ಬರೆದಿರುವರು. ಆದರೆ ಅವರ ಭಾಷ್ಯಗಳ ರೀತಿಯು ಪ್ರಾಚೀನ ಆಚಾರ್ಯರ ಭಾಷ್ಯಗಳಿಗಿಂತ ತೀರ ಭಿನ್ನವಾಗಿರುವದು. ಆಚಾರ್ಯರದು ಸಾಂಪ್ರದಾಯಿಕ ದೃಷ್ಟಿ, ಪದ-ಪದಾರ್ಥ ವಿಶ್ಲೇಷಣಾತ್ಮಕ ವಿವರಣ. ಗುರುದೇವರದು ಹಿಂದೆ ಕಾಣಿಸಿದಂತೆ ಐತಿಹಾಸಿಕ, ತುಲನಾತ್ಮಕ-ವಿಮರ್ಶಾತ್ಮಕ-ಹಾಗೂ ವೈಜಾನಿಕ ದೃಷ್ಟಿ ಅವರದು ಸಮೂಲ (Genetic), ರಚನಾತ್ಮಕ (constructive) ವಿವರಣ. ಮೇಲ್ಕಾಣಿಸಿದ ನಾಲ್ಕು ದೃಷ್ಟಿಯಿಂದ ತಾವು ಮೂಲ ಗ್ರಂಥಗಳಲ್ಲಿ ಸ್ವತಂತ್ರವಾಗಿ ಕಂಡುಹಿಡಿದ ಸಿದ್ಧಾಂತಗಳನ್ನು ಅವರು ಪಾಶ್ಚಾತ್ಯ ವಿದ್ಯಾವಿಭೂಷಿತರ ವೈಜ್ಞಾನಿಕ ಬುದ್ಧಿಗೆ ಸರಿಯಾಗಿ ಮನದಟ್ಟಾಗುವಂತೆ, ರಚನಾತ್ಮಕ

ಪದ್ಧತಿಯಂತೆ ವಿವರಿಸಿರುವರು. ಆದುದರಿಂದ ಅವೆಲ್ಲ ಆಧುನಿಕ ವಿದ್ವಾಂಸರ ಮೆಚ್ಚುಗೆಯನ್ನು ಪಡೆದಿರುವವು.

ಗುರುದೇವರು ತಮ್ಮ ಈ ಭಾಷ್ಯಗಳಲ್ಲಿ ಕಾಣಿಸಿದ ಪ್ರಸ್ಥಾನ ತ್ರಯದ (ಮೂರು ಉದ್ಗ್ರಂಥಗಳ) ಪರಸ್ಪರ ಸಂಬಂಧವನ್ನೂ, ಅವರ ಭಾಷ್ಯಗಳಲ್ಲಿಯ ಸಾಮ್ಯವನ್ನೂ, ಸಮಾನ ಅಂಶಗಳನ್ನು ಕಿರಿದರಲ್ಲಿ ವಿವರಿಸಬಯಸುವೆ.

ಪರಸ್ಪರ ಸಂಬಂಧ :

ಉಪನಿಷತ್ತುಗಳ ಕಲ್ಪವೃಕ್ಷಕ್ಕೆ ವಿವಿಧ ಶಾಖೆಗಳು ಇರುವವು. ಗೀತೆಯು ಅದರ ಹೂವಾದರೆ, ಬ್ರಹ್ಮಸೂತ್ರಗಳು ಅದರ ಹಣ್ಣು ಇಷ್ಟು ನಿಕಟ ಸಂಬಂಧ ಅವುಗಳಲ್ಲಿ

1) ಉಪನಿಷತ್ತು-ಗೀತೆ :

ಇವುಗಳ ನಿಕಟ ಸಂಬಂಧವನ್ನು ಕೆಳಗಿನ ಸಂಸ್ಕೃತ ಶ್ಲೋಕದಲ್ಲಿ ಚೆನ್ನಾಗಿ ಕಾಣಬಹುದು.

ಸರ್ವೋಪನಿಷದೋ ಗಾವೋ । ದೋಗ್ಧಾ ಗೋಪಾಲನಂದನ: ।
ಪಾರ್ಥೋ ವತ್ಸ: ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥

ಇದರಲ್ಲಿ ಗೀತಾಮೃತವು ಉಪನಿಷತ್-ಗೋವಿನ ಹಾಲು ಎಂದು ಬಣ್ಣಿಸಲಾಗಿದೆ. ಅದು ತುಂಬ ಯಥಾರ್ಥವಾದುದು. ಗೀತೆಯಲ್ಲಿ ಉಪನಿಷತ್ತುಗಳಲ್ಲಿಯ ಪ್ರಧಾನ ಸಿದ್ಧಾಂತಗಳ ಸಾರವೇ ಬಂದಿರುವದು. ಇಷ್ಟೇ ಅಲ್ಲ, ಅದು ಉಪನಿಷತ್ತುಗಳಲ್ಲಿಯ ಸತ್ಯಸಿದ್ಧಾಂತಗಳನ್ನು ಸರಿಯಾಗಿ ಸಮನ್ವಯಗೊಳಿಸಿ, ನಿಜವಾದ ಸಾಕ್ಷಾತ್ಕಾರ-ಧರ್ಮದ ತಳಹದಿಯನ್ನೇ ಹಾಕಿರುವದೆಂದು ಗುರುದೇವರು ಅರುಹಿರುವರು.

"When about two thousand four hundred years ago, the author of the 'Bhagavadgita' tried for the first time, to synthesise the truths of Upanishadic Philosophy in that immortal Celestial Poem. it was evidently with the desire of giving a new impulse to religious thought and thus laying the foundation of a truly mystical religion which should prove the guiding light of all mystical activities for ages to come."[30]

"ಎರಡು ಸಾವಿರದ ನಾಲ್ಕು ನೂರು ವರ್ಷಗಳ ಪೂರ್ವದಲ್ಲಿ, ಭಗವದ್ಗೀತೆಯ ಕರ್ತೃವಾದ ಶ್ರೀಕೃಷ್ಣನು ತನ್ನ ದಿವ್ಯ ಅಮರ ಕಾವ್ಯದಲ್ಲಿ ಉಪನಿಷತ್ತಿನಲ್ಲಿಯ ಸತ್‌ತತ್ವಗಳನ್ನು ಎಲ್ಲಕ್ಕೂ ಮೊದಲು ಸಮನ್ವಯಿಸಲು ಯತ್ನಿಸಿದ. ಅದರ ಉದ್ದೇಶವು ಧಾರ್ಮಿಕ ವಿಚಾರದಲ್ಲಿ ನವ ಚೈತನ್ಯವನ್ನುಂಟುಮಾಡಿ, ನಿಜವಾದ ಸಾಕ್ಷಾತ್ಕಾರ ಧರ್ಮದ ತಳಹದಿಯನ್ನೇ

30) C.S.P. 1

ನಿರ್ಮಿಸುವದು ಇರುವದು. ಅದು ಬರಲಿರುವ ಯುಗ ಯುಗಾಂತರಗಳಲ್ಲಿಯ ಪಾರಮಾರ್ಥಿಕ ಚಟುವಟಿಕೆಗಳಿಗೆ ಮಾರ್ಗದರ್ಶಕವಾದ ಪ್ರದೀಪವಾಗಬಲ್ಲದು."

ಗೀತೆಯು ಉಪನಿಷತ್ತುಗಳಿಂದ ಕೆಲ ಪದ-ಪದ್ಯಗಳನ್ನು ಪಡೆದಿದೆ. ಆದರೆ, ಅದು ತನ್ನ ಕೆಲ ಸ್ವತಂತ್ರ ಕೊಡುಗೆಯಿಂದ ಉಪನಿಷತ್ತುಗಳ ಸಿದ್ಧಾಂತಗಳಿಗೆ ಪೂರ್ಣತೆಯನ್ನೂ ವೈಭವವನ್ನೂ ನೀಡಿದೆ. ಅವುಗಳಲ್ಲಿಯ ಒಂದೆರಡನ್ನು ಗುರುದೇವರ ಶಬ್ದಗಳಲ್ಲಿಯೇ ಅರುಹಲಿರುವೆ.

ಈಶೋಪನಿಷತ್ತು ವಿರೋಧಾಭಾಸದ ರೀತಿಯಲ್ಲಿ ಈ ಬಗೆಯಾಗಿ ಹೇಳಿರುವದು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾ: ।
ಏವಂ ತ್ವಯಿ ನಾನ್ಯಥೇತೋಸ್ತಿನ ಕರ್ಮ ಲಿಪ್ಯತೇ ನರೇ ॥2॥

"ಇಲ್ಲಿ ಕರ್ಮಗಳನ್ನು ಮಾಡಿಯೇ ನೂರು ವರುಷ ಬಾಳು, ಹೀಗೆ ಮಾಡಿದರೇನೇ ಕರ್ಮಲೋಪವಾಗಲರಿಯದು." ಈ ವಚನದ ತಳಹದಿಯ ಮೇಲೆ ಗೀತೆಯು ತನ್ನ ಕರ್ಮಯೋಗದ ಸಿದ್ಧಾಂತವನ್ನು ಕಟ್ಟಿರುವದು. ಈ ವಚನವು ನೈತಿಕ ಜೀವನದ ಸಾಧನ-ಸಾಧ್ಯಗಳನ್ನು ಹೇಳಿರುವದಾದರೂ. ಅವುಗಳ ನಡುವಿನ ಸಂಯೋಗದ ಭಾಗವನ್ನು ಅರುಹಿಲ್ಲ..... ಗೀತೆಯು ಅನಾಸಕ್ತಿಯಿಂದ ಹಾಗೂ ಫಲಾಸಕ್ತಿಯನ್ನು ತೊರೆದು ಕರ್ಮಮಾಡಿ, ನೈಷ್ಕರ್ಮ್ಯಸಿದ್ಧಿಯನ್ನು ಪಡೆಯಬೇಕು, ಎಂದು ತನ್ನ ಸಿದ್ಧಾಂತವನ್ನು ಸಾರಿ ಈಶದಲ್ಲಿಯ ಸಿದ್ಧಾಂತವನ್ನು ಪೂರ್ಣಗೊಳಿಸಿರುವದು."[31] ಎರಡನೆಯ ಉದಾಹರಣೆ-

"The devotional impulse which beats in the heart of Narad when he implores Sanatkumara to initiate him into spiritual wisdom..... becomes the foundation stone for the theistic- mystic philosophy of the Bhagavadgita in which the dry intellectualism and speculative construction of the Upanishads disappear and we have the rare combination of poetry and philosophy, which makes the 'Upasana' or 'Bhakti' of the Svetasvatara, the **sine quo non** of a truly mystic life, whose end is the realisation of God."[32]

"ನಾರದನು ಸನತ್ಕುಮಾರನನ್ನು, ತನಗೆ ಆಧ್ಯಾತ್ಮವಿದ್ಯೆಯನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದಾಗ, ಆತನ ಅಂತರಂಗದಲ್ಲಿ ಉದಿಸಿದ ಭಕ್ತಿಭಾವವು ಮುಂದೆ ಗೀತೆಯಲ್ಲಿಯ ಪರಮಾತ್ಮ ಸಾಕ್ಷಾತ್ಕಾರದ ದರ್ಶನಕ್ಕೆ ತಳಹದಿಯಾಗಿ ಪರಿಣಮಿಸಿತು. ಅದರಲ್ಲಿ ಉಪನಿಷತ್ತಿನಲ್ಲಿಯ ಶುಷ್ಕ ಬುದ್ಧಿವಾದವು ಅಳಿದು, ಕಾವ್ಯ-ದರ್ಶನಗಳ ಅಪೂರ್ವ ಮಧುರ ಮಿಲನವನ್ನು ಕಾಣಬಹುದು. ಅದರ ಫಲವಾಗಿ ಶ್ವೇತಾಶ್ವತರದಲ್ಲಿಯ 'ಉಪಾಸನೆ' ಇಲ್ಲವೆ 'ಭಕ್ತಿಯು' ನಿಜ ಪಾರಮಾರ್ಥಿಕ ಜೀವನದ ಪ್ರಧಾನ ಕುರುಹೂ, ಪರಮಾತ್ಮನ

31) C.S.PP 143-144 32) C.S.PP 144-145

ಸಾಕ್ಷಾತ್ಕಾರ ರೂಪಿಯಾದ ಜೀವನದ ಅಂತಿಮವನ್ನು ಪಡೆಯುವ ಸಾಧನವೂ ಆಗಿ ಪರಿಣಮಿಸುವದು.

(2) ಉಪನಿಷತ್ತು-ಬ್ರಹ್ಮಸೂತ್ರಗಳು :

ಗೀತೆಯು ಉಪನಿಷತ್ತುಗಳ ಕ್ಷೀರವಾದರೆ, ಬ್ರಹ್ಮಸೂತ್ರಗಳು ಅದನ್ನು ಕಡೆದು ತೆಗೆದ "ನವನೀತ" . ಅವು ಉಪನಿಷತ್ತುಗಳ ವಚನಗಳನ್ನು ತುಂಬ ಬಳಸಿರುವವು. ಇಷ್ಟೇ ಅಲ್ಲ,

"All the aphorisms are so much rooted in the texts of the Upanishads, that it would be impossible either to under-stand or to interprete the Brahmasutras without perpetual reference to the texts of the Upanishads"[33]

"ಎಲ್ಲ ಸೂತ್ರಗಳು ಉಪನಿಷತ್ತುಗಳ ವಚನಗಳನ್ನು ಪೂರ್ತಿಯಾಗಿ ಒಳಗೊಂಡಿರುವದರಿಂದ, ಅವುಗಳ ಅರ್ಥವನ್ನು ಅರಿಯುವದಕ್ಕಾಗಲಿ, ವಿವರಿಸುವದಕ್ಕಾಗಲಿ, ಆಯಾ ವಚನಗಳನ್ನು ಮೇಲಿಂದ ಮೇಲೆ ಕಾಣದೆ ಗತ್ಯಂತರವಿರುವದಿಲ್ಲ!"

ಬ್ರಹ್ಮ ಸೂತ್ರಗಳ ಕರ್ತೃ ಆದ ಬಾದರಾಯಣರನ್ನು ಕುರಿತು, ಹಾಗೂ ಅವರ ಸಮನ್ವಯ ದರ್ಶನವನ್ನು ಕುರಿತು, ಗುರುದೇವರು ಈ ರೀತಿ ಬರೆದಿರುವರು :

"Badarayana is a reconciler, a synoptic philosopher, not a mere eclectic. His is mystical philosophy..... The clue to the interpretation of his philosophy lies in his method of reconciliation. He had a synoptic mind and gave every possible doctrine a place in his encompassing mind . He teaches a system in which none has been negated and each has a place..... Hence it is futile to argue that he was a partisan..... Badarayana also went beyond the Upanishads to some extent e.g. **"Vichitravada."** [34]

"ಬಾದರಾಯಣರು ಸಮನ್ವಯಾಚಾರ್ಯರು. ಸಾರ ಸಂಗ್ರಾಹಕ ದಾರ್ಶನಿಕರು, ಬರಿ ಸಂಗ್ರಾಹಕರಲ್ಲ. ಅವರದು ಸಾಕ್ಷಾತ್ಕಾರ ದರ್ಶನ. ಅವರ ದರ್ಶನವನ್ನು ಅರಿಯಲು, ಅರುಹಲು ಅವರ ಸಮನ್ವಯ ಪದ್ಧತಿಯೇ ಸುಳಿವು..... ಅವರದು ಸಂಗ್ರಾಹಕ ಬುದ್ಧಿ. ತಮ್ಮ ಸರ್ವವ್ಯಾಪಕ ಬುದ್ಧಿಯಲ್ಲಿ ಅವರು ಪ್ರತಿಯೊಂದು ಸಿದ್ಧಾಂತಕ್ಕೆ ಒಂದು ಸ್ಥಳವನ್ನು ಕೊಟ್ಟಿರುವರು. ಅವರು ಕಲಿಸುವ ಪದ್ಧತಿಯಲ್ಲಿ ಯಾವದನ್ನೂ ನಿರಾಕರಿಸಲಾಗಿಲ್ಲ. ಪ್ರತಿಯೊಂದಕ್ಕೂ ಸ್ಥಳ ಕೊಡಲಾಗಿದೆ..... ಆದುದರಿಂದ ಅವರು ಪಕ್ಷಕಟ್ಟಿದವರು ಎಂದು ವಾದಿಸುವದು ನಿರರ್ಥಕ..... ಅವರು ಕೆಲಮಟ್ಟಿಗೆ ಉಪನಿಷತ್ತುಗಳನ್ನೂ ಮೀರಿಸುವರು. ಉ : **ವಿಚಿತ್ರವಾದ.**"

33) C.S.P. 149 34) V.C.T.P. 220 - 221

ಸಾಮ್ಯದರ್ಶನ :

ಇನ್ನು ಈ ಮೂರು ಭಾಷ್ಯಗಳಲ್ಲಿಯ ಸಮಾನಾಂಶಗಳನ್ನು ಅರಿಯುವಾ. ಇವುಗಳಲ್ಲಿ ಎರಡು ಬಗೆಯ ಸಾಮ್ಯಗಳು ಒಳಗೊಂಡಿವೆ. (ಅ) ಉದ್ದೇಶ ಸಾಮ್ಯ. ಹಾಗೂ (ಆ) ವಿಷಯಸಾಮ್ಯ.

(ಅ) ಉದ್ದೇಶಸಾಮ್ಯ : ಈ ಮೂರೂ ಗ್ರಂಥಗಳನ್ನು ಬರೆಯುವ ಗುರುದೇವರ ಉದ್ದೇಶವು ಒಂದೇ ಆಗಿರುವದು.

1) ಪರಮಾತ್ಮನ ಸಾಕ್ಷಾತ್ಕಾರವೇ ಮಾನವನ ಪರಮಾದರ್ಶ ಎಂಬುದನ್ನು ಕಾಣಿಸುವದು.

2) ಸಾಕ್ಷಾತ್ಕಾರ ದರ್ಶನವು (Mysticism) ಬುದ್ಧಿಗಮ್ಯವಿರುವದು ಎಂಬುದನ್ನು ಕಾಣಿಸುವದು.

3) ಭಾರತೀಯ ದರ್ಶನವನ್ನು ಪಾಶ್ಚಾತ್ಯರ ಉಡುಪಿನಲ್ಲಿ ವಿವರಿಸುವದು. ಅದರ ವೈಭವವನ್ನು ಪ್ರಪಂಚಕ್ಕೆ ತಿಳಿಸುವದು.

(ಆ) ವಿಷಯಸಾಮ್ಯ : ಈ ಪ್ರಸ್ಥಾನತ್ರಯದಲ್ಲಿಯ ಪ್ರಧಾನ ವಿಷಯಗಳಲ್ಲಿಯೂ ಗುರುದೇವರು ಸಮಾನ ಅಂಶಗಳನ್ನು ಕಾಣಿಸಿರುವರು. ಅವುಗಳ ಸಾಧ್ಯ-ಸಾಧನಗಳಲ್ಲಿಯ ಸಾಮ್ಯವನ್ನು ಅವರು ಚೆನ್ನಾಗಿ ಅರುಹಿರುವರು.

1) ಸಾಧ್ಯ-ಆತ್ಮದರ್ಶನ-ಆತ್ಮಾನಂದ :

ಅ) ಉಪನಿಷತ್ತು :

i) **ಆತ್ಮಾವಾ ಅರೇ ದ್ರಷ್ಟವ್ಯ:** ಆತ್ಮನನ್ನು ಕಾಣಬೇಕು.

ii) **ಅಯಮಾತ್ಮಾ ಬ್ರಹ್ಮ।** ಈ ಆತ್ಮನೇ ಬ್ರಹ್ಮ.(ಬೃ. iv 4-12)

iii) **ಏಷ ಸಂಪ್ರಸಾದೋ ಅಸ್ಮಾತ್ ಶರೀರಾತ್ ಸಮುತ್ಥಾಯ**
ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣ
ಅಭಿನಿಷ್ಪದ್ಯತೇ, ಇತ್ಯೇಷ ಆತ್ಮೇತಿ ಉವಾಚ।
ಏತತ್ ಅಮೃತಂ ಅಭಯಂ ಏತತ್ ಬ್ರಹ್ಮೇತಿ ॥ (ಮೈ ॥,1-3)

"ಅನುಭಾವಿಯು ಕೊನೆಯ ಮೆಟ್ಟಿಲು ಮುಟ್ಟಿದನೆಂದರೆ, ಅವನ ಶರೀರದೊಳಗಿಂದಲೇ ದಿವ್ಯ ಬೆಳಕಿನ ಹೊಳೆಯು ಹೊರಟು, ಆ ಬೆಳಕಿನಲ್ಲಿ ಅವನು ತನ್ನ ಸ್ವರೂಪವನ್ನು ಕಾಣುವನು. ಅದೇ ಆತ್ಮನು; ಅದೇ ಭಯರಹಿತ ಅಮೃತಮಯ ಬ್ರಹ್ಮ."

iv) **ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ ।** (ತೈ.॥-7)

"ಬ್ರಹ್ಮನ ಆನಂದವನ್ನು ಅನುಭವಿಸಿದವನು ಎಂದೂ ಅಂಜುವದಿಲ್ಲ."

v) **ಆತ್ಮರತಿ: ಆತ್ಮಕ್ರೀಡ : ಆತ್ಮಾನಂದ: ಸ್ವರಾಡ್ ಭವತಿ ॥** (ಛಾಂ VII, 25-2)

"ಯೋಗಿಯು ಆತ್ಮನಲ್ಲಿ ನಲಿಯುವನು, ಆತ್ಮನೊಡನೆ ಆಡುವನು, ಆತ್ಮಾನಂದದಲ್ಲಿ ತಲ್ಲೀನನಾಗುವನು, ಮತ್ತು ಅವನು ಸ್ವರಾಜ್ಯವನ್ನು ಪಡೆಯುವನು."

(ಆ) ಗೀತೆ :

i) **ಯತ್ರ ಚೈವ ಆತ್ಮನಾತ್ಮಾನಂ ಪಶ್ಯನ್ ಆತ್ಮನಿ ತುಷ್ಯತಿ ॥** (6-20)

ಆತ್ಮನಿಂದ ಆತ್ಮನನ್ನು ಕಂಡು, ಆತ್ಮನಲ್ಲಿ ಆನಂದಿತನಾಗುತ್ತಾನೆ.

ii) ಯೋಂತ:ಸುಖ: ಅಂತರಾಮ: ತಥಾಂತರ್ಜ್ಯೋತಿ ರೇವ ಯ: ।

ಸ ಯೋಗೀ ಬ್ರಹ್ಮ ನಿರ್ವಾಣಂ ಬ್ರಹ್ಮಭೂತೋಧಿಗಚ್ಛತಿ ॥ (5-28)

"ಯಾವನು ತನ್ನ ಅಂತರಂಗದಲ್ಲಿ ಜ್ಯೋತಿಯನ್ನು ಸುಖ-ಆನಂದಗಳನ್ನು ಪಡೆಯುವನೋ ಅಂಥ ಯೋಗಿಯು ಬ್ರಹ್ಮನಲ್ಲಿ ಬೆರೆತು ಬ್ರಹ್ಮಾನಂದದಲ್ಲಿ ಮುಳುಗುವನು."

(ಇ) ಬ್ರಹ್ಮಸೂತ್ರ :

i) **ಸಂಪದ್ಯಾವಿರ್ಭಾವ: ಸ್ವೇನ ಶಬ್ದಾತ್ ॥** (IV, 4-1)

ಮೇಲೆ ಕಾಣಿಸಿದ **"ಏಷ ಸಂಪ್ರಸಾದ:"** ಎಂಬ ಉಪನಿಷತ್ತಿನ ಮಂತ್ರದ ಸಾರವನ್ನೆ ಈ ಸೂತ್ರ ಒಳಗೊಂಡಿದೆ.

ii) ಆನಂದಮಯೋಭ್ಯಾಸಾತ್ ॥ (1-1-12)

ಈ ಸೂತ್ರದಲ್ಲಿ ಸಾಧಕನು ಸಾಕ್ಷಾತ್ಕಾರದಿಂದ ಪಡೆಯುವ ಆನಂದವು ಬಣ್ಣಿಸಲಾಗಿದೆ.

"It is what a mystic enjoys in his ecstatic state, when he sees nothing but God-God above, God below, God to the right and to the left." [35]

2) ಸಾಧನ : ಸದ್ಗುಣ ಸಂಪಾದನ ಧ್ಯಾನೋಪಾಸನ-ಸಮಾನ.

(ಅ) ಉಪನಿಷತ್ತು :

(i) **ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ - ದೇವಯಾನ: ।**

ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಂ ನಿಧಾನಮಂ ॥ (ಮುಂಡ-3-1-6)

"ಸತ್ಯವೇ ಜಗತ್ತಿನಲ್ಲಿ ಗೆಲ್ಲುತ್ತಿದೆ, ಅಸತ್ಯವಲ್ಲ ಸತ್ಯದಿಂದಲೇ ದೇವನೆಡೆಗೆ ಸಾರುವ ದಾರಿಯು ನಿರ್ಮಾಣವಾಗುತ್ತಿದೆ. ಆ ದಾರಿಯಿಂದ ಸಾಗಿ ಋಷಿಗಳು ತಮ್ಮ ಎಲ್ಲ

35)V.C.T. PP - 189

ಬಯಕೆಗಳನ್ನು ಪಡೆದರು. ಮತ್ತು ಸತ್ಯದ ಪರಮ ನಿಧಾನವಾದ ಶ್ರೇಷ್ಠಪದವಿಯನ್ನು ಸೇರಿದರು.

(ii) ತ್ರಯಂ ಶಿಕ್ಷೇತ್-ದಮಂ ದಾನಂ ದಯಾಮಿತಿ ॥ (ಬೃಹ -2-3)

"ಆತ್ಮಸಂಯಮ, ದಾನ, ಮತ್ತು ದಯೆ ಈ ಮೂರು ಸದ್ಗುಣಗಳನ್ನು ಕಲಿಯಿರಿ."

(iii) ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥ (ಮುಂಡ 2-2-4)

"ಪ್ರಣವ ರೂಪಿಯಾದ ಬಿಲ್ಲಿನ ಮೇಲೆ ಆತ್ಮರೂಪಿಯಾದ ಬಾಣವನ್ನಿರಿಸಿ, ಬ್ರಹ್ಮರೂಪಿಯಾದ ಗುರಿಯೆಡೆ ಅದನ್ನು ಎಸೆದರೆ, ಬಾಣವು ಗುರಿಯಲ್ಲಿ ಸೇರುವಂತೆ ಆತ್ಮನು ಬ್ರಹ್ಮನಲ್ಲಿ ಬೆರೆಯಬಹುದು."

ಆ) ಗೀತೆ :

(i) ದೈವೀಸಂಪತ್ತಿ: ದಾನ, ದಮ, ಯಜ್ಞ, ತಪ, ಸತ್ಯ, ಅಹಿಂಸಾ.

(ii) ಪಾವನ ಕರ್ಮ : ಯಜ್ಞ, ದಾನ, ತಪ.

ತಪಸ್ಸಿನಿಂದ ಆತ್ಮಕಲ್ಯಾಣ, ದಾನದಿಂದ ಸಮಾಜಕಲ್ಯಾಣ, ಯಜ್ಞದಿಂದ ವಿಶ್ವಕಲ್ಯಾಣ.

(iii)ಓಂ ಇತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥
(8-13)

"ಓಂ ಎಂಬ ಒಂದಕ್ಷರ ಮಂತ್ರವನ್ನು ಉಚ್ಚರಿಸುತ್ತ ನನ್ನನ್ನು ಸ್ಮರಿಸುತ್ತ ಯಾವನು ದೇಹತ್ಯಾಗ ಮಾಡುವನೋ ಅವನು ಪರಮ ಶ್ರೇಷ್ಠ ಗತಿಯನ್ನು ಪಡೆವನು."

(iv) ಅನನ್ಯೇನ ಏವ ಯೋಗಿನ ಮಾಂ ಧ್ಯಾಯಂತ ಉಪಾಸತೇ (12-6)

ಅನನ್ಯ ಭಾವದಿಂದ ನನ್ನ ಧ್ಯಾನವನ್ನು ಮಾಡುವನು

ಇ) ಬ್ರಹ್ಮಸೂತ್ರ :

i) ಬಾದರಾಯಣರು **ಶ್ರದ್ಧೆ, ತಪ** ಮತ್ತು **ಮೌನ** ಎಂಬ ಸದ್ಗುಣಗಳನ್ನು ಪಡೆಯಲು ಬೋಧಿಸಿರುವರು. **"ಶ್ರದ್ಧೆ"** ಎಂದರೆ, ಸತ್ಪುರುಷರ ವಚನದಲ್ಲಿ ನಂಬಿಕೆ. **ತಪವು** ಮೂರು ವಿಧ : ಬ್ರಹ್ಮಚರ್ಯವು **ಕಾಯಿಕ**; ಸತ್ಯ-ಪ್ರಿಯ **ವಾಚಿಕ**; ಪ್ರಸನ್ನತೆ **ಮಾನಸಿಕ. ಮೌನವು**, ಮುನೇ; ಭಾವ: ಶಾಂತಿ.

II) ಆತ್ಮ-ಧ್ಯಾನ :

"Meditation upon self as Self, ಆತ್ಮ-ಧ್ಯಾನ. It is only those who can successfully practise this unitive meditation that will be finally liberated."

"This is the secret of meditation." [36]

"ನಾನು ಆತ್ಮನು" ಎಂಬ ಭಾವನೆಯ ಧ್ಯಾನವೇ **ಆತ್ಮ-ಧ್ಯಾನ**. ಇಂಥ ಆತ್ಮೈಕ್ಯದ ಧ್ಯಾನವನ್ನು ಮಾಡಬಲ್ಲರೇ ಕೊನೆಗೆ ಮುಕ್ತಿಯನ್ನು ಪಡೆವರು. ಇದೇ ಧ್ಯಾನದ ರಹಸ್ಯ-ತಿರುಳು. ಇದೇ ಶ್ರೀಬಾದರಾಯಣರ **ಅಹಂಗ್ರಹೋಪಾಸನೆ.**

ಸಂತರ ಪರಮಾರ್ಥ ಪಥ :

ಪ್ರಸ್ಥಾನತ್ರಯವನ್ನು ಕುರಿತು ಮೂರು ಗ್ರಂಥಗಳನ್ನು ಬರೆದಂತೆ. ಸಂತರ ಪರಮಾರ್ಥ ಪಥವನ್ನು ಕುರಿತು ಶ್ರೀಗುರುದೇವರು ಮೂರು ಗ್ರಂಥಗಳನ್ನು ಬರೆದಿರುವರು. ಅವುಗಳನ್ನು **ಸಂತರ ಪ್ರಸ್ಥಾನ-ತ್ರಯ"** ಎಂದು ಕರೆಯಬಹುದು. **"ಮರಾಠೀ ಸಂತರ ಪರಮಾರ್ಥ-ಪಥ"-"ಕನ್ನಡ ಸಂತರ ಪರಮಾರ್ಥ ಪಥ"** ಹಾಗೂ **"ಹಿಂದೀ ಸಂತರ ಪರಮಾರ್ಥ-ಪಥ"** ಇವೇ ಆ ಮೂರು ಗ್ರಂಥಗಳು. ಅವುಗಳಲ್ಲಿ ಅವರು ಆಯಾ ಸಂತರ ಪರಮಾರ್ಥ-ಪಥವು ಒಂದೇ ಬಗೆಯದಿರುವದನ್ನು ಕಾಣಿಸಿರುವರು. ಅದೇ ಮೇರೆಗೆ ಆಯಾ ಸಂತರನ್ನು ಪಾಶ್ಚಾತ್ಯ ಸಂತರೊಡನೆ ಸರಿ ಹೋಲಿಸಿ, ಅವರ ಪರಮಾರ್ಥ ಪಥದೊಡನೆ ಇರುವ ಅವರ ಸಾಮ್ಯವನ್ನು ವಿವರಿಸಿರುವರು.

ಈ ಸಂತರ ಪರಮಾರ್ಥ-ಪಥದಲ್ಲಿ ಕೆಳಗೆ ಕಾಣಿಸಿದ ಐದು ಮೆಟ್ಟಿಲುಗಳನ್ನು ಗುರುದೇವರು ಕಲ್ಪಿಸಿರುವರು.

1) ಪರಮಾರ್ಥ-ಪ್ರೇರಣೆಗಳು, 2) ನೈತಿಕ ಸಿದ್ಧತೆಯ ಅವಶ್ಯಕತೆ, 3) ದೇವ-ಸಂತರ ಸಂಬಂಧ, 4) ಯಾತ್ರೆಯ ಆರಂಭ, 5) ಉನ್ನತತಮ ನೆಲೆ.

ಇವುಗಳಲ್ಲಿಯ ಮೊದಲನೆಯ ಮೆಟ್ಟಿಲು ಪರಮಾರ್ಥದೆಡೆ ಪ್ರೇರಿಸುವ ಕಾರಣಗಳನ್ನು ಅರುಹಿ, ಸಾಧಕನಲ್ಲಿ ಮೂಲ್ಯ ಪರಿವರ್ತನವನ್ನು ಮಾಡಿ, ಆತನ **ಭಾವನಾತ್ಮಕ ಸಿದ್ಧತೆಯನ್ನು** ನೆರವೇರಿಸುವದು. ಎರಡನೆಯದು ಆತನಿಗೆ ದುರ್ಗುಣಗಳನ್ನು ಅಳಿಸಿ, ಸದ್ಗುಣಗಳನ್ನು ಬೆಳೆಸಲು ಕಲಿಸಿ, ಆತನ **ನೈತಿಕ ಸಿದ್ಧತೆಯನ್ನು** ಮಾಡುವದು.ಮೂರನೆಯದು ಭಗವಂತನ ವೈಭವವನ್ನೂ, ಸಂತರು ಅನನ್ಯ ಭಕ್ತಿಯಿಂದ

36) V.C.T. PP 166

ಪಡೆದ ಶಾಂತಿ, ಆನಂದಗಳನ್ನು ಬಣ್ಣಿಸಿ, ಆತನಲ್ಲಿ ಆ ಬಗೆಯ ಆದರ್ಶ-ಪ್ರೀತಿಯನ್ನು ಹುಟ್ಟಿಸಿ, ಸಾಧಕನ **ಭೌದ್ಧಿಕ ಸಿದ್ಧತೆ**ಯನ್ನು ಮಾಡುವದು. ನಾಲ್ಕನೆಯದು ಪ್ರತ್ಯಕ್ಷ ಯಾತ್ರೆಯನ್ನು ಬಣ್ಣಿಸುವದು, ಸದ್ಗುರುಗಳಿಂದ ಪಡೆದ ದಿವ್ಯನಾಮವನ್ನು ಭಕ್ತಿಭಾವದಿಂದ ಸ್ಮರಿಸಿ, ತನ್ನ ಪ್ರತಿಭಾವಿಕಸನವನ್ನು ಮಾಡಿಕೊಳ್ಳಲು ಸಾಧಕನನ್ನು ಬೋಧಿಸುವದು. ಕೊನೆಯದು **ಸಾಕ್ಷಾತ್ಕಾರದ ಉನ್ನತ ಸ್ವರೂಪವನ್ನೂ** ಅದರಿಂದ ದೊರೆತ ಆನಂದ-ಶಾಂತಿಗಳನ್ನೂ ಬಣ್ಣಿಸುವದು. ಈ ಮೆಟ್ಟಿಲುಗಳು ಪಾರಮಾರ್ಥಿಕ ಸಾಧನದ ಐದಂಗಗಳನ್ನು ಚಿತ್ರಿಸುವವು. ಇವು ಪರಸ್ಪರ ಪೋಷಕವಾದವುಗಳು. ಇವೆಲ್ಲ ಬೆಳೆಯುತ್ತ ಸಾಗಿ, ಪರಮಾತ್ಮನಲ್ಲಿ ಬೆರೆತು ಪೂರ್ಣತೆಯನ್ನು ಪಡೆಯುವವು, ಸಮನ್ವಯಗೊಳಿಸುವವು. ಇವುಗಳ ಪರಸ್ಪರ ಸಂಬಂಧಗಳನ್ನು ಗುರುದೇವರು ಮುಂದಿನಂತೆ ಬಣ್ಣಿಸಿರುವರು.

"If we make a comparative study of the philosophies and religions of the world and especially of the lives and teaching of those, who in the various stages of humanity, and in different ages and lands, have walked on the path of God, we shall see that there are certain broad characterisics common to the pathway, which they have all trodden in the attainment of God. These might for convenience sake, be summarised under five heads. First, there are certain incentives which prompt men to spiritual life- philosophical, axiological and physiological. Then, there is the question of moral and spiritual preparation which they must tackle before they can hope to advance on the pathway. Thirdly, they have to keep before themselves certain exemplars of conduct and attainment, which they must necessarily follow. This they cannot do unless they have defined to themselves, both theoretically and practically, the nature and function of God in relation to the exemplars above mentioned. When the relationship between the exemplars and God has been defined, they have to tread the path themselves, before they can be convinced about the reality of the experiences of those who have gone before them. Finally, after

having walked on the pathway for a long time, and through travails and turmoils of body and mind, of nature and society, they can envisage to themselves certain landmarks, certain lamp-posts, which will help them to walk with courage and confidence on the pathway to God, and attain to the highest ideal they have been seeking."[37]

"ನಾವು ಜಗತ್ತಿನಲ್ಲಿಯ ಧರ್ಮ-ದರ್ಶನಗಳ ತುಲನಾತ್ಮಕ ಅಭ್ಯಾಸ ಮಾಡಿದರೆ, ವಿಶೇಷವಾಗಿ ಬೇರೆ ಬೇರೆ ದೇಶಕಾಲಗಳ ಹಾಗೂ ಬೇರೆ ಬೇರೆ ಅವಸ್ಥೆಯಲ್ಲಿಯ ಪರಮಾರ್ಥ ಪಥದಲ್ಲಿ ಮುಂದುವರೆದಿರುವ ಮಹಾತ್ಮರ ಜೀವನವನ್ನು, ಬೋಧೆಯನ್ನು ಅಭ್ಯಸಿಸಿದರೆ, ಅವರು ಭಗವಂತನನ್ನು ಪಡೆಯುವ ಪಥದಲ್ಲಿ ಕೆಲ ಸಮಾನವಾದ ಲಕ್ಷಣಗಳನ್ನು ನಾವು ಕಾಣಬಹುದು. ಇವನ್ನು ಅನುಕೂಲತೆಗಾಗಿ ಐದು ವರ್ಗಗಳಲ್ಲಿ ಸಂಗ್ರಹಿಸಬಹುದು. ಮೊದಲನೆಯದಾಗಿ, ಜನರಲ್ಲಿ ಪಾರಮಾರ್ಥಿಕ ಜೀವನದ ಬಗೆಗೆ ಆಸಕ್ತಿಯನ್ನು ಹುಟ್ಟಿಸುವ ಕೆಲ ದಾರ್ಶನಿಕ, ಮೂಲ್ಯಾತ್ಮಕ ಹಾಗೂ ಶಾರೀರಿಕ ಪ್ರೇರಣೆಗಳಿರುವವು. ತರುವಾಯ ಈ ಪಥದಲ್ಲಿ ಪ್ರಗತರಾಗುವ ಪೂರ್ವದಲ್ಲಿ, ಅವರು ನೈತಿಕ, ಹಾಗೂ ಪಾರಮಾರ್ಥಿಕ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುವದು. ಮೂರನೆಯದಾಗಿ, ಅವರು ತಮ್ಮೆದುರು ಕೆಲ ಉನ್ನತ ಆಚಾರ ಅನುಭವಗಳುಳ್ಳ ಆದರ್ಶ ವ್ಯಕ್ತಿಗಳನ್ನು ಇರಿಸಿಕೊಳ್ಳಬೇಕು. ಅವರನ್ನವರು ಅನುಕರಿಸಬೇಕು. ಇಂಥ ಆದರ್ಶ ವ್ಯಕ್ತಿಗಳು-ಸಂತರು-ಹಾಗೂ ಭಗವಂತ ಇವರ ನಡುವಿನ ಸಂಬಂಧದ ಸ್ವರೂಪ-ಕಾರ್ಯವನ್ನು ತಾತ್ವಿಕವಾಗಿ ಹಾಗೂ ವ್ಯಾವಹಾರಿಕವಾಗಿ ಅರಿಯದೆ, ಅವರು ಅವರನ್ನು ಚೆನ್ನಾಗಿ ಅನುಕರಿಸಲರಿಯರು. ಈ ಬಗೆಯ ದೇವ-ಸಂತರ ಸಂಬಂಧವನ್ನು ಸರಿಯಾಗಿ ಅರಿತ ತರುವಾಯ, ಅವರು ಪ್ರತ್ಯಕ್ಷ ಆ ಪಂಥದಿಂದ ನಡೆಯಲು ಪ್ರಾರಂಭಿಸಬೇಕು. ಅಂದರೇನೇ ಅವರಿಗೆ ಆ ದಾರಿಯಿಂದ ಮುಂದುವರೆದ ಸಂತರ ಅನುಭವದ ಸತ್ಯತೆಯ ಬಗೆಗೆ ಮನವರಿಕೆಯಾಗಬಲ್ಲದು. ಕೊನೆಯದಾಗಿ, ಆ ಪಂಥದಿಂದ ಬಹುಕಾಲ ನಡೆದ ತರುವಾಯ ಶಾರೀರಿಕ, ಮಾನಸಿಕ, ನೈಸರ್ಗಿಕ ಹಾಗೂ ಸಾಮಾಜಿಕ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿ, ಅವರು ಕೆಲ ಹೆಗ್ಗುರುತುಗಳನ್ನು, ಕೆಲ ದೀಪಸ್ತಂಭಗಳನ್ನು ಕಾಣಬಲ್ಲರು, ಗುರುತಿಸಬಲ್ಲರು. ಅವುಗಳ ನೆರವಿನಿಂದ ಪರಮಾರ್ಥ-ಪಥದಿಂದ. ಧೈರ್ಯದಿಂದಲೂ, ಆತ್ಮವಿಶ್ವಾಸದಿಂದಲೂ ಅವರು ಮುಂದುವರೆಯಬಲ್ಲರು. ಹಾಗೂ ತಾವು ಅರಸುತ್ತಿರುವ ಪರತಮ ಆದರ್ಶವನ್ನು ಪಡೆಯಬಲ್ಲರು."

37) P.G.H. PP 1-2

ಈ ಬಗೆಯಾಗಿ ಪರಮಾರ್ಥದ ಸಮಾನತೆಯನ್ನು ಕಾಣಿಸಿರುವದಲ್ಲದೆ, ಗುರುದೇವರು ಭಾರತೀಯ ಸಂತರಲ್ಲಿ ಮರಾಠೀ ಸಂತರಲ್ಲಿ ಹಾಗೂ ಕ್ರಿಸ್ತ ಸಂತರಲ್ಲಿಯ ಸಾಮ್ಯವನ್ನು ಕಾಣಿಸಿರುವರು. ಅವರೆಲ್ಲ "ಆತ್ಮದರ್ಶನ", "ಆತ್ಮ -ಪರಮಾತ್ಮರಲ್ಲಿಯ ತಾದಾತ್ಮ್ಯ", "ಆದರ್ಶ ಸಂತರ ಕುರುಹು", "ನಾಮದ ಮಹಿಮೆ" ಇತ್ಯಾದಿ ಮಹತ್ವದ ವಿಷಯಗಳ ಬಗೆಗೆ ಒಂದೇ ರೀತಿಯ ಅಭಿಪ್ರಾಯ ತಳೆದಿರುವದನ್ನು ಸರಿಯಾಗಿ ಕಾಣಿಸಿರುವರು. ಈ ಸಾಮ್ಯವು ಅವರ ಸಮಾನವಾದ ಅನುಭಾವದ ಪರಿಣಾಮವೇ ಸರಿ ಎಂದು ಅರುಹಿರುವರು" [38] ಮತ್ತು ಹಿಕೆಕ್ಲೇಟೀಸನ ಮುಂದಿನ ವಚನಗಳನ್ನು ಉದಹರಿಸಿರುವರು.

"Those that are wakeful have one common world; those that are sleeping, each a different world." [39]

"ಜಾಗ್ರತ ಜನರಿಗೆ ಒಂದೇ ಸಮಾನ ಜಗತ್ತಿರುವದು. ಮಲಗಿದ ಪ್ರತಿಯೊಬ್ಬನಿಗೆ ಬೇರೆ ಪ್ರತ್ಯೇಕ ಜಗತ್ತಿರುವದು."

38) M. M. P. 2 39) M. M. P. 6

ಓಂ

ಪ್ರಕರಣ ಮೂರು

ಆದರ್ಶ ಸಮನ್ವಯ

ವಿಷಯ ಪ್ರವೇಶ :

ಇಂದಿನ ವಿಷಯ **"ಆದರ್ಶ ಸಮನ್ವಯ"** ಅಂದರೆ ಆದರ್ಶಗಳ ಹೊಂದಿಕೆ. ನಮ್ಮ **ಪರಮಾದರ್ಶವು-ಪರಮಾತ್ಮನ ಸಾಕ್ಷಾತ್ಕಾರವು** ಒಂದೇ ಇದ್ದರೂ, ಇರಬೇಕಾಗಿದ್ದರೂ, ನಮ್ಮ ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ನಮ್ಮ ನಮ್ಮ ಪ್ರಕೃತಿಯ ಭಿನ್ನತೆಯ ಮೂಲಕ, ರುಚಿ ಭಿನ್ನತೆಯ ಮೂಲಕ, ಬಗೆಬಗೆಯ ಆದರ್ಶಗಳು ನಮ್ಮನ್ನು ಆಕರ್ಷಿಸುವವು. ಅವುಗಳನ್ನು ಹೇಗೆ ಸಮನ್ವಯಗೊಳಿಸಬೇಕು. ? ಶ್ರೀಗುರುದೇವರು ಅದನ್ನು ಹೇಗೆ ಮಾಡಿರುವರು ? ಮಾಡಲು ಹೇಳಿರುವರು ? ಎಂಬುದನ್ನು ಕಿರಿದರಲ್ಲಿ ಅರುಹಲು ಯತ್ನಿಸುವೆ. ತತ್ಪೂರ್ವದಲ್ಲಿ ಜೀವನದಲ್ಲಿ ಆದರ್ಶದ ಅಪೂರ್ವ ಹಿರಿಮೆಯನ್ನೂ, ನಮ್ಮ ಹಿಂದಿನ ಹಿರಿಯರ ಸನಾತನ ಆದರ್ಶಗಳನ್ನೂ, ಇಂದಿನವರ ಆಧುನಿಕ ಆದರ್ಶಗಳನ್ನೂ ಅರುಹಲಿರುವೆ, ಅವುಗಳ ಪರಿಚಯವು ಕೆಳಗಿನ ವಿಷಯದ ಮೇಲೆ ಚೆನ್ನಾಗಿ ಬೆಳಕನ್ನು ಬೀರಬಲ್ಲದು.

ಆದರ್ಶಗಳ ಹಿರಿಮೆ :

It is the ideals that really rule the world. ಆದರ್ಶಗಳೇ ನಿಜವಾಗಿ ಜಗತ್ತನ್ನು ಆಳುತ್ತಿವೆ. ಅವುಗಳ ಪ್ರಭಾವವು ನಮ್ಮ ಇಡೀ ಜೀವನದ ಮೇಲೆ ಅಪಾರವಾದುದು. ವ್ಯಕ್ತಿ ಜೀವನವಿರಲಿ, ಸಮಾಜ ಜೀವನವಿರಲಿ. ರಾಷ್ಟ್ರೀಯ ಜೀವನವಿರಲಿ, ಇಲ್ಲವೆ ವಿಶ್ವಜೀವನವಿರಲಿ, ಎಲ್ಲೆಲ್ಲಿಯೂ ಆಯಾದೇಶಗಳಲ್ಲಿ ಪ್ರಭಾವಯುತ ಆದರ್ಶಗಳೇ ಮಹಾನಪುರುಷರ ಮುಖಾಂತರ ಜನಾಂಗಗಳ ಜೀವನವನ್ನು ರೂಪಿಸಿ, ಅದಕ್ಕೆ ಒಂದು ಸಮರೂಪವನ್ನು ನೀಡುತ್ತವೆ. ಇದಕ್ಕೆ ಇತಿಹಾಸವು ಸಾಕ್ಷಿ. ಶ್ರೀಗುರುದೇವರು ಅರುಹಿರುವುದೇನೆಂದರೆ :

"As we look at history, we see that all politics is determined by the prevailing philosophy of a nation. It was **Rousses, Voltaire** and **Diderot** who paved the way for the French Revolution. It was **Hegel** and **Nitzsche** who paved the way. for the great World War of 1914. It is the new philosophy of ever-evolving Absolute which is responsible for modern Fascism, whose ambition is never-ending. As against these theories, we have a theory of politics based upon the principles of non-violence and truth resuscitated by **Mahatma Gandhi** from our ancient lore..... It is to be remembered, however, that our politics cannot succeed without a spiritual basis." [1]

"ನಾವು ಇತಿಹಾಸವನ್ನು ಕಂಡರೆ, ಒಂದು ರಾಷ್ಟ್ರದ ರಾಜನೀತಿಯು ಅಲ್ಲಿಯ ಅಂದಿನ ದರ್ಶನದ ಪ್ರಭಾವಕ್ಕೆ ಒಳಗಾಗಿರುವದು ಎಂಬುದನ್ನು ನಾವು ಅರಿಯಬಹುದು. ಫ್ರಾನ್ಸ ದೇಶದಲ್ಲಿಯ ಹಿರಿಯ ಕ್ರಾಂತಿಯನ್ನು **ರೂಸೋ, ವಾಲ್ಟೇರ** ಮತ್ತು **ಡಿಡೆರೋ** ಇವರ ದರ್ಶನದ ಪ್ರಚಾರವೇ ಬರಮಾಡಿತು. **ಹೆಗೆಲ್** ಹಾಗೂ **ನೀಟ್ಶೇ** ಅವರ ದರ್ಶನ ಪ್ರಭಾವವು 1914 ರ ಮಹಾಯುದ್ಧಕ್ಕೆ ಕಾರಣವಾಯಿತು. ಸತತವಾಗಿ ಬೆಳೆಯಲಿರುವ "ಪರವಸ್ತು"(Absolute)ವಿನ ನೂತನ ದರ್ಶನವೇ ಆಧುನಿಕ Fascism ಎಂಬ ಒಂದು ಬಗೆಯ ಸರ್ವಾಧಿಕಾರದ ಉದಯಕ್ಕೆ ಹೌಗೂ ಬೆಳವಣಿಗೆಗೆ ಹೊಣೆಯಾಗಿರುವುದು, ಪ್ರೇರಣೆಯಾಗಿರುವುದು. ಅದರ ಮಹತ್ವಾಕಾಂಕ್ಷೆಗೆ ಕೊನೆಯೇ ಇರುವದಿಲ್ಲ. ಈ ತತ್ವಗಳ ಪ್ರತಿಯಾಗಿ ನಮ್ಮ ನಾಡಿನಲ್ಲಿ ಅಹಿಂಸೆ, ಸತ್ಯ ಇವುಗಳನ್ನು ಆಧರಿಸಿದ ರಾಜನೈತಿಕ ಸಿದ್ಧಾಂತವು ಬಳಸಲಾಗಿರುವದು. ಇವನ್ನು **ಮಹಾತ್ಮಾ ಗಾಂಧಿ**ಯವರು ನಮ್ಮ ಪ್ರಾಚೀನ ಜ್ಞಾನ ಭಾಂಡಾರದಿಂದ ಪುನರುಜ್ಜೀವನ ಗೊಳಿಸಿರುವರು.....ಆದರೆ ನಮ್ಮ ರಾಜನೀತಿಯು ಪಾರಮಾರ್ಥಿಕ ಅಧಿಷ್ಠಾನವಿಲ್ಲದೆ ಯಶಸ್ಸನ್ನು ಪಡೆಯಲರಿಯದು ಎಂಬುದನ್ನು ಮರೆಯಕೂಡದು." **ಸ್ವಾಮಿ ವಿವೇಕಾನಂದರೂ** ಸಹ ಇದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

"The powerful men in every country are moving society whatever way they like, and the rest are only a flock of sheep. Now, who are these men of power in India ? They, who are giants in religion. It is they who lead our society, and it is they who change our social laws and usages when necessity so demands, and we listen to them silently and do what they command." [2]

"ಪ್ರತಿಯೊಂದು ದೇಶದಲ್ಲಿಯ ಪ್ರಭಾವಯುತ ಜನರು ತಮ್ಮ ಅಭಿಮತದ ಮೇರೆಗೆ

1) P.E.P. 119 2) Prabuddha Bharat Nov. 1947.

ಸಮಾಜವನ್ನು ಪರಿವರ್ತಿಸುವರು. ಮತ್ತು ಜನ ಸಾಮಾನ್ಯರು ಕೇವಲ ಕುರಿಗಳ ಹಿಂಡಿನಂತೆ ಅವರನ್ನು ಅನುಸರಿಸುವರು. ಇನ್ನು ನಮ್ಮ ಭಾರತದಲ್ಲಿ ಅಂಥ ಪ್ರಭಾವಯುತ ಸಮರ್ಥರು ಯಾರಿರುವರು ? ಅವರು ಪಾರಮಾರ್ಥಿಕ ಮಹಾತ್ಮರು. ಅವರೇ ನಮ್ಮ ಸಮಾಜಕ್ಕೆ ಮಾರ್ಗದರ್ಶಕರು. ಅವರೇ ನಮ್ಮ ಸಾಮಾಜಿಕ ವಿಧಿಗಳನ್ನು, ನಿಯಮಗಳನ್ನು ಬದಲಿಸಬಲ್ಲರು. ಮತ್ತು ನಾವು ಸುಮ್ಮನೆ ಅವರ ಬೋಧೆಯನ್ನು ಕೇಳಿ ಅವರ ಆಜ್ಞೆಯನ್ನು ಪಾಲಿಸುವೆವು."

ಇಂಥ ಆದರ್ಶ ಮಹಾತ್ಮರ ದಿವ್ಯ ಜೀವನದ ಪ್ರತ್ಯಕ್ಷದರ್ಶನವೇ ಅತ್ಯಂತ ಪರಿಣಾಮಕಾರಿಯಾದುದು. ಅವರಿಂದಲೇ ಜನತೆಯಲ್ಲಿ ಉನ್ನತ ಆದರ್ಶಗಳ ಬಗೆಗೆ ಪ್ರೀತಿ, ಆದರಗಳು ಜನಿಸುವವು. ಅವರಿಂದಲೇ ನಮ್ಮ ಕೀಳು ಬಾಳನ್ನು ತೊರೆದು ಮೇಲು ಜೀವನವನ್ನು ಬಾಳುವ ಸ್ಫೂರ್ತಿಯು ಜನರಲ್ಲಿ ಮೈದಾಳುವದು. **"ಯದ್ಯದಾಚರತಿ ಶ್ರೇಷ್ಠ : ತತ್ತ್ದೇವ ಇತರೇ ಜನಾ: ।"** ಎಂದು ಗೀತೆಯು ಸಾರುವದು. ಹಿರಿಯರ ನಡತೆ ಕಿರಿಯರಿಗೆ ಮೇಲ್ಪಂಕ್ತಿ: ಇಂಥ ಆದರ್ಶ ಮಹನೀಯರ-ಮಹಿಳೆಯರ ಬಳಗ ಬೆಳೆದಂತೆ, ಸಮಾಜದ, ರಾಷ್ಟ್ರದ ಐಹಿಕ, ಹಾಗೂ ಪಾರಮಾರ್ಥಿಕ ಮಟ್ಟವು ಏರುವದು. ಅದು ಕಡಿಮೆಯಾದಂತೆ ಇದೂ ಇಳಿಯುವದು. ಅವರ ಸಂಖ್ಯೆಯು ಬೆಳೆದಾಗ ಉನ್ನತಿ, ಇಳಿದಾಗ ಅವನತಿ. "Habitual vision of greatness alone is the way to cultural growth." "ಹಿರಿಮೆಯ ಸಂತರ ದರ್ಶನವು ಸಾಂಸ್ಕೃತಿಕ ಬೆಳವಣಿಗೆಯ ಏಕಮೇವ ಸಾಧನ." ಆದರೆ ಅದು ದೊರೆಯದಾಗ, ಹಿಂದಿನ ಹಿರಿಯರ ಆದರ್ಶ ಜೀವನ, ಹಾಗೂ ಜೀವನಾದರ್ಶಗಳ ಪರೋಕ್ಷದರ್ಶನವಾದರೂ ಸತತ ಲಭಿಸುತ್ತಿರಬೇಕು. ಅಂದರೇನೇ ಜನತೆಯ ತೂಕ ತಪ್ಪುವದಿಲ್ಲ. ಅವರೆದುರಿನ ಆದರ್ಶಗಳಲ್ಲಿ -ಉನ್ನತ ಜೀವನ ಮೌಲ್ಯಗಳಲ್ಲಿ-ಸಲ್ಲದ ಬದಲು ಆಗುವದಿಲ್ಲ.

ನಮ್ಮ ಆದರ್ಶವೇ ನಮ್ಮನ್ನು-ನಮ್ಮ ಯೋಗ್ಯತೆಯನ್ನು ಅಳೆಯುವ ಅಳತೆಗೋಲು. ನಮ್ಮ ಅಂತರಂಗದ ಸ್ವರೂಪವು ನಮ್ಮ ಆದರ್ಶದ ನಿರ್ಮಿತಿ. ನಮ್ಮ ಆದರ್ಶದಂತೆ ನಮ್ಮ ಮತಿ, ಅದರಂತೆಯೇ ನಮ್ಮ ಕೃತಿ. ಅದಕ್ಕಾಗಿ ಮಾನವನ ಉನ್ನತಿಯಾಗಬೇಕಾದರೆ ಅವನೆದುರು ಅತ್ಯುಚ್ಚ ಆದರ್ಶಗಳು ಸದೈವ ನಲಿದಾಡಬೇಕು. ಅವು ಅವನ ಮನಸ್ಸನ್ನು ಯಾವಾಗಲೂ ಸೆಳೆಯಬೇಕು. ಅಂದರೇನೇ, ಕೀಳು ಕಲ್ಪನೆಗಳು ಅದರೊಳಗಿಂದ ಅಳಿದು, ಮೇಲು ಭಾವನೆಗಳು ಅಲ್ಲಿ ಸ್ಥಿರವಾಗಿ ನೆಲೆಗೊಳ್ಳಬಹುದು. ಇಂಥ ಉನ್ನತ ವಾತಾವರಣವು ಅವನ ಜೀವನವನ್ನು ಉನ್ನತಗೊಳಿಸದಿರದು.

ಇನ್ನು ಈ ಪ್ರಪಂಚದಲ್ಲಿ ಅತ್ಯುನ್ನತವಾದ ಆದರ್ಶವಾವುದು ? ಯಾವುದನ್ನು ಪಡೆಯುವದರಿಂದ ಎಲ್ಲವನ್ನು ಪಡೆದಂತಾಗುವುದು ? ಭಾರತದಲ್ಲಿಯ ನಮ್ಮ ಹಿರಿಯ ಮಹಾತ್ಮರೆಲ್ಲರೂ ಅದಾವ ಆದರ್ಶವನ್ನು ಜನರೆದುರು ಇರಿಸಿರುವರು ? ಎಂಬುದರ ಪರಿಚಯವು ನಮಗೆ ಸರಿಯಾದ ದಾರಿ-ದೀಪವಾಗಬಲ್ಲದು. ಆದುದರಿಂದ ನಮ್ಮ ಸನಾತನ ಆದರ್ಶಗಳ ಸ್ವರೂಪ ಸಮನ್ವಯಗಳನ್ನು ಕುರಿತು ಶ್ರೀಗುರುದೇವರ ಹೇಳಿಕೆಯನ್ನು ಕಿರಿದರಲ್ಲಿ ವಿವರಿಸಲಾಗಿದೆ.

ನಮ್ಮ ಸನಾತನ ಆದರ್ಶಗಳು :

ಶ್ರೀಗುರುದೇವರು **"ಉಪನಿಷತ್ ರಹಸ್ಯ"** ಎಂಬ ಗ್ರಂಥದಲ್ಲಿ ಬೇರೆ ಬೇರೆ ಆದರ್ಶಗಳನ್ನು ವಿವರಿಸಿರುವರು. ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಅರುಹಬಯಸುವೆ.

(i) **ದ್ವಿವಿಧ ಪುರುಷಾರ್ಥ :**

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತ-।
ಸ್ತೌ ಸಂಪರೀತ್ಯ ವಿವಿನಕ್ತಿ ಧೀರ: ॥
ಶ್ರೇಯೋ ಹಿ ಧೀರೋ ಭಿಪ್ರೇಯಸೋ ವೃಣೀತೇ ।
ಪ್ರೇಯೋ ಮಂದೋ ಯೋಗಕ್ಷೇಮಾತ್ ವೃ ಣೀತೇ ॥

॥ಕಠೋ 1-2-2 ॥

"ಶ್ರೇಯಸ್ಸು ಮತ್ತು ಪ್ರೇಯಸ್ಸು ಮಾನವನನ್ನು ಸಮೀಪಿಸುತ್ತವೆ. ಧೀಮಂತನು ಅವನ್ನು ಚೆನ್ನಾಗಿ ಪರೀಕ್ಷಿಸಿ ವಿವೇಚಿಸುತ್ತಾನೆ. ಮತ್ತು ಅವನು ಪ್ರೇಯಸ್ಸಿಗಿಂತ ಶ್ರೇಯಸ್ಸನ್ನೆ ಆರಿಸಿಕೊಳ್ಳುತ್ತಾನೆ. ಅವಿವೇಕಿಯು ತನ್ನ ಯೋಗ ಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ."

ಇಲ್ಲಿ **ಶ್ರೇಯಸ್** ಅಂದರೆ ಪರಮಾರ್ಥ-ಆತ್ಮಾನಂದ ಹಾಗೂ **ಪ್ರೇಯಸ್** ಅಂದರೆ ಪ್ರಪಂಚ-ವಿಷಯ ಸುಖ. ಈ ಎರಡು ಆದರ್ಶಗಳಲ್ಲಿ ತಾರತಮ್ಯವಿರುವದು. ಪ್ರೇಯಸ್ಸಿಗಿಂತ ಶ್ರೇಯಸ್ಸು-ಹಿರಿಯದು ಎಂಬುದನ್ನು ಧೀರನಾದ ವಿವೇಕಿಯು ಅರಿವನು. ಆದರೆ ಮಂದಮತಿಗೆ ಅದು ತಿಳಿಯದು. ಅವನು ಪ್ರೇಯಸ್ಸನ್ನೇ ಪಡೆಯಲೆಳಿಸುವನು. ಅದಕ್ಕೆ ಕಾರಣವಿಲ್ಲದಿಲ್ಲ. ಸಾಮಾನ್ಯ ಮಾನವನಿಗೆ ಪ್ರಾಪಂಚಿಕ ಸುಖವೇ ಪರಿಚಿತವಾದುದು. ಅದನ್ನೇ ಅವನು ಅರಿವನು-ಪ್ರೀತಿಸುವನು. ಅದು ಅವನ ಸಹಜ ಸ್ವಭಾವ. ಅದಕ್ಕೂ ಉನ್ನತವಾದ ಆದರ್ಶವನ್ನು ಅರಿಯುವ ಸಾಮರ್ಥ್ಯವು ಅವನಲ್ಲಿ ಇರುವದಿಲ್ಲ. ಅದು ಕೆಲ ಅಸಾಮಾನ್ಯ ವ್ಯಕ್ತಿಗಳಲ್ಲಿಮಾತ್ರ ನೆಲೆಸಿರುವದು. ಯಾಕೆಂದರೆ, ಭಗವಂತನೇ ಆ ಬಗೆಯ ಯೋಜನೆಯನ್ನು ಮಾಡಿರುವನು. **"ಕಠೋಪನಿಷತ್"** ಅರುಹಿದ ಮೇರೆಗೆ :

ಪರಾಂಚಿ ಖಾನಿ ವ್ಯತೃಣತ್ಸ್ವಯಂಭೂಸ್ತಸ್ಮಾತ್ಪರಾಙ್ ಪಶ್ಯತಿ
ನಾಂತರಾತ್ಮನ್ ।
ಕಶ್ಚಿದ್ಧೀರ: ಪ್ರತ್ಯಗಾತ್ಮಾನ ಮೈಕ್ಷದಾವೃತ್ತ ಚಕ್ಷುರಮೃತತ್ವ -
ಮಿಚ್ಛನ್ ॥ಕಠೋ. 2-4-1॥

"ಪರಮಾತ್ಮನು ಇಂದ್ರಿಯಗಳನ್ನು ಬಹಿರ್ಮುಖ ಮಾಡಿರುತ್ತಾನೆ. ಆದುದರಿಂದ ಮಾನವನು ಹೊರಗಡೆ ನೋಡುತ್ತಾನೆ. ಅಂತರಾತ್ಮನನ್ನು ನೋಡುವದಿಲ್ಲ. ಯಾವನೋ ಒಬ್ಬ ವಿವೇಕಿಯು ಅಮೃತತ್ವವನ್ನು ಬಯಸಿ, ಕಂಗಳನ್ನು ಒಳಗೆ ತಿರುಗಿಸಿ ಅಂತರಾತ್ಮನನ್ನು ಆದುದರಿಂದಲೇ ಜನಸಾಮಾನ್ಯರು ಪ್ರಪಂಚವನ್ನು ವಿಷಯಗಳನ್ನು ಚಿಂತಿಸುತ್ತಾರೆ".

ಈ ಪುರುಷಾರ್ಥಗಳು ಎರಡು ವಿಧ ಇರುವಂತೆ ಇವುಗಳನ್ನು ಪಡೆಯುವ

ಸಾಧನಗಳೂ ದ್ವಿವಿಧ ಇರುವವು. ಅವುಗಳನ್ನು **ವಿದ್ಯೆ, ಅವಿದ್ಯೆ** ಎಂದು ಕರೆಯ ಲಾಗಿರುವದು. "**ಈಶ**" ವುಪನಿಷದ ಮೇರೆಗೆ,

ವಿದ್ಯಾಂಚಾವಿದ್ಯಾಂಚ ಯಸ್ತದ್ವೇದೋಭಯಂ ಸಹ।
ಅವಿದ್ಯಯಾಮೃತ್ಯುಂ ತೀರ್ತ್ವಾವಿದ್ಯಯಾಮೃತ ಮಶ್ನುತೇ ॥ 11 ॥

"ಯಾವನು ವಿದ್ಯೆ ಮತ್ತು ಅವಿದ್ಯೆಗಳನ್ನು ಒಟ್ಟುಗೂಡಿಸಿ, ಆತ್ಮ ತತ್ವವನ್ನು ಅರಿಯುತ್ತಾನೋ, ಅವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾನೆ." ವಿದ್ಯೆಯು ಆತ್ಮವಿದ್ಯೆಯು, ಅವಿದ್ಯೆಯು ಅನಾತ್ಮವಿದ್ಯೆಯು. ಒಂದು ಆತ್ಮಜ್ಞಾನ. ಇನ್ನೊಂದು ವಿಶ್ವಜ್ಞಾನ-ವಿಜ್ಞಾನ-ಭೌತಿಕ ಜ್ಞಾನ. ಭೌತಿಕ ಜ್ಞಾನದಿಂದ ಪ್ರಾಪಂಚಿಕ ಸುಖವನ್ನು ಪಡೆದು, ಆತ್ಮಜ್ಞಾನದಿಂದ ಪಾರಮಾರ್ಥಿಕ-ಆನಂದವನ್ನು ಉಪಭೋಗಿಸಬೇಕೆಂಬುದು ಮೇಲಿನ ಮಂತ್ರದ ಸಾರಾಂಶ. ವಿದ್ಯೆಯಲ್ಲಿ ಭಕ್ತಿ-ಧ್ಯಾನಗಳೂ, ಅವಿದ್ಯೆಯಲ್ಲಿ ಸಂಕಲ್ಪಯತ್ನಗಳೊ ಒಳಗೊಂಡಿರುವವು. ಅವು ವಿದ್ಯೆಗೆ ಪೋಷಕವಿರಬೇಕು. ಬರಬರುತ್ತ **ಪ್ರೇಯ-ಶ್ರೇಯಗಳು ಅಭ್ಯುದಯ-ನಿ:ಶ್ರೇಯಸ್ಸು** ಗಳಾದವು. ಮತ್ತು **ವಿದ್ಯೆ-ಅವಿದ್ಯೆಗಳು, ಜ್ಞಾನ-ವಿಜ್ಞಾನಗಳಾಗಿ** ಕರೆಯಲಾದವು. ಇವುಗಳಲ್ಲಿ ಅಭ್ಯುದಯವು ನಿ:ಶ್ರೇಯಸ್ಸಕ್ಕೆ ಪೂರಕವಾಗಿಯೂ, ವಿಜ್ಞಾನವು ಆತ್ಮಜ್ಞಾನಕ್ಕೆ ಪೋಷಕವಾಗಿಯೂ ಇರುವವು-ಇರಬೇಕು ಎಂದು ಅರುಹಿ ಗುರುದೇವರು ಅವುಗಳನ್ನು ಸಮನ್ವಯಗೊಳಿಸಿರುವರು.

(ii) ಚತುರ್ವಿಧ ಪುರುಷಾರ್ಥ :

ಮುಂದೆ ಈದ್ವಿವಿಧ ಪುರುಷಾರ್ಥವು ಚತುರ್ವಿಧವಾಯಿತು. **ಪ್ರೇಯಸ್ಸು ಅರ್ಥ-ಕಾಮ**ವಾಯಿತು. **ಶ್ರೇಯಸ್ಸು ಮೋಕ್ಷ-ಸಾಕ್ಷಾತ್ಕಾರ**ವಾಯಿತು. **ವಿದ್ಯೆ ಅವಿದ್ಯೆಗಳು ಧರ್ಮದ** ಅಂಗಗಳಾಗಿ ನೀತಿ ಭಕ್ತಿಗಳಾದವು. ಈ ಬಗೆಯಾಗಿ ಧರ್ಮ, **ಅರ್ಥ, ಕಾಮ, ಮೋಕ್ಷ**ಗಳೆಂಬ ನಾಲ್ಕು ಆದರ್ಶಗಳು ಪ್ರಚಲಿತವಾದವು. ಈ ನಾಲ್ಕು ಬಗೆಯ ಪುರುಷಾರ್ಥಗಳ ಆದರ್ಶವನ್ನು ನಮ್ಮ ಹಿರಿಯರು ನಮ್ಮೆದುರು ಇರಿಸಿರುವರು.

ಇವುಗಳಲ್ಲಿ **ಅರ್ಥ ಕಾಮ**ಗಳೂ, **ಮೋಕ್ಷವೂ ಸಾಧ್ಯ**ರೂಪ, ಹಾಗೂ **ಧರ್ಮವು ಸಾಧನ**ರೂಪ ಆದರ್ಶ. ಅರ್ಥವು ಶಾರೀರಕ ಆರೋಗ್ಯ ಬಲವರ್ಧನೆಗೆ ಹಾಗೂ ಕುಟುಂಬ ಪೋಷಣೆಗೆ ಅವಶ್ಯವಾದ ಎಲ್ಲ ಒಡವೆಗಳನ್ನು ಒಳಗೊಂಡಿರುವದು. ಕಾಮವು ಕಲಾವಿಲಾಸಕ್ಕೂ ಸಂತತಿ ನಿರ್ಮಿತಿಗೂ ಅವಶ್ಯವಾದುದು. ಇವೆರಡರಲ್ಲಿಯೂ ಸುಖದ ಅಂಶವಿರುವದರಿಂದ ಪ್ರತಿಯೊಬ್ಬ ಮಾನವನಲ್ಲಿ ಅವುಗಳ ಬಗೆಗೆ ಒಂದು ರೀತಿಯ ಆಸಕ್ತಿಯು-ರುಚಿಯು ನೆಲೆಸಿರುವದು. ಅದಕ್ಕಾಗಿ ಅವನ್ನು ಪಡೆಯಲು ಹವಣಿಸುತ್ತಿಹನು. ಹೆಣಗುತಿಹನು. ಇದು ಭೌತಿಕ ಆದರ್ಶದ ಸ್ವರೂಪ. ಪಾರಮಾರ್ಥಿಕ ಆದರ್ಶವಾದ, ಮೋಕ್ಷದ ಅಂಗಗಳು ಎರಡು; ಒಂದು ಭಾವಾತ್ಮಕ, ಇನ್ನೊಂದು ಅಭಾವಾತ್ಮಕ. ಸಾಕ್ಷಾತ್ಕಾರವು ಭಾವಾತ್ಮಕ ಅಂಗ, ಹಾಗೂ ಮುಕ್ತಿಯು ಅಭಾವಾತ್ಮಕ ಅಂಗ, ಸಾಕ್ಷಾತ್ಕಾರವು ಈಶನದು,

ಭಗವಂತನದು; ಮುಕ್ತಿಯು ಬಿಡುಗಡೆಯು- ದೇಹಭಾವದಿಂದ- ಆಶಾಪಾಶದಿಂದ. ಆದರೆ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು (ಪಾರ್ಶ್ವಗಳು). ಅವು ಪರಸ್ಪರ ಪೂರಕ, ಪೋಷಕ. ಆಶೆಯನ್ನು ತೊರೆಯದೆ ಈಶನ ಸಾಕ್ಷಾತ್ಕಾರವಾಗಲರಿಯದು; ಹಾಗೂ ಈಶನ ಸಾಕ್ಷಾತ್ಕಾರವಾಗದೆ ಆಶೆ ಪೂರ್ತಿಯಾಗಿ ಅಳಿಯದು. ಇವೆರಡರ ಪರಿಣತ ಪರಿಣಾಮವೇ **ಅಖಂಡ ಆತ್ಮಾನಂದ ಪ್ರಾಪ್ತಿ, ಚಿರಶಾಂತಿಯ ಲಾಭ.**

ಈ ಆದರ್ಶಗಳನ್ನು ಪಡೆಯುವ ಸಾಧನವಾದ ಧರ್ಮದ ಅಂಗಗಳೂ ಎರಡು; ಒಂದು ನೀತಿ ಇನ್ನೊಂದು **ಭಕ್ತಿ, ಸತ್ಯ, ಪ್ರೇಮ, ಸಂಯಮ** ಇವು ನೀತಿಯ ಪ್ರಧಾನ ಅಂಗಗಳು. ಸತ್ಯವು ಔದಾರ್ಯವನ್ನು ಸಂಯಮವು ಸಾಮರ್ಥ್ಯವನ್ನು ದಯಪಾಲಿಸುವದು. ಇವನ್ನು ಪಡೆದ ನೀತಿವಂತನು ತನ್ನ ಕುಟುಂಬಕ್ಕೂ, ಸಮಾಜಕ್ಕೂ ಆದರ್ಶಭೂತನಾಗುವನು. **ಜ್ಞಾನ, ಧ್ಯಾನ, ಶರಣಗಮನ** ಇವು ಭಕ್ತಿಯ ಅಂಗಗಳು. ಇವುಗಳ ನೆರವಿನಿಂದ ಮನುಜನು ಪಾರಮಾರ್ಥಿಕ ಪರಮಾದರ್ಶವಾದ ಪೆರಮಾತ್ಮನ ಸಾಕ್ಷಾತ್ಕಾರವನ್ನೂ ಅದರ ಫಲವಾಗಿ ಪರಮಾನಂದವನ್ನು ಪಡೆವನು. ಶ್ರೀಗುರುದೇವರು ಕಾಣಿಸಿದ ರೀತಿಯಿಂದ ಇವೆಲ್ಲ ಆದರ್ಶಗಳ ಸಮನ್ವಯವನ್ನು ಕೆಳಗಿನಂತೆ ನೆರವೇರಿಸಬಹುದು. "ಸತ್ಯದಿಂದ ಸ್ಥಿತಿ, ಪ್ರೇಮದಿಂದ ಯುತಿ, ಸಂಯಮದಿಂದ ಶಕ್ತಿ; ಈ ತ್ರಿವೇಣಿ ಸಂಗಮದಲ್ಲಿ ಪ್ರಗತಿ. ಜ್ಞಾನ, ಧ್ಯಾನ, ಶರಣಗಮನದಿಂದ ಅನುಭೂತಿ; ಅನುಭೂತಿಯಿಂದಲೇ ದಿವ್ಯಾನಂದ- ದಿವ್ಯ ಜೀವನ. ವ್ಯಕ್ತಿ ಜೀವನವು ಭಕ್ತಿಪ್ರಧಾನವಿರಬೇಕು. ಅಲ್ಲಿ ಭಕ್ತಿಗೆ ನೀತಿಯ ಬೆಂಬಲವಿರಲಿ! ರಾಷ್ಟ್ರಜೀವನವು ನೀತಿ ಪ್ರಧಾನವಿರಬೇಕು. ಅಲ್ಲಿಭಕ್ತಿಗೆ ನೀತಿಗೆ ಭಕ್ತಿಯ ಬೆಂಬಲವಿರಲಿ! ವಿಶ್ವ ಜೀವನವು ಶಾಂತಿ ಪ್ರಧಾನವಿರಬೇಕು. ಅಲ್ಲಿಶಾಂತಿಗೆ ನೀತಿ ಭಕ್ತಿಗಳ ಬೆಂಬಲವಿರಲಿ! ಸಮಷ್ಟಿ ಜೀವನವು ನಿ:ಶ್ರೇಯಸ್ಸಿಗೆ ಅವಿರೋಧವಾಗಿ ಅಭ್ಯುದಯವನ್ನು ಗಳಿಸಲಿ! ಅವೆರಡನ್ನೂ ವಿಪುಲವಾಗಿ ಪಡೆದು ಇಂದಿನ ವ್ಯಕ್ತಿ ಸಮಾಜ, ರಾಷ್ಟ್ರ, ವಿಶ್ವಗಳು ನವಕಾಂತಿಯನ್ನೂ ಶಾಂತಿಯನ್ನೂ ಪಡೆಯಲಿ!" ಇದೇ ಗುರುವರರು ಕಾಣಿಸಬಹುದಾದ ಸಮನ್ವಯ ಸಂದೇಶ.

ಆಧುನಿಕ-ಆದರ್ಶಗಳು :

(ಅ) ಭೋಗಪ್ರಧಾನ (ಅವನತ):

ಇಂದು ಪಾಶ್ಚಾತ್ಯ ಭೋಗಪ್ರಧಾನ ಆದರ್ಶಗಳು ನಮ್ಮ ಜೀವನವನ್ನು ಆಕ್ರಮಿಸಿ, ನಮ್ಮ ತ್ಯಾಗ-ಯೋಗ ಪ್ರಧಾನವಾದ ಸನಾತನ ಆದರ್ಶಗಳನ್ನು ಅಲ್ಲಿಂದ ತಳ್ಳಿ ಹಾಕಿವೆ. ಅದರಿಂದ ನಮ್ಮ ನೈತಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳು ಮರೆಯಾಗಿ ಅನೈತಿಕ, ಭೌತಿಕ ಮೌಲ್ಯಗಳು ಅಲ್ಲಿ ಮರೆಯತೊಡಗಿವೆ.

"ದೇಹವೇ ಪರದೈವ ಭೋಗವೇ ಹಿರಿಭಕ್ತಿ।
ಮರಣವೇ ವರಮುಕ್ತಿ" ಎಂದು ಸಾರುವ, ಇಂದಿನ **ಅಲ್ಪಜ್ಞ.**

ಇಂದು ಭೋಗದಿಂದ ಯೋಗ. ಭೋಗವೇ ಯೋಗ ಎಂದು ಬೋಧಿಸುವ ಯೋಗಿಗಳು ಜನಜೀವನದಲ್ಲಿ ಭೋಗಯೋಗದ ವಿನಾಶಕ ವೈಭವವನ್ನು ಮೆರೆಯಿಸಲಿದ್ದಾರೆ.

Lust-Lucre and License ಹೆಣ್ಣು ಹೊನ್ನು ಸ್ವೈರಾಚಾರ- ಈ ತ್ರಿಮೂರ್ತಿಗಳು ನಮ್ಮವರ ಇಂದಿನ ಆರಾಧ್ಯ ದೇವತೆಗಳು. ಈ ಸ್ವೈರ ಜೀವನದ ವಿನಾಶಕರ ಹಾವಳಿಯನ್ನು ತಡೆಯಲು ಮಹಾತ್ಮಾಜೀ ಅವರು ಯುವಕರನ್ನು ಈ ರೀತಿ ಎಚ್ಚರಿಸುವರು.

"Literature full of the virus of self-indulgence served out in attractive forms is flooding the country from the west and there is the greatest need for our youth to be on their guard." [3]

"ಸ್ವೈರ ಭೋಗಲಾಲಸೆಯ ವಿಷದಿಂದ ಪೂರಿತವಾದ, ವಿವಿಧ ಆಕರ್ಷಕ ರೂಪಗಳನ್ನು ತಳೆದ, ಸಾಹಿತ್ಯದ ಹೊಳೆಯು ಪಾಶ್ಚಿಮಾತ್ಯ ದೇಶಗಳಿಂದ ಹರಿದು ಬಂದು, ನಮ್ಮ ದೇಶವನ್ನು ತುಂಬಿ ಬಿಡಲಿರುವದು. ಆದುದರಿಂದ ನಮ್ಮ ಯುವಕರು ಎಚ್ಚರ ವಹಿಸುವದು ಅಗತ್ಯವಾಗಿದೆ"

ಈ ಬಗೆಯಾಗಿ ಭೋಗಲಾಲಸೆಯ ಸೆಳೆತಕ್ಕೆ ಸಿಲುಕಿದ ನಮ್ಮ ಜನರು ಸ್ವೈರ ವೃತ್ತಿಯನ್ನು ಪ್ರೀತಿಸುವರು. ಸ್ವೈರಾಚಾರವನ್ನು ಪ್ರೋತ್ಸಾಹಿಸುವರು. ನಮ್ಮ ಜೀವನ ರಥಕ್ಕೆ ವಿವೇಕದ ಸಾರಥ್ಯವಿಲ್ಲ. ಸಂಯಮದ ಕಡಿವಾಣವಿಲ್ಲ. ಆದುದರಿಂದ ಅದು ಇಂದ್ರಿಯ ಅಶ್ವಗಳ ಕೈಯಲ್ಲಿ ಆಟಿಗೆ ಆಗಿದೆ. ಇಂದ್ರಿಯಗಳು ಸೆಳೆದತ್ತ ಅದು ತೆರಳಬೇಕು. ಆಯಾ ಇಂದ್ರಿಯಗಳಿಗೆ ಆಯಾ ವಿಷಯಗಳನ್ನು ನೀಡಿ, ಅವುಗಳನ್ನು ತಣಿಸುವದರಲ್ಲಿಯೇ ಅದು ಸತತವಾಗಿ ನಿರತವಾಗಿರುವದು. ನಾವೆಲ್ಲ ಆಧುನಿಕ ಚಾರ್ವಾಕರ ಅನುಯಾಯಿಗಳಾಗಿರುವೆವು. ಅವರು ಅರುಹಲಿರುವ ಮುಂದಿನ ಬೋಧೆಯೇ ನಮ್ಮ ವೇದ.

ಯಾವಜ್ಜೀವಂ ಸುಖಿಂ ಜೀವೇತ್ । ಋಣಂ ಕೃತ್ವಾ ಸುರಾಂ ಪಿಬೇತ್ ।
ಭಸ್ಮೀಭೂತಸ್ಯ ದೇಹಸ್ಯ । ಪುನರಾಗಮನಂ ಕುತ: ॥

"ಜೀವಿಸುವವರೆಗೆ ಸುಖದಿಂದ ಬಾಳಿರಿ, ಸಾಲನ್ನು ಮಾಡಿ ಸೆರೆಯನ್ನು ಸೇವಿಸಿರಿ, ದೇಹವು ಬೂದಿಯಾಯಿತೆಂದರೆ ಅದು ಮರಳುವದೆಂತು ?"

"ಅಯ್ಯಾ ಈ ಬಾಳು ಕಿರಿದು, ಯೌವನ ಬಲಗಳು ಅದಕ್ಕೂ ಕಿರಿದಾದವುಗಳು. ಆದುದರಿಂದ ಸಾವು ಮುಟ್ಟುವ ಮುನ್ನ ಸಾಧ್ಯವಿದ್ದಷ್ಟು ಹೆಚ್ಚು ಸುಖವನ್ನು ಸವಿಯಯ್ಯಾ! ಉಣ್ಣು, ತಿನ್ನು, ಕುಡಿ, ಕುಣಿ! ನಾಳಿನ ಬಾಳನ್ನು ಕಂಡವರಾರು ? ಭೃಂಗದಂತೆ ಬಾಳು, ಕೆಲಗಂಟೆಗಳ ಮೆರುಗಿನ ಇರವು. ಹೂವಿನಿಂದ ಹೂವಿಗೆ ಹಾರಾಟ; ಮಧುರಸದ ಸವಿಯೂಟ. ಹೆಣ್ಣನ್ನು ಹಿಂಬಾಲಿಸುವ ಮೋಜಿನ ಮಾಟ! ರೆಕ್ಕೆಗಳ ಕೊನೆಯ ಫಡ ಫಡ, ತರುವಾಯ ಸಾವಿನ ಅನಂತ ಶಾಂತಿ. ಸರಿ ! ಇದು ಅವರು ನಮ್ಮೆದುರಿಗಿರಿಸಿದ ಭವ್ಯ (?) ಜೀವನದ ಆದರ್ಶ. ಇದೇ ನಮ್ಮನ್ನು ಅತಿಯಾಗಿ ಆಕರ್ಷಿಸಲಿರುವ ದಿವ್ಯ ಆದರ್ಶ. ಈ ಬಗೆಯಾಗಿ ವಿಷಯಗಳನ್ನು ಎಳೆಸುವ, ಸ್ವೈರತ್ವವನ್ನು ಬೆಳೆಸುವ, ನಮ್ಮ ಜೀವನವು ಪಶು ಜೀವನವನ್ನು ಹೋಲುತ್ತಿರುವದು. ದೇವತ್ವವನ್ನು ಪಡೆಯಬೇಕಾದ ಮಾನವನು ಇಂದು ಪಶುತ್ವದಲ್ಲಿ ಪರಮಾನಂದವನ್ನು ಕಾಣುತ್ತಿರುವನು. ದೇವದಾಸನಾಗಬಲ್ಲವನು ದೇಹದಾಸನಾಗಿರುವನು.

---

3) L.I.P. 151

ಇದರ ಪರಿಣಾಮವಾಗಿಯೇ ನಮ್ಮಲ್ಲಿ ಆರಾಮ ಪ್ರೇಮವು ಪರಿಶ್ರಮದ ಬೇಸರವು ಬೆಳೆದಿದೆ. **ಸುಖಂ ಸುಖೆನೈವನ ಜಾತು ಲಭ್ಯತೇ । ದು:ಖೇನ ಸಾಧ್ವೀ ಲಭತೇ ಸುಖಾನೀ ॥** "ಸುಖವು ಸುಖದಿಂದ ಲಭಿಸುವದಿಲ್ಲ, ಅದಕ್ಕೆ ದು:ಖವನ್ನು ಅನುಭವಿಸಬೇಕಾಗುವದು." ಈ ಮಹಾ ತತ್ವವನ್ನೇ ನಾವು ಮರೆತಿರುವೆವು. ನಮಗೆ ಎಲ್ಲವೂ ಅನಾಯಾಸವಾಗಿ-ಸುಖವಾಗಿ ಲಭಿಸಬೇಕು. ಆದರೆ ಬೆಲೆಯಂತೆ ಫಲ, ಕಿರಿ ಬೆಲೆಗೆ ಕಿರಿಫಲ; ಹಿರಿ ಬೆಲೆಗೆ ಹಿರಿಫಲ, ಇದು ಸನಾತನ ನಿಯಮ. ಅದನ್ನು ನಾವು ಪೂರ್ತಿಯಾಗಿ ಮರೆತಿರುವೆವು. ಅದರಿಂದ ನಿದ್ರಾ, ಆಲಸ್ಯ, ಪ್ರಮಾದಗಳಲ್ಲಿ ಹೊರಳುವ ತಾಮಸ ಜೀವಿಗಳ ಬಳಗವೇ ಇಂದು ನಮ್ಮಲ್ಲಿ ಬೆಳೆದಿದೆ, ಬೆಳೆಯಲಿದೆ. ಇಂಥ **"ಸುಖಿಂಚ ಮೇ ಶಯನಂ ಚ ಮೇ"** ವೃತ್ತಿಯು, ನಡತೆಯು ಅದಾರನ್ನು ಉದ್ದರಿಸಬಲ್ಲದು ? **"ವಿವೇಕಭ್ರಷ್ಟಾನಾಂ ಭವತಿ ವಿನಿಪಾತ: ಶತಮುಖ: ।"** ವಿವೇಕವನ್ನೇ ಕಳೆದುಕೊಂಡವರ ಪತನವು ಸಾವಿರ ಮುಖದಿಂದ ಸಾಗದಿರದು."

ಇದಾಯಿತು ಅವನತ ಆದರ್ಶಗಳ ವಿಚಾರ. ಇಲ್ಲಿ ಸಮನ್ವಯಕ್ಕೆ ಎಡೆ ಇಲ್ಲ, ಇವನ್ನೆಲ್ಲ ನಾವು ತ್ಯಜಿಸಬೇಕು. ಇನ್ನು ಉನ್ನತ ಆದರ್ಶಗಳ ಸ್ವರೂಪವನ್ನೂ ಅವುಗಳನ್ನು ಪರತಮ ಆದರ್ಶದೊಡನೆ ಸಮನ್ವಯಗೊಳಿಸುವ ಬಗೆಯನ್ನು ಕಾಣುವಾ !

(ಆ) ತ್ಯಾಗಪ್ರಧಾನ (ಉನ್ನತ) :

ಆದರ್ಶಗಳಲ್ಲಿ ಎರಡು ಬಗೆಯ ತರಗತಿಗಳನ್ನು ಕಾಣಬಹುದು. (i) ಜೀವನ ಮೌಲ್ಯದ ತರಗತಿಗಳು. (ii) ಜೀವನಾಂಗದ ತರಗತಿಗಳು. ಜೀವನ-ಮೌಲ್ಯದ ತರಗತಿಗಳು ಮೂರು : ಉನ್ನತ, ಉನ್ನತತರ, ಉನ್ನತತಮ. ಉಚ್ಚ ಸ್ವಾರ್ಥಪರ ಆದರ್ಶಗಳು ಉನ್ನತ:ಪರಾರ್ಥಪರ ಆದರ್ಶಗಳು ಉನ್ನತತರ: ಹಾಗೂ ಪರಮಾರ್ಥಪರ ಆದರ್ಶವು ಉನ್ನತತಮ. ಜೀವನಾಂಗಗಳ ತರಗತಿಗಳು ನಾಲ್ಕು :ವೈಯಕ್ತಿಕ ಸಾಮಾಜಿಕ, ರಾಷ್ಟ್ರೀಯ ಹಾಗೂ ಜಾಗತಿಕ. ಇವೆಲ್ಲವುಗಳಲ್ಲಿ ಪಾರಮಾರ್ಥಿಕ ಆದರ್ಶವೇ ಶ್ರೇಷ್ಠತಮ. ಅದನ್ನು ಕುರಿತು ಶ್ರೀಗುರುದೇವರು ಅರುಹಿರುವುದೇನೆಂದರೆ :

"God-realisation is the highest ideal of life." "ಪರಮಾತ್ಮನ ಸಾಕ್ಷಾತ್ಕಾರವೇ ಜೀವನದ ಪರತಮ ಆದರ್ಶ." ಅದಕ್ಕಾಗಿ "To realise God both for oneself and for others, is and should be, the end of human life." "ತನಗಾಗಿಯೂ, ಅನ್ಯರಿಗಾಗಿಯೂ, ಪರಮಾತ್ಮನನ್ನು ಸಾಕ್ಷಾತ್ಕಾರಿಸಿಕೊಳ್ಳುವದೇ ಮಾನವ-ಜೀವನದ ಅಂತಿಮವಿರುವದು, ಇರತಕ್ಕದ್ದು."

ಈ ಮೇರೆಗೆ ಶ್ರೀಗುರುದೇವರ ಪ್ರಧಾನ ಆದರ್ಶವು ದ್ವಿವಿಧ ಉದ್ದೇಶಗಳನ್ನು ಒಳಗೊಂಡಿರುವದು. ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವದು, ತನಗಾಗಿ ಹಾಗೂ ಅನ್ಯರಿಗಾಗಿ, **"ಸ್ವಾಂತ: ಸುಖಾಯ ಜಗತ: ಕಲ್ಯಾಣಾಯ ।"** "ತನ್ನ ಸುಖಕ್ಕಾಗಿ ಹಾಗೂ ಜಗತ್ತಿನ ಕಲ್ಯಾಣಕ್ಕಾಗಿ," ಎಂದು ಶ್ರೀಗುರುದೇವರು ಹೇಳುತ್ತಿದ್ದರು. ಪರಮಾತ್ಮನ ಪ್ರಾಪ್ತಿಯಿಂದಲೇ-ಪರಮಾತ್ಮನ ಅನುಭೂತಿಯಿಂದಲೇ, ಆತನ ಭಕ್ತಿ-ಆನಂದಗಳ ಪ್ರಸಾರವೂ

ತಾನಾಗಿಯೇ ನೆರವೇರುವದುಂಟು. ಆತ್ಮೋದ್ಧಾರದೊಡನೆ, ಲೋಕೋದ್ಧಾರವೂ ಸಹಜವಾಗಿ ಜರುಗಿ ಎಲ್ಲರ ಕಲ್ಯಾಣವಾಗುವದುಂಟು. ಅದರ ಪ್ರಸಾರಕ್ಕೆ ಸ್ವತಂತ್ರ ಪ್ರಯತ್ನವು ಬೇಕಾಗಿಲ್ಲ. ದೀಪವು ಬೆಳಗಿತೆಂದರೆ, ಬೆಳಕು ತಾನಾಗಿಯೇ ಸುತ್ತಲೂ ಹರಡುವದು. ಹೂವು ಅರಳಿತೆಂದರೆ, ಅದರ ಪರಿಮಳವು ತಾನಾಗಿಯೇ ಅತ್ತಿತ್ತ ಪಸರಿಸುವದು. ದೀಪ, ಹೂಗಳು ಬೆಳಗುವ, ಅರಳುವ ಕಾರ್ಯವನ್ನು ಚೆನ್ನಾಗಿ ಮಾಡಿದರೆ, ಅವುಗಳ ಪ್ರಸಾರವು ತಾನಾಗಿಯೇ ಆಗುವದು. ಇದೇ ಅವುಗಳ ಪ್ರಸಾರದ ಪರಿಣಾಮಕಾರಿಯಾದ ರೀತಿ. **"ಪಿಯತ ಪಿಯಾಲಾ ಪ್ರೇಮಕಾ ಸುಧರೇ ಸಬಹೀ ಸಾಥೀ"** "ಸಂತರು ಪ್ರೀತಿಯ-ಭಕ್ತಿಯ ರಸವನ್ನು-ಆನಂದವನ್ನು ಸವಿಯುವರು. ಅದರ ಫಲವಾಗಿಯೇ ಅವರ ಸಂಗಡಿಗರು-ಬಳಗದವರು-ಸುಧಾರಿಸುವರು." ಎಂಬುದು ಗುರುದೇವರ ಹೇಳಿಕೆ. ಈ ರೀತಿ ಅವರು ಆತ್ಮೋದ್ಧಾರಗಳ ಸಮನ್ವಯವನ್ನು ಅರುಹಿರುವರು.

ತರುವಾಯ ಅವರು ಜನಜೀವನದ ಅಂಗಗಳಲ್ಲಿಯ ಬೇರೆ ಬೇರೆ ಅಪ್ರಧಾನ ಆಬರ್ಶಗಳನ್ನು ಪ್ರಧಾನ ಆದರ್ಶದೊಡನೆ ಹೇಗೆ ಸಮನ್ವಯಗೊಳಿಸಿರುವರೆಂಬುದನ್ನು ಅರಿಯುವಾ.

ವೈಯಕ್ತಿಕ ಆದರ್ಶಗಳು :

ವೈಯಕ್ತಿಕ ಆದರ್ಶಗಳ ಪ್ರಧಾನ ಬಗೆಗಳು ಐದು : i)ಸದ್ವರ್ತನ, ii)ಪ್ರಪಂಚ-ಪರಿಪಾಲನ, iii) ಸತ್ಯಸಂಶೋಧನೆ, iv) ಸೌಂದರ್ಯ ಉಪಾಸನೆ ಹಾಗೂ v) ಕಲ್ಯಾಣಕರಣ.

i) ಸದ್ವರ್ತನ :

ಇಂದು ಮನುಜನು ವಿಭಿನ್ನವ್ಯಕ್ತಿತ್ವದಿಂದ (Split Personality) ಬಳಲುತ್ತಿರುವ. ಅದನ್ನು ಅಭಿನ್ನ(Integrated) ಮಾಡುವ , ಒಂದಾಗಿಸುವ ಅಗತ್ಯವು ತುಂಬ ಇರುವದು. ಅದಾಗದೆ ಅವನ ಜೀವನದಲ್ಲಿ ಶಾಂತಿ-ಸಮಾಧಾನಗಳು ನೆಲೆಗೊಳ್ಳಲರಿಯವು. ಅದಕ್ಕಾಗಿ ಅವನು ತನ್ನ ವರ್ತನದಲ್ಲಿ ಈ ಮೂರು ಬಗೆಯ ಸಮನ್ವಯವನ್ನು ಸಾಧಿಸಲು ಬೇಕು. **ಅ) ಕರ್ಮಸಮನ್ವಯ ಆ)ಗುಣಸಮನ್ವಯ ಮತ್ತು ಇ) ತ್ಯಾಗಸಮನ್ವಯ.**

ಅ) ಕರ್ಮ ಸಮನ್ವಯವು : ವಿಚಾರ-ಉಚ್ಚಾರ-ಆಚಾರಗಳ ಏಕರೂಪತೆ. **"ಚಿತ್ತೇ-ವಾಚಿ-ಕ್ರಿಯಾಯಾಂ ಚ ಸಾಧೂನಾಂ ಏಕರೂಪತಾ।"** "ಮತಿ, ಮಾತು, ಕೃತಿಗಳಲ್ಲಿಯ ಏಕತೆಯು ಸಜ್ಜನರ ಕುರುಹು." ಎಲ್ಲ ಸಂತರು ಇದನ್ನೆಯೆ ಬೋಧಿಸಿರುವರು.

ಬೋಲಣ್ಯಾ ಸಾರಿಖೇ ಚಾಲಣೇ । ಸ್ವಯೇ ಕರೂನ ಬೋಲಣೇ ।
ತಯಾಚೀ ವಚನೇ ಪ್ರಮಾಣೇ । ಮಾನಿತೀ ಜನೀ ॥

"ಆಡಿದಂತೆ ಮಾಡುವವನನ್ನೂ ಮಾಡಿ ಆಡುವವನನ್ನೂ ಜನರು ನಂಬುವರು" ಎಂದು ರಾಮದಾಸರು ಅರುಹಿರುವರು.

"ಮಾತಾಡಿದಂತೆ ನಡೆದಾತ ಜಗವೆಲ್ಲ ಕೂತಲ್ಲಿ ಆಳ್ವ. ಆಡದೇ ಮಾಡುವವನು ರೂಢಿಯೊಳಗುತ್ತಮನು" ಎಂದು ಬೋಧಿಸುವ ಸರ್ವಜ್ಞ.

ಮನಸ್ಯೇಕಂ ವಚಸ್ಯೇಕಂ । ಕಾರ್ಯಮೇಕಂ ಮಹಾತ್ಮನಾಮ್ ॥

"ಮಹಾತ್ಮರ ಮನ-ಮಾತು-ಕೃತಿಗಳು ಏಕರೂಪ ಇರುವವು."

(ಆ) **ಗುಣಸಮನ್ವಯವು :** ಸತ್ಯ, ಪ್ರೇಮ, ಸಂಯಮಗಳ ಪರಿಪಾಲನ ಸಂಯೋಗ. ಇವುಗಳಿಂದ ಬುದ್ಧಿಗೆ ಬೆಳಕು, ಭಾವನೆಗೆ ಪಾವಿತ್ರ್ಯ. ಸಂಕಲ್ಪಕ್ಕೆ ಸಾಮರ್ಥ್ಯ, ಜೀವನಕ್ಕೆ ಧನ್ಯತೆ. ನೀತಿಯ ತಿರುಳಾದ ಇವು ಭಕ್ತಿಯಲ್ಲಿ ಪರಿಣತವಾಗುವವು, ಆಗಬೇಕು. ಆಗ ಅವುಗಳಿಗೆ ಪೂರ್ಣತ್ವ ಲಭಿಸುವದು.

(ಇ) **ತ್ಯಾಗಸಮನ್ವಯವು :** ಪರನಾರಿ, ಪರಧನ, ಪರನಿಂದೆ ಇವುಗಳ ತ್ಯಾಗವನ್ನು ಒಳಗೊಂಡಿರುವದು. ಇದು ಚಾರಿತ್ರ್ಯದ ಬೆಳವಣಿಗೆಯ ಪ್ರಾಥಮಿಕ ಮೆಟ್ಟಿಲು.

ಮಾತೃವತ್ ಪರದಾರೇಷು । ಪರದ್ರವ್ಯೇಷು ಲೋಷ್ಠವತ್ ।
ಆತ್ಮವತ್ ಸರ್ವಭೂತೇಷು । ಯ: ಪಶ್ಯತಿ ಸ ಪಶ್ಯತಿ ॥

"ಪರಸತಿ ತಾಯಿಯ ಸಮ, ಪರಧನವು ಮಣ್ಣುಸಮ, ಎಲ್ಲ ಜನ ತನ್ನ ಸಮ ಎಂದು ಬಗೆವನೇ ನಿಜವಾದ ಹಿರಿಯ."

"ಮಣ್ಣು ಬಿಟ್ಟವ ದೈವ, ಹೊನ್ನು ಬಿಟ್ಟವ ದೈವ,
ಹೆಣ್ಣು ನೆರೆ ಬಿಟ್ಟರವ ದೈವ. ಎನ್ನುವ ಸರ್ವಜ್ಞ.

"ಪರರ ಧನವ ನರಕ ಬಗೆದು, ಮನದ ಮಲಿನ ಕಳೆಯುತಿರೈ ।
ಪರರ ನಾರಿ ತನಗೆ ಮಾರಿ, ಮನದಿ ಸತತ ತಿಳಿಯುತಿರೈ ॥

ಎಂದು ಬೋಧಿಸಿದರು ಶ್ರೀ ನಿಂಬರಗಿ ಮಹಾರಾಜರವರು, ಆತ್ಮಸ್ತುತಿ, ಪರನಿಂದೆಯನ್ನು ತೊರೆಯಬೇಕು.

(ii) ಪ್ರಪಂಚ ಪರಿಪಾಲನ :

ಶ್ರೀ ನಿಂಬರಗಿ ಮಹಾರಾಜರು ಪ್ರಪಂಚ-ಪರಮಾರ್ಥ ಎರಡನ್ನೂ ಮಾಡಲು ಹೇಳಿರುವರು. ಗುರುದೇವರು ಅದನ್ನು ಕುರಿತು ಈ ರೀತಿ ಹೇಳಿರುವರು.

"The great stress which the saint of Nimbargi laid, on the combination of material and spiritual welfare is significant. Do not folllow only spiritual welfare, nor only material welfare. We have to combine both material and spiritual welfare." [4]

ಶ್ರೀ ನಿಂಬರಗಿ ಮಹಾರಾಜರು ಪ್ರಪಂಚ-ಪರಮಾರ್ಥಗಳ ಸಂಯೋಜನೆಗೆ

4) P. G. K. P. 246

ತುಂಬ ಮಹತ್ವ ಕೊಟ್ಟಿರುವದು ಅರ್ಥಪೂರ್ಣವಾದುದು. ಕೇವಲ ಪಾರಮಾರ್ಥಿಕ ಕಲ್ಯಾಣವನ್ನು ಪಡೆಯಲೆಳಸದಿರಿ. ಅದೇ ಮೇರೆಗೆ, ಬರಿ ಪ್ರಾಪಂಚಿಕ ವೈಭವವನ್ನು ಪಡೆಯಲು ಹೆಣಗದಿರಿ..... ನಾವು ಪ್ರಾಪಂಚಿಕ ಹಾಗೂ ಪಾರಮಾರ್ಥಿಕ ವೈಭವಗಳೆರಡನ್ನೂ ಕೂಡಿಯೇ ಪಡೆಯಬೇಕು." **ಶ್ರೀರಾಮದಾಸರು** ಇದನ್ನೇ ಅರುಹಿರುವರು.

ಅಧೀ ಪ್ರಪಂಚ ಕರಾವಾ ನೇಟಕಾ ।
ಮಗ ಘ್ಯಾವೇ ಪರಮಾರ್ಥ-ಏವೇಕಾ ॥

"ಮೊದಲು ಪ್ರಪಂಚವನ್ನು ಸರಿಯಾಗಿ ದಕ್ಷತೆಯಿಂದ ಮಾಡಬೇಕು. ತರುವಾಯ ಪರಮಾರ್ಥ-ಜ್ಞಾನವನ್ನು ಪಡೆಯಲೆಳಸಬೇಕು." ಆದರೆ ಪ್ರಪಂಚವನ್ನು ಸರಿಯಾಗಿ ಮಾಡುವದೆಂತು? **ಶ್ರೀನಿಂಬರಗಿ ಮಹಾರಾಜರು** ಈ ರೀತಿ ಅದರ ಬಗೆಯನ್ನು ಅರುಹಿರುವರು.

ಪರಮಾರ್ಥ ಸಾಧನವೆ ಪರಮ ಮಾನವ-ಧರ್ಮ,
ಅದನು ಗಮನಿಸಿ ಎಲ್ಲ ಮಾಡಬೇಕು ।
ಪರಮಾರ್ಥಕನುಕೂಲ ಇರುವದನು ಇರುವನಿತು,
ಮಾಡಿ ಆತ್ಮನ ನೆನೆದು ಕೂಡಬೇಕು ॥ (ಜೋಧಸುಧೆ)

ಪರಮಾರ್ಥದ ನಿತಾಂತ ಹಿರಿಮೆಯ ಜ್ಞಾನ, ಅದಕ್ಕೆ ಅನುಕೂಲವಾದ ಕರ್ಮ, ಪರಮಾತ್ಮನ ನೆನವು, ಇವೇ ಅದರ ಪ್ರಧಾನ ಬಗೆಗಳು. ಇವುಗಳ ಜತೆಯಲ್ಲಿ ಕೆಲ ಪ್ರಧಾನ ಗುಣಗಳನ್ನೂ ಬೆಳೆಸಲು ಯತ್ನಿಸಬೇಕು.

ಪ್ರಪಂಚದಲ್ಲಿ ಎರಡು ಪ್ರಧಾನ ವಿಷಯಗಳನ್ನು ಬಳಸಬೇಕಾಗುವದು. ಒಂದು ಅರ್ಥ, ಇನ್ನೊಂದು ಕಾಮ. ಇವೆರಡರ ಬಳಕೆಯಲ್ಲಿ ಸತ್ಯ, ಪ್ರೇಮ, ಸಂಯಮಗಳು ಪ್ರಧಾನ ಪಾತ್ರ ವಹಿಸಬೇಕು. ಅರ್ಥವನ್ನು ಪ್ರಾಮಾಣಿಕತನದಿಂದ ಗಳಿಸಬೇಕು. ಪ್ರೀತಿಯಿಂದ ಬಳಸಬೇಕು. ಸಂಯಮದಿಂದ ಉಪಭೋಗಿಸಬೇಕು. ಸತಿ ಪತಿಯರು ಪರಸ್ಪರರೊಡನೆ ಪ್ರಾಮಾಣಿಕರಾಗಿ ವರ್ತಿಸಬೇಕು. ಸತಿಯು ಪತಿವ್ರತೆಯಾಗಿರಬೇಕು. ಹಾಗೂ ಪತಿಯು ಸತಿವ್ರತನಾಗಬೇಕು. ಈರ್ವರಲ್ಲಿ ಅವ್ಯಾಜ ಪ್ರೀತಿಯು ನೆಲೆಸಿರಬೇಕು. ಅವರು ರತಿ-ಸುಖವನ್ನು ಸಂಯಮದಿಂದ ಪಡೆದು, ಸುಸಂಸ್ಕೃತ ಸಂತತಿಯಿಂದ ವಂಶವರ್ಧನೆ ಮಾಡಬೇಕು. ಮನೆಯಲ್ಲಿ ಎಲ್ಲೆಲ್ಲೂ ಪ್ರೀತಿಯ ಆವರಣವನ್ನು ನಿರ್ಮಿಸಬೇಕು. ಈ ಸದ್ಗುಣಗಳ ಜತೆಯಲ್ಲಿ ಕ್ಷಮೆ, ದಯೆ, ಭಕ್ತಿ, ಶಾಂತಿಗಳನ್ನು ಬೆಳೆಸಿದರೆ, ಪ್ರಪಂಚವು ನಿಜವಾದ ಶಾಂತಿ-ಸಮಾಧಾನದ ನೆಲೆಯಾಗಿ, ಪರಮಾರ್ಥ-ಮಂದಿರದೆಡೆಗೆ ಒಯ್ಯಬಲ್ಲ ಪಾವನ ಸೋಪಾನವಾಗಬಲ್ಲದು.

ತಾಪವನು ತಾಳ್ಮೆಯಿಂ ತಾಳ್ವುದೇ ಹಿರಿತಪವು,
ತಾಪವಾದುದನೆಲ್ಲ ತಾಳಬೇಕು ।
ಕೋಪದಿಂ ಶಾಂತಿಯನು ಲೋಪಗೊಳಿಸದೆ ತಾನು,
ಶಾಂತ ಸಂತರ ತೆರದಿ ಬಾಳಬೇಕು ॥ (ಜೋಧಸುಧೆ)

ತನ್ನಂತೆ ಅನ್ಯರನು ಕಾಣುತಿಹುದೈ ನೀನು,
ಅವರ ನಲಿವಿಂ ನೀನು ನಲಿಯಬೇಕು ।
ಅನ್ಯರಾ ನೋವುಗಳು ತನ್ನವೆಂದೇ ಬಗೆದು,
ಅವರ ನೋವಿಂ ನೀನು ನವೆಯಬೇಕು ॥ (ಜೋಧಸುಧೆ)

ಈ ಬಗೆಯಾಗಿ ತಾಳ್ಮೆ-ಶಾಂತಿ-ತನ್ನಂತೆ ಪರರನ್ನು ಕಾಣುವ ಸಮಭಾವ ಇತ್ಯಾದಿ ಸದ್ಗುಣಗಳನ್ನು ಬೆಳೆಸಿ, ಅಂತರಂಗವನ್ನು ನಿರ್ಮಲಗೊಳಿಸಬೇಕು, ವಿಶಾಲಗೊಳಿಸಬೇಕು. ತರುವಾಯ:

ಸಿರಿಯ ಸಂಸಾರದಲಿ ಮರೆಯದಾತುಮನ ನೆನೆ,
ಬರಿಯ ಸಂಸಾರವನು ಜರಿವುದಯ್ಯಾ ।
ಹಿರಿಯ ಸತ್ಯವ ಪಿಡಿದು, ಪರಮ ಅರ್ಥವ ಪಡೆದು,
ಸಂಸಾರ-ಸಂಗವನು ಹರಿವುದಯ್ಯಾ ॥

ತನ್ನ ಸಂಸಾರವನು ಆತ್ಮನಿಗೆ ಒಪ್ಪಿಸುತ,
ಅವನ ಧ್ಯಾನದಿ ನಿರತನಿರಲು ಬೇಕು ।
ತನ್ನದೆಲ್ಲವು ನಿತ್ಯ ಆತ್ಮನೆನೆ ನೆಮ್ಮಿಹುದು,

ಅವನುಳಿದದೇನಯ್ಯ ಜರುಗಬೇಕು ? ॥ (ಜೋಧಸುಧೆ)

ಶ್ರೀ ಗುರುದೇವರ ಪರಾತ್ಪರ ಗುರುಗಳ ಪ್ರಬೋಧವಿದು. ಈ ಬಗೆಯಾಗಿ ಪ್ರಪಂಚ-ಪರಮಾರ್ಥಗಳ ಸುಮಧುರ ಸಂಗಮವೇ ಜೀವನದಲ್ಲಿ ಶಾಂತಿಯನ್ನು ದಯಪಾಲಿಸಬಹುದು. ಈ ಬಗೆಯಾಗಿ ಪ್ರಪಂಚವು ಪರಮಾರ್ಥಕ್ಕೆ ತನ್ನ ಸದ್ಭಾವನೆ, ಸದ್ಗುಣಗಳ ಕೊಡುಗೆಯನ್ನು ನೀಡಬೇಕು. ಪರಮಾರ್ಥವು ಅದಕ್ಕೆ ಶಾಂತಿ-ಆನಂದಗಳನ್ನು ದಯಪಾಲಿಸಬೇಕು. ಈರ್ವರ ಇಂಥ ಸಹಯೋಗವು ಸಾಮರಸ್ಯವು ಗುರುದೇವರು ಅರುಹಿದ ಸಮನ್ವಯದ ಆದರ್ಶ.

(iii) ಸತ್ಯ-ಸಂಶೋಧನೆ :

ಸದ್ವರ್ತನ ಹಾಗೂ ಪ್ರಪಂಚ ಪರಿಪಾಲನ ಇವು ಎಲ್ಲ ಜನರ ಸಮಾನ ಆದರ್ಶಗಳು. ಇನ್ನು ಕೆಲ ವಿಶೇಷ ಆದರ್ಶಗಳ ವಿಚಾರ. ಗುರುದೇವರು ಜನರ ಮನೋವೃತ್ತಿಯನ್ನು, ಅದರ ಭಿನ್ನತೆಯನ್ನು ಅನುಲಕ್ಷಿಸಿ, ಅವರಲ್ಲಿ ನಾಲ್ಕು ವರ್ಗಗಳನ್ನು ಕಲ್ಪಿಸಿರುವರು. i) ಬುದ್ಧಿಪ್ರಧಾನರು (Intellectuals), ii) ಭಾವಪ್ರಧಾನರು (Emotionalists), iii) ಸಂಕಲ್ಪ-ಇಚ್ಛೆ-ಕ್ರಿಯಾ ಪ್ರಧಾನರು (Activists), ಮತ್ತು iv) ಪ್ರತಿಭಾ-ಪ್ರಧಾನರು (Intuitionists). ಇವರಲ್ಲಿ ಮೊದಲನೆಯ ಮೂರು ವರ್ಗದವರು ಅನುಕ್ರಮವಾಗಿ ಸತ್ಯ (Truth) ಸೌಂದರ್ಯ (Beauty) ಮತ್ತು ಕಲ್ಯಾಣ (Goodness) ಈ ಆದರ್ಶಗಳನ್ನು ಆರಾಧಿಸುವರು. ಬುದ್ಧಿ ಪ್ರಧಾನರು ಸತ್ಯ-ಸಂಶೋಧನೆಯನ್ನೂ, ಭಾವಪ್ರಧಾನರು ಸೌಂದರ್ಯ ಉಪಾಸನೆಯನ್ನೂ, ಕ್ರಿಯಾಪ್ರಧಾನರು ಕಲ್ಯಾಣಕಾರ್ಯವನ್ನೂ

ಮಾಡತೊಡಗುವರು. ತಮ್ಮ ತಮ್ಮ ಪ್ರಾಪಂಚಿಕ ಕರ್ತವ್ಯಗಳನ್ನು ನಿರ್ವಹಿಸಿ, ಅವರು ಈ ಉನ್ನತ ಆದರ್ಶಗಳನ್ನು ಪಡೆಯಲು ಬಯಸುವರು. ಯತ್ನಿಸುವರು. ಪಾಶ್ಚಾತ್ಯ ದಾರ್ಶನಿಕರು ಈ ಆದರ್ಶಗಳನ್ನು ತುಂಬ ಗೌರವಿಸಿರುವರು. ಇವು ಜೀವನದ ಎಲ್ಲ ಅಂಗಗಳಲ್ಲಿ ಶಾಂತಿ ಸೌಹಾರ್ದಗಳನ್ನು ನೆಲೆಗೊಳಿಸಬಲ್ಲವು, ಎಂಬುದು ಅವರ ಪ್ರಾಮಾಣಿಕ ನಂಬಿಕೆ. ಆದರೆ ಮಾನವನ ಮನಸ್ಸನ್ನು ಅವು ಕೆಲಮಟ್ಟಿಗೆ ಉನ್ನತಗೊಳಿಸಬಹುದಾದರೂ, ಅವನಲ್ಲಿಯ ಸಂಕುಚಿತ, ಸ್ವಾರ್ಥಪರ ವಾಸನೆಗಳನ್ನು ಪೂರ್ತಿಯಾಗಿ ಅಳಿಸಲರಿಯವು. ಅದಾಗದೆ ಜೀವನದಲ್ಲಿ ಶಾಂತಿಯು, ಸೌಹಾರ್ದವು ನೆಲೆಗೊಳ್ಳುವದೆಂತು ? ಅದಕ್ಕೆ ಈ ಆದರ್ಶಗಳು ಪರಮಾರ್ಥದ ನೆರವನ್ನು ಪಡೆಯಲೇಬೇಕು. ಪರಮಾರ್ಥದಲ್ಲಿ ಇವು ಪೂರ್ತಿಯಾಗಿ ಬೆರೆತಾಗಲೇ ಇವುಗಳಿಂದ ಆ ಮಹಾಕಾರ್ಯವು ನೆರವೇರಬಲ್ಲದು. ಇವುಗಳಲ್ಲಿ ಇಂಥ ಸಮನ್ವಯವನ್ನು ಕಾಣಿಸಲು ಗುರುದೇವರು ಯತ್ನಿಸಿರುವರು. ಮೊದಲು ನಾವು **"ಸತ್ಯ-ಸಂಶೋಧನೆಯ"** ಗುರಿಯನ್ನು ಕುರಿತು ವಿಚಾರಿಸುವಾ.

ಬುದ್ಧಿಪ್ರಧಾನರು ಸತ್ಯ ಸಂಶೋಧನೆಯನ್ನು ಎರಡು ಕ್ಷೇತ್ರಗಳಲ್ಲಿ ಮಾಡಲಿರುವರು. ಒಂದು ಭೌತಿಕ ಕ್ಷೇತ್ರ. ಇನ್ನೊಂದು ವೈಚಾರಿಕ ಕ್ಷೇತ್ರ. ಭೌತಿಕ ಕ್ಷೇತ್ರದಲ್ಲಿಯ ಸಂಶೋಧಕರು ವಿಜ್ಞಾನಿಗಳು. ಅವರು ಅದರ ಬೇರೆ ಬೇರೆ ಅಂಗಗಳಲ್ಲಿ ಸಂಶೋಧನೆ ನಡೆಯಿಸಿ, ನಿಸರ್ಗದಲ್ಲಿಯ ಕೆಲ ಅಜ್ಞಾತ ಶಕ್ತಿಗಳನ್ನು ಕಂಡುಹಿಡಿದಿರುವರು. ಅವುಗಳಿಂದ ಜನಜೀವನಕ್ಕೆ ಕೆಲ ಸೌಕರ್ಯಗಳನ್ನು ಒದಗಿಸಿ, ಅದನ್ನು ಅಧಿಕ ಸುಖಿಯಾಗಿ ಮಾಡಿರುವರು. ಇನ್ನೂ ಮಾಡಲಿರುವರು. ಆದರೆ ಅದರ ಜತೆಯಲ್ಲಿ ಅವರು ಪಡೆದ ಕೆಲ ಶಕ್ತಿಗಳನ್ನು ಸ್ವಾರ್ಥಪರ ರಾಜಕಾರಣಿಗಳು ಅಯೋಗ್ಯ ರೀತಿಯಿಂದ ಬಳಸಿದ ಮೂಲಕ ಅವು ಮಾನವತೆಯ ವಿನಾಶಕ್ಕೆ ಕಾರಣವಾಗಿವೆ. ಕೆಲ ವಿಜ್ಞಾನಿಗಳು ರಾಜಕಾರಣಿಗಳ ಕೈಗೊಂಬೆಗಳಾಗಿರುವದರಿಂದ ಅವರ ವಿನಾಶಕಾರ್ಯಕ್ಕೆ ಇವರು ನೆರವಾಗಿರುತ್ತಾರೆ. ಅವರಿಗೆ ಬೇಕಾದ ರೀತಿಯಿಂದ ತಮ್ಮ ಸಂಶೋಧನೆಯನ್ನು ನಡೆಯಿಸಿ, ಬೇರೆ ಬೇರೆ ವಿನಾಶಕ ಶಸ್ತ್ರಗಳನ್ನು ನಿರ್ಮಿಸಿದ್ದಾರೆ. ಆದುದರಿಂದ ಇವರ ಸಂಶೋಧನವು ನೈತಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳನ್ನು ಕಡೆಗಣಿಸಿರುವದು. ಇದರಲ್ಲಿ ಬದಲಾವಣೆ ಮಾಡಿ, ಅವರು ತಮ್ಮ ಕಾರ್ಯವನ್ನು ಲೋಕಕಲ್ಯಾಣಕ್ಕೆ ಪೋಷಕವಾಗುವಂತೆ ಮಾಡಿದರೆ ಅವರ ಈ ಆದರ್ಶವು ಉನ್ನತವಾಗಬಹುದು. ಮತ್ತು ಅದು ಅವರನ್ನು ಪರಮಾರ್ಥ-ಪ್ರೇಮಿಗಳನ್ನಾಗಿ ಮಾಡಬಹುದು.

ಇಂದು ದಾರ್ಶನಿಕರ ಸಂಶೋಧನವೂ ಇದೇ ಬಗೆಯಾಗಿ ನೈತಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳನ್ನು ಕಡೆಗಣಿಸುತ್ತಿದೆ. ಅವರು ಪ್ರಚುರಗೊಳಿಸಿರುವ ಕೆಲ ವಾದಗಳು ನಮ್ಮ ಜೀವನದಲ್ಲಿ ಸತ್ಯ, ಪ್ರೇಮ, ಸಂಯಮಗಳನ್ನು ಅಳಿಸತೊಡಗಿವೆ. ಕರ್ತವ್ಯಕ್ಕಿಂತ ಭೋಕ್ತವ್ಯಕ್ಕೆ ಪ್ರಾಧಾನ್ಯ ನೀಡಿವೆ. ಭೋಗರೋಗವನ್ನು ಸಮರ್ಥಿಸಿ, ಅದರ ಪಿಡುಗನ್ನು ಸಮಾಜದಲ್ಲಿ ಹರಡಲಿವೆ. ಅದರಿಂದ ವ್ಯಕ್ತಿಗಳು ಬಲಹೀನರಾಗಿರುವರು. ಸಮಾಜವು ಹೋಳಾಗಿ ಹಾಳಾಗಲಿರುವದು. ಅದಕ್ಕಾಗಿ ನಮ್ಮ ದಾರ್ಶನಿಕರು ಕೂಡ ನೈತಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳ ಪ್ರಭಾವವು ಬೆಳೆಯುವ ರೀತಿಯಲ್ಲಿ ತಮ್ಮ ನೂತನ

ಸಿದ್ಧಾಂತಗಳನ್ನು ಕಂಡುಹಿಡಿದು, ಅವನ್ನು ಜನತೆಯಲ್ಲಿ ಬೀರಬೇಕು. ನೀತಿ-ಪರಮಾರ್ಥಗಳಿಗೆ ಪೋಷಕವಾದ ಸಂಶೋಧನೆಯೇ ನಿಜವಾದ ಸತ್ಯ-ಸಂಶೋಧನೆ. ಅವುಗಳಿಗೆ ವಿರುದ್ಧವಾದವುಗಳು ಅಸತ್ಯ, ಅಸಾಧು, ಸಂಶೋಧನೆಗಳು. ಪರಮಾತ್ಮನೊಬ್ಬನೇ ಶಾಶ್ವತ, ನಿರಪೇಕ್ಷ ಸತ್ಯ: ಉಳಿದವುಗಳೆಲ್ಲ ಅಶಾಶ್ವತ, ಸಾಪೇಕ್ಷ ಸತ್ಯಗಳು. ಒಂದರ್ಥದಿಂದ ಅನೈತಿಕ ಸತ್ಯಗಳೆಲ್ಲ ಅಸತ್ಯಗಳೇ ಸರಿ! ಎಂಬುದು ಗುರುದೇವರ ಅಭಿಮತ.

(iv) ಸೌಂದರ್ಯ- ಉಪಾಸನೆ :

ಇದು ನಾಲ್ಕನೆಯ ಆದರ್ಶ. ಸೌಂದರ್ಯದ ಬಗೆಗಳು ಮೂರು : ಭೌತಿಕ ಸೌಂದರ್ಯ, ನೈತಿಕ ಸೌಂದರ್ಯ ಮತ್ತು ಪಾರಮಾರ್ಥಿಕ ಸೌಂದರ್ಯ. ಕಲಾವಂತರು ಸೌಂದರ್ಯ- ಉಪಾಸಕರು. ಅವರಲ್ಲಿ ಹಲವು ಬಗೆಗಳು, ಕೆಲವರು ಸಾಹಿತ್ಯವನ್ನು, ಕೆಲವರು ಸಂಗೀತವನ್ನು, ಬೇರೆ ಕೆಲವರು ಚಿತ್ರ-ಶಿಲ್ಪಕಲೆಗಳನ್ನು ಆರಾಧಿಸುವರು. ಅವರೆಲ್ಲ ಪರಮಾತ್ಮನ ಸೃಷ್ಟಿಯಲ್ಲಿಯ ಸೊಬಗನ್ನು ಕಂಡು, ಪ್ರೀತಿಸಿ, ಆನಂದ ಸವಿದು, ಅದನ್ನು ತಮ್ಮ ತಮ್ಮ ಮಾಧ್ಯಮದಿಂದ ಬಣ್ಣಿಸಿ, ಅನ್ಯರಿಗೂ ಕಾಣಿಸಲು ಯತ್ನಿಸುವರು. ನಮ್ಮ ಭೌತಿಕ ಸೃಷ್ಟಿಯು, ಪರಮಾತ್ಮನ ಪಾರಮಾರ್ಥಿಕ ಸೃಷ್ಟಿಯ ಪಡಿನೆಳಲು, ಪ್ರತಿಬಿಂಬ. "The world is Mirror of Divine Beauty" "ಈ ಜಗತ್ತು ಒಂದು ದೈವೀ ಸೊಬಗಿನ ಕನ್ನಡಿ." ಇದರಲ್ಲಿ ಪರಮಾತ್ಮನ ಸೌಂದರ್ಯವು ಪ್ರತಿಬಿಂಬಿತವಾಗಿರುವದು. ಆದರೆ, "It is a faint repliea of the original." "ಆದರೆ ಅದು ಮೂಲ ಪಾರಮಾರ್ಥಿಕ ಸೃಷ್ಟಿಯ ಅಸ್ಪಷ್ಟವಾದ, ಮಸಕು ಮಸಕಾದ ಪ್ರತಿಕೃತಿ." ಆದುದರಿಂದ ಅದರಲ್ಲಿ ಪ್ರತಿಬಿಂಬಿತವಾದ ಸೊಬಗು ತೀರ ಅಸ್ಪಷ್ಟವಾದುದು ಎಂದು ಗುರುದೇವರು ಹೇಳುತ್ತಿದ್ದರು.

ಸಾಧು-ಸಂತರು ಕಂಡ ಆ ಪಾರಮಾರ್ಥಿಕ ಸೃಷ್ಟಿಯಲ್ಲಿಯ "ಉಪವನಗಳು ಉದ್ಯಾನಗಳು, ಸರೋವರಗಳು, ಪಶು-ಪಕ್ಷಿಗಳು, ಸೂರ್ಯ-ಚಂದ್ರ-ನಕ್ಷತ್ರಗಳು, ಭವ್ಯ ಅರಮನೆಗಳು, ಅಲ್ಲಿಯ ನರ-ನಾರಿಯರು, ದೇವ-ದೇವತೆಗಳು, ಎಲ್ಲರೂ ಅಲೌಕಿಕವಾದ ಅಂದ-ಚಂದಗಳಿಂದ ಶೋಭಿಸುವರು. ಅಲ್ಲಿಯ ಬಣ್ಣ ಬಣ್ಣಗಳ ಪ್ರಭೆಯು ಕಾಮನ ಬಿಲ್ಲನ್ನು ಹೀಯಾಳಿಸುವಂತಹದು. ಅಲ್ಲಿಯ ಸಂಗೀತವು ಬಣ್ಣಿಸಲಾರದಂತಹ ಮಾಧುರ್ಯದಿಂದ ಕೂಡಿರುವದು" ಎಂದು ಅದನ್ನು ಕಂಡವರು ಬಣ್ಣಿಸಿರುವರು.

ಆದರೆ ಇಲ್ಲಿಯ ಅದರ ಪಡೆನೆಳಲಿನ ಸೌಂದರ್ಯವೇ ನಮ್ಮ ಕಲಾವಂತರನ್ನು ಮುಗ್ಧಗೊಳಿಸುವದು. ಅವರು ಅದರ ದರ್ಶನದಿಂದಲೇ ಮೈಮರೆವರು, ತುಂಬ ಆನಂದ ಪಡುವರು. ಅದೇ ಆನಂದದ ಸಾರಭೂತ ಮಂದಿರವೆಂದು ಬಗೆವರು. ಮತ್ತು ಅದರ ಮೂಲ ಜನಕನನ್ನು ಮರೆವರು. ಅದರ ಫಲವಾಗಿ ಅವರು ಅದರ ದರ್ಶನ-ಸ್ಪರ್ಶನ-ಶ್ರವಣದಿಂದ ತಮ್ಮ ಇಂದ್ರಿಯ, ಮನಸ್ಸಿಗೆ ಲಭಿಸುವ ಸುಖದಿಂದಲೇ ಸಂತುಷ್ಟರಾಗುವರು. ತಾವು ಅನುಭವಿಸಿದ ಈ ಸುಖವನ್ನು ಅನ್ಯರಿಗೆ ನೀಡಲು ಯತ್ನಿಸುವರು. ತಮ್ಮ ಈ ಆದರ್ಶವನ್ನು ಆರಾಧಿಸಲು ಅನ್ಯರಿಗೂ ಕಲಿಸುವರು.

"ನಿಜವಾಗಿ ನಮ್ಮ ಸೃಷ್ಟಿಯು ಪರಮಾತ್ಮನ ಕಲಾಕೃತಿ. ಆತನೇ ಆದಿ ಕಲೆಗಾರ. ಪರಮಾತ್ಮನೇ ಚೆಲುವಿನ ಸೆಲೆ. ರೇಖೆ-ರೇಖೆಗಳನ್ನು ಹೊಂದಿಸಿ, ಬಣ್ಣ ಬಣ್ಣಗಳನ್ನು ಬೆರಸಿ, ಆತನು ತನ್ನ ಕಲಾಕೃತಿಯನ್ನು ನಿರ್ಮಿಸಿಹನು. ತನ್ನ ಚೆಲುವಿನ ಬೆಳಕನ್ನು ಬೀರಿ, ಅದನ್ನವನು ಚೆನ್ನಾಗಿ ಸಿಂಗರಿಸಿಹನು. ಅಲ್ಲಲ್ಲಿ ತಾನೇ ಇಣಿಕಿ ಕೆಲ ಪ್ರತಿಭಾವಂತರಿಗೆ ತನ್ನ ಸೊಬಗಿನ ಪಡಿನೆಳಲನ್ನು ಕಾಣಿಸಿಹನು. ಪರಮಾತ್ಮನ ಕಲಾ-ವಿಲಾಸವನ್ನು ಕಂಡ ಕಲಾವಂತನು, ಅವನ ಕಲಾಕೃತಿಯನ್ನು ಅನುಕರಿಸಿ, ತನ್ನ ಕಲಾಕೃತಿಯನ್ನು ನಿರ್ಮಿಸಿದ. ಅದು ಚೆಲುವಿನ ಬಹಿರಂಗದ ಅನುಕರಣ. ಆದರೂ ಅದರ ಅಂದ-ಚೆಂದವನ್ನು ಕಂಡ ಕಲಾವಂತನು, ತನ್ನ ಕೌಶಲ್ಯಕ್ಕಾಗಿ ತುಂಬ ಸಂತೋಷಪಟ್ಟನು. ಆದರೆ ಮುಂದೆ ಕೆಲ ಪ್ರತಿಭಾವಂತ ಕಲಾವಿದರಿಗೆ, ಚೆಲುವು ಹೊರಗಣ ಆಕಾರ-ಬಣ್ಣಗಳಲ್ಲಿರುವದಿಲ್ಲ, ಅದು ಅವುಗಳ ಅಂತರಂಗದಲ್ಲಿ ನೆಲಿಸಿರುವದು, ಎಂಬುದು ಹೊಳೆಯಿತು. ಅದರ ಸ್ವರೂಪವನ್ನರಿಯಲು, ಅವರು ಯತ್ನಿಸಿದರು. ಆದರೆ ಹೊರಗಿನ ಚೆಲುವಿನ ಮರೆಯಲ್ಲಿದ್ದ ಆತ್ಮನ ಚೆಲುವಿನ ಪ್ರತ್ಯಕ್ಷದರ್ಶನ ಅವರ ಪ್ರತಿಭೆಗೆ ಲಭಿಸಲಿಲ್ಲ. ಆತನ ಪೂರ್ಣ ವೈಭವವು ಅವರಿಗೆ ಕಾಣಲಿಲ್ಲ. ಆದರೂ ಈ ಅಪ್ರತ್ಯಕ್ಷ ದರ್ಶನವೂ ಕಲಾ ಸಾಮ್ರಾಜ್ಯದಲ್ಲಿ ಮಹಾಕ್ರಾಂತಿಯನ್ನು ಮಾಡಿರುವದು. ಇದನ್ನರಿತ ಕಲಾವಂತನ ಪ್ರತಿಭೆಯು ಮಂಜು ಮಂಜು ಆಗಿ ರಂಜಿಸುವ ಅಂತರಾತ್ಮನ ಸೌಂದರ್ಯವನ್ನು ನಿತ್ಯನೂತನ ಕಲಾಕೃತಿಯಲ್ಲಿ ಚಿಮ್ಮಿಸಲು ಯತ್ನಿಸಿತು. ಅದಕ್ಕಾಗಿಯೇ "Art reveals, not creates." "ಕಲೆಯು ಆನಂದವನ್ನು ಹೊರಚಿಮ್ಮುವದು-ನಿರ್ಮಿಸುವದಿಲ್ಲ." ಇಂಥ ಉನ್ನತ ಕಲೆಯ ವಿಲಾಸದಿಂದ ವ್ಯಕ್ತಿಗಳ ಉನ್ನತಿ, ನಾಡಿನ ಏಳ್ಗೆ ಎಲ್ಲೆಲ್ಲಿಯೂ ವಿಮಲ ಸಂತಸದ ಚೆಲ್ಲಾಟ.

ಈ ಬಗೆಯ ಕಲೆಯನ್ನು ಕುರಿತು ಗುರುದೇವರು ಅರುಹಿರುವದೇನಂದರೆ :

"It the fine arts are used in the service of God there could be no better means to help devotion..... A musician who sings very devotional songs, will help the God-devotion of the hearers."[5]

"ಕುಶಲ ಕಲೆಗಳು ಪರಮಾತ್ಮನ ಸೇವೆಗಾಗಿ ಬಳಸಲಾದರೆ, ಅದರಿಂದ ಅವು ಭಕ್ತಿಭಾವದ ಬೆಳವಣಿಗೆಗೆ ತುಂಬ ನೆರವಾಗಬಹುದು. ಭಕ್ತಿ ಗೀತೆಗಳನ್ನು ಹಾಡುವ ಸಂಗೀತಗಾರನು ತನ್ನಲ್ಲಿಯೂ ಹಾಗೂ ಶ್ರೋತಾರರಲ್ಲಿಯೂ ಭಕ್ತಿಭಾವವನ್ನು ತುಂಬಿ ಬೆಳೆಸಬಲ್ಲನು" ಭಕ್ತಿ ಭಾವವುಳ್ಳ ಕವಿಯು ತನ್ನ ಭಾವಪೂರ್ಣ ಕವನಗಳಿಂದ ಓದುಗರಲ್ಲಿಯ ಪರಮಾರ್ಥ ಪ್ರೀತಿಯ ಬೆಳವಣಿಗೆಗೆ ಹೆಚ್ಚಿನ ಕಾಣಿಕೆಗಳನ್ನು ಸಲ್ಲಿಸಬಲ್ಲನು. ಅದೇ ಮೇರೆಗೆ ಬೇರೆ ಬೇರೆ ಕಲಾವಂತರು ಕೂಡ ತಮ್ಮ ತಮ್ಮ ಸೇವೆಯನ್ನು ಪರಮಾತ್ಮನಿಗೆ ಸಲ್ಲಿಸಬಲ್ಲರು.

"The aim of the fiine arts should not be the service of Eros.... The highest end of all art should be "the glory of God and the relief of man's estate."[6]

ಅದಕ್ಕಾಗಿ "ಕುಶಲ ಕಲೆಗಳ ಗುರಿಯು ಶೃಂಗಾರದ ಸೇವೆಯೇ ಇರಕೂಡದು.

5) P.G.H.P. 288 6) P. G.H.P. 289

ಅದರ ಶ್ರೇಷ್ಠತಮ ಗುರಿಯು ಪರಮಾತ್ಮನ ವೈಭವವನ್ನು ಕಾಣಿಸುವದೂ, ಮಾನವನ ಜೀವನವನು ಉನ್ನತಗೊಳಿಸುವದೂ ಇರತಕ್ಕದ್ದು."

ಈ ರೀತಿ ಭೌತಿಕ ಸೌಂದರ್ಯಕ್ಕಿಂತ, ನೈತಿಕ ಸೌಂದರ್ಯವು ಮೇಲು, ನೈತಿಕ ಸೌಂದರ್ಯಕ್ಕಿಂತ ಪಾರಮಾರ್ಥಿಕ ಸೌಂದರ್ಯವು ಮೇಲು. ಅದರಲ್ಲಿಯೇ ಇವೆರಡರ ಪರಿಣತಿ-ಸಮನ್ವಯ ಎಂಬುದು ಗುರುದೇವರ ಅಭಿಮತ.

(v) ಕಲ್ಯಾಣಕರಣ :

ಜನರ ದು:ಖವನ್ನು ಪರಿಹರಿಸಿ, ಅವರಿಗೆ ಸುಖ, ಸಂತೋಷ, ಸಮಾಧಾನಗಳನ್ನು ನೀಡುವದೇ ಕಲ್ಯಾಣ-ಕಾರ್ಯದ ಆದರ್ಶ. ಈವರೆಗೆ ವಿವರಿಸಲಾದ ಆದರ್ಶಗಳಲ್ಲಿ ಉನ್ನತ-ಸ್ವಾರ್ಥದೊಡನೆ ಅಪ್ರತ್ಯಕ್ಷಪರಾರ್ಥವು ಒಳಗೊಂಡಿರುವದು. ಪ್ರಸ್ತುತ ಆದರ್ಶದಲ್ಲಿ ಸ್ವಾರ್ಥ-ರಹಿತ. ಪ್ರತ್ಯಕ್ಷ-ಪರಾರ್ಥವು ನೆಲೆಸಿರುವದು. **"ಸ್ವಾರ್ಥೋ ಯಸ್ಯ ಪರಾರ್ಥ ಏವ ಸ ಪುಮಾನ್ ಏಕ: ಸತಾಂ ಅಗ್ರಣೀ "** "ಪರಾರ್ಥವೇ ಸ್ವಾರ್ಥವಾಗಿರುವ ಮನುಜನೇ ಹಿರಿಯರಲ್ಲಿ ಹಿರಿಯ." ಈ ಬಗೆಯ ಹಿರಿಮೆಯುಳ್ಳವರೇ ನಿಜವಾದ ಲೋಕಕಲ್ಯಾಣವನ್ನು ಮಾಡಬಲ್ಲರು. ಅದಕ್ಕಾಗಿ ಅವರು ಮೊದಲು ಕೆಲ ಪ್ರಧಾನ ಸದ್ಗುಣಗಳನ್ನು ಪಡೆಯಬೇಕಾಗುವದು. ಅವುಗಳಲ್ಲಿ ಮೊದಲನೆಯದು ಅಂತ:ಕರಣದ ಕೋಮಲತೆ-ವಿಶಾಲತೆ. **ಶ್ರೀರಾಮದಾಸರು** ಇದನ್ನೆಯೇ ಅರುಹಿರುವರು.

ಪರ ದು:ಖೇ ದುಖಾವೇ । ಪರಸಂತೋಷೇ ಸುಖೀ ವ್ಹಾವೇ ।
ಅವಘೇಚ ಸುಖೀ ಅಸಾವೇ । ಐಸೀ ವಾಸನಾ ॥

"ಪರರ ದು:ಖ ಕಂಡು ನಮಗೆ ದು:ಖ, ಸುಖ ಕಂಡು ಸುಖವಾಗಬೇಕು. ಎಲ್ಲರೂ ಸುಖದಿಂದ ಬಾಳಲಿ! ಎಂಬ ಭಾವವನ್ನು ನಾವು ತಳೆಯಬೇಕು." ಈ ಬಗೆಯ ಭಾವನೆಯು ನಮ್ಮ ಪ್ರಾಚೀನ ಋಷಿಗಳ ಸೊತ್ತು. ಅವರು ದಿನಾಲೂ ಮಾಡುತ್ತಿದ್ದ ಪ್ರಾರ್ಥನೆಯನ್ನು ನೋಡಿ.

ಸರ್ವೇಪಿ ಸುಖಿನ: ಸಂತು । ಸರ್ವೇ ಸಂತು ನಿರಾಮಯಾ : ।
ಸರ್ವೇ ಭದ್ರಾಣಿ ಪಶ್ಯಂತು । ಮಾ ಕಶ್ಚಿತ್ ದು:ಖಭಾಪ್ನುಯಾತ್ ॥

ಓಂ ಶಾಂತಿ: ಶಾಂತಿ : ಶಾಂತಿ : ।

ಎಲ್ಲ ಜನ ಸುಖಿ ಇರಲಿ । ಆರೋಗ್ಯದಿಂದಿರಲಿ ।
ಯಾರೂ ದು:ಖದಲ್ಲಿಂದೂ ಬಳಲದಿರಲಿ ॥
ಎಲ್ಲ ಜನ ಧರ್ಮದಿಂದಭ್ಯುದಯವನು ಗಳಿಸಿ ।
ಪರಮಾರ್ಥ-ವೈಭವದಿ ಹೊಳೆಯುತಿರಲಿ ॥

ಈ ಬಗೆಯ ಭಾವನೆಯ ತೀವ್ರತೆಯ ಅಗತ್ಯವನ್ನು ಕುರಿತು ಸ್ವಾಮಿ ವಿವೇಕಾನಂದರು ಉಸಿರಿರುವದೇನೆಂದರೆ :

"First feel, feel for the misery of the poor and the down-

trodden ! Feel till your head reels and you feel that you will go mad ! Then alone, would remedies reveal themselves to you, for its relief."

"ಮೊದಲು ಬಡ-ದಲಿತರ ದುಃಸ್ಥಿತಿಯನ್ನು ಕಂಡು, ನಿಮ್ಮ ಹೃದಯವು ತುಂಬ ಕರಗಲಿ ! ಕಳವಳಗೊಳ್ಳಲಿ ! ! ಆದರ ಉತ್ಕಟತೆಯಿಂದ ನಿಮ್ಮ ತಲೆ ತಿರುಗಲಿ ! ಅವರ ದು:ಖವನ್ನು ಪರಿಹರಿಸುವ ಹುಚ್ಚು ನಿಮ್ಮನ್ನು ಆವರಿಸಲಿ! ಆಗ ಅದರ ಪರಿಹಾರದ ಹಂಚಿಕೆಯು ನಿಮಗೆ ತಾನಾಗಿಯೇ ಹೊಳೆಯಬಲ್ಲದು."

ಆದರೆ ಈ ಲೋಕ-ಕಲ್ಯಾಣದ ಆದರ್ಶವನ್ನು ಕುರಿತು, ಗುರುದೇವರು ತಮ್ಮ ಓಲೆಯೊಂದರಲ್ಲಿ ಈ ಬಗೆಯ ಎಚ್ಚರವನ್ನು ನೀಡಿರುವರು.

"Don't entertain morbid ideals, which you are not able to attain. Let them be practical. If you want to relieve misery, be a doctor. I f you want to remove their proverty be a lawyer, amass wealth and distribute it. If you want to remove their ignorance, be a teacher or a professor and start schools and colleges for them..... Simply building castles in the air, is of no use." (From, Memory)

"ನೀನು ಪಡೆಯಲರಿಯದ ಅವ್ಯವಹಾರ್ಯ ಆದರ್ಶಗಳನ್ನು ಮನಸ್ಸಿನಲ್ಲಿ ಬರಗೊಡಬೇಡ. ಅವು ವ್ಯವಹಾರ್ಯವಿರಲಿ ! ಬಡವರ ದೇಹ ದು:ಖವನ್ನು ಪರಿಹರಿಸಲು ಬಯಸಿದರೆ, ನೀನು ಡಾಕ್ಟರನಾಗು. ಅವರ ಬಡತನವನ್ನು ಅಳಿಸಲು ಬಯಸುವಿಯಾದರೆ, ವಕೀಲ ವೃತ್ತಿಯಿಂದ ವಿಪುಲ ಹಣವನ್ನು ಸಂಗ್ರಹಿಸಿ ಅವರಲ್ಲಿ ಅದನ್ನು ಹಂಚಿಬಿಡು. ಅವರ ಅಜ್ಞಾನವನ್ನು ಅಲ್ಲಗಳೆಯುವ ಬಯಕೆಯು ಪ್ರಬಲವಾಗಿದ್ದರೆ, ಶಾಲೆ-ಕಾಲೇಜುಗಳನ್ನು ಪ್ರಾರಂಭಿಸು..... ಸುಮ್ಮನೇ ಗಾಳಿಗೋಪುರಗಳನ್ನು ನಿಲ್ಲಿಸಿ ಪ್ರಯೋಜನವಿಲ್ಲ."

ಈ ಸಂದರ್ಭದಲ್ಲಿ ಗುರುದೇವರು ಇನ್ನೊಂದು ತುಂಬ ಬೆಲೆಯುಳ್ಳ ಮಾತನ್ನು ಅರುಹಿ, ಪದಾರ್ಥ-ಪರಮಾರ್ಥಗಳ ಸಮನ್ವಯವನ್ನು ಕಾಣಿಸಿರುವರು.

"We can never love man so well, as when we know that he partakes of the same divine nature, which is in us. Love to humanity must be based on love to God. It it is not, it is found to have a shaky foundation. It is the love which we bear to God that inspires us with love to man; and those who love man othewise, love him accidently and not essentially." [7]

"ನಮ್ಮಲ್ಲಿಯ ಪರಮಾತ್ಮನ ಅಂಶವು ಎಲ್ಲಮಾನವರಲ್ಲಿನೆಲೆಸಿರುವದು, ಎಂಬುದರ ಅರಿವಾದಾಗಲೇ ನಾವು ಮಾನವರನ್ನು ಚೆನ್ನಾಗಿ ಪ್ರೀತಿಸಬಲ್ಲೆವು. ಅಲ್ಲಿಯವರೆಗೆ ನಾವು

7) P.E.P. 181

ಅವರನ್ನು ಎಂದೂ ಸರಿಯಾಗಿ ಪ್ರೀತಿಸಲರಿಯೆವು. ಮಾನವನ ಪ್ರೀತಿಯು ಪರಮಾತ್ಮನ ಪ್ರೀತಿಯನ್ನು ನೆಮ್ಮಿರಬೇಕು. ಹಾಗಾಗದಿದ್ದರೆ, ಅದರ ತಳಹದಿಯೇ ಮಾನವರನ್ನು ಪ್ರೀತಿಸಲು ನಮ್ಮನ್ನು ಪ್ರೇರಿಸುವದು. ಪರಮಾತ್ಮನನ್ನು ಪ್ರೀತಿಸದೆ, ಮಾನವನನ್ನು ಪ್ರೀತಿಸುವವರ ಪ್ರೀತಿಯು, ಅತಿ ಆಕಸ್ಮಿಕವಾದುದು. ಅದು ಮೂಲಭೂತವಾದುದು ಇರಲರಿಯದು."

ಪರಮಾತ್ಮನನ್ನು ಭಜಿಸಿ, ಅವನನ್ನು ಕಂಡ ಸಂತರ ಲೋಕೋದ್ಧಾರವು ಅದೆಂತಹದಿರುವದು ನೋಡಿ, ಅವರ ಇರುವಿಕೆ, ನಡೆ-ನುಡಿ ಎಲ್ಲವೂ ಅಲೌಕಿಕ ಆದರ್ಶಯುತ. ಓರ್ವ ಸುಭಾಷಿತಕಾರರು ಹೇಳುವರು:

ಸಂತಾ ಮಹಾಂತಾ ನಿವಸಂತಿ ಲೋಕೇ
ವಸಂತವತ್ ಲೋಕಹಿತಂ ಚರಂತ: ।
ತೀರ್ಣಾ ಸ್ವಯಂ ಭೀಮಮಹಾರ್ಣವಂ ಜನಾನ್ ।
ಅಹೇತುನಾನ್ಯಾನ್ಪಿ ತಾರಯಂತ: ॥

"ಸಂತವರರು, ವಸಂತಕಾಲದಂತೆ ಜನರ ಕಲ್ಯಾಣವನ್ನು ಎಸಗುತ್ತ ಜಗತ್ತಿನಲ್ಲಿ ವಾಸಿಸುವರು. ತಾವು ಸ್ವತ: ಈ ಭವಸಾಗರವನ್ನು ದಾಟಿ, ಅವರು ಅನಾಸಕ್ತ ಬುದ್ಧಿಯಿಂದ ಬೇರೆ ಜನರನ್ನು ದಾಟಿಸುವರು, ಉದ್ಧರಿಸುವರು" ಇಂಥ ಸಂತರದು "ಪ್ರಸಾದದಿಂದ ಬೆಳಗುವ ವದನ, ದಯೆಯಿಂದ ತುಂಬಿದ ಹೃದಯ, ಸುಧೆಯನ್ನು ಸುರಿಸುವ ವಾಣಿ ಹಾಗೂ ಜನರನ್ನು ಉದ್ಧರಿಸುವ, ಉಪಕರಿಸುವ ಕಾರ್ಯ." ಇಂಥ ಸಂತರು ಅದಾರಿಗೆ ವಂದ್ಯರಾಗರು ?

ಸರಿ ! ಆದರೆ ಇಂತಹ ಸಂತರ ಕಲ್ಯಾಣ-ಕಾರ್ಯವು ಎಲ್ಲಿಯೂ ಕಾಣಬರುವದಿಲ್ಲವಲ್ಲಾ! ಅದಕ್ಕಾಗಿ ಇವರು ಯಾಕೆ ಯತ್ನಿಸುವದಿಲ್ಲ? ಇದನ್ನು ಗುರುದೇವರು ಈ ರೀತಿ ಉತ್ತರಿಸಿರುವರು-"ಆಧ್ಯಾತ್ಮಿಕ ಶಕ್ತಿಯು ಸದೈವ ಕೃತಿ ಪ್ರಧಾನ ಇರಲೇಬೇಕೆಂದಲ್ಲ, ಯಾಕೆಂದರೆ ಸಂತರು ಶಾಂತ ಕುಳಿತು ಮಾಡುವ ಕಾರ್ಯವೆ ತುಂಬ ಹಿರಿದಾದುದು. ಅವರ ಅನುಭೂತಿಯು ಅವರಿಗೆ ಪೂರ್ತಿಯಾಗಿ ಉಪಯುಕ್ತವಾಗಿಯೇ ಇರುವದು. ಇಷ್ಟೇ ಅಲ್ಲದೆ ಅದು ಸಮಾಜಕ್ಕೂ ಉಪಯುಕ್ತವಾಗುವದು. ಕಿಂಬಹುನಾ ಪರಮಾರ್ಥವನ್ನು ಪಡೆಯುವದೇ, ಪರಮಾತ್ಮನ ಭಕ್ತಿಯನ್ನು ಬೆಳೆಸುವದೇ, ಜಗತ್ತಿನ ಕಲ್ಯಾಣದ ಒಂದು ಹಿರಿದಾದ ರೀತಿಯಿರುವದು. ಈ ದೃಷ್ಟಿಯಿಂದ ಸಂತರೇ ಜಗತ್ತಿನ ನಿಜವಾದ ಉಪಕಾರ-ಕರ್ತರು. ಶಂಕರಾಚಾರ್ಯರು ನಮ್ಮ ದರ್ಶನ-ಜ್ಞಾನದ ಭಾಂಡಾರವನ್ನು ಬೆಳೆಸಿದರು. ಗೌತಮ ಬುದ್ಧರು ನಮ್ಮ ರಾಷ್ಟ್ರದ ನೈತಿಕ ಮಟ್ಟದ ಉನ್ನತಿಯನ್ನು ಸಾಧಿಸಿದರು. ಆದರೆ ಜ್ಞಾನೇಶ್ವರ, ತುಕಾರಾಮರಂತಹ ಸಂತರು ನಮ್ಮ ಸಮಾಜದ ಪಾರಮಾರ್ಥಿಕ ಎತ್ತರವನ್ನು ಬೆಳೆಸಿದರು. ಉಷ್ಣತೆಯನ್ನು ಅಳೆಯುವ Thermometer ದಂತೆ ನಮ್ಮ Spirito meter ಇರುವದು. ಅದನ್ನು ಹಚ್ಚಿನೋಡಿದರೆ ಈ ಸಂತರ ನಿಜವಾದ ಹಿರಿಮೆಯು ತಿಳಿದುಬರುವದು." (Talks)

ಸಾಮಾಜಿಕ ಆದರ್ಶಗಳು :

ಈ ವರೆಗೆ ಪಾಶ್ಚಿಮಾತ್ಯ ದಾರ್ಶನಿಕರ ವೈಯಕ್ತಿಕ ಆದರ್ಶಗಳಾದ ಸತ್ಯ(Truth),

ಸೌಂದರ್ಯ(Beauty), ಮತ್ತು **ಕಲ್ಯಾಣ**(Goodness), ಈ ತ್ರಿಮೂರ್ತಿಗಳ ಸ್ವರೂಪ, ಕಾರ್ಯ ಹಾಗೂ ಇವುಗಳ ಪರಮಾರ್ಥದಲ್ಲಿಯ ಪರಿಣತಿಯನ್ನೂ, ಸಾಮರಸ್ಯವನ್ನೂ ಅರುಹಿದ್ದಾಯಿತು. ಇನ್ನು ಅವರು ಪ್ರಚಾರಗೊಳಿಸಿದ ಸಾಮಾಜಿಕ ಆದರ್ಶಗಳಾದ (i) **ಸ್ವಾತಂತ್ರ್ಯ** (Liberty). (ii) **ಸಮತೆ** (Equality) ಮತ್ತು **ಬಂಧು-ಭಾವ** (Farternity), ಈ ತ್ರಿಮೂರ್ತಿಗಳ ಪರಿಚಯವನ್ನು ಮಾಡಿಕೊಡಲಿರುವೆ. ಇವು ಒಂದೊಂದಾಗಿ ನಮಗೆ ಅಪರಿಚಿತವಾದವುಗಳಲ್ಲ. ಆದರೆ ಇವು ಈ ಸಂಯುಕ್ತ ರೂಪವನ್ನು ತಳೆದು, ತ್ರಿಮೂರ್ತಿಗಳಾಗಿ ನಮ್ಮೆದುರಿಗೆ ಬಂದು ನಿಂತಿರುವದು ಇತ್ತೀಚಿನ ಕಾಲದಲ್ಲಿ. ಈ ತ್ರಿಮೂರ್ತಿಗಳು ಮೊದಲು ಮೈದಳೆದುದು ಫ್ರಾನ್ಸದೇಶದ ದಾರ್ಶನಿಕರ ಎದೆಯಲ್ಲಿ ಅಲ್ಲಿಂದ ಹೊರಬಂದು ಅವು ಅಲ್ಲಿನ ಜನಜೀವನದಲ್ಲಿ ಮಹಾಕ್ರಾಂತಿಯ ದಾವಾನಲವನ್ನೇ ಪ್ರಜ್ವಲಿಸಿದವು. ಅದರಲ್ಲಿ ಅನೇಕರ ಆಹುತಿಯನ್ನು ಪಡೆದವು. ತಮ್ಮ ನಿಜರೂಪವನ್ನು ಕಳೆದುಕೊಂಡು ವಿಕೃತ ರೂಪದಿಂದ, ಪಿಶಾಚಿಗಳಂತೆ ಮೆರೆದು, ಜನಜೀವನದಲ್ಲಿ ಅರಾಜಕತೆಯನ್ನೂ, ಅಶಾಂತಿಯನ್ನೂ ಬೆಳೆಸಿ, ತಮ್ಮ ನಾಡನ್ನು ಮರಳಿ ಸರ್ವಾಧಿಕಾರಿಗಳ ದಬ್ಬಾಳಿಕೆಗೂ, ಅನೈತಿಕ ಜೀವನಾದರ್ಶಗಳಿಗೂ ಆಸ್ಪದ ಮಾಡಿಕೊಟ್ಟವು.

ಇವನ್ನೂ ಇವುಗಳ ಪ್ರಭಾವದಿಂದ ಪಾಶ್ಚಾತ್ಯ ನಾಗರಿಕತೆಯಲ್ಲಿ ನಿರ್ಮಾಣವಾದ ವಿಕೃತ ಪರಿಣಾಮಗಳನ್ನೂ ಗುರುದೇವರು ಕೆಳಗೆ ಕಾಣಿಸಿದಂತೆ ಬಣ್ಣಿಸಿರುವರು.

"These ideas of Liberty, Equality and Fraternity would lead merely to national death. The French Revolution, which is so very glorified, is not this Revolution responsible for modern Anarchism and Nihilism? It is time that India should cease to be polluted by merely the worse elements of western civilisation..... Has not the suffragette movement served simply to make men of Eurpoean women, by taking away all their elegant graces and social virtues ? Does it not seem that "almost a new sex is on the make like the feminine neuter of Ants and Bees-not adapted for child bearing" and yet with a pretended power for social service? And what is it due to but to the spirit of "Liberty, Social Equality, Rationalism and Fraternity?"[8]

"ಈ ಸ್ವಾತಂತ್ರ್ಯ, ಸಮತೆ ಮತ್ತು ಬಂಧುಭಾವದ ಕಲ್ಪನೆಗಳು-ಆದರ್ಶಗಳು ರಾಷ್ಟ್ರದ ವಿನಾಶವನ್ನು ನೆರವೇರಿಸಬಹುದು-ಅತಿಯಾಗಿ ಹೊಗಳಲಾದ "ಫ್ರೆಂಚಕ್ರಾಂತಿಯು" ಆಧುನಿಕ ಅರಾಜಕತೆಗೆ, ಇವುಗಳ ನಿರ್ಮಿತಿಯಾದ ನಾಸ್ತಿಕತೆಗೆ ಹೊಣೆಯಾಗಿರುವದಿಲ್ಲವೇ? ಪಾಶ್ಚಾತ್ಯ ನಾಗರೀಕತೆಯ ಹೀನತಮ ಅಂಶಗಳನ್ನು ಅನುಕರಿಸಿ, ಭಾರತವು ತನ್ನ ಪಾವಿತ್ರ್ಯವನ್ನು

8) P.E.P. 184

ಕಲಂಕಿಸುವದನ್ನು ನಿಲ್ಲಿಸುವ ಸಮಯ ಈಗ ಒದಗಿರುವದು. ಮನೋಹರವಾದ ಲಾವಣ್ಯವನ್ನು ಹಾಗೂ ಸಾಮಾಜಿಕ ಸದ್ಗುಣಗಳನ್ನು ಕಸಿದುಕೊಂಡು, ಯುರೋಪದಲ್ಲಿಯ ಸ್ತ್ರೀಯರನ್ನು ಪುರುಷರನ್ನಾಗಿ ಪರಿವರ್ತಿಸಿಲ್ಲವೇ ಅಲ್ಲಿಯ ಮತಾಧಿಕಾರದ ಚಳವಳಿ ? ಅದರ ಫಲವಾಗಿ ಇರುವೆ ಜೇನ್ನೋಣಗಳಲ್ಲಿಯ "ನಪುಂಸಕ ಹೆಣ್ಣಿನಂಥ" - ಮಕ್ಕಳನ್ನು ಹೆರಲು ಅಯೋಗ್ಯವಾದ ಒಂದು ನೂತನ ಹೆಂಗೆಳೆಯರ ಪೀಳಿಗೆಯನ್ನೇ ಅದು ನಿರ್ಮಿಸಿದಂತೆ ಕಾಣುವುದಿಲ್ಲವೆ ? ಹೀಗಿದ್ದರೂ ಅವರ ಸಮಾಜ ಸೇವೆಯ ತಮ್ಮ ಸಾಮರ್ಥ್ಯವನ್ನು ಕಾಣಿಸುವದರಲ್ಲಿ ಧನ್ಯತೆಯನ್ನು ಪಡೆವರು. ಇದೆಲ್ಲ "ಸ್ವಾತಂತ್ರ್ಯ ಸಾಮಾಜಿಕ ಸಮತೆ, ಬುದ್ಧಿನಿಷ್ಠೆ ಬಂಧುಭಾವ" ಇವುಗಳ ಪ್ರಭಾವದ ಪರಿಣಾಮವಲ್ಲವೆ"

ಈ ತ್ರಿಮೂರ್ತಿಗಳು ಒಂದೆಡೆ ಅವತರಿಸಿದರೂ, ಅವು ತಮ್ಮ ನಿಜಸ್ವರೂಪವನ್ನು ಕಳೆದುಕೊಂಡು, ವಿಕೃತರೂಪ ತಳೆದುದರಿಂದ, ಅವರಲ್ಲಿ ಹೊಂದಿಕೆಯಾಗದಾಗಿದೆ. ಅವರಲ್ಲಿ ವಿರೋಧ-ಭಕ್ತಿಯು ನೆಲೆಸಿರುವದು. ಆದುದರಿಂದ ಸ್ವಾತಂತ್ರ್ಯವು, ಸಮತೆ ಬಾಂಧವ್ಯಗಳನ್ನು ತೆಗಳುವದು; ಸಮತೆಯು ಸ್ವಾತಂತ್ರ್ಯ ಬಾಂಧವ್ಯಗಳನ್ನು ತಿರಸ್ಕರಿಸುವದು: ಹಾಗೂ ಬಾಂಧವ್ಯವು ಸ್ವಾತಂತ್ರ್ಯ-ಸಮತೆಗಳನ್ನು ತನ್ನೆಡೆಗೆ ಹಾಯಗೊಡುವದಿಲ್ಲ. ಅದರಲ್ಲಿಯ ಈ ವಿರೋಧವನ್ನು ಅಳಿಸಲು ಗುರುದೇವರು ಬಯಸುವರು. ಅವರಿಗೆ ಅವರವರ ನಿಜಕಲ್ಯಾಣಕರ ರೂಪವನ್ನು ಅರುಹಿ, ಅವರಲ್ಲಿ ಹೊಂದಿಕೆಯನ್ನು ಹಾಗೂ ಪರಮಾರ್ಥದೊಡನೆ ಅವುಗಳ ಸಮನ್ವಯವನ್ನು ಅವರು ಕಾಣಿಸಿರುವರು. ಅದನ್ನು ಇಲ್ಲಿ ಕಿರಿದರಲ್ಲಿ ಅರುಹಲಿರುವೆ.

(i) ಸ್ವಾತಂತ್ರ್ಯ:

ಪರಮಾತ್ಮನು ದಯಪಾಲಿಸಿದ ನಿಯತ ಸ್ವಾತಂತ್ರ್ಯದ ದಾರ್ಶನಿಕ ರೂಪವನ್ನು ಈ ಮೊದಲು ವಿವರಿಸಲಾಗಿದೆ. ಇಂದು ಅದರ ವೈಯಕ್ತಿಕ, ಸಾಮಾಜಿಕ ಜೀವನದಲ್ಲಿಯ ರೂಪವನ್ನು ವಿವರಿಸಲಿರುವೆ. ಅದರ ಎರಡು ಬಗೆಗಳಾದ **ನಿಯಂತ್ರಿತ, ಅನಿಯಂತ್ರಿತ** ಸ್ವಾತಂತ್ರ್ಯಗಳ ಲಕ್ಷಣ, ಅವುಗಳ ಪರಿಣಾಮಗಳು, ನಿಯಂತ್ರಿತ ಸ್ವಾತಂತ್ರ್ಯವು ಪರಮಾರ್ಥದೊಡನೆ ಸಮನ್ವಯಗೊಳ್ಳುವ ರೀತಿ, ಇತ್ಯಾದಿ ವಿಷಯಗಳನ್ನು ಗುರುದೇವರ ಸಾಮಾನ್ಯ ಬೋಧೆಯ ಬೆಳಕಿನಲ್ಲಿ ವಿವರಿಸಲಿರುವೆ. ಯಾಕೆಂದರೆ ಅವರು ಇವನ್ನು ವಿಶೇಷವಾಗಿ ಚರ್ಚಿಸಿರುವದಿಲ್ಲ.

ಸ್ವಾತಂತ್ರ್ಯವು ಸ್ವತಂತ್ರ ಶಬ್ದದ ನಾಮ-ರೂಪವು. ಸ್ವತಂತ್ರದಲ್ಲಿ ಎರಡು ಶಬ್ದಗಳು. **ಸ್ವ** ಮತ್ತು **ತಂತ್ರ**. **ಸ್ವ** ಅಂದರೆ ದೇಹ, ಇಂದ್ರಿಯ, ವಿಕಾರ, ವಿವೇಕ ಹಾಗೂ ಆತ್ಮ. **ತಂತ್ರ** ಅಂದರೆ ಶಾಸನ, ನಿಯಂತ್ರಣ, ಮಾರ್ಗದರ್ಶನ, ದೇಹ, ಇಂದ್ರಿಯ, ವಿಕಾರಗಳ ಶಾಸನರೂಪಿಯಾದ ಸ್ವಾತಂತ್ರ್ಯವು ವಿಕೃತ-ಅವನತ ಸ್ವಾತಂತ್ರ್ಯ-ಸ್ವೈರಾಚಾರ. ಅದೇ ಈಗ ಎಲ್ಲೆಲ್ಲಿಯೂ ಗೌರವಾನ್ವಿತವಾಗಿ ಮೆರೆಯುತ್ತಿದೆ. ಅನೇಕ ಅನಾಹುತಗಳನ್ನು ಪ್ರಚುರಗೊಳಿಸಿದೆ. ಇದರ ಬದಲಾಗಿ ಹಿರಿಯರು, ವಿವೇಕ, ಆತ್ಮ, ಪರಮಾತ್ಮ ಇವರ ಶಾಸನರೂಪಿಯಾದ ನೈಜ, ಉನ್ನತ ಸ್ವಾತಂತ್ರ್ಯವು, ಅನಂತ ಸುಖ, ಹಿತ, ಕಲ್ಯಾಣಗಳ ನೆಲೆಯಾಗಿರುವದು, ಸೆಲೆಯಾಗಿರುವದು. ಇಂಥ ಉನ್ನತ ಸ್ವಾತಂತ್ರ್ಯದ ಕಲ್ಯಾಣ ಕಾರ್ಯವನ್ನು "ಕಠೋಪನಿಷತ್ತು

" ಈ ಬಗೆಯಾಗಿ ಬಣ್ಣಿಸಿರುವದು.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನ: ಪ್ರಗ್ರಹಮೇವ ಚ ।।1-3-3।।

ಇಂದ್ರಿಯಾಣಿ ಹಯಾನ್ಯಾಹುರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣ : ।।1-3-4।।

ವಿಜ್ಞಾನ-ಸಾರಥಿರ್ಯಸ್ತು ಮನ: ಪ್ರಗ್ರಹವಾನ್ನರ : ।
ಸೋಧ್ವನ: ಪಾರಮಾಪ್ನೋತೀ ತದ್ವಿಷ್ಣೋ: ಪರಮಂ ಪದಮ್ ।।1-3-9।।

"ಆತ್ಮನನ್ನು ರಥಿಯೆಂದೂ, ಶರೀರವನ್ನು ರಥವೆಂದೂ, ಬುದ್ಧಿಯನ್ನು ಸಾರಥಿಯೆಂದೂ, ಮನಸ್ಸನ್ನು ಕಡಿವಾಣವೆಂದೂ ತಿಳಿ. ಇಂದ್ರಿಯಗಳನ್ನು ಕುದುರೆಗಳೆಂದು ಹೇಳುತ್ತಾರೆ. ವಿಷಯಗಳು ಅವುಗಳ ಮಾರ್ಗಗಳೆಂದು ಹೇಳುತ್ತಾರೆ. ಶರೀರ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದ (ಆತ್ಮನನ್ನು) ಸಂಸಾರಿಯೆಂದು ವಿವೇಕಿಗಳು ಹೇಳುತ್ತಾರೆ. ಯಾವನು ವಿಜ್ಞಾನವೆಂಬ ಸಾರಥಿಯುಳ್ಳವನೋ, ಮನಸ್ಸೆಂಬ ಕಡಿವಾಣವನ್ನು ಹಿಡಿದಿರುವನೋ, ಅವನು ಸಂಸಾರ-ಗತಿಯ ಕೊನೆಯನ್ನು ಹೊಂದುತ್ತಾನೆ. ಅದೇ ವಿಷ್ಣುವಿನ ಪರಮ ಪದ."

ನಮ್ಮ ಜೀವನವು ಒಂದು ಮಹಾಯಾತ್ರೆ. ನಮ್ಮ ರಥವು ವಿವೇಕ ಸಾರಥಿಯ ನಿಯಂತ್ರಣದಲ್ಲಿ ಇರಬೇಕು. ಅವನು ಇಂದ್ರಿಯಾಶ್ವಗಳನ್ನು, ಮನಸ್ಸಿನ ಕಡಿವಾಣವನ್ನು ತನ್ನ ಅಂಕೆಯಲ್ಲಿ ಇರಿಸಿಕೊಳ್ಳಬೇಕು. ಅಂದರೇನೇ ನಮ್ಮ ರಥವು ಪರಮಾತ್ಮನ ಪಾದವನ್ನು ಸೇರಬಲ್ಲದು. ತನ್ನ ಹಿರಿದಾದ ಗುರಿಯನ್ನು ತಲುಪಬಲ್ಲದು, ಎಂಬುದು ಮೇಲಿನ ರೂಪಕದ ಸಂದೇಶ.

ಈ ಶಾಸನ-ನಿಯಂತ್ರಣಗಳನ್ನು ಕುರಿತು ಗುರುದೇವರು ಮೂರು ಬಗೆಗಳನ್ನು ಅರುಹಿರುವರು; ಹಿರಿಯರ-ಶಾಸನ, ಸ್ವಯಂ-ಶಾಸನ, (ವಿವೇಕ-ಶಾಸನ) ಪರಮಾತ್ಮ-ಶಾಸನ. ಪ್ರಾರಂಭದಲ್ಲಿ ನಾವು ಹಿರಿಯರ ನಿಯಂತ್ರಣದಲ್ಲಿ ಅವರ ಶಾಸನದಂತೆ ವರ್ತಿಸಬೇಕು. ಮುಂದೆ ನಮ್ಮಲ್ಲಿಯ ವಿವೇಕವು ಜಾಗೃತವಾಯಿತೆಂದರೆ ಅದರ ಶಾಸನದಂತೆ ನಡೆಯಬೇಕು. ಮತ್ತು ನಮ್ಮ ಸುದೈವದಿಂದ ನಮ್ಮ ಸಾಧನದ ಫಲವಾಗಿ, ನಮಗೆ ಪರಮಾತ್ಮನ ದರ್ಶನ ಲಭಿಸಿತೆಂದರೆ ಆತನ ಆಜ್ಞೆಯಂತೆ ನಡೆಯಬೇಕು.

ನಿಜವಾಗಿ ನಿಯಂತ್ರಿತ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯವು. ಅದರ ಶಾಸನದಿಂದಲೇ ನಿಜವಾದ ಸುಖ, ಹಿತ, ಕಲ್ಯಾಣ. ಅದು ಅನಿಯಂತ್ರಿತ ಸ್ವಾತಂತ್ರ್ಯದಿಂದ-ಸ್ವೈರಾಚಾರದಿಂದ ಲಭಿಸದು, ಸ್ವೈರಾಚಾರದಿಂದ ದು:ಖ-ಅಕಲ್ಯಾಣ-ಅಶಾಂತಿ-ಅನಾಹುತಗಳು ಜೀವನವನ್ನು ಆಕ್ರಮಿಸುವವು. ಆದುದರಿಂದ ಸ್ವಾತಂತ್ರ್ಯವೆಂದರೆ ನಿಯಂತ್ರಣದ ಅಭಾವವಲ್ಲ

ಬಂಧನದ ಅಭಾವವಲ್ಲ. ಬಾಳನ್ನು ಬೆಳವಣಿಗೆಯನ್ನು ಕುಗ್ಗಿಸುವ ನಿಯಂತ್ರಣಗಳ ಅಭಾವ. ಪ್ರಪಂಚದಲ್ಲಿಪ್ರತಿಯೊಂದು ಪ್ರಾಣಿಯು ಸುಖವಾಗಿ ಬಾಳಬೇಕು. ಹುಲುಸಾಗಿ ಬೆಳೆಯಬೇಕು. ಅದಕ್ಕಾಗಿ ಅದಕ್ಕೆ ಪೂರ್ಣ ಅವಕಾಶವಿರಬೇಕು. ತನ್ನಲ್ಲಿದ್ದ ಎಲ್ಲ ಒಳ್ಳೆಯ ಶಕ್ತಿಗಳನ್ನು ಬೆಳೆಸಿ, ಅದರ ವೈಭವದಿಂದ ಮೆರೆಯಬೇಕು. ಅದರಿಂದಲೇ ಪರಮಾತ್ಮನ ಸೃಷ್ಟಿಗೆ ಸೊಬಗು, ಅದಿದ್ದರೆ ಸಮಾಜಕ್ಕೆ ಸಿರಿ, ನಾಡಿಗೆ ಭೂಷಣ.

ಆದರೆ ಒಬ್ಬನ ಬೆಳವಣಿಗೆ, ಇನ್ನೊಬ್ಬನ ಬೆಳವಣಿಗೆಯನ್ನು ತಡೆಯಬಾರದು. ತಾವು ಬಾಳಿ ಬೆಳೆದು, ಅನ್ಯರನ್ನು ಬೆಳಯಗೊಡಬೇಕು. ಅವರ ಬೆಳವಣಿಗೆಗೆ ನೆರವಾಗಬೇಕು. ಅನಿಯಂತ್ರಿತ ಸ್ವಾತಂತ್ರ್ಯದಲ್ಲಿ ಇದು ಅಸಾಧ್ಯವಾದ ಮಾತು. ಅಲ್ಲಿ ಪರಸ್ಪರರ ತಿಕ್ಕಾಟ ಉಂಟಾಗುವದು ಖಂಡಿತ. ಅದು ಕಲಹ ಪ್ರವೃತ್ತರನ್ನು ನಾಶಮಾಡುವದಲ್ಲದೆ ಬೇರೆ ಜನರನ್ನು ಬೂದಿಮಾಡದಿರದು, ಅದಕ್ಕಾಗಿಯೇ ಪ್ರಪಂಚದ ಸರ್ವವಿಧ ಪ್ರಗತಿ ವೈಭವ ನಿಯಂತ್ರಿತ-ಸ್ವಾತಂತ್ರ್ಯದಿಂದಲೇ ಸಾಧ್ಯ ಎಂಬುದು ಹಿರಿಯರ ಬೋಧೆ. ಅದಕ್ಕಾಗಿ ಜನರಲ್ಲಿ ಯೋಗ್ಯ ತಿಳುವಳಿಕೆಯನ್ನು ಉಂಟು ಮಾಡಲು ಬೇಕು. ಅದನ್ನು ಜೀವನದಲ್ಲಿ ಬಳಸುವ ಬಗೆಯನ್ನು ಜನರಿಗೆ ಅರುಹಬೇಕು.

ತಮ್ಮಲ್ಲಿಯ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಆತನ ತಂತ್ರದಿಂದ, ಆತನ ಶಾಸನದ ಮೇರೆಗೆ ನಡೆಯುವದೇ ನಿಜವಾದ ಸ್ವಾತಂತ್ರ್ಯ. ಅದರಿಂದ ನಮ್ಮಲ್ಲಿ ನವ ಚೈತನ್ಯವು ಮೈದಳೆಯುವದು. ಅದರ ಪ್ರಭಾವದಿಂದ ನಾವು ನಮ್ಮೊಡನೆ, ಸಮಾಜಕ್ಕೂ ಶಾಂತಿಯ ದಾರಿಯನ್ನು ಕಾಣಿಸಿ, ಅದಕ್ಕೂ ನಿಜವಾದ ಸ್ವಾತಂತ್ರ್ಯದ ಸೌಖ್ಯವನ್ನು ದಯಪಾಲಿಸಲು ಸಮರ್ಥರಾಗಬಲ್ಲೆವು. ಅದನ್ನು ಪಡೆಯಬೇಕಾದರೆ ನಾವು ನಮ್ಮ ಇಂದ್ರಿಯ, ಮನ, ಬುದ್ಧಿಗಳನ್ನು ಆತ್ಮನಿಂದ ನಿಯಂತ್ರಿಸಬೇಕು. ಇದೇ ಸ್ವಾತಂತ್ರ್ಯ-ಸುಖವನ್ನು ಪಡೆಯುವ ಹಿರಿದಾರಿ.

ವ್ಯಕ್ತಿಯು ಆತ್ಮನ ಅಧೀನ ಇರಬೇಕಾದಂತೆ, ಸಮಾಜವು ಆತ್ಮವಿದರ ಆಧೀನವಿರಬೇಕು. ಅಂದರೇನೇ ಅದಕ್ಕೆ ಸ್ವಾತಂತ್ರ್ಯದ ಪೂರ್ಣ ಫಲವು ಲಭಿಸಬಲ್ಲದು. ಸಮಾಜದ ಶಾಶ್ವತ ಕಲ್ಯಾಣದ ಸ್ಪಷ್ಟಕಲ್ಪನೆಯು ಇಂಥ ಅನುಭಾವಿಗಳನ್ನುಳಿದು ಇನ್ನಾರಿಗೆ ಇರಬಲ್ಲದು? ಕೀಳು ಸ್ವಾರ್ಥದ ಕೊಳಚೆಯಲ್ಲಿಮುಳುಗಿದ ಕುರಡರಿಗೆ, ಇಂಥ ನಿಚ್ಚಳವಾದ ದೂರದರ್ಶನವು ಹೇಗೆ ಸಾಧ್ಯ ? ಆದುದರಿಂದ ಸಮಾಜದ ಉನ್ನತಿಗಾಗಿ ಅನುಭಾವಿಗಳಾದ ಹಿರಿಯರ ನಿಯಂತ್ರಣ-ಶಾಸನಗಳು ಅವಶ್ಯ ಬೇಕೆಂದು ಗುರುದೇವರ ಅಭಿಮತ.

ಈ ಬಗೆಯಾಗಿ ಆತ್ಮನಿಯಂತ್ರಿತ ಸ್ವಾತಂತ್ರ್ಯವು ವ್ಯಕ್ತಿ ಸಮಾಜಗಳ ಜೀವನದಲ್ಲಿ ಶಾಂತಿ-ಸಾಮರಸ್ಯಗಳನ್ನು ನೀಡಬಲ್ಲದು. ವ್ಯಕ್ತಿಯಾಗಲಿ, ಸಮಾಜವಾಗಲಿ, ಪರಮಾತ್ಮನ ಶಾಸನವನ್ನೇ ಮನ್ನಿಸಿ, ತಮ್ಮ-ತಮ್ಮ ಜೀವನವನ್ನು ಸಾಗಿಸುವದರಲ್ಲಿಯೇ ಉಭಯತರ ಶಾಶ್ವತ ಕಲ್ಯಾಣ ನೆಲೆಸಿದೆ.

(ii) **ಸಮತೆ :** ಈ ವಿಷಯವನ್ನು ಎರಡು ದೃಷ್ಟಿಯಿಂದ ವಿಚಾರಿಸಬಹುದು. ಅದೊಂದು ಮಾನವನ ಸದ್ಗುಣ (Human Virtue) ಹಾಗೂ ಮಾನವನ ಹಕ್ಕು (Hu-

man Right) ಇರುವದು ಗುರುದೇವರು ಅದನ್ನು ಸದ್ಗುಣದ ದೃಷ್ಟಿ ಯಿಂದ ಚರ್ಚಿಸಿರುವರು. ಆದುದರಿಂದ ಈ ಸದ್ಗುಣದ ಸ್ವರೂಪವೇನು? ಅದನ್ನು ಪಡೆಯುವದೆಂತು ? ಅದನ್ನು ಸಮಾಜದಲ್ಲಿ ಬಳಸುವ ಬಗೆ ಹೇಗೆ ? ಅದನ್ನು ಪರಮಾರ್ಥದಲ್ಲಿ ಸಮನ್ವಯಗೊಳಿಸುವದೆಂತು ? ಇದನ್ನು ಕುರಿತು ಗುರುದೇವರು ಏನನ್ನು ಅರುಹಿರುವರು ? ಎಂಬುದನ್ನು ಸ್ವಲ್ಪದರಲ್ಲಿ ಅರುಹಲು ಯತ್ನಿಸುವೆ.

ಸ್ವರೂಪ : ಸಮತೆಯು ಒಂದು ಮನ: ಸ್ಥಿತಿ (State of mind) ಅದು ಅಚಲವಾದುದು, ಸಮತಲವಾದುದು, (Balanced) ಪ್ರಸನ್ನವಾದುದು, ಶಾಂತವಾದುದು. ಗೀತೆಯ ಆದರ್ಶ ಪುರುಷರಾದ ಸ್ಥಿತಪ್ರಜ್ಞ ಹಾಗೂ ಭಕ್ತರ ಕೆಳಗಿನ ವರ್ಣನೆಯಲ್ಲಿ ಸಮತೆಯ ಸ್ವರೂಪವು ಸರಿಯಾಗಿ ತಿಳಿಯಬಹುದು.

ದು:ಖೇಷ್ವ ನುದ್ವಿಗ್ನಮನಾ: ಸುಖೇಷು ವಿಗತಸ್ಪೃಹ : ।
ವೀತರಾಗಭಯಕ್ರೋಧ : ಸ್ಥಿತಧೀರ್ಮುನಿರುಚ್ಯತೇ ॥2-56॥

"ಯಾರ ಮನಸ್ಸು ದು:ಖದಿಂದ ನೊಂದುಕೊಳ್ಳುವುದಿಲ್ಲವೋ, ಸುಖದ ಬಗೆಗೆ ಉದಾಸೀನವಿರುವದೋ, ಯಾರು ಬಯಕೆ, ಭೀತಿ, ಸಿಟ್ಟು ಇವನ್ನು ತೊರೆದಿರುವರೋ, ಅವರನ್ನು ಸ್ಥಿರಬುದ್ಧಿಯುಳ್ಳವರು ಎಂದು ಕರೆಯುತ್ತಾರೆ."

ಸಮ: ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋ : ।
ಶೀತೋಷ್ಣ ಸುಖ-ದು:ಖೇಷು ಸಮ: ಸಂಗವಿವರ್ಜಿತ: ॥12-18॥

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನ ಚಿತ್ ।
ಅನಿಕೇತ: ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರ: ॥12-19॥

"ಶತ್ರು-ಮಿತ್ರರು, ಮಾನ-ಅಪಮಾನ, ಶೀತ-ಉಷ್ಣ ಸುಖ-ದು:ಖ ಇವನ್ನು ಸಮನಾಗಿ ಬಗೆಯುವವನು, ಸ್ತುತಿ, ನಿಂದೆಗಳನ್ನು ಸಮಾನ ಬಗೆದು ಮೌನ ತಳೆಯುವವನು, ಇದ್ದುದರಲ್ಲಿ ಸಂತೋಷ ಪಡೆಯುವವನು, ಯಾರ ಆಶ್ರಯವನ್ನೂ ಬಯಸದವನು. ಇಂಥ ಸ್ಥಿರಬುದ್ಧಿಯುಳ್ಳ ಭಕ್ತನು ನನಗೆ ಪ್ರಿಯನು."

ಈ ಶ್ಲೋಕಗಳಲ್ಲಿ ಸಮತೆಯುಳ್ಳ ಮನಸ್ಸಿನ ಸರಿಯಾದ ಚಿತ್ರವನ್ನು ಕಾಣಬಹುದು. ಗುರುದೇವರು ಸಮತೆಯನ್ನು ಕುರಿತು ಈ ಬಗೆಯಾಗಿ ಬರೆದಿರುವರು.

The Virtue Samata or equanimity is both a condition and a result of God-Devotion. Unless we preserve equanimity of mind, we cannot reach God, and unless we have realised God, we cannot reach the highest stage of euanimity."[9]

"ಸಮತೆ ಎಂಬ ಸದ್ಗುಣವು ಪರಮಾತ್ಮನ ಭಕ್ತಿಯ ಕಾರಣವೂ, ಪರಿಣಾಮವೂ ಆಗಿರುವದು. ನಾವು ಮನಸ್ಸಿನಲ್ಲಿ ಸಮತೆಯನ್ನು ಕಾಯ್ದುಕೊಳ್ಳದೆ, ಪರಮಾತ್ಮನನ್ನು

9) B.P.G.P. 213

ಪಡೆಯಲರಿಯೆವು ಮತ್ತು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳದೆ, ಸಮತೆಯ ಉನ್ನತತಮ ಅವಸ್ಥೆಯನ್ನು ಮುಟ್ಟಲರಿಯೆವು."

ಇಲ್ಲಿ ಗುರುದೇವರು ಸಮತೆ, ಭಕ್ತಿ ಅನುಭೂತಿಗಳಲ್ಲಿ ಸಮನ್ವಯವನ್ನು ಕಾಣಿಸಿರುವರು.

ಪಡೆಯುವ ಸಾಧನ :

ಸಿದ್ದರ ಲಕ್ಷಣಗಳು, ಸಾಧಕರ ಸಾಧನಗಳು ಎಂಬುದು ಹಿರಿಯರ ಹೇಳಿಕೆ. ಗುರುದೇವರು ಸ್ಥಿತಪ್ರಜ್ಞರ ನಾಲ್ಕು ಬಗೆಯ ಲಕ್ಷಣಗಳನ್ನು ಅರುಹಿರುವರು. (ಅ) ಮಾನಸಿಕ ಲಕ್ಷಣಗಳು, (ಆ) ನೈತಿಕ ಲಕ್ಷಣಗಳು, (ಇ) ಸಾಮಾಜಿಕ ಲಕ್ಷಣಗಳು, ಹಾಗೂ (ಈ) ಪಾರಮಾರ್ಥಿಕ ಲಕ್ಷಣಗಳು. ಇವುಗಳಲ್ಲಿ ಮೊದಲಿನ ಎರಡು ಲಕ್ಷಣಗಳು **ಸಮತೆಯನ್ನು ಪಡೆಯುವ ಸಾಧನಗಳಾಗಬಲ್ಲವು.** ಮುಂದಿನ ಎರಡು ಅದರ ಪರಿಣಾಮಗಳಾಗಬಲ್ಲವು. ಅದನ್ನು **ಬಳಸುವ ಬಗೆಗಳಾಗಬಲ್ಲವು.**

(ಅ) ಮಾನಸಿಕ ಲಕ್ಷಣಗಳು : ಅವುಗಳಲ್ಲಿ ಇಂದ್ರಿಯ ನಿಗ್ರಹವು ಒಂದು, ಮನಸ್ಸಂಯಮವು ಇನ್ನೊಂದು.

ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶ: ।
ಇಂದ್ರಿಯಾಣೀಂದ್ರಿಯಾರ್ಥೆಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥2-58॥

"ಆವೆಯು ತನ್ನ ಅವಯವಗಳನ್ನು ಪೂರ್ತಿಯಾಗಿ ಒಳಗೆ ಎಳೆದುಕೊಳ್ಳುವಂತೆ, ಯಾವನು ತನ್ನ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ಪೂರ್ತಿಯಾಗಿ ಸೆಳೆದುಕೊಳ್ಳುವನೋ ಅವನ ಬುದ್ಧಿಯು ಸ್ಥಿರವಾಗುವುದು."

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇರ್ಜುನ
ಕರ್ಮೇಂದ್ರಿಯೈ: ಕರ್ಮಯೋಗಮಸಕ್ತ : ಸ ವಿಶಿಷ್ಯತೇ ॥3-7॥

"ಯಾವನು ಮನಸ್ಸಿನಿಂದ ಕರ್ಮೇಂದ್ರಿಯಗಳನ್ನು ನಿಯಂತ್ರಿಸಿ, ಅನಾಸಕ್ತ ಬುದ್ಧಿಯಿಂದ ಕರ್ಮಯೋಗವನ್ನು ಆಚರಿಸುವನೋ ಅವನೇ ಹಿರಿಯನಿಹನು."

ಈ ಲಕ್ಷಣಗಳ ಮೇರೆಗೆ ತನ್ನ ಇಂದ್ರಿಯ ಮನಸ್ಸುಗಳನ್ನು ನಿಗ್ರಹಿಸಿ ಸಾಧಕನು ಸಮತೆಯನ್ನು ಪಡೆಯಲು ಯತ್ನಿಸಬೇಕು.

(ಆ) ನೈತಿಕ ಲಕ್ಷಣಗಳು : ಕಾಮನೆಯನ್ನು ತೊರೆಯುವದು ನಿಷ್ಕಾಮನಾಗುವದು ಎರಡನೆಯ ಲಕ್ಷಣ.

ಆಪೂರ್ಯಮಾಣಮಚಲಪ್ರತಿಷ್ಠಮ್ ।
ಸಮುದ್ರಮಾಪ: ಪ್ರವಿಶಂತಿ ಯದ್ವತ್॥
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ।
ಸ ಶಾಂತಿ ಮಾಪ್ನೋತಿ ನ ಕಾಮ-ಕಾಮೀ ॥2-70॥

"ಸಮುದ್ರವು ತುಂಬಿದೆ. ಅದರಲ್ಲಿ ನೂರಾರು ನದಿಗಳು ಸೇರುತ್ತವೆ. ಆದರೆ ಸಮುದ್ರವೇನೂ ಅವುಗಳ ನೀರು ಸೇರುವದರಿಂದ ಬೆಳೆಯುವದಿಲ್ಲ. ಈ ನೀರಿನ ಹೆಚ್ಚಳವು ಸಮುದ್ರದ ಮೇಲೆ ಯಾವ ಬಗೆಯ ಪರಿಣಾಮವನ್ನೂ ಮಾಡದಿರುವಂತೆ, ಕಾಮನೆಗಳು ಯಾವನ ಶಾಂತ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಮಾಡಲರಿಯವೋ ಅವನೇ ಶಾಂತಿಯನ್ನು ಪಡೆಯುವನು."

ಈ ಲಕ್ಷಣದ ಮೇರೆಗೆ ಸಾಧಕನು ಎಲ್ಲ ಕಾಮನೆಗಳನ್ನು ತೊರೆದು, ಸಮತೆಯನ್ನು ಪಡೆಯಲು ಯತ್ನಿಸಬೇಕು.

ಬಳಸುವ ಬಗೆಗಳು :

(ಇ) **ಸಾಮಾಜಿಕ ಲಕ್ಷಣಗಳು :** ಇನ್ನು ಸಮತೆಯನ್ನು ಸಮಾಜದಲ್ಲಿ ಬಳಸುವ ಬಗೆಯನ್ನು ಅರುಹಲಿರುವೆ. ಅವುಗಳಲ್ಲಿ ಎರಡು ಬಗೆಗಳು. 1) ಸಮಬುದ್ಧಿ ಒಂದು (ನೈತಿಕ), 2) ಸಮದರ್ಶನ ಇನ್ನೊಂದು (ಪಾರಮಾರ್ಥಿಕ)

ಸುಹೃನ್ಮಿತ್ರಾರ್ಯುದಾಸೀನ-ಮಧ್ಯಸ್ಥದ್ವೇಷ್ಯ ಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥6-9॥

"ಹಿತ ಚಿಂತಕ, ಗೆಳೆಯ, ವೈರಿ, ಉದಾಸೀನ, ಮಧ್ಯಸ್ಥ, ದ್ವೇಷಿಸುವವ, ಬಾಂಧವ, ಸಜ್ಜನ, ದುರುಳ ಇವರ ಬಗೆಗೆ ಸಮಾಭಾವ ತಳೆದವನೇ ಶ್ರೇಷ್ಠನು. ಇಲ್ಲಿ ಸಮತೆಯು ಒಂದು ಭಾವ-ಪ್ರೀತಿಯ ಭಾವನೆ. ಅದರ ಫಲವಾಗಿ ಯಥೋಚಿತ ರೀತಿಯಿಂದ ಎಲ್ಲರಿಗೆ ಸಂತೋಷ ನೀಡಬೇಕು. ಅದರೆ ಅವರವರೊಡನೆ ಅರವರ ಯೋಗ್ಯತೆಯಿಂದ ವರ್ತಿಸಬೇಕು ಎಂದು **ಶ್ರೀ ಏಕನಾಥ ಮಹಾರಾಜರು** ಬೋಧಿಸಿರುವರು.

ಜೇವೀ ಬ್ರಾಹ್ಮಣಾಸ ದಿಲೇತ್ಯಣ । ಗಾಯೀಸ ವಾಹಿಲೇ ಮಿಷ್ಟಾನ್ನ ।
ಶ್ವಾನಾಸ ಬೈಸಣೆ ಸಿಂಹಾಸನ । ಸಾಧೂಸಿ ಆಸನ ಥಾರೋಳೆ ॥
ಕರಿತಾ ಯಥೋಚಿತ ಅರ್ಪಣ । ಜರೀ ಕ್ರಿಯಾ ದಿಸೇ ಭಿನ್ನ ಭಿನ್ನ :
ತರೀ ಅಂತರಭಾವ ಅಭಿನ್ನ । ಹೇ ಮುಖ್ಯ ಲಕ್ಷಣ ಭಾಗವತ
ಧರ್ಮೀ ॥

"ಬ್ರಾಹ್ಮಣರಿಗೆ ಹುಲ್ಲು ನೀಡಿ, ಆಕಳಿಗೆ ಮೃಷ್ಟಾನ್ನ ನೀಡುವದೂ, ಅದೇ ಬಗೆಯಾಗಿ ನಾಯಿಗೆ ಸಿಂಹಾಸನದ ಮೇಲೆ ಕುಳ್ಳರಿಸಿ, ಸತ್ಪುರುಷರಿಗೆ ನೀರಿನ ಪಿಪಾಯಿಗಳ ಮೇಲೆ ಕುಳ್ಳಿರಿಸುವದು, (ಸಮತೆಯ ಲಕ್ಷಣವಲ್ಲ), ಅವರವರಿಗೆ ಉಚಿತವಾದ ವಿಷಯಗಳನ್ನೇ ನೀಡಬೇಕು. ಈ ರೀತಿ ಯಥೋಚಿತ ಅರ್ಪಣದಲ್ಲಿಯ ಕ್ರಿಯೆಯಲ್ಲಿ ಭಿನ್ನತೆಯು ಕಾಣಿಸಿದರೂ, ಅಂತರಂಗದ ಭಾವವು ಪ್ರೀತಿಯು-ಒಂದೇ ಬಗೆಯದಿರುವದು. ಇದು ಭಾಗವತ ಧರ್ಮದ ಲಕ್ಷಣವೆಂದು" **ಏಕನಾಥ ಮಹಾರಾಜರು** ಅರುಹಿರುವರು. ಭಾವದಲ್ಲಿ ಏಕತೆ, ವ್ಯವಹರಿಸುವಲ್ಲಿ ತಾರತಮ್ಯ ಇದು ಸಂತರ ಹೇಳಿಕೆ.

ಇಂಥ ಸಮಬುದ್ಧಿಯ ಇನ್ನೊಂದು ಬಗೆಯನ್ನು ಕ್ರಿಸ್ತಮಹಾತ್ಮನು ಈ ರೀತಿ ಬೋಧಿಸಿರುವನು.

"Love your enemies and bless them that curse you; do good to them that hate you and pray for them who persecute you.

That you may be children of your Father which is in heaven, for he maketh his sun to rise on the evil and on the good and sends rain on the just and on the unjust." [10]

ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಶಪಿಸುವವರನ್ನು ನೀವು ಹಾರೈಸಿರಿ ! ದ್ವೇಷಿಸುವವರನ್ನು ಉಪಕರಿಸಿರಿ ! ನಿಮ್ಮನ್ನು ಹಿಂಸಿಸುವವರನ್ನು ಕ್ಷಮಿಸಲು ಪ್ರಭುವನ್ನು ಪ್ರಾರ್ಥಿಸಿರಿ ! ಯಾಕೆಂದರೆ, ನೀವು ಭಗವಂತನ, ನಿಮ್ಮ ಸ್ವರ್ಗೀಯ ತಂದೆಯ ಪ್ರೀತಿಯ ಮಕ್ಕಳಲ್ಲವೇ ? ಆತನು ಸಜ್ಜನ-ದುರ್ಜನರ ಮೇಲೆ ಸಮನಾಗಿ ಬೆಳಗಲು ಸೂರ್ಯನಿಗೆ ಆಜ್ಞಾಪಿಸಿರುವ, ಧಾರ್ಮಿಕ-ಅಧಾರ್ಮಿಕರ ಮೇಲೆ ಸಮನಾಗಿ ಮಳೆಯನ್ನು ಕರೆವ."

(ಈ) ಪಾರಮಾರ್ಥಿಕ ಲಕ್ಷಣಗಳು : ಇನ್ನು ಸಮದರ್ಶನದ ವಿಷಯ ; ಗೀತೆಯು ಇದನ್ನು ಕುರಿತು ಈ ರೀತಿ ಹೇಳಿರುವುದು.

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನೀ ।

ಶುನಿ ಚೈವ ಶ್ವಪಾಕೇ ಚ ಪಂಡಿತಾ : ಸಮದರ್ಶಿನ: ॥5-18॥

"ವಿದ್ಯಾ-ವಿನಯ-ಸಂಪನ್ನನಾದ ಬ್ರಾಹ್ಮಣ, ಆಕಳು, ಆನೆ, ನಾಯಿ, ಚಂಡಾಲ ಇವರನ್ನು ಪಂಡಿತನು ಸಮದೃಷ್ಟಿಯಿಂದ ಕಾಣುವನು."

"For such a person, there is equality of vision everywhere, in all these cases." [11]

ಇವರೆಲ್ಲರ ಮೇಲೆ ಪಂಡಿತನು ಪರಮಾತ್ಮನನ್ನು (ಸಮ-ಬ್ರಹ್ಮ) ಕಾಣುವನು. ಇಲ್ಲ ಸಮ ಎಂದರೆ ಬ್ರಹ್ಮ. **ನಿರ್ದೋಷಂ ಹಿ ಸಮಂ ಬ್ರಹ್ಮ (5-19)**

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಆತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನ : ॥6-29॥

"ಯೋಗಿಯು ಎಲ್ಲ ಭೂತಗಳಲ್ಲಿ ಆತ್ಮನನ್ನೂ ಆತ್ಮನಲ್ಲಿ ಎಲ್ಲ ಭೂತಗಳನ್ನು ಸಮನಾಗಿ ಕಾಣುವನು." ಅದೇ ಮೇರೆಗೆ,

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವ ವಿನಶ್ಯಂತಂ ಯ: ಪಶ್ಯತಿ ಸ ಪಶ್ಯತಿ ॥13-27॥

10) N. T. St. Methew V-44 11) B.P.G.P. 222

"ಎಲ್ಲ ಪ್ರಾಣಿಗಳಲ್ಲಿ ಸಮನಾಗಿ ನೆಲೆಸಿರುವ, ಅಳಿಯುವ ವಸ್ತುಗಳಲ್ಲಿ ಅಳಿಯದೇ ಇರುವ ಪರಮಾತ್ಮನನ್ನು ಕಾಣುವವನೇ ನಿಜವಾದ ಜ್ಞಾನಿಯು."

ಈ ಬಗೆಯಾಗಿ ಎಲ್ಲ ಪ್ರಾಣಿಗಳನ್ನು ಸಮದೃಷ್ಟಿಯಿಂದ ಕಾಣುವ, ಅಂದರೆ ಪ್ರಾಣಿಗಳಲ್ಲಿಯೂ ಪ್ರಾಣಿಗಳ ಮೇಲೆಯೂ, ಪರಮಾತ್ಮನನ್ನು ಕಾಣಲಿರುವದೇ ಪಾರಮಾರ್ಥಿಕ ಸಮತೆಯು.

ಇನ್ನು **ಸಾಮರಸ್ಯದ ವಿಷಯ** : ಪಾರಮಾರ್ಥಿಕ ಸಮತೆಯು ಅನುಭೂತಿಯಲ್ಲಿ ಸಮರಸವಾಗುವ ಬಗೆಯನ್ನು ನೋಡಿ. ಅದರಲ್ಲಿ ಸ್ಥಿತಪ್ರಜ್ಞನು ಪಡೆದಿರುವ ಪರಮಾತ್ಮನ-ಆನಂದಗಳು ಸೇರಿರುವವು. ಅದನ್ನು ಗೀತೆಯು ಮುಂದಿನಂತೆ ಬಣ್ಣಿಸಿರುವದು.

ಇಹೈವ ತೈರ್ಜಿತ: ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನ: ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾ : ।।5-19।।

"ಯಾರ ಬುದ್ಧಿಯು ಸಮತೆಯನ್ನು ಪಡೆಯುವದೋ ಅವರು ಜೀವನದಲ್ಲಿಯೇ ಮುಕ್ತಿಯನ್ನು ಪಡೆಯುವರು. ಯಾಕೆಂದರೆ ಬ್ರಹ್ಮವು ಪವಿತ್ರವೂ, ಸಮವೂ ಇರುವದರಿಂದ ಅವರು ಬ್ರಹ್ಮದಲ್ಲಿ ನೆಲೆಸುವರು. ಅವರು ಸಮತೆಯಲ್ಲಿರುವದರಿಂದ ಪರಮಾತ್ಮನಲ್ಲಿಯೇ ಇರುವರು."

ಇದು ಒಂದು ಬಗೆಯಿಂದ ನೈತಿಕ-ಪಾರಮಾರ್ಥಿಕ ಲಕ್ಷಣವಾಗುವದು. ಆದರೆ ಸ್ಥಿತಪ್ರಜ್ಞನ ಶುದ್ಧ ಪಾರಮಾರ್ಥಿಕ ಲಕ್ಷಣವನ್ನು ಕೆಳಗೆ ಕಾಣಬಹುದು.

ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ।।5-26।।

ಬ್ರಹ್ಮವು ಅವನ ಸುತ್ತಲೂ ಸುಳಿಯುವದು. ಅವನು ತನ್ನ ಕಂಗಳನ್ನು ಹೊರಳಿಸಿದೆಡೆಯಲ್ಲಿ ಅವನು ಬ್ರಹ್ಮವನ್ನು ಕಾಣುವನು. ಇದಾಯಿತು ಬ್ರಹ್ಮದರ್ಶನದ ವಿಷಯ. ಇನ್ನು ಬ್ರಹ್ಮಾನಂದವನ್ನು ಅರುಹುವೆ.

ಯೋಂತ: ಸುಖೋಂತರಾರಾಮಸ್ತಥಾಂತರ್ಜ್ಯೋತಿರೇವ ಯ: ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಧಿಗಚ್ಛತಿ ।।5-24।।

"ಅಂತರಂಗದಲ್ಲಿ ಸುಖ, ಶಾಂತಿ ಹಾಗು ಜ್ಯೋತಿಯನ್ನು ಪಡೆದು. ಬ್ರಹ್ಮಭೂತನಾದ ಯೋಗಿಯು, ಪರತಮ ಬ್ರಹ್ಮಾನಂದದಲ್ಲಿ ಮುಳುಗುವನು." ಇದರಲ್ಲಿ ಸಂತಬ್ರಹ್ಮರ ಏಕತೆ ಪ್ರತಿಪಾದಿತವಾಗಿದೆ. ಇದಕ್ಕೂ ಮುಂದೆ ಸಾಗಿ ಗೀತೆಯು ಈ **ಪರಮಾನಂದವೇ-ಬ್ರಹ್ಮ** ಎಂದೂ ಸಾರಿರುವದು.

ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಮ್ ।।6-27।।

ಇಲ್ಲಿ ಗುರುದೇವರು ಒಂದು ಅಲ್ಪ ಸೂಚನೆಯನ್ನು ಮಾಡಿರುವರು.

ಅದಾವುದೆಂದರೆ "ಬ್ರಹ್ಮಭೂತ", ಈ ವಿಶೇಷಣವು "ಯೋಗಿನಂ" ಹಾಗು "ಸುಖಂ" ಎರಡನ್ನು ವಿಶ್ಲೇಷಿಸಬಹುದು. "ದೇಹಲೀದೀಪ-ನ್ಯಾಯದಿಂದ" ಅದು ಎರಡನ್ನು ಬೆಳಗಬಹುದು. ಯೋಗಿಯೂ "ಬ್ರಹ್ಮಭೂತನು" ಅದೇ ಮೇರೆಗೆ "ಸುಖವೋ" "ಬ್ರಹ್ಮಭೂತ" ಎಂದು ಅರುಹುವಲ್ಲಿ ಅರ್ಥಕ್ಕೆ ಬಾಧೆಯುಂಟಾಗದೆ, ಅದರಲ್ಲಿ ಒಂದು ಚಮತ್ಕೃತಿಯೂ ಒಳಗೊಂಡಿರುವದು, ಆದುದರಿಂದ ಪರಮಾನಂದದ ಅನುಭೂತಿಯೇ ಬ್ರಹ್ಮಭವನ.

ಈ ರೀತಿ ಸಮತೆಯು ಪರಮಾರ್ಥದಲ್ಲಿ ಪರಿಣತವಾಗುವದು. ಅದರೊಡನೆ ಸಾಮರಸ್ಯ ಪಡೆಯುವದು, ಸಮನ್ವಯಗೊಳ್ಳುವದು.

(iii) ಬಂಧು-ಭಾವ :

(ಅ) **ಪ್ರೀತಿಯ ಸ್ವರೂಪ-ಪ್ರಭಾವಗಳು :** ಬಂಧು ಭಾವ ಇಲ್ಲವೆ ಬಾಂಧವ್ಯ ಇದು ಮೂರನೆಯ ಸಾಮಾಜಿಕ ಆದರ್ಶ. ಬಾಂಧವ್ಯವು ಒಂದು ಪ್ರೀತಿಯ ಬಗೆ, ಪ್ರೀತಿಯು ಕಾಣಲಾರದ ಆಕರ್ಷಣೆ. **"ಅನಿರ್ವಚನೀಯಮ್ ಪ್ರೇಮ-ಸ್ವರೂಪಮ್ ।"** "ಪ್ರೇಮದ ಸ್ವರೂಪವನ್ನು ಬಣ್ಣಿಸಲು ಬಾರದು" ಎಂದು **ನಾರದ ಮುನಿಗಳ** ಭಕ್ತಿಸೂತ್ರವು ಅರುಹುವದು. ಪ್ರೀತಿಯು ಜೀವನದಲ್ಲಿ ಬಗೆಬಗೆಯಾಗಿ ಕಾಣಿಸಿಕೊಳ್ಳುತ್ತಿದೆ. ತಾಯಿ-ಮಕ್ಕಳಲ್ಲಿ ವಾತ್ಸಲ್ಯ, ಸತಿ-ಪತಿಯರಲ್ಲಿ ರತಿ, ಗುರು-ಹಿರಿಯರಲ್ಲಿ ಆದರ, ಗೆಳೆಯರಲ್ಲಿ ಸ್ನೇಹ, ಭಗವಂತನಲ್ಲಿ ಭಕ್ತಿ ಭಕ್ತನ ಮೇಲೆ ಕರುಣ, ದಲಿತರಲ್ಲಿ ಧರ್ಮ, ಅದರ ಬಂಧನ-ಕಾರ್ಯವು ಅಲೌಕಿಕ, ಓರ್ವ ಸುಭಾಷಿತಕಾರರು ಹೇಳಿರುವಂತೆ.

ವ್ಯತಿಷಜತಿ ಪದಾರ್ಥಾನ್ ಆಂತರ:ಕೋಪಿ ಹೇತು: ।
ನ ತು ಬಹಿರುಪಾಧೀನ್ ಪ್ರೀತಯ : ಸಂಶ್ರಯಂತೇ ॥
ವಿಕಸತಿ ಹಿ ಪತಂಗಸ್ಯೋದಯೇ ಪುಂಡರೀಕಮ್ ।
ದ್ರವತಿ ಚ ಹಿಮರಶ್ಮೌ ಉದ್ಯತೇ ಚಂದ್ರಕಾಂತ: ॥

"ಅಂತರಂಗದಲ್ಲಿಯ ಒಂದು ಅಪೂರ್ವ ಶಕ್ತಿಯಾದ ಪ್ರೀತಿಯು ಪದಾರ್ಥಗಳನ್ನು ಕೂಡಿಸುತ್ತದೆ. ಅದಕ್ಕೆ ಹೊರಗಿನ ಉಪಾಧಿಗಳ ಅಗತ್ಯವಿರುವದಿಲ್ಲ, ಹೇಗೆಂದರೆ, ಸೂರ್ಯನು ಉದಯನಾದಕೂಡಲೇ ತಾವರೆ ಅರಳುವದು. ಚಂದಿರನು ಉದಯಿಸಿದನೆಂದರೆ ಚಂದ್ರಕಾಂತ ಶಿಲೆಯು ಒಸರುವದು. ಈ ಬಗೆಯಾಗಿ ಪ್ರೀತಿಯ ಪ್ರಭಾವವು ಅವಕಾಶವನ್ನು ವ್ಯಕ್ತಿಗಳ ಹಿರಿಮೆಯನ್ನು ಲೆಕ್ಕಿಸುವದಿಲ್ಲ. ಪ್ರಭುದೇವರು ಅದರ ಪ್ರಭಾವವನ್ನು ಇದೇ ಬಗೆಯಾಗಿ ಬಣ್ಣಿಸಿರುವರು.

ಎತ್ತಣ ಮಾಮರ ? ಎತ್ತಣ ಕೋಗಿಲೆ ?
ಎತ್ತಣಿಂದೆತ್ತ ಸಂಬಂಧವಯ್ಯಾ ?
ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ ?

ಗುಹೇಶ್ವರಲಿಂಗಕ್ಕೆಯೂ ಎನಗೂ
ಎತ್ತಣಿಂದೆತ್ತ ಸಂಬಂಧವಯ್ಯಾ ?

"ಮಾವಿನ ಕೋಗಿಲೆನ್ನು ಕರೆವಂತೆ, ಸಮುದ್ರದ ಉಪ್ಪು ಬೆಟ್ಟದಲ್ಲಿಯ ನೆಲ್ಲಿಕಾಯಿಯನ್ನು ಸೇರುವಂತೆ, ಕಾಣಬಾರದ ಲಿಂಗವು ಎನ್ನಡೆ ಬಂದಿತ್ತು. ಇದು ಅದೃಶ್ಯ ಪ್ರೀತಿಯ ಪ್ರಭಾವವಲ್ಲದೇ ಮತ್ತೇನು ?" ಎಂದು ಪ್ರಭುದೇವರು ಅರುಹಿರುವರು.

ಪ್ರೀತಿಯು ಈ ರೀತಿ ದೂರ ದೂರದ ವಸ್ತುಗಳನ್ನು ಒಂದೆಡೆ ಸೆಳೆವಂತೆ, ಅದು ಮನೋವೃತ್ತಿಯಲ್ಲಿಯೂ ಬದಲಾವಣೆಯನ್ನು ಮಾಡುತ್ತದೆ. ಹೇಗೆ ನೋಡಿ, ಒಂದು ಸುಭಾಷಿತವು ಅದನ್ನು ಈ ರೀತಿ ಅರುಹುವದು.

ಬಂಧನಾನಿ ಖಲು ಸಂತಿ ಬಹೂನಿ ।
ಪ್ರೀತಿ-ರಜ್ಜು-ಕೃತ-ಬಂಧನಮನ್ಯತ್ ॥
ದಾರುಭೇದ-ನಿಪುಣೋಪಿ ಷಂಡಘ್ರಿ: ।
ನಿಷ್ಕ್ರಿಯೋ ಭವತಿ ಪಂಕಜಕೋಶೇ ॥

"ಜಗತ್ತಿನಲ್ಲಿ ಬಗೆಬಗೆಯ ಬಂಧನಗಳಿವೆ. ಆದರೆ ಪ್ರೀತಿಯ ಬಂಧನದ ಪ್ರಭಾವವು ಅಲೌಕಿಕವಾದುದು. ಯಾಕೆಂದರೆ ಅದರ ಫಲವಾಗಿ ಕಟ್ಟಿಗೆಯನ್ನು ಕೊರೆಯುವ ಸಾಮರ್ಥ್ಯವುಳ್ಳ ಭ್ರಮರವು ಕಮಲದಲ್ಲಿ ಸಿಲುಕಿದಾಗ, ಅದರ ಕೋಮಲ ಪಕಳೆಗಳನ್ನು ಕೊರೆಯಬಯಸದೇ, ಅದರಲ್ಲಿಯೇ ತಾನು ಸಾವನ್ನು ಕೂಡ ಅಪ್ಪಿಕೊಳ್ಳಲು ಸಿದ್ಧವಾಗುತ್ತದೆ" ಎಂಥ ಅದ್ಭುತ ಪ್ರಭಾವವಿದು!

(ಆ) **ಮನುಜರ ತರಗತಿಗಳು** : ಆದರೆ ಈ ಭಾವದ ಬೆಳವಣಿಗೆಯು ಎಲ್ಲರಲ್ಲಿ ಸಮನಾಗಿ ಆಗಿರುವದಿಲ್ಲ. ಇದರ ಬೆಳವಣಿಗೆಯ ವಿಷಮತೆಯನ್ನು ಅನುಲಕ್ಷಿಸಿ **ಸ್ವಾಮಿ ರಾಮತೀರ್ಥರು** ಮಾನವರಲ್ಲಿ ಕೆಳಗೆ ಕಾಣಿಸಿದ ಐದು ವರ್ಗಗಳನ್ನು ಕಲ್ಪಿಸಿರುವರು.

1) ಖನಿಜ ಮಾನವ (Mineral man)- ದೇಹದಾಸ- ಬಗರಿ.

2) ಸಸ್ಯಮಾನವ (Vegitable man)- ಕುಲದಾಸ- ರೇಸಕುದುರೆ.

3) ಪ್ರಾಣಿಮಾನವ (Animal man)- ಜಾತಿದಾಸ- ಮಳೆಗಾಳಿ (Mansoon)

4) ಮಾನವ ಮಾನವ (Human man)- ರಾಷ್ಟ್ರದಾಸ- ಚಂದ್ರ

5) ದೇವ-ಮಾನವ (God man)- ವಿಶ್ವದಾಸ- ಸೂರ್ಯ.

ಖನಿಜ ಮಾನವನು ಬಗರಿಯಂತೆ ತನ್ನ ದೇಹದ ಸುತ್ತಲೂ ತಿರುಗುತ್ತಿರುವ, ಅವನ ಪ್ರೀತಿಯು ದೇಹಕ್ಕೆ ಸೀಮಿತವಾದುದು. **ಸಸ್ಯ-ಮಾನವನು** ರೇಸ ಕುದುರೆಯಂತೆ ತನ್ನ ಕುಟುಂಬವನ್ನು-ಕುಲವನ್ನು ಸುತ್ತುತ್ತಿರುವ. ಅವನ ಪ್ರೀತಿಯು ಕುಲಕ್ಕೆ ಸೀಮಿತವಾಗಿರುವದು. **ಪ್ರಾಣಿ-ಮಾನವನು** ತನ್ನ ಜಾತಿಯನ್ನು ಪ್ರೀತಿಸುವ. ಮಳೆ-ಗಾಳಿಯಂತೆ ಅವನ ಪ್ರೀತಿಯು

ಸ್ವಲ್ಪವಿಶಾಲ ಕ್ಷೇತ್ರಕ್ಕೆ ಸೀಮಿತವಾಗಿರುವದು. ಮಾನವ-ಮಾನವನ ಪ್ರೀತಿಯು ಅದಕ್ಕೂ ಹೆಚ್ಚು ವಿಶಾಲವಾದ ರಾಷ್ಟ್ರವನ್ನು ಆಕ್ರಮಿಸುವದು ಚಂದ್ರನಂತೆ. ಆದರೆ ದೇವ ಮಾನವನು ಮಾತ್ರ, ಸೂರ್ಯನ ಪ್ರಕಾಶವು ಇಡೀ ವಿಶ್ವವನ್ನು ಬೆಳಗುವಂತೆ, ತನ್ನ ಪ್ರೀತಿಯ ಪ್ರಭಾವವನ್ನು ಇಡೀ ವಿಶ್ವದಲ್ಲಿ ಬೀರುವನು. ಅದು ಅಮರ್ಯಾದಿತವಿರುವದು. ಅದುದರಿಂದ.

"God-man represents a circle whose centre is everywhere & circumference nowhere."

"ದೇವ-ಮಾನವರೂಪಿಯಾದ ವರ್ತುಲದ ಮಧ್ಯಬಿಂದು ಎಲ್ಲಿಡೆ ಇರುವದು. ಆದರೆ ಅದಕ್ಕೆ ಸೀಮಿತ ಮಾಡುವ ಪರಿಧವು ಎಲ್ಲಿಯೂ ಇರುವದಿಲ್ಲ."

ಗುರು ನಾನಕರು ಹೇಳಿರುವಂತೆ, ಇವರು ಭಗವಂತನು ಎಲ್ಲರಲ್ಲಿ ನೆಲೆಸಿರುವದನ್ನು ಕಂಡು ಪ್ರಮುದಿತರಾಗುವರು. ಅದರ ಫಲವಾಗಿ ತಾವು-ಅನ್ಯರು ಎಂಬ ಭಾವವನ್ನೇ ಮರೆತುಬಿಡುವರು. ಅವರಿಗೆ ಎಲ್ಲರೂ ತನ್ನವರಾಗಿ ಕಾಣುವರು. ಅವರು ಹಗೆ-ಗೆಳೆ ಎಂಬುದನ್ನು ಅರಿಯರು, ಇಂಥವರನ್ನು ಕುರಿತು ಗುರುದೇವರು ಅರುಹಿರುವುದೇನೆಂದರೆ:

"There is no enemy and no friend to such a man, no national, no foreigner. He belongs to the city of the World, and for the matter of that, the City of the Spiritual World. He would not be satisfied with a mere Cosmopolis, but must be a member of Theopolis." [13]

"ಇಂಥ ಮಹನೀಯರಿಗೆ ಯಾವನೂ ವೈರಿಯಲ್ಲ, ಸ್ನೇಹಿತನಲ್ಲ. ರಾಷ್ಟ್ರೀಯನಿರುವದಿಲ್ಲ. ಪರಕೀಯನಿರುವದಿಲ್ಲ. ಅವನು ಜಾಗತಿಕ ನಾಗರಿಕನು. ಅದೇಕೆ ? ಅವನು ಪಾರಮಾರ್ಥಿಕ ಜಗತ್ತಿನ ನಾಗರಿಕನು ಇರುವನು. ಅವನು ಕೇವಲ ವಿಶ್ವರಾಜ್ಯದ ನಾಗರಿಕತೆಯಿಂದ ಸಂತುಷ್ಯನಾಗನು. ದೇವ-ರಾಜ್ಯದ ನಾಗರೀಕನಾಗಲು ಪ್ರಬಲವಾಗಿ ಬಯಸುವನು." ನಮ್ಮ ಸರ್ವಜ್ಞ ಕವಿಯು ಸಾರುವಂತೆ,

ತನ್ನ ತಾನರಿದಂಗೆ ಭಿನ್ನಭಾವನೆಯಿಲ್ಲ
ತನ್ನವರಿಲ್ಲ ಪರರಿಲ್ಲ ತ್ರೈಭುವನ
ತನೊಳಗಿಹುದು ಸರ್ವಜ್ಞ.

ಸರ್ವಜ್ಞ-ಪದಮಿತ್ಯಾಹ: ದೇಹೀ ಸರ್ವಮಯೋಭವೇತ್ ।
ಸದಾನಂದ: ಸದಾಶಾಂತ: ರಮತೇ ಯತ್ರಕುತ್ರಚಿತ್ ॥ಗು.ಗೀ.॥

"ಸರ್ವಜ್ಞ ಪದವಿಯನ್ನು ಪಡೆದ ಜೀವಾತ್ಮನು ಎಲ್ಲರೊಡನೆ ಸಮರಸನಾಗಿ ಸದೈವ ಆನಂದದಿಂದಲೂ, ಶಾಂತಿಯಿಂದಲೂ ಎಲ್ಲೆಲ್ಲಿಯೂ ವಿಹರಿಸುತ್ತಾನೆ." ಎಂದು ಗುರು-ಗೀತೆಯು ಸಾರುವದು.

13) P.G.H.P. 57

(ಇ) **ಭಾವ ಬೆಳೆಯುವ ಬಗೆ :** ಇಂಥ ಭಾವವು ಒಮ್ಮೆಲೆ ಬೆಳೆಯುವದಿಲ್ಲ. ಅದರ ಬೆಳವಣಿಗೆಗೆ ನಾಲ್ಕು ಮೆಟ್ಟಲುಗಳು ಇರುವವು. ಮೊದಲು ಅದು ವೈಚಾರಿಕ ಮೆಟ್ಟಲನ್ನು ಏರಬೇಕು. ಎಲ್ಲ ಜನ ಭಗವಂತನ ಮಕ್ಕಳು, ಭಗವಂತನೇ ಎಲ್ಲರ ತಂದೆ-ತಾಯಿ, ಎಂಬ ವಿಚಾರವು ಮೊದಲು ಬುದ್ಧಿಯಲ್ಲಿ ಮೈದಳೆಯಬೇಕು. ತರುವಾಯ ಅದು ಹೃದಯಕ್ಕೆ ಹೊಳೆಯಬೇಕು. ಅಂದರೇನೇ ಅದು ಕೃತಿಯಲ್ಲಿ ಇಳಿದು, ಪರಮಾರ್ಥ-ಸಾಧಕನಿಗೆ ಸದ್ಗುರುಗಳ ಕರುಣದ ಫಲವಾಗಿ, ಭಗವಂತನ ದರ್ಶನ-ಆನಂದವನ್ನು ದಯಪಾಲಿಸುವದು. ಇದಾಗಲು ಅವಿರತ, ಅನನ್ಯ ಭಕ್ತಿಯುತ, ಯತ್ನವು ಅತ್ಯವಶ್ಯ, ಓರ್ವ ಶರಣರು ಉಸುರಿದ ಮೇರೆಗೆ ಇದು,

ತಿಳಿಸುವ ಮಾತಲ್ಲ; ತಿಳಿಸದೆ ತಿಳಿಯುವ ಮಾತಲ್ಲ.
ತಿಳಿಸದೆ ತಿಳಿಯದು, ತಿಳಿಯದೆ ಹೊಳೆಯದು,
ಹೊಳೆಯದೆ ಇಳಿಯದು, ಇಳಿದ ಮೇಲಳಿಯದು.

(ಈ) **ಸಾಮರಸ್ಯ :** ಮಾನವ-ಪ್ರೀತಿಯು ಭಗವಂತನ ಭಕ್ತಿಯಿಂದ ಜನಿಸಬೇಕು. ಅದರಲ್ಲಿಯೇ ಸಮರಸನಾಗಬೇಕು. ಬ್ರಹದಾರಣ್ಯರ ಉಪನಿಷತ್ತು ಉಸುರುವಂತೆ,

ನ ವಾ ಅರೇ ಸರ್ವಸ್ಯ ಸರ್ವಂ ಪ್ರಿಯಂ ಭವತಿ ।
ಆತ್ಮನಸ್ತುಕಾಮಾಯ ಸರ್ವಂ ಪ್ರಿಯಂ ಭವತಿ ॥ಬೃ.4-2-5॥

"ಎಲ್ಲದರ ಸಲುವಾಗಿ ನಮಗೆ ಎಲ್ಲವೂ ಪ್ರೀಯವಾಗುವದಿಲ್ಲ. ಅವರಲ್ಲಿಯ ಆತ್ಮನಿಗಾಗಿ ಎಲ್ಲವೂ ಪ್ರೀಯವಾಗುತ್ತದೆ." ನಾವು ನಿಜವಾಗಿ ತಿಳಿಯದೆ ಆತ್ಮನನ್ನೇ ಪ್ರೀತಿಸುತ್ತಿರುವೆವು. ಆದರೆ ಅದನ್ನೆ ತಿಳಿದು ಮಾಡಬೇಕು. ಈ ಬಗೆಯಾಗಿ ಪ್ರೀತಿ-ಭಕ್ತಿಗಳಲ್ಲಿ ಸಮನ್ವಯವಾಗಬೇಕು. ಆಗ ಬಂದು-ಭಾವವು ಶಾಶ್ವತವಾಗಿ ನೆಲೆಗೊಳ್ಳಬಹುದು ಎಂಬುದು ಗುರುದೇವರ ಅಭಿಮತ.

ರಾಷ್ಟ್ರೀಯ ಆದರ್ಶಗಳು :

ಇನ್ನು ರಾಷ್ಟ್ರೀಯ ಆದರ್ಶಗಳ ವಿಚಾರ. ನಮ್ಮ ಭಾರತದ ನವನಿರ್ಮಾಣ ಕಾರ್ಯದಲ್ಲಿ ಅದರ ಎಲ್ಲ ಅಂಗಗಳ ಉನ್ನತಿಯಾಗಲು ಯಾವ ಯಾವ ಬಗೆಯ ಆದರ್ಶಗಳನ್ನು ನಾವು ಆರಾಧಿಸಬೇಕು? ಹೇಗೆ ಆರಾಧಿಸಬೇಕು ? ಅವನ್ನು ತಮ್ಮ ಪರತಮ ಆದರ್ಶವಾದ ಪರಮಾರ್ಥದೊದನೆ ಹೇಗೆ ಸಮನ್ವಯಿಸಬೇಕು ? ಎಂಬುದನ್ನು ಕುರಿತು ಗುರುದೇವರು ಯಾವ ಬಗೆಯ ಮಾರ್ಗದರ್ಶನವನ್ನು ಮಾಡಿರುವರು ? ನೋಡುವಾ !

ಶ್ರೀಗುರುದೇವರು ಕ್ರಿ.ಶ. 1912 ರಲ್ಲಿ "A Vindication of Indian Philosophy" **"ಭಾರತೀಯ ದರ್ಶನದ ಸಮರ್ಥನೆ"** ಎಂಬ ಲೇಖನವನ್ನು ಕಲಕತ್ತೆಯ "Modern Review" ಎಂಬ ಮಾಸ-ಪತ್ರಿಕೆಯಲ್ಲಿ ಬರೆದಿರುವರು. ಅದರಲ್ಲಿ ಭಾರತೀಯ ದರ್ಶನದ ಪ್ರಭಾವಯುತ ಮಂಡನವನ್ನೂ ಅದನ್ನು ನಿಂದಿಸುವವರ ನಿಷ್ಠುರ ಖಂಡನವನ್ನು

ಮಾಡಿರುವರು. ಅದರಲ್ಲಿ ಅನುಷಂಗಿಕವಾಗಿ ಭಾರತದ ನವನಿರ್ಮಾಣವನ್ನು ಹಾಗೂ ಅದರ ಎಲ್ಲಂಗಗಳ ಉನ್ನತಿಯನ್ನು ಕುರಿತು, ತಮ್ಮ ಕೆಲ ಬೆಲೆಯುಳ್ಳ ವಿಚಾರಗಳನ್ನು ಅರುಹಿರುವರು. ಅದೇ ಮೇರೆಗೆ ಅಂದು ಅವರು ಕಂಡ ಭಾರತದ ಉಜ್ವಲ ಭವಿಷ್ಯದ ಕನಸನ್ನೂ ಬಣ್ಣಿಸಿರುವರು. ಅವನ್ನು ಮೊದಲು ಅರುಹ ಬಯಸುವೆ.

ನವಭಾರತದ ನಿರ್ಮಾಣ : ನವಭಾರತದ ನಿರ್ಮಿತಿಗೆ ಎರಡು ಬಗೆಯ ತಳಹದಿಯು ಅವಶ್ಯವಿರುವುದೆಂದು ಗುರುದೇವರು ಅರುಹಿರುವರು.

ಒಂದು ಪರಿಶುದ್ಧ ಶ್ರೇಯ-ಪ್ರೇಯಗಳ ಸಂಯೋಗ, ಎರಡನೆಯದು ಭೂತ ವರ್ತಮಾನಗಳ ಸಂಯೋಗ, ಅದನ್ನು ಕುರಿತು ಅವರು ಬರೆದಿರುವದೇನಂದರೆ :

"There have been two opposite, almost antagonistic, streams of thought in what might be called New India itself, one, the spiritual, the other, the materialistic; the first, bordering on the superstititious; the other culminating in the intellectual nihilism. There are healthy elements in both these activities; but the super structure in either case, has been most inartistically raised. If a true temple to "National Activitiy" is to be raised, we must demolish the uncouth structures and raise out of their materials, a building both artistic and solid, calculated to attract the attention of our contemporaries, by its artistic skill, and go down to posterity on account of its long-enduring elements."[14]

"ನಮ್ಮ ನವಭಾರತದಲ್ಲಿ ಎರಡು ಪರಸ್ಪರ ವಿರುದ್ಧವಾದ, ಎದುರಾಳಿಗಳಾದ, ವಿಚಾರ ಪ್ರಣಾಲಿಗಳು ಪ್ರಚಲಿತವಿರುವವು. ಒಂದು ಪಾರಮಾರ್ಥಿಕ, ಇನ್ನೊಂದು ಭೌತಿಕ. ಮೊದಲನೆಯದು ಅಂಧ-ಶ್ರದ್ಧೆಯ ಅಂಚಿನಲ್ಲಿದ್ದರೆ, ಎರಡನೆಯದು ಭೌದ್ಧಿಕ ನಾಸ್ತಿಕತೆಯಲ್ಲಿ ಪರಿಣತವಾಗಿರುವದು. ಎರಡೂ ಕ್ಷೇತ್ರಗಳಲ್ಲಿ ಕೆಲ ಒಳ್ಳೆಯ ಅಂಶಗಳು ಇಲ್ಲದಿಲ್ಲ. ಆದರೆ ಅವುಗಳ ತಳಹದಿಯ ಮೇಲೆ ನಿಲ್ಲಿಸಲಾದ ಕಟ್ಟಡಗಳು ತುಂಬಾ ಕಲಾಹೀನವಾದವುಗಳು. "ರಾಷ್ಟ್ರೀಯ ಕಾರ್ಯಕ್ರಮ" ದ ಒಂದು ನಿಜವಾದ ಯೋಗ್ಯ ಮಂದಿರವನ್ನು ನಿಲ್ಲಿಸಬೇಕಾದರೆ ಈ ಅಂದಗೆಟ್ಟ ಕಟ್ಟಡಗಳನ್ನು ಕೆಡುಹಬೇಕಾಗುವದು. ಮತ್ತು ಅವುಗಳ ವಸ್ತುಗಳನ್ನು ಬಳಸಿ, ಒಂದು ಕಲಾತ್ಮಕವಾದ, ಗಟ್ಟಿಮುಟ್ಟಾದ ಮಂದಿರವನ್ನು ನಿಲ್ಲಿಸಬೇಕು. ಅದು ನಮ್ಮ ಸಮಕಾಲೀನರ ಅವಧಾನವನ್ನು ಸೆಳೆಯುವಂತಹದಿರಬೇಕಲ್ಲದೆ, ಅದರ ಕಲಾಕೌಶಲ್ಯವು ಬಹುಕಾಲ ಬಾಳಲಿರುವ ಅಂಶಗಳ ಮೂಲಕ, ಮುಂದಿನ ಪೀಳಿಗೆಯವರನ್ನು ಆಕರ್ಷಿಸಬೇಕು."

ಆದುದರಿಂದ ನಮ್ಮ ಶ್ರೆಯ-ಪ್ರೇಯಗಳ ಸಿದ್ಧಾಂತಗಳಲ್ಲಿ ಸೇರಿರುವ ದೋಷಗಳನ್ನು ಅಲ್ಲಗಳೆದು, ಅವನ್ನು ಪರಿಶುದ್ಧಗೊಳಿಸಿ, ಅವುಗಳ ಸಂಯೋಗದಿಂದ

14) P.E.P. 165

ನವಭಾರತವನ್ನು ನಿರ್ಮಿಸಬೇಕು. ಇದರ ಜತೆಯಲ್ಲಿ ನಾವು ನಮ್ಮ ನಾಡಿನ ಪ್ರಾಚೀನ ಸಂಸ್ಕೃತಿಯನ್ನೂ ಉಪೇಕ್ಷಿಸಕೂಡದು. **ಶ್ರೀ ಅರವಿಂದರು** ಅರುಹಿದ ಮೇರೆಗೆ :

"The past is our foundation, the present, our material and the future, the mansion of our dream."

"ಭೂತಕಾಲದ ತಳಹದಿಯ ಮೇಲೆ ವರ್ತಮಾನ ಕಾಲದ ಸಾಹಿತ್ಯದಿಂದ, ನಾವು ನಮ್ಮ ಭವಿಷ್ಯಕಾಲದ ಕನಸಿನ ಮಂದಿರವನ್ನು ನಿಲ್ಲಿಸಬೇಕು." **ಶ್ರೀ ಗುರುದೇವರು** ಕೂಡ ಇದನ್ನೇ ಪ್ರತಿಪಾದಿಸಿರುವರು.

"It is always upon the past that we must build-up the present, and those who despise their ancestors, will themselves be despised by the posterity." [15]..... Moreover, "Religion is the only secure platform, upon which the building of Indian's activities can be raised. Take it away and the building would tumble down in no time. Substitute another foundation, and you will find that the building would be raised on mere stubble."[16]

"ನಾವು ಸದೈವ ಭೂತಕಾಲದ ತಳಹದಿಯ ಮೇಲೆಯೆ ವರ್ತಮಾನ ಕಾಲದ ಕಟ್ಟಡವನ್ನು ನಿಲ್ಲಿಸಬೇಕು. ತಮ್ಮ ಪೂರ್ವಜರನ್ನು ಹಳಿಯುವವರು ತಮ್ಮ ಮುಂದಿನ ಪೀಳಿಗೆಯ ತೆಗಳಿಕೆಗೆ ಗುರಿಯಾಗದಿರರು".....ಮೇಲಾಗಿ "ಭಾರತದ ಸನಾತನವಾದ ಧರ್ಮದ ಸುರಕ್ಷಿತ ಕಟ್ಟೆಯ ಮೇಲೆಯೇ ಅದರ ಚಟುವಟಿಕೆಗಳೆಲ್ಲ ನಡೆಯಬೇಕು. ಅಂದರೇನೆ ಈ ಕಟ್ಟಡವು ನಿಲ್ಲಬಲ್ಲದು. ಅದನ್ನು ತೆಗೆದೊಗೆದರೆ, ಆ ಕಟ್ಟಡವು ಒಂದರಗಳಿಗೆಯಲ್ಲಿ ನೆಲಸಮವಾಗದಿರದು. ಅದರ ಬದಲಾಗಿ ಬೇರೊಂದು ತಳಹದಿಯನ್ನು ನಿಲ್ಲಿಸಿದರೆ, ಆ ಕಟ್ಟಡವನ್ನು ಬರಿ ಮಳಲಿನ ಮೇಲೆ ನಿಲ್ಲಿಸಿದಂತಾಗುವದು."

ಇದೇ ಅಭಿಪ್ರಾಯವನ್ನು **ಸ್ವಾಮಿ ವಿವೇಕಾನಂದರೂ** ಅರುಹಿರುವರು. ಅವರು ಹೇಳಿರುವುದೇನಂದರೆ :

"I see that each nation, like each individual, has one theme, in this life, which is its centre, the principal note, round which every other note comes to form the harmony. In India, religious life forms the centre, the key-note of the whole music of national life. Before flooding India with socialistic and political ideas, first deluge the land with spiritual ideas. If you succeed in the attempt to throw off your religion and take up either politics or society or any other thing as your centre, as the vitality of your national life, the result

15) P.E.P. 171 16) P.E.P. 183

will be that you will become extinct."

"ಪ್ರತಿಯೊಂದು ವ್ಯಕ್ತಿಯಂತೆ, ಪ್ರತಿಯೊಂದು ರಾಷ್ಟ್ರಕ್ಕೆ-ಅದರ ಜೀವನಕ್ಕೆ ಒಂದೇ ಕೇಂದ್ರರೂಪಿಯಾದ ವಿಷಯವಿರುತ್ತದೆ. ಅದೇ ಅದರ ಪ್ರಧಾನ ಸ್ವರವು. ಬೇರೆ ಎಲ್ಲಸ್ವರಗಳು ಅದನ್ನು ಹೊಂದಿ ಸ್ವರಮೇಳ ನಿರ್ಮಿಸುವವು. ಭಾರತದಲ್ಲಿ ಧಾರ್ಮಿಕ ಜೀವನವು ಅದರ ಆದರ್ಶ ಕೇಂದ್ರವು-ಅಂದರೆ ರಾಷ್ಟ್ರೀಯ ಜೀವನ-ಸಂಗೀತವು ಪ್ರಧಾನ ಸ್ವರವು. ಆದುದರಿಂದ ಭಾರತವನ್ನು ಸಾಮಾಜಿಕ ಇಲ್ಲವೆ ರಾಜಕೀಯ ವಿಚಾರಗಳ ನೆರೆಯುಳ್ಳ, ಪ್ರವಾಹದಿಂದ ಮುಳುಗಿಸುವ ಪೂರ್ವದಲ್ಲಿ ಅದನ್ನು ಆಧ್ಯಾತ್ಮಿಕ ವಿಚಾರಗಳ ಪ್ರವಾಹದಿಂದ ಮುಳುಗಿಸಿರಿ. ಆದರೆ ನೀವು ನಿಮ್ಮ ಧರ್ಮವನ್ನು ತಳ್ಳಿ,, ಸಮಾಜ-ರಾಜಕಾರಣ ಇಲ್ಲವೆ ಬೇರೆ ಯಾವುದಾದರೊಂದು ವಿಷಯವನ್ನು ನಿಮ್ಮ ಕಾರ್ಯದ ಕೇಂದ್ರ, ನಿಮ್ಮ ರಾಷ್ಟ್ರೀಯ ಜೀವನದ ಪ್ರಾಣ, ಎಂದು ಸ್ವೀಕರಿಸಿದರೆ, ಅದು ನಿಮ್ಮ ವಿನಾಶದಲ್ಲಿ ಪರಿಣಮಿಸದಿರದು."

ಸರ್ವಾಂಗದ ಬೆಳವಣಿಗೆ :

ಈ ಬಗೆಯ ಶಾಶ್ವತವಾದ ತಳಹದಿಯ ಮೇಲೆ ನಿಲ್ಲಿಸಲಾದ ನವ ಭಾರತದ ಮಂದಿರವು ಸರ್ವಾಂಗ ಸುಂದರವಿರಬೇಕೆಂಬುದು ಗುರುದೇವರ ಅಭಿಮತ. ಅದರಲ್ಲಿ ಎಲ್ಲ ಅಂಗಾಂಗಗಳ ಬೆಳವಣಿಗೆಯು ಚೆನ್ನಾಗಿ ಆಗುವಂತೆ ಎಚ್ಚರ ವಹಿಸಬೇಕು. ಅಂದರೇನೇ ಭಾರತವು ಪ್ರಪಂಚದಲ್ಲಿ ತನ್ನ ವೈಭವವನ್ನು ಸರಿಯಾಗಿ ಮರೆಯಿಸಬಹುದು. ಗುರುದೇವರು ಇದನ್ನು ಈ ಬಗೆಯಾಗಿ ಅರುಹಿರುವರು.

"I am not one of those who condemn science for the sake of religion. But I would not have the mere scientific or the mere economic spirit prevail. Let not an age of pure scientists, pure economists and pure caluculaters prevail and let not the glory of India be extinguished forever."[17]

"On the otherhand, I must not be supposed to hold that India must be flooded with Philosophers, Yogis and Bhaktas, far from it... I am a firm believer in the manifold activities of a nation, supplementing, instead of contradicting one another. I hold that when a nation rises, it rises from all points of view..... We must have scientists as well as philosophers, men who go in for action and men who sit down to contemplate, people who devote themselves to social regeneration as well as those who care for personal development."[18]

17) P.E.P. 183 18) P.E.P. 182

"ಧರ್ಮಕ್ಕಾಗಿ ವಿಜ್ಞಾನವನ್ನು ಹಳಿಯುವನು ನಾನಲ್ಲ. ಆದರೆ ಕೇವಲ ವೈಜ್ಞಾನಿಕ ಇಲ್ಲವೆ ಆರ್ಥಿಕ ವೃತ್ತಿಯೇ ಇಲ್ಲಿ ನೆಲೆಸಕೂಡದು ಎಂಬುದು ನನ್ನ ಮತ. ಕೇವಲ ವಿಜ್ಞಾನಿಗಳ, ಕೇವಲ ಅರ್ಥ ಶಾಸ್ತ್ರಜ್ಞರ ಮತ್ತು ಕೇವಲ ಗಣಕರ ಯುಗವು ಇಲ್ಲಿ ನೆಲೆಸಕೂಡದು ಮತ್ತು ಭಾರತದ ವೈಭವವು ಪೂರ್ತಿಯಾಗಿ ಅಳಿಸಕೂಡದು."

"ತದ್ವಿರುದ್ಧವಾಗಿ ಭಾರತವು ದಾರ್ಶನಿಕರಿಂದಲೂ, ಯೋಗಿಗಳಿಂದಲೂ, ಭಕ್ತರಿಂದಲೂ ತುಂಬಿಬಿಡಬೇಕೆಂಬುದು ನನ್ನ ಅಭಿಮತವಿರುವದು ಎಂದು ಭಾವಿಸುವದೂ ಸರಿಯಲ್ಲ. ಹಾಗೆಂದೂ ನೌನು ಭಾವಿಸಿರಲಿಲ್ಲ..... ಆದರೆ ನಾನು ರಾಷ್ಟ್ರದ ವಿವಿಧ ಚಟುವಟಿಕೆಗಳಲ್ಲಿ ದೃಢವಾದ ನಂಬಿಕೆಯುಳ್ಳವನಿರುವೆ. ಅವು ಪರಸ್ಪರರನ್ನು ವಿರೋಧಿಸದೇ ಪೋಷಕವಾಗಿರಬೇಕು. ಒಂದು ರಾಷ್ಟ್ರದ ಉತ್ಥಾನವಾಗುವಾಗ, ಅದು ಎಲ್ಲಅಂಗಗಳಿಂದ ಬೆಳೆಯುವದು ಎಂಬುದು ನನ್ನ ನಂಬಿಕೆ..... ಆದುದರಿಂದ ನಮಗೆ ವಿಜ್ಞಾನಿಗಳೂ ಬೇಕು, ದಾರ್ಶನಿಕರೂ ಬೇಕು; ಕರ್ಮಕುಶಲರೂ ಬೇಕು, ಧ್ಯಾನಪ್ರಿಯರೂ ಬೇಕು; ಸಮಾಜ ಸುಧಾರಕರೂ ಬೇಕು. ಆತ್ಮೋನ್ನತಿಗಾಗಿ ಯತ್ನಿಸುವವರೂ ಬೇಕು."

ನವ ಭಾರತದ ಕನಸು : ಶ್ರೀಗುರುದೇವರು ತಾವು ವಿವೇಕಾನಂದರಂತೆ ಕಂಡ ನವ ಭಾರತದ ಉಜ್ವಲ ಕನಸನ್ನು ಈ ರೀತಿಯಾಗಿ ಬಣ್ಣಿಸಿರುವರು.

If India must rise she will rise in a most peculiar way, not hitherto known to all History. She will combine the virtues of the West and the East, and will rise superior to both. If the West and the East are to meet, they will meet in India and not in Europe. What a glorious prospect lies before India ! I see India flinging away superstition, sloth and intellectual inertia. I see her taking up the scientific spirit and energy of Europe. I see her assimilating the excellences of both the East and West and rising in the scale of modern nations, preserving all the while, the integrity and the pristine purity of her spiritual self."[19]

"ಭಾರತದ ಆಗಲೇಬೇಕಾದ ಉತ್ಥಾನವು. ಇತಿಹಾಸವು ಇನ್ನೂವರೆಗೆ ಅರಿಯದಿರುವ ಅಲೌಕಿಕ ರೀತಿಯಿಂದ ಆಗಲಿರುವದು. ಅದು ಪೂರ್ವ-ಪಶ್ಚಿಮಗಳ ಸದ್ಗುಣಗಳನ್ನು ತನ್ನಲ್ಲಿ ಕೂಡಿಸಿ, ಆವೆರಡನ್ನೂ ಮೀರಲಿರುವದು. **ಪೂರ್ವ ಪಶ್ಚಿಮಗಳು ಒತ್ತಟ್ಟಿಗೆ ಸೇರಬಹುದಾದರೆ, ಅವು ಭಾರತದಲ್ಲಿಯೇ ಸೇರಬಹುದು; ಯುರೋಪದಲ್ಲಿ ಅಲ್ಲ."**

"ಭಾರತವನ್ನು ಅದೆಂಥ ಉಜ್ವಲ ಭವಿಷ್ಯ ಕಾದಿರುವದು ! ಭಾರತವು ತನ್ನ ಅಂಧ ಶ್ರದ್ಧೆಯನ್ನೂ ಆಲಸ್ಯವನ್ನೂ ಬೌದ್ಧಿಕ ಜಡತೆಯನ್ನೂ ಸುದೂರ ಎಸೆಯುವದನ್ನು ನಾನು ಕಾಣುತ್ತಿರುವೆ. ಅದು ಯುರೋಪದ ವಿಜ್ಞಾನ-ವೃತ್ತಿಯನ್ನೂ ಚೈತನ್ಯವನ್ನೂ ಪಡೆಯುವದನ್ನು

19) P.E.P. 184

ನೋಡುತ್ತಿರುವೆ. ಅದು ಪೂರ್ವ-ಪಶ್ಚಿಮಗಳ ಅತ್ಯುತ್ತಮ ಅಂಶಗಳನ್ನು ಅರಗಿಸಿಕೊಂಡು, ಆಧುನಿಕ ರಾಷ್ಟ್ರಗಳ ಉನ್ನತ ಸ್ಥಾನವನ್ನು ಪಡೆದು, ಅದೇ ಸಮಯದಲ್ಲಿ ತನ್ನ ಆಧ್ಯಾತ್ಮದ ಶುದ್ಧತೆಯನ್ನೂ, ಸತ್ಯತೆಯನ್ನೂ ಕಾಯ್ದುಕೊಂಡದ್ದನ್ನು ಕಾಣುತ್ತಿರುವೆ!"

ರಾಷ್ಟ್ರದ ಪ್ರಧಾನ ಅಂಗಗಳು :

ಈ ವರೆಗೆ ನಾವು ನವಭಾರತದ ಶಾಶ್ವತ ತಳಹದಿಯಾಗಬೇಕಾದ ಪರಿಶುದ್ಧ ಆಧ್ಯಾತ್ಮಿಕ ಹಾಗೂ ಭೌತಿಕ ಸಿದ್ಧಾಂತಗಳ ಸಂಯೋಗವನ್ನೂ, ಭೂತವರ್ತಮಾನಗಳ ಸಂಯೋಗವನ್ನೂ, ಅವರ ಸರ್ವಾಂಗಗಳ ಸರಿಯಾದ ಬೆಳವಣಿಗೆಯನ್ನೂ ಅರಿತೆವು. ಗುರುದೇವರು ಕಂಡ ಅದರ ಉಜ್ವಲ ಭವಿತವ್ಯದ ಕನಸಿನ ದರ್ಶನವನ್ನೂ ಪಡೆದೆವು. ಇನ್ನು ನಮ್ಮ ರಾಷ್ಟ್ರದ ಪ್ರಧಾನ ಅಂಗಗಳಾವವು ? ಅವನ್ನು ಪರಮಾರ್ಥದೊಡನೆ ಗುರುದೇವರು ಹೇಗೆ ಸಮನ್ವಯಗೊಳಿಸಿರುವರು ? ಎಂಬುದನ್ನು ಅರಿಯುವಾ. ನಮ್ಮ ರಾಷ್ಟ್ರದ ಪ್ರಧಾನ ಅಂಗಗಳು ಆರು. i) ಸಾಂಸ್ಕೃತಿಕ ಅಂಗ (ಧರ್ಮ-ದರ್ಶನಯುತ), ii) ವೈಜ್ಞಾನಿಕ ಅಂಗ, iii) ಕಲಾತ್ಮಕ ಅಂಗ, iv) ಶೈಕ್ಷಣಿಕ ಅಂಗ, v) ಆರ್ಥಿಕ ಅಂಗ ಮತ್ತು vi) ರಾಜನೈತಿಕ ಅಂಗ. ಇವುಗಳಲ್ಲಿ ಮೊದಲನೆಯ ಮೂರು ಅಂಗಗಳನ್ನು ಈ ಮೊದಲೇ ಚರ್ಚಿಸಲಾಗಿದೆ. ಇಲ್ಲಿ ಉಳಿದ ಮೂರನ್ನು ವಿವರಿಸಬಯಸುವೆ.

ಶೈಕ್ಷಣಿಕ ಅಂಗ :

ಶಿಕ್ಷಣದ ಹಿರಿಮೆ : ರಾಷ್ಟ್ರ ಜೀವನದಲ್ಲಿ ಶಿಕ್ಷಣದ ಕಾರ್ಯವು ತುಂಬ ಹಿರಿದು, ಶಿಕ್ಷಣವು ರಾಷ್ಟ್ರದ ಪ್ರಾಣ. ಅದು ಪ್ರಾಣಿ-ಮಾನವನನ್ನು, ಮಾನವ-ಮಾನವನನ್ನಾಗಿ ಪೂರ್ಣತೆಯನ್ನು, ದೇವತ್ವವನ್ನೂ ಪ್ರಕಟಗೊಳಿಸಬಲ್ಲದು. ಇಂಥ ವಿಕಸಿತರಾದ ಮಾನವರ-ದೇವ-ಮಾನವರ ಬಳಗವು ಬೆಳೆದಾಗಲೇ, ರಾಷ್ಟ್ರಗಳಲ್ಲಿ ಶಾಂತಿ-ಸೌಹಾರ್ದ ಬೆಳೆದು, ಅದು ನಿಜವಾದ ವೈಭವವನ್ನು ಪಡೆಯಬಲ್ಲದು.

ಗುರುದೇವರ ಆದರ್ಶ : ಗುರುದೇವರು ಶಿಕ್ಷಣ-ಶಾಸ್ತ್ರವನ್ನು ಕುರಿತು ವಿಶೇಷ ಬರೆದಿರುವದಿಲ್ಲ. ಆದುದರಿಂದ ಶೈಕ್ಷಣಿಕ ಆದರ್ಶವನ್ನು ಅವರ ಜೀವನದಲ್ಲಿ ಮುಖ್ಯವಾಗಿ ಕಾಣಬೇಕಾಗುವದು. ಒಮ್ಮೆ ಅವರಿಗೆ ಓರ್ವ ಆಂಗ್ಲ ಮಹಿಳೆಯು ಕೇಳಿದಳು. "ಶ್ರೀ ರಾನಡೆ ! ನೀವು ನಿಮ್ಮ ಗ್ರಂಥಗಳಲ್ಲಿ ಬೇರೆ ಬೇರೆ ಸಂತರ ದರ್ಶನವನ್ನು ಅರುಹಿರುವಿರಿ. ನಿಮ್ಮ ಸ್ವಂತ ದರ್ಶನವು ಎಲ್ಲಿಯೂ ಕಾಣುವುದಿಲ್ಲವಲ್ಲ?" ಅದಕ್ಕೆ ಗುರುದೇವರು ಹೇಳಿರುವರು. "**ನನ್ನ ಜೀವನವೇ ನನ್ನ ದರ್ಶನ. ನನ್ನ ಪ್ರತಿನಿತ್ಯದ ಜೀವನವನ್ನು ಅವಲೋಕಿಸಿದರೆ, ನನ್ನ ದರ್ಶನದ ಪರಿಚಯ ಚೆನ್ನಾಗಿ ಆಗಬಲ್ಲದು.**" ತಮ್ಮ ಜೀವನ ದರ್ಶನವನ್ನು ಕುರಿತು ಗುರುದೇವರು ಅರುಹಿದ ಮಾತು, ಅವರ ಶೈಕ್ಷಣಿಕ ಆದರ್ಶಕ್ಕೂ ಅನ್ವಯಿಸುವದು.

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ, ವಿದ್ಯಾರ್ಥಿ, ಶಿಕ್ಷಣ-ವಿಷಯ, ಶಿಕ್ಷಣ-ಪದ್ಧತಿ, ಶಿಕ್ಷಣ ಸಂಸ್ಥೆ ಇವು ಪ್ರಧಾನ ವಿಷಯಗಳು. ಗುರುದೇವರು ಆದರ್ಶ ಶಿಕ್ಷಕರು, ಆದರ್ಶ ವಿದ್ಯಾರ್ಥಿಗಳು. ಈ ಎರಡೂ ವಿಷಯಗಳನ್ನು ನಾವು ಅವರ ಜೀವನದಿಂದ ಅರಿತುಕೊಳ್ಳಬಹುದು. ಶಿಕ್ಷಣ

ಸಂಸ್ಥೆಯ ಆದರ್ಶದ ಬಗೆಗೂ ಅವರು ಕೆಲ ಬೆಲೆಯುಳ್ಳ ವಿಚಾರಗಳನ್ನು ಅರುಹಿರುವರು. ಇವೆಲ್ಲವನ್ನು ಸ್ವಲ್ಪದರಲ್ಲಿ ಅರುಹಿ ಮುಂದುವರೆಯುವೆ.

ಗುರುದೇವರು ಆದರ್ಶ-ವಿದ್ಯಾರ್ಥಿಗಳು. ಇಂದಿನ ವಿದ್ಯಾರ್ಥಿಗಳು ಅವರ ವಿದ್ಯಾರ್ಥಿ-ಜೀವನದಿಂದ ಅನೇಕ ವಿಷಯಗಳನ್ನು ಕಲಿಯಬಹುದು. ಅವರು ನಿಜವಾದ ಅರ್ಥದಿಂದ ವಿದ್ಯಾರ್ಥಿಗಳು, ವಿದ್ಯೆಯನ್ನು ಉತ್ಕಟತೆಯಿಂದ ಪಡೆಯಲೆಳಸುವವರು-ಯತ್ನಿಸುವವರು ಇದ್ದರು. ಕೇವಲ ಸುಖಾರ್ಥಿಗಳೇ ಇದ್ದಿಲ್ಲ. ಬರೀ ಪರೀಕ್ಷಾರ್ಥಿಗಳೇ ಇರಲಿಲ್ಲ. ಅವರ ಸರಳ ಜೀವನ. ನಿಯಮಿತ ಅಧ್ಯಯನ, ವ್ಯಾಯಾಮ, ವಿಷಯಗಳ ಸಾಂಗೋಪಾಂಗ ಜ್ಞಾನಾರ್ಜನ. ಅದರ ಆಳವಾದ ಮನನ. ತನ್ನ ವಿದ್ಯಾ ಗುರುಗಳ ಬಗೆಗೆ ನಿತಾಂತ ಆದರ, ಇವೆಲ್ಲ ಇಂದಿನ ವಿದ್ಯಾರ್ಥಿಗಳಿಗೆ ದಾರಿದೀಪಗಳಾಗಬಲ್ಲವು. ಆವುಗಳ ಜೊತೆ ಅವರಲ್ಲಿ ಬೆಳೆದಿರುವ ಭಗವದ್ ಭಕ್ತಿ, ಸದ್ಗುರುಗಳಲ್ಲಿಯ ಅಲೌಕಿಕ ಶ್ರದ್ಧೆ-ಆದರಗಳು, ತುಂಬ ಅವರ್ಣನೀಯವಾಗಿದ್ದವು. ಅದರ ಫಲವಾಗಿ ಅವರ ಬುದ್ದಿಗೂ, ಸ್ಮೃತಿ ಶಕ್ತಿಗೂ ಒಂದು ಬಗೆಯ ತೇಜಸ್ಸು, ಅಪೂರ್ವ ತೀಕ್ಷ್ಣತೆಯು ಲಭಿಸಿದ್ದಿತು. ಅವರು ಅದರ ಮೂಲಕ ಬೇಗನೇ ಹೊಸ ವಿಷಯವನ್ನು ಅರಿತು ಅರಗಿಸಿಕೊಳ್ಳುತ್ತಿದ್ದರು. ಮತ್ತು ಅರಿತದ್ದನ್ನು ಮರೆಯುವದೇ ಅವರಿಗೆ ಗೊತ್ತಿರಲಿಲ್ಲ. ಇಂಥ ಆದರ್ಶ ವಿದ್ಯಾರ್ಥಿಗಳು ಮುಂದೆ ಆದರ್ಶ ಶಿಕ್ಷಕರು, ಪ್ರಾಧ್ಯಾಪಕರಾದುದರಲ್ಲಿ ಆಶ್ಚರ್ಯವಿಲ್ಲ.

ಗುರುದೇವರು ಇಂದಿನ ವಿದ್ಯಾರ್ಥಿಗಳಿಗೆ ಆದರ್ಶವಾಗಿರುವಂತೆ, ಪ್ರಾಧ್ಯಾಪಕರಿಗೂ ಒಳ್ಳೆಯ ಆದರ್ಶರಾಗಿರುವರು. ಅವರ ಅಧ್ಯಯನ ಆಳವಾದುದು, ವಿಶಾಲವಾದುದು. ಪ್ರತಿಯೊಂದು ವಿಷಯದ ಸಾಂಗೋಪಾಂಗ ಜ್ಞಾನವನ್ನು ಪಡೆಯುವದು ಅವರ ಅಧ್ಯಯನದ ಗುರಿ. ಅವರು ಆಯಾ ವಿಷಯವನ್ನು ಐತಿಹಾಸಿಕ, ತೌಲನಿಕ, ವೈಜ್ಞಾನಿಕ ಹಾಗೂ ವಿಮರ್ಶಕ ದೃಷ್ಟಿಯಿಂದ ಅಭ್ಯಸಿಸುತ್ತಿದ್ದರು. ಅವರು ಕಲಿಸಲಿರುವ ವಿಷಯದ ಸಾದ್ಯಂತ ಪರಿಜ್ಞಾನ ಪಡೆದಿರುವ ಮೂಲಕ, ಅವರ ಅಧ್ಯಾಪನವು ತುಂಬ ಆಕರ್ಷಕ ಹಾಗೂ ಪರಿಣಾಮಕಾರಕ ಆಗುತ್ತಿದ್ದಿತು. ಅವರ ಪಾಂಡಿತ್ಯ-ಪೂರ್ಣ ಅಧ್ಯಾಪನ ಕೌಶಲ್ಯವನ್ನು ಅವರ ವಿದ್ಯಾರ್ಥಿಯೋರ್ವರು ಈ ರೀತಿ ಬಣ್ಣಿಸಿರುವರು.

"Prof. Ranade's career as a teacher of Philosophy was truly a great event of teaching philosophy in the college.... His greatest contribution was the great learning and brilliance which he brought to bear upon his teaching Philosophy in the class-room which attracted a large number of students..... He spoke in his class with a sense of inspiration, like a convinced and convincing prophet and enthused his listeners to philosophic effort."[20]

"ಪ್ರಾಧ್ಯಾಪಕ ರಾನಡೆಯವರ ಕಾಲೇಜದಲ್ಲಿಯ ದರ್ಶನಾಧ್ಯಾಪನದ, ಕಾರ್ಯವು

20) R.L.L. PP 38-39

ತುಂಬ ಮಹತ್ವದ್ದಿರುವದು. ಅವರು ತಮ್ಮ ದರ್ಶನದ ಅಧ್ಯಾಪನದಲ್ಲಿ ಕಾಣಿಸಿದ ಶ್ರೇಷ್ಠವಾದ ಪಾಂಡಿತ್ಯ ಹಾಗೂ ತೇಜಸ್ಸು, ಬಹುಸಂಖ್ಯ ವಿದ್ಯಾರ್ಥಿಗಳನ್ನು ಅವರೆಡೆ ಆಕರ್ಷಿಸಿತ್ತು..... ಅವರು ವರ್ಗದಲ್ಲಿ ಸ್ಫೂರ್ತಿಯಿಂದ ಮಾತನಾಡುತ್ತಿದ್ದರು. ಪೂರ್ಣ ಮನವರಿಕೆಯುಳ್ಳ ಹಾಗೂ ಮನಗಾಣಿಸಬಲ್ಲ ಪ್ರವಾದಿಯಂತೆ, ಅವರು ಕಲಿಸುತ್ತಿದ್ದರು. ಅದರ ಮೂಲಕ ಕೇಳುವವರಲ್ಲಿ ದರ್ಶನದ ಅಧ್ಯಯನದ ಬಗೆಗೆ ಉತ್ಸಾಹ ಜನಿಸುತ್ತಿತ್ತು. "

ಗುರುದೇವರು ವಿದ್ಯಾರ್ಥಿಗಳನ್ನು ತುಂಬ ಪ್ರೀತಿಸುತ್ತಿದ್ದರು. ಅವರು ವಿದ್ಯಾರ್ಥಿಗಳ "A friend philosopher and guide" "ಗೆಳೆಯರು, ತತ್ವಜ್ಞರು ಹಾಗೂ ಮಾರ್ಗದರ್ಶಕರು" ಆಗಿದ್ದರು. ಅವರು ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ನೆಲೆಯಾಗಿದ್ದರು. ಇದೂ ಒಂದು ಅಂದಿನ ಪ್ರಾಧ್ಯಾಪಕರು ಅವರಿಂದ ಸ್ವೀಕರಿಸಬೇಕಾದ ವಿಷಯ.

ಗುರುದೇವರು ಪ್ರಾಧ್ಯಾಪಕ ಪದವಿಯನ್ನು ತುಂಬ ಗೌರವಿಸುತ್ತಿದ್ದರು. ತಮ್ಮ ಸ್ವತಂತ್ರ ಸಂಶೋಧನದಿಂದ ಜ್ಞಾನ-ಭಾಂಡಾರಕ್ಕೆ ನೂತನ ಕಾಣಿಕೆಯನ್ನು ಸಲ್ಲಿಸುವವರೇ ಪ್ರಾಧ್ಯಾಪಕ ಪದವಿಗೆ ಯೋಗ್ಯರು. ಅವರಿಗೇ ಆ ಬಿರುದನ್ನು ಸಲ್ಲಿಸಬೇಕು ಎಂಬುದು ಅವರ ಅಭಿಮತ.

ಉಚ್ಚ ಶಿಕ್ಷಣ ಸಂಸ್ಥೆಗಳು ತಮ್ಮೆದುರು ಯಾವ ಆದರ್ಶಗಳನ್ನು ಇರಿಸಿಕೊಳ್ಳಬೇಕೆಂಬುದನ್ನು ಗುರುದೇವರು ಒಂದೆಡೆ ಈ ರೀತಿ ಅರುಹಿರುವರು.

We must extend the ideal beyond the limits of mere cheepening and facilitating of education, to an all-round developement of intellectual work-scientific, literary, historical and philosophical.... We must kindle torch at which other educaitonal bodies might light their lamps. What we build for 'aye' shall alone matters what we build for the **'nonce'** shall crumble to dust."[21]

"ನಾವು ನಮ್ಮ ಆದರ್ಶವನ್ನು ಉನ್ನತಗೊಳಿಸಬೇಕು. ಅದು ಕೇವಲ ಶಿಕ್ಷಣವು ಸುಲಭ ಹಾಗೂ ಕಡಿಮೆ ವೆಚ್ಚಿನದು ಆಗಬೇಕೆಂದು ಬಗೆಯದೆ, ಅದು ವೈಜ್ಞಾನಿಕ, ಸಾಹಿತ್ಯಿಕ, ಐತಿಹಾಸಿಕ ಹಾಗು ದಾರ್ಶನಿಕ ಕ್ಷೇತ್ರಗಳಲ್ಲಿಯ ಎಲ್ಲಅಂಗಗಳ ಬೌದ್ಧಿಕ ಬೆಳವಣಿಗೆಯನ್ನು ಲಕ್ಷಿಸಬೇಕು. ನಾವು ಇಂಥ ಜ್ಞಾನ-ಜ್ಯೋತಿಯನ್ನು ಬೆಳಗಿದೆವೆಂದರೆ ಬೇರೆ ಬೇರೆ ಶಿಕ್ಷಣ-ಸಂಸ್ಥೆಗಳು ಅದರಿಂದ ತಮ್ಮ ತಮ್ಮ ದೀಪಗಳನ್ನು ಹಚ್ಚಿಕೊಳ್ಳಬಹುದು. ನಾವು ಎಲ್ಲ ಕಾಲಕ್ಕಾಗಿ ನಿರ್ಮಿಸಿದುದೇ ನಿಜವಾಗಿ ಬಾಳಬಲ್ಲದು; ಕೆಲಕಾಲ ನಿರ್ಮಿಸಿದುದು ಕೂಡಲೇ ಹುಡಿಗೂಡದಿರುವದು."

ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ನೈತಿಕ ಹಾಗೂ ಪಾರಮಾರ್ಥಿಕ ಬೆಳವಣಿಗೆಯೆಡೆಗೆ ವಿಶೇಷ ಗಮನ ಕೊಡಬೇಕು. ವಿದ್ಯಾರ್ಥಿಗಳಲ್ಲಿ ನೈತಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳ ಬಗೆಗೆ ಆದರ-ಭಾವವನ್ನು ಬೆಳೆಸಲು ಯತ್ನಿಸಬೇಕು.

---

21) R.L.L. P 61

ಅಂದರೇನೇ ಅವರಲ್ಲಿಯ ಸ್ವೈರವೃತ್ತಿಯು ಅಳಿಯಬಹುದು. ಅವರು ನಿಜವಾದ ಉನ್ನತಿಯನ್ನು ಪಡೆದು, ತಮ್ಮ ಶೀಲಸೌರಭದಿಂದ ರಾಷ್ಟ್ರೋನ್ನತಿಯನ್ನು ಸಾಧಿಸಬಹುದು. ಇದು ಸರಿಯಾಗಿ ಸಾಧ್ಯವಾಗಲು ಇಡೀ ಶಿಕ್ಷಣ ಕ್ರಮವೇ **"ದೇವಕೇಂದ್ರಿತ "**(God-centred), ಆಗಬೇಕೆಂದು ಗುರುದೇವರ ಅಭಿಮತ.

ಆರ್ಥಿಕ ಅಂಗ :

ಅರ್ಥವು-ಧನವು ಮಾನವನ ಅಭ್ಯುದಯದ ಒಂದು ಪ್ರಧಾನ ಅಂಗ. ಅದು ರಾಷ್ಟ್ರದ ಅಭ್ಯುದಯದಲ್ಲಿಯೂ ಪ್ರಧಾನ ಪಾತ್ರ ವಹಿಸಬಲ್ಲದು. ಆದರೆ ಅದಕ್ಕೆ ಅರ್ಥವು ಧರ್ಮದ ಬೆಂಬಲವನ್ನು ಪಡೆಯಬೇಕಾಗುವದು. ಅಂದಾಗಲೇ ಅದು ರಾಷ್ಟ್ರಕ್ಕೆ ನಿಜವಾದ ವೈಭವವನ್ನು ನೀಡಬಲ್ಲದು. ಅದು ಅಧರ್ಮಕ್ಕೆ ಅಧೀನವಾದರೆ ರಾಷ್ಟ್ರದ ವಿನಾಶವನ್ನು ಮಾಡದಿರದು. ಆದುದರಿಂದ ಅದರ ಸಂಪಾದನ, ವಿತರಣ ಮಾಡುವಾಗ ಎರಡು ವಿಷಯಗಳನ್ನು ಅವಶ್ಯವಾಗಿ ಗಮನಿಸಿಬೇಕೆಂಬುದು ಗುರುದೇವರ ಹೇಳಿಕೆ. **ಧರ್ಮಾಧರ್ಮ ವಿವೇಕವು** ಒಂದು, **ಸ್ವಹಿತ-ಪರಹಿತ ವಿವೇಕವು** ಇನ್ನೊಂದು. ಅಧರ್ಮಸಾಧನಕ್ಕಿಂತ, ಧರ್ಮಸಾಧನ ಮೇಲು, ಸ್ವಹಿತಕ್ಕಿಂತ ಪರಹಿತ-ರಾಷ್ಟ್ರಹಿತ ಮೇಲು ಎಂಬುದನ್ನು ಮರೆಯಕೂಡದು, ಎಂಬುದು ಅವರ ಖಂಡಿತ ಅಭಿಮತ. ಈ ಸೂತ್ರವನ್ನು ರಾಷ್ಟ್ರಕಾರ್ಯವನ್ನು ಸರಿಯಾಗಿ ಸಾಧಿಸಬಯಸುವವರು, ಪ್ರತಿಯೊಂದು ಕ್ಷೇತ್ರದಲ್ಲಿ ಬಳಸಬೇಕು. ಅದರ ಬಳಕೆಯಿಂದಲೇ ಅವರು ರಾಷ್ಟ್ರದ ಸ್ಥಿರವಾದ-ಚಿರವಾದ ಅಭ್ಯುದಯವನ್ನು ಸಾಧಿಸಬಲ್ಲರು.

ಗುರುದೇವರು ಶಿಕ್ಷಣ ಶಾಸ್ತ್ರದಂತೆ ಅರ್ಥಶಾಸ್ತ್ರದ ಬಗೆಗೂ ಗ್ರಂಥಗಳನ್ನಾಗಲೀ, ಲೇಖನಗಳನ್ನಾಗಲೀ ಬರೆದಿಲ್ಲ. ಆದುದರಿಂದ ಈ ವಿಷಯವನ್ನು ಕುರಿತು ಅವರ ವಿಚಾರಗಳನ್ನು ಅವರ ಜೀವನದಿಂದಲೂ, ಅವರ ಸದ್ಗುರುಗಳ ವಚನಗಳಿಂದಲೂ ಅರಿತುಕೊಳ್ಳಬೇಕಾಗಿದೆ.

ನೀತಿಯುತ ಅರ್ಥ : ಗುರುದೇವರು ತಮ್ಮ ಉದರ ನಿರ್ವಾಹಕ್ಕಾಗಿ ಕೆಲಸವನ್ನು ನೋಡುತ್ತಿರುವಾಗ, ಅವರು ತಮ್ಮ ಸದ್ಗುರುಗಳಿಗೆ ಬರೆದ ಒಂದು ಪತ್ರದಲ್ಲಿ ಅವರ ಕೆಲ ವಿಚಾರಗಳು ಸಹಜವಾಗಿ ಹೊರಹೊಮ್ಮಿರುವವು. ಈ ಪತ್ರವನ್ನವರು ಶ್ರೀ ಮಹಾರಾಜರವರಿಗೆ ದಿನಾಂಕ 20, ಸಪ್ಟಂಬರ 1910 ರ ದಿನ ಬರೆದಿರುವರು.

"..... ಉದರನಿರ್ವಾಹಕ್ಕಾಗಿ ಯಾವುದಾದರೊಂದು ಉದ್ಯೋಗವನ್ನು ಅವಶ್ಯ ಮಾಡಲೇಬೇಕು. ಆದರೆ ಅದು ಪರಮಾತ್ಮನ ಭಕ್ತಿಗೆ ಅನುಕೂಲವಾದದ್ದಿರಬೇಕು, ಎಂಬುದು ಅಂತರಂಗದ ಬಯಕೆ. ಯಾವ ಉದ್ಯೋಗದಿಂದ ಅಹಂಕಾರವು ಬೆಳೆಯುವದೋ, ಪರಮಾತ್ಮನ ಭಕ್ತಿಯ ಉಪೇಕ್ಷೆ ಆಗಬಹುದೋ..... ಅಂಥ ಉದ್ಯೋಗವನ್ನು ಮಾಡುವ ಅಗತ್ಯವು ಬೀಳಬಾರದು..... ಅದರಲ್ಲಿ ಎಷ್ಟು ಹಣ ದೊರೆತರೂ ಅದು ಬೇಡ. ಯಾವ ಉದ್ಯೋಗದಿಂದ ಭಕ್ತಿಯು ಪಸರಿಸಬಹುದೋ, ಸಂತರ ಕೀರ್ತಿಪ್ರಭಾವಗಳು ಬೆಳೆಯಬಹುದೋ, ಅಂಥ ಉದ್ಯೋಗದಲ್ಲಿ ತೊಡಗಬೇಕೆಂಬುದು ಹೃದಯದ ಹಂಬಲ, ಬರೀ ಧನದಿಂದ ಭಕ್ತಿಯ ವೈಭವವನ್ನು ಬೆಳೆಸುವದು ಮೇಲು ನಿಜ.

ಆದರೆ ಅದಕ್ಕೆ ಬೇಕಾದ ನಿಶ್ಚಯ, ಪ್ರಯತ್ನ ಹಾಗೂ ಬುದ್ಧಿಯನ್ನು ದಯಪಾಲಿಸುವದು ತಮ್ಮನ್ನೇ ಅವಲಂಬಿಸಿದೆ. ಆದುದರಿಂದ ಕೇವಲ ದುಡ್ಡಿಗಾಗಿ ಕೆಲಸ ಮಾಡುವ ಹಾಗೂ ನೀತಿ ಪಥವನ್ನು ಕಿಂಚಿತ್ತಾದರೂ ತೊರೆಯುವ ಅಗತ್ಯ ಬೀಳಬಾರದು ಎಂಬುದೇ ಬಲವಾದ ಬಯಕೆ. ಬೇರೆಲ್ಲ ಉದ್ಯೋಗಗಳಲ್ಲಿ ಪರಸ್ತ್ರೀ, ಪರಧನ, ಅಭಿಮಾನ, ನಾಸ್ತಿಕತೆ ಇತ್ಯಾದಿ ವಿಷಯಗಳ ಸಂಪರ್ಕವು ಬಂದೇ ಬರುವದರಿಂದ, ಅಂಥ ಕೆಲಸವನ್ನು ಮಾಡಬಾರದು ಎಂದು ಅನಿಸುವದು."

ಈ ಓಲೆಯಲ್ಲಿ **ನೀತಿ-ಧರ್ಮದ** ಅಂಗಗಳಾದ ಸತ್ಯ, ಪ್ರೇಮ, ಸಂಯಮಗಳು ಸೂಚಿತವಾಗಿರುವದನ್ನು ಕಾಣಬಹುದು. ಧನವನ್ನು ನೀತಿಯಿಂದ ಪಡೆಯಬೇಕು, ಭಕ್ತಿಯಿಂದ ನೀಡಬೇಕು ಹಾಗೂ ಸಂಯಮದಿಂದ ಉಪಭೋಗಿಸಬೇಕು ಎಂಬುದೇ ಗುರುದೇವರ ಅಂತರಂಗದ ಬಯಕೆ.

ಸಂತರ ಬೋಧೆ : ಅರ್ಥ-ವ್ಯವಸ್ಥೆಯ ಹಿತಾಹಿತಗಳು ಅದರ ಸಂಪಾದನ ವಿತರಣದ ಪರಿಶುದ್ಧತೆಯನ್ನು ಅವಲಂಬಿಸಿರುವವು. ಈ ವಿಷಯವನ್ನು ಕುರಿತು, ನಮ್ಮ ಪ್ರಾಚೀನ ಋಷಿ-ಮುನಿಗಳೂ, ಸಾಧು-ಸಂತರೂ ಯಾವ ಬಗೆಯ ಬೋಧೆಯನ್ನು ನೀಡುವರು ? ಎಂಬುದನ್ನು ಅರಿಯುವದು ಈ ಸಂದರ್ಭದಲ್ಲಿ ಉಪಯುಕ್ತವಾಗದಿರದು. ಗುರುದೇವರ ಜೀವನ ಸಂದೇಶದ ಮೇಲೆ ಅದು ಚೆನ್ನಾಗಿ ಬೆಳಕನ್ನು ಬೀರದಿರದು ಎಂದು ಬಗೆದು, ಸಂತರ ಬೋಧೆಯನ್ನು ಕಿರಿದರಲ್ಲಿ ಅರುಹಲಿರುವೆ. ಮೊದಲು ಧನದ ಸಂಪಾದನದ ಬಗೆಯನ್ನು, ಅದನ್ನು ಪಡೆಯುವ ರೀತಿಯನ್ನು ಅರುಹಿ, ತರುವಾಯ ಅದರ ವಿತರಣದ ಬಗೆಯನ್ನು- ಅದನ್ನು ನೀಡುವ ರೀತಿಯನ್ನೂ ಸಂತರ ಮಾತಿನಲ್ಲಿ ಅರುಹುವೆ.

ಪಡೆಯುವದೆಂತು !

1) ನೀತಿಯಿಂದ ಪಡೆಯಿರಿ :

ಅರ್ಥವು ಒಂದು ಹಿರಿಯ ಪುರುಷಾರ್ಥ; ಜೀವನದಲ್ಲಿ ಅದಕ್ಕೆ ಒಂದು ಹಿರಿದಾದ ಸ್ಥಾನವಿದೆ, ಕಾರ್ಯವಿದೆ. ಆದರೆ ಆ ಉನ್ನತ ಸ್ಥಾನವನ್ನು ಅಲಂಕರಿಸಲು, ಆ ಉದಾತ್ತ ಕಾರ್ಯವನ್ನು ನಿರ್ವಹಿಸಲು, ಅದು ನೀತಿಯ ಬೆಂಬಲವನ್ನು ಪಡೆಯಬೇಕಾಗುವದು. ಅದನ್ನು ಪಡೆಯುವದೆಂತು? ನಾನು ಈ ಮೊದಲು ಅರುಹಿದ ಮೇರೆಗೆ, ನೀತಿಯ ಅಂಗಗಳು ಮೂರು; ಸತ್ಯ, ಪ್ರೇಮ, ಸಂಯಮ, ಅರ್ಥವನ್ನು ಸತ್ಯದಿಂದ ಪಡೆಯಬೇಕು; ಪ್ರೀತಿಯಿಂದ ನೀಡಬೇಕು; ಸಂಯಮದಿಂದ ಉಪಭೋಗಿಸಬೇಕು. ಇದು ನೀತಿಯ ರೀತಿ. ಇದರಿಂದ ಅರ್ಥವು ಸಾರ್ಥವಾಗುವದು. ಕಲ್ಯಾಣಕರವಾಗುವದು. ಇಲ್ಲದಿದ್ದರೆ ಅದು ಅನರ್ಥಕರ-ಅಕಲ್ಯಾಣಕರವಾಗದಿರದು.

ಅರ್ಥವನ್ನು ಅದಕ್ಕಾಗಿ ಸತ್ಯದಿಂದ ಪಡೆಯಬೇಕು, ಪ್ರಾಮಾಣಿಕತನದಿಂದ ಪಡೆಯಬೇಕು. ಅದು ಹೇಗೆ ? ಪ್ರಾಮಾಣಿಕತೆಯಲ್ಲಿ ಎರಡು **ಪ್ರಮಾಣಗಳು** ಒಳಗೊಂಡಿರುವವು. ಒಂದು **ನಿಕಷ** (Criterion), ಇನ್ನೊಂದು **ಪರಿಮಿತಿ** (Sense of proportion). ನಮ್ಮ ಪ್ರಾಮಾಣಿಕತೆಗೆ ನಿಕಷವಾವುದು ? ನಮ್ಮ ಎಲ್ಲನಡೆಗೆ ಇರುವಂತೆ,

ನಮ್ಮ ಸಂಪಾದನ-ಪದ್ಧತಿಯ ಹಾಗೂ ಉದ್ದೇಶದ ಸರಳತೆಯನ್ನಾಗಲಿ, ಉದಾತ್ತತೆಯನ್ನಾಗಲಿ ಅರಿಯುವವರು ನಮ್ಮ ಮನಸ್ಸನ್ನುಳಿದು ಇನ್ನಾರಿರುವರು "ಮನವರಿಯದ ಕಳ್ಳತನವಿಲ್ಲವಲ್ಲಾ" ಎಂದು ಉಸುರಿದರು ಓರ್ವ ಶರಣರು. "ಮನದಲ್ಲಿ ಶಿವತಾನೆ ಮನೆಮಾಡಿಕೊಂಡಿಹ." ಅದಕ್ಕಾಗಿ "ಮನಮೆಚ್ಚಿನಡೆದರೆ ಶಿವ ಮೆಚ್ಚುವ" ಎಂಬುದು ಅವರ ಬೋಧೆ. ಆದುದರಿಂದ ನಮ್ಮ ಮನಸ್ಸಿಗೆ ಸಾಕ್ಷಿ ಇರಿಸಿ, ಯಾರನ್ನು ವಂಚಿಸದೆ, ಸ್ವಂತ ಪ್ರಯತ್ನದಿಂದ ಧನವನ್ನು ಸಂಪಾದಿಸಬೇಕು. ಸ್ವಂತ ಕುಟುಂಬದ ಪೋಷಣೆ ಹಾಗೂ ಜನರ ಕಲ್ಯಾಣ ಕಾರ್ಯ, ಇವೇ ನಮ್ಮ ಸಂಪಾದನದ ಉದ್ದೇಶಗಳಿರಬೇಕು. ಕೇವಲ ಸಂಗ್ರಹ, ಕೀರ್ತಿ ಹಾಗೂ ಸ್ವೈರವಿಲಾಸ, ಇವುಗಳಿಗಾಗಿ ಧನಗಳಿಸಕೂಡದು. ಇದು ಒಂದು ಬಗೆಯ ಪ್ರಾಮಾಣಿಕತೆ.

ಅದರ ಎರಡನೆಯ ಬಗೆಯೂ ಧನವನ್ನು ಗಳಿಸುವ ಪ್ರಮಾಣವನ್ನು, ಪರಿಮಿತಿಯನ್ನು ಅವಲಂಬಿಸಿರುವದು. ನಮ್ಮ ಸಂಪಾದನವು, ಮಿತಿಯನ್ನು ಮೀರಬಾರದು. ಅದೊಂದೇ ನಮ್ಮ ಸಾರಸರ್ವಸ್ವ ಆಗಕೂಡದು. ನಮಗೆ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಪಾರಮಾರ್ಥಿಕ ಕರ್ತವ್ಯಗಳಿರುವವು. ಅವನ್ನು ಗಮನಿಸಿಯೇ ನಾವು ಧನ-ಸಂಪಾದನಕ್ಕೆ ಸಮಯ ನೀಡಬೇಕು. ಸದೈವ ಅದರಲ್ಲಿಯೇ ಮುಳುಗಕೂಡದು. ಮಿತಿಯಲ್ಲಿ ಹಿತ, ಅತಿಯಲ್ಲಿ ಅಹಿತ, ಅತಿಯಾಸೆ ಗತಿಗೆಡಿಸುವದು, ಮತಿ ಕೆಡಿಸುವದು, ನೀತಿ ಕೆಡಿಸುವದು, ಶಾಂತಿ ಕೆಡಿಸುವದು. ಆದುದರಿಂದ ಧನವನ್ನು ಮಿತಿಯಿಂದ ಗಳಿಸಬೇಕು. ಅತಿಯಾಗಿ ಗಳಿಸಿದ ಧನದ ರಾಶಿಯು ಗಳಿಸುವವನ ಶೀಲವನ್ನು ಅಳಿಸುವದಲ್ಲದೇ, ಸಮಾಜದಲ್ಲಿ ಅಸಂತೋಷದ ಕಿಡಿಗಳನ್ನು ಬೆಳೆಸುವದು-ಮತ್ತು ಕ್ರಮೇಣ ಪ್ರಜ್ವಲಿತವಾಗಿ ಸಮಾಜದಲ್ಲಿ ಕ್ರಾಂತಿಯ ದಾವಾನಲವನ್ನೇ ನಿರ್ಮಿಸಿ, ಇಡೀ ಸಮಾಜವನ್ನೇ ಬೂದಿ ಮಾಡದಿರದು. ಓರ್ವ ಆಂಗ್ಲ ಕವಿಯು ಅರುಹಿದ ಮೇರೆಗೆ:

Ill fares the land, to hastening ills a pray,
Where wealth accumulates and men decay.

"ಧನದ ಸಂಗ್ರಹವು ಬೆಳೆದು, ಜನರ ಚಾರಿತ್ರ್ಯವು ಅಳಿದ ನಾಡು ಭರದಿಂದ ಬರಲಿರುವ ಅನಾಹುತಗಳ ದಾಳಿಗೆ ತುತ್ತಾಗದಿರದು." ಆದುದರಿಂದ, ಧನವನ್ನು ಮೇಲೆ ಕಾಣಿಸಲಾದ ಎರಡೂ ಬಗೆಯ ಪ್ರಾಮಾಣಿಕತೆಯಿಂದ ಪಡೆಯಬೇಕು. ಅದೇ ನೀತಿಯ ಸಂಪಾದನ. ಅನೀತಿಯಿಂದ ಗಳಿಸಿದ ಧನವನ್ನು **"ಅರ್ಥಂ ಅನರ್ಥಂ ಭಾವಯ ನಿತ್ಯಂ । ನಾಸ್ತಿ ತತ: ಸುಖಲೇಶ: ಸತ್ಯಂ॥"** ಎಂದು ಬಗೆಯಿರಿ. ಅದು ನಾಯಿಯ ಹಾಲು; ಅದು ಯಾವ ಪವಿತ್ರ ಕಾರ್ಯಕ್ಕೂ ಉಪಯೋಗಿಸಬಾರದು, ನೀತಿಯಿಂದ ಪಡೆದು, ಧನದ ಈಶರಾಗಿರಿ! ದಾಸರಾಗಬೇಡಿರಿ!

2) ಉದ್ಯೋಗದಿಂದ ಪಡೆಯಿರಿ :

ಅರ್ಥವನ್ನು ಉದ್ಯೋಗದಿಂದ ಪಡೆಯಬೇಕು. **"ಉದ್ಯೋಗಿನಂ ಪುರುಷ ಸಿಂಹಂ ಉಪೈತಿ ಲಕ್ಷ್ಮೀ।"** "ಉದ್ಯೋಗ ಉಳ್ಳವನ ಹೊದ್ದುವದು ಸಿರಿಬಂದು" ಆದರೆ ಯಾವ ಉದ್ಯೋಗ ಮಾಡಬೇಕು ? ಸರ್ವಜ್ಞನು ಹೇಳುವ :

ಕೋಟ ವಿದ್ಯೆಗಳಲ್ಲಿ ಮೇಟ ವಿದ್ಯವೆ ಲೇಸು
ಮೇಟಿಯಿಂ ರಾಟ ನಡೆದುದಲ್ಲದೆ ದೇಶ-
ದಾಟವೆ ಕೆಡುಗು ಸರ್ವಜ್ಞ ॥

ಎಲ್ಲ ಉದ್ಯಮಗಳಲ್ಲಿ ಒಕ್ಕಲುತನ ಒಳ್ಳೆಯದು; ಯಾಕೆಂದರೆ, ಅದರಿಂದಲೆ ಜನರಿಗೆ ಅನ್ನ, ವಸ್ತ್ರಗಳು ಲಭಿಸುವವು. ಅವೇ ಲಭಿಸದಿದ್ದರೆ ನಾಡಿನ ಪಾಡೇ ಕೆಡುವದು.

ಇದನ್ನು ಕುರಿತು ಶ್ರೀ ನಿಂಬರಗಿ ಮಹಾರಾಜರವರೂ ಬೋಧಿಸಿರುವುದೇನಂದರೆ:

ಮೇಲು ಒಕ್ಕಲುತನವು, ಮಧ್ಯಮ ವ್ಯಾಪಾರ
ಕೀಳು ಚಾಕರಿಯೆಂದು ಬಗೆಯುತಿಹರು ।
ಕೇಳು ! ಇವುಗಳನೆವಗೆ, ದೇವ ದಯಪಾಲಿಸಿಹ
ಒಲವಿನಿಂದವುಗಳನು ಮಾಡುತಲಿರು ॥
ರಟ್ಟೆಯನ್ನೆಯೆ ಮುರಿದು, ರೊಟ್ಟೆಯನ್ನುಣ್ಣುತಿರು
ಕುಳಿತು ಸಾಲವ ಸೆಳೆದು ಅಳಿಯಬೇಡ !।
ಬಿಟ್ಟು ಆಲಸಿಕೆಯನ್ನು, ಕೊಟ್ಟು ಮನವನು ನೀನು
ದುಡಿದು ಪಡೆಯದುದನ್ನು ಬಳಸಬೇಡ ॥

ಎಲ್ಲ ಉದ್ಯಮಗಳಲ್ಲಿ ಕೃಷಿಗೆ ಪ್ರಾಶಸ್ತ್ಯ ನೀಡಿರುವದು ತುಂಬ ಉಚಿತ. ಅದೇ ಜೀವನಕ್ಕೆ ಅತ್ಯವಶ್ಯವಾದ ಅನ್ನ-ವಸ್ತ್ರಗಳನ್ನು ನೀಡುವದು. ಇಷ್ಟೇ ಅಲ್ಲ, ಅದು ಸರಿಯಾಗಿ ಫಲಿಸಲು ಬೇಕಾದ ಮಳೆ, ಗಾಳಿ, ಬೆಳೆಯನ್ನು ನೀಡುವವನು ಭಗವಂತನೇ ಇರುವದರಿಂದ ಒಕ್ಕಲಿಗನಲ್ಲಿ ಆತನ ಬಗೆಗೆ ಭಯ, ಭಕ್ತಿ ಅದರ ಸಹಜವಾಗಿ ಜನಿಸುವವು. ಬೇರೆ ಉದ್ಯಮಗಳಲ್ಲಿ ಇವು ಸುಲಭವಾಗಿ ಜನಿಸಲರಿಯವು.

ನಿಜವಾಗಿ ಉದ್ಯಮಗಳಲ್ಲಿ ಮೇಲು-ಕೀಳು ಎಂಬುದು ನಿಸರ್ಗತ: ಇರುವುದಿಲ್ಲ. ಅವುಗಳಿಗೆ ಅಂಟಿಸಲಾದ ಮೇಲ್ಕೆ-ಕೀಳ್ಕೆಗಳು ಅವನ್ನು ಮಾಡಲಿರುವ ಮನುಜನ ಮನೋಭಾವವನ್ನು, ಉದ್ದೇಶವನ್ನು ಅವಲಂಬಿಸಿರುವವು.

"There is nothing either good or bad but thinking makes it so".

ಒಳಿತು-ಕೆಡಕುಗಳು ಬುದ್ಧಿಯ ಅಪಥ್ಯಗಳು. ವಾಸ್ತವಿಕವಾಗಿ ಅವುಗಳಿಗೆ ಅಸ್ತಿತ್ವವಿರುವದಿಲ್ಲ. ಮೇಲ್ಕೆ-ಕೀಳ್ಕೆಗಳಿಗೂ ಇದೇ ಮಾತು ಅನ್ವಯಿಸುವು, ಉದ್ಯಮದ ಹಿರಿಮೆಯು ಅದರ ಕ್ಷೇತ್ರದಲ್ಲಿ ಇರುವುದಿಲ್ಲ. ಅದರ ಉತ್ತಮ ಗುಣದಲ್ಲಿ ಇರುವದು. ಉತ್ತಮತರ ಕೃತಿಯನ್ನು ನಿರ್ಮಿಸಿದ ಗುಣಿಯು ಎಲ್ಲಿದ್ದರೂ ವಂದ್ಯನಾಗುವನು. Emerson

ಎಂಬ ಪ್ರಸಿದ್ಧ ದಾರ್ಶನಿಕರು ಅರುಹಿರುವದೇನೆಂದರೆ :

If a man can write a better book, preach a better sermon, or make a better mouse-trap, than his neighbour, though he builds his house in the woods, the world would make a beaten path to his door.

"ಓರ್ವ ಮನುಜನು ತನ್ನ ನೆರೆಯವನಿಗಿಂತ ಉತ್ತಮ ಗ್ರಂಥವನ್ನು ಬರೆದರೆ, ಉತ್ತಮ ಪ್ರವಚನವನ್ನು ಹೇಳಿದರೆ, ಉತ್ತಮ ಇಲಿಬಲೆಯನ್ನು ನಿರ್ಮಿಸಿದರೆ, ಅವನು ಕಾಡಿನಲ್ಲಿ ಮನೆ ಕಟ್ಟಿದರೂ, ಪ್ರಪಂಚವು ಅವನ ಬಾಗಿಲಿನವರೆಗೆ ಹಿರಿದಾರಿಯನ್ನು ನಿರ್ಮಿಸಬಹುದು."

ಒಂದು ಮರದ ಹಿರಿಮೆಯು ಅದರ ಹೂ-ಹಣ್ಣುಗಳನ್ನು ಅವಲಂಬಿಸಿರುವದು. ಅದರ ಮೂಲವನ್ನು, ತೊಗಟೆಯನ್ನು ಅವಲಂಬಿಸಿರುವದಿಲ್ಲ. ಅದೇ ಮೇರೆಗೆ ಉದ್ಯಮದ ಬೆಲೆಯೂ, ಅದು ತಯಾರಿಸುವ ಸರಕುಗಳ ಉತ್ತಮತೆಯನ್ನು ಅವಲಂಬಿಸಿರುವದು. ಅದರ ಬಾಹ್ಯ ಪರಿಸರವನ್ನಲ್ಲ. ಅದಕ್ಕಾಗಿ ದಕ್ಷತೆಯಿಂದಲೂ, ಕುಶಲತೆಯಿಂದಲೂ, ಉತ್ತಮೋತ್ತಮ ವಸ್ತುಗಳನ್ನು ನಿರ್ಮಿಸಲು ಯತ್ನಿಸಬೇಕು.

ಆದರೆ ಇಂಥ ಕುಶಲ ಕರ್ಮವು ಭಗವಂತನಿಗೆ ಅರ್ಪಿತವಾದರೆ, ಅದರ ಹಿರಿಮೆಯು ತುಂಬ ಬೆಳೆಯುವದು. ಅದಕ್ಕಾಗಿ ಕೈಯಿಂದ ಕೆಲಸ, ಮನಸ್ಸಿನಿಂದ ಭಗವಂತನ ಧ್ಯಾನ ಮಾಡಿರಿ ! **"ಕರಸೇ ಕಾಮ ಕರೋ ಹರಿಕೋ ಧ್ಯಾನ ಧರೋ।"** ಎಂಬುದು ಓರ್ವ ಹಿಂದೀ ಸಂತರ ಬೋಧೆ.

ನೀಡುವದೆಂತು ?

1) ಪ್ರೀತಿಯಿಂದ ನೀಡಿರಿ :

ಪ್ರೀತಿಯಿಂದ ನೀಡಿರಿ ! ವಿವೇಕದಿಂದ ನೀಡಿರಿ !! ದಯೆಯಿಂದ ನೀಡಿರಿ !!! ತನು-ಮನ-ಧನದಂತೆ, ಮಾತು-ಕೃತಿಯಿಂದ, ದು:ಖಿತರಿಗೆ, ದೈನ್ಯದಿಂದ ಬಳಲುವವರಿಗೆ, ಸಂತಸವನ್ನು ನೀಡಿರಿ ! ನೀಡುವದೇ ಹಿರಿದಾದ ಧರ್ಮ, ಉಪಕೃತಿಯೇ ಪುಣ್ಯಕರ್ಮ ; ಅಪಕೃತಿಯೇ ಪಾಪಕರ್ಮ. **"ಪರೋಪಕಾರ: ಪುಣ್ಯಾಯ । ಪಾಪಾಯ ಪರಪೀಡನಮ್॥"** "ದಯವೇ ಧರ್ಮದ ಮೂಲ." "Blessed are the merciful for they shall obtain merey." "ದಯವುಳ್ಳವರು ಧನ್ಯರು, ಅವರು ಭಗವಂತನಿಂದ ದಯೆಯನ್ನು ಪಡೆಯಬಲ್ಲರು. Mercy is twice blessed. It blesses those that give and those that receive it." "ದಯೆಯು ದ್ವಿವಿಧ ಉಪಕಾರಕ; ಅದು ನೀಡುವವರನ್ನೂ, ಪಡೆಯುವವರನ್ನು ಕೂಡಿಯೆ ಹರಸುವದು." ದಯೆಯಂತೆ ದಾನವೂ ಇಬ್ಬರನ್ನೂ ಹರಸುವದು. ಆದರೆ ಅದನ್ನು ಸತ್ಪಾತ್ರರಿಗೆ ನೀಡಬೇಕು. ಸತ್ಕರ್ಮದಲ್ಲಿ ನಿರತರಾದ ಸಜ್ಜನರು, ಹಾಗೂ ಅನ್ನ-ವಸ್ತ್ರಗಳಿಲ್ಲದೆ ದೀನ-ದಲಿತರು ದಾನ ಪಡೆಯಲು ಯೋಗ್ಯರು.

ಅನ್ನದಾನವು ಮಿಗಿಲಾದುದು. ಅದಕ್ಕಾಗಿ "ಅನ್ನವನು ನೀಡುವದು, ನನ್ನಿಯನು ನುಡಿಯುವದು." ಇದನ್ನೆಯ ಶ್ರೀ ನಿಂಬರಗಿಯ ಮಹಾರಾಜರು ಈ ರೀತಿ ಬೋಧಿಸಿರುವರು.

ತನ್ನ ಕೈಲಾದನಿತು ಸನ್ಮತುಪಕೃತಿಯನ್ನು
ಸತ್ಪಾತ್ರದಾನವನು ಮಾಡಬೇಕು ।
ತನ್ನೆಡೆಗೆ ಬಿಸಿಲಿನಲಿ ಹಸಿದು ಬರೆಯತಿಥಿಗಳು
ಸನ್ಮಾನದಿಂದನ್ನ ನೀಡಬೇಕು ॥

ಇಷ್ಟೇ ಅಲ್ಲ, ಪ್ರವಾದಿ ಪೈಗಂಬರರು ಹೇಳಿರುವದೇನಂದರೆ ;

"Every good act is charity, your smiling in your brother's face is charity; an exhortation of your fellow men to virtuous deeds is equal to alm-giving." "A kind word with forgiveness is better than alms giving followed by injury."[22]

ಪ್ರತಿಯೊಂದು ಸತ್ಕರ್ಮ ದಾನವೇ ಸರಿ. ನೀವು ನಿಮ್ಮ ಬಾಂಧವರಿಗೆ ನೀಡಿದ ಪ್ರಸನ್ನ ಸ್ಮಿತವು ಕೂಡ ದಾನವೇ ಇರುವದು. ನಿಮ್ಮ ಸಂಗಡಿಗರಿಗೆ ಸತ್ಕಾರ್ಯಮಾಡಲು ನೀಡಿದ ಬೋಧೆಯೂ ಕೂಡ ದಾನದಷ್ಟೇ ಹಿರಿದಾದುದು ಇರುವದು. ಕ್ಷಮೆಯುಳ್ಳ, ಪ್ರಿಯ ಮಾತು, ನೋವುಳ್ಳ, ದಾನಕ್ಕಿಂತಲೂ ಮೇಲು. "

"He doeth much that loveth much."[23]

"ಪ್ರೇಮವನ್ನು ನೀಡುವದೇ ಹಿರಿದಾದ ಸತ್ಕರ್ಮ."

2) ಬೇಡದೇ ನೀಡಿರಿ :

"To give, not to receive is the Law of life" ನೀಡುವುದೇ ಜೀವನ ಧರ್ಮ-ಪಡೆಯುವದಲ್ಲ. ಅದೇ ಯಜ್ಞದ ತಿರುಳು. ಭಗವಂತನು ಮನುಜನನ್ನು ಯಜ್ಞದೊಡನೆ ನಿರ್ಮಿಸಿರುವ, ನೀಡಿ ಬೆಳೆಯಿರಿ! ಬೇಡಿ ಅಳೆಯಬೇಡಿರಿ! ಅದಕ್ಕಾಗಿ ಸಂತರು ನೀಡಲು ಬಯಸುವವರು-ಪಡೆಯಲು ಅಲ್ಲ. St. Francis ನು ಭಗವಂತನನ್ನು ಈ ರೀತಿ ಪ್ರಾರ್ಥಿಸಿರುವ:

"O Divine Master! grant that I may not so much seek
To be loved as to love;
For it is in giving that we receive,
It is in pardoning that we are pardoned,
It is in dying that we are born to eternal life !"

"ದೈವಿ ಪ್ರಭುವೇ ! ನಾನು ಪ್ರೀತಿಯನ್ನು ಬಯಸದೆ, ಪ್ರೀತಿಸಲು

22) I.C.P. 26 23) G.K.P. 58

ಬಯಸುವಂತೆ ಕರುಣಿಸು. ಯಾಕೆಂದರೆ ನಾವು ನೀಡುವುದರಿಂದಲೆ ಪಡೆಯುವೆವು. ಕ್ಷಮಿಸುವುದರಿಂದಲೇ ಕ್ಷಮಿಸಲ್ಪಡುವೆವು. ಮರಣದಿಂದಲೇ ಅಮರ ಜೀವನವನ್ನು ಪಡೆಯುತ್ತೇವೆ."

ಅದೇ ಮೇರೆಗೆ ತುಲಸಿದಾಸರು ಅರುಹುವದೇನೆಂದರೆ :
ತುಲಸಿ ಕರಪರ ಕರ ಕರೈ । ಕರತಲ ಕರ ನ ಕರೈ ॥
ಜಾ ದಿನ ಕರತಲ ಕರ ಕರೈ । ವಾ ದಿನ ಮರಣ ಕರೈ ॥ (ಪರಮಾರ್ಥ ಸೋಪಾನ)

"ಕೈ ಮೇಲೆ ಮಾಡಯ್ಯ। ಕೆಳಗೆ ಮಾಡಬೇಡ! ಕೈ ಕೆಳಗೆ ಮಾಡುವದು ಮರಣಕ್ಕೆ ಔತಣವೆಂದು ತಿಳಿ!" ಯಾರನ್ನು ಎಂದೂ ಬೇಡದಿರು! ಸದೈವ ನೀಡುತ್ತಿರು!

ಶ್ರೀ ನಿಂಬರಗಿ ಮಹಾರಾಜರು ಇದನ್ನೆ ಬೋಧಿಸಿರುವರು :
ತನ್ನ ಕೈಯನು ಕೆಳಗೆ ಮಾಡಿ ಅನ್ಯರದನ್ನು
ಎಂದೆಂದಿಗೂ ನೀನು ಕೊಳ್ಳಬೇಡ ।
ತನ್ನ ಕೈಯದು ಕೆಡುಗು, ತನಗಿನಿಸು ಸಾಲದದು
ಅದಕೆ ಕೈ ಮೇಲ್ಮಾಡದಿರಲು ಬೇಡ ॥ (ಬೋಧಸುಧೆ)

ನಾವು ಎಲ್ಲ ಕರ್ಮಗಳನ್ನು ಫಲಾಶೆಯನ್ನು ತೊರೆದು, ಕರ್ತವ್ಯ ಬುದ್ಧಿಯಿಂದ ಮಾಡಬೇಕು ಎಂಬುದು ಗೀತಾಮಾತೆಯ ಪ್ರಬೋಧ.

3) ಅರಿಯದಲೆ ನೀಡಿರಿ :

ನಮ್ಮ ಸತ್ಕರ್ಮಗಳೆಲ್ಲ ಯಾರೂ ಅರಿಯದಂತೆ ರಹಸ್ಯವಾಗಿ ನಡೆಯಬೇಕು; ಎಂಬುದು ಎಲ್ಲ ಸತ್ಪುರುಷರ ಬೋಧೆ. ಎಲ್ಲರೂ ಗುಪ್ತದಾನವನ್ನು ಹೊಗಳಿರುವರು. ಅದರ ಮೂಲಕ ಅಹಂಕಾರ ಜನಿಸಲರಿಯದು. ಅಂತರಂಗವು ನಿರ್ಮಲವಾಗುವದು. ಉದಾತ್ತವಾಗುವದು. ನೀಡುವದು ಸಹಜ ಸ್ವಭಾವವಾಗುವದು.

ಅರಿಯದೀಯುವ ದಾನ ತೆರೆದು ನೋಡದ ಕಣ್ಣು
ತಿರುಗಿ ಬಯಸದ ಶಿವಪೂಜೆ ಶಿವನಿಂದ
ಹಿರಿದೆಂದು ಅರಿಗು ಸರ್ವಜ್ಞ ॥

ಕ್ರಿಸ್ತಮಹಾತ್ಮರು ಇದನ್ನೇ ಅರುಹಿರುವರು.

"When thou does, alms, let not they left hand know what thy right hand doeth. Thate thine alms may be in secret: and thy Father seeth in secret himself, might reward thee openly."[24]

"ನೀನು ದಾನವನ್ನು ಮಾಡುವಾಗ, ನಿನ್ನ ಬಲಗೈಯು ಮಾಡುವುದನನು ಎಡಗೈಯು

24) N.T. St. Matthew VI-4-5

ಅರಿಯಬಾರದು. ನಿನ್ನ ದಾನವು ತುಂಬ ರಹಸ್ಯದಲ್ಲಿ ನೀಡುವಂತಾಗಬೇಕು. ನಿನ್ನ ತಂದೆಯಾದ ಪ್ರಭು ಅದನ್ನು ಅಲ್ಲಿ ಕಂಡು, ನಿನಗೆ ಪ್ರಕಟವಾಗಿ, ಪಾರಿತೋಷಕ ನೀಡುವನು."

ಪ್ರವಾದಿ ಪೈಗಂಬರರು ಕೂಡ ಇದನ್ನೇ ಈ ರೀತಿ ಅರುಹಿರುವರು :

"Nothing is more pleasing to God than
an open hand and a closed mouth."[25]

"ಭಗವಂತನಿಗೆ ತೆರೆದ ಕೈ ಹಾಗೂ ಮುಚ್ಚಿದ ಬಾಯಿಗಿಂತ ಪ್ರಿಯವಾದುದು ಬೇರೊಂದಿಲ್ಲ."

ಇನ್ನು ಬಸವಣ್ಣನವರ ಬೋಧೆಯನ್ನು ಕೇಳಿ :

ಮಾಡಿದೆನೆಂಬುದು ಮನದಲ್ಲಿ ಮೂಡಿದರೆ,
ಏಡಿಸಿ ಕಾಡಿತ್ತು ಶಿವನ ಡಂಗುರ !
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ !
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ
ಬೇಡಿದ್ದನೀವ ಕೂಡಲಸಂಗಮದೇವ !

4) ಭಕ್ತಿಭಾವದಿಂದ ನೀಡಿರಿ :

ಭಗವಂತನು ಭಕ್ತಿ ಪ್ರಿಯನು-ಭಾವ ಪ್ರಿಯನು. ಭಕ್ತಿ-ಭಾವದಿಂದ ಏನನ್ನು ನೀಡಿದರೂ ಅದನ್ನು ಆತನು ಪ್ರೀತಿಯಿಂದ ಸ್ವೀಕರಿಸುವನು. ಭಗವಂತನು ಹೇಳುವದೇನೆಂದರೆ :

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನ : ।।9-26।।

"ಪವಿತ್ರ ಅಂತ:ಕರಣದ ಭಕ್ತನು, ಭಕ್ತಿಯಿಂದ ನೀಡಿದ ಪತ್ರ (ಎಲೆ). ಪುಷ್ಪ, ಫಲ, ಜಲವನ್ನು ನಾನು ಪ್ರೀತಿಯಿಂದ ಸ್ವೀಕರಿಸುವೆನು." ಆದುದರಿಂದ ನಾವು ನಮ್ಮ ಎಲ್ಲವನ್ನು ಭಗವಂತನಿಗೆ ಭಕ್ತಿಯಿಂದ ಅರ್ಪಿಸಬೇಕು. ನಮ್ಮ ಯಜ್ಞ, ದಾನ, ತಪ, ಇತ್ಯಾದಿ ಎಲ್ಲ ಕರ್ಮಗಳಿಂದ ಭಗವಂತನ ವೈಭವವನ್ನು ಬೆಳೆಸಲು ಯತ್ನಿಸಬೇಕು. ಅದೇ ಅವನಿಗೆ ಅರ್ಪಿಸಿದ ಕರ್ಮ-ಕುಸುಮಗಳ ಪೂಜೆ.

Thomes a Kempis ಎಂಬ ಸಂತರು ಅರುಹಿರುವದೇನೆಂದರೆ :

"He that hath true and perfect charity seeketh himself in nothing, but only desireth in all things that the glory of God should be exalted."[26]

25) G.K.P. 26) I.C.P. 26

ನೈಜವಾದ, ಪರಿಪೂರ್ಣವಾದ ದಾನವನ್ನು ಮಾಡುವವನು ತನಗಾಗಿ ಏನನ್ನು ಬಯಸುವದಿಲ್ಲ. ಪ್ರತಿಯೊಂದು ವಿಷಯದಿಂದ ಅವನು ಭಗವಂತನ ವೈಭವವನ್ನು ಬೆಳೆಸಲು ಹವಣಿಸುವನು."

"ನಿಜವಾಗಿ ಇರುವುದೆಲ್ಲ ಭಗವಂತನದು. ನಮ್ಮದೆಂಬುದೇನೂ ಇರುವುದೇ ಇಲ್ಲ. ತನು ನಿನ್ನದು, ಜೀವನ ನಿನ್ನದು ಸ್ವಾಮಿ !" "ನೀನಿರುವೆ ನಾನಿಲ್ಲ" ಎಂಬುದು ಸಂತರ ಅನುಭೂತಿಜನ್ಯ ಭಾವನೆ. ಆದುದರಿಂದ ಓರ್ವ ಹಿಂದೀ ಸಂತರು ಅರುಹಿದ ಮೇರೆಗೆ :

ಮೇರಾ ಮುರಖುಪೇ ಕುಛ ನಹೀ ।
ಜೋ ಕುಛ ಹೈ ಸೋ ತೋರ ॥
ತೇರಾ ತುರಖುಕೋ ಸೌಪತ್ಯೇ ।
ಕ್ಯಾ ಲಾಗತ ಹೈ ಮೋರ ॥ ಪ.ಸೋ ॥

"ನನ್ನಲ್ಲಿ ನನ್ನದೇನೂ ಇರುವದಿಲ್ಲ. ಇರುವುದೆಲ್ಲ ನಿನ್ನದೆ ಸರಿ. ಹೀಗಿರಲು ನಿನ್ನದನ್ನು ನಿನಗೆ ಒಪ್ಪಿಸಲು ನಾನೇಕೆ ಹಿಂಜರಿಯಬೇಕು ? "

ಈ ಬಗೆಯಾಗಿ ತಮ್ಮ ತನು-ಮನ-ಧನವನ್ನು ಭಕ್ತಿಭಾವದಿಂದ ಭಗವಂತನ ವೈಭವವನ್ನು ಬೆಳೆಸಲು ವಿನಿಯೋಗಿಸುವ ಹಿರಿಯರ ಮಹಿಮೆಯನ್ನು ಸರ್ವಜ್ಞನು ಈ ರೀತಿ ಬಣ್ಣಿಸಿರುವ.

ಈವಂಗೆ ದೇವಂಗೆ ಆವುದಂತರವಯ್ಯಾ ?
ದೇವನು ಜಗಕೆ ಕೊಡುವನು. ಕೈಯಾರೆ,
ಈವನೇ ದೇವ ! ಸರ್ವಜ್ಞ.

ಗುರುದೇವರು ಯಾವಾಗಲೂ ತಮ್ಮ ವಿಚಾರಗಳನ್ನು ಸಂತರ ವಚನಗಳ ಮುಖಾಂತರವಾಗಿ ಹೇಳುತ್ತಿರುವದರಿಂದ, ಮೇಲ್ಕಾಣಿಸಿದ ಧನ-ಸಂಪಾದನ-ವಿತರಣದ ಸೂತ್ರಗಳು ಅವರ ವಿಚಾರಗಳನ್ನೇ ಒಳಗೊಂಡಿರುವವು. ಯಾಕೆಂದರೆ, ಈ ಸೂತ್ರಗಳನ್ನು ವಿಶೇಷವಾಗಿ ಅವರ ಗ್ರಂಥದಿಂದಲೂ, ಅವರ ಪರಾತ್ಪರ ಸದ್ಗುರುಗಳ ಗ್ರಂಥದಿಂದಲೂ ಆಯ್ದುಕೊಂಡಿರುವೆ ಬಳಗವು ಬೆಳೆದಾಗಲೇ ನಮ್ಮ ನಾಡಿನಲ್ಲಿ ಶಾಂತಿ-ಸೌಹಾರ್ದಗಳು ನೆಲೆಗೊಳ್ಳಬಲ್ಲವು. ಅದರ ನೈತಿಕ-ಪಾರಮಾರ್ಥಿಕ ಮಟ್ಟವು ಉನ್ನತವಾಗಬಹುದು. ಮತ್ತು ಅದರ ಫಲವಾಗಿ ಅದು ತನ್ನ ನೈತಿಕ ವೈಭವವನ್ನು ಮೆರೆಯಿಸಿ, ಬೇರೆ ರಾಷ್ಟ್ರಗಳಿಗೆ ಒಂದು ಉನ್ನತ ಮಾದರಿಯಾಗಿ ಪರಿಣಮಿಸಬಹುದು. ಎಂಬುದು ಗುರುದೇವರ ಕನಸು.

ದೈವೀ ಸಂಪದದ ಸಮಾಜ :

ಮೇಲ್ಕಾಣಿಸಿದ ಗುಣಗಳಿಂದ ಯುಕ್ತರಾದವರನ್ನು ಗೀತೆಯಲ್ಲಿಯ ದೈವೀ ಸಂಪದದ ಜನರೆಂದು ಕರೆಯಬಹುದು. ಇಂಥವರೇ ಬರಬರುತ್ತ ದೇವ-ಮಾನವರ ಪದವಿಯನ್ನು ಪಡೆಯಬಹುದು. ಆದರೆ ದೈವೀ ಸಂಪತ್ತು ಅಂದರೆ ದೇವತ್ವ ಅಲ್ಲ ಎಂಬುದನ್ನು

ಮರೆಯಕೂಡದು. ಇಂಥ ದೈವೀ ಸಂಪತ್ತನ್ನು ಪಡೆದವರ ಸಮಾಜವನ್ನು ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು:

"In Divine or Spiritual Communism each man earns according to his ability and gives according to the needs of his brothers. Here, there is an eternal struggle for the love of God. Every man has to again it for himself. The experience has to come from within. A real welfare state is the company of saints."[27]

"ಈ ದೈವೀ ಇಲ್ಲವೆ ಆಧ್ಯಾತ್ಮಿಕ ಸಮತೆಯ ಸಮಾಜದಲ್ಲಿ ಪ್ರತಿಯೊಬ್ಬನು ತನ್ನ ಸಂಪಾದನ-ಶಕ್ತಿಯ ಮೇರೆಗೆ ಗಳಿಸುವನು. ಮತ್ತು ತನ್ನ ಬಾಂಧವರ ಅಗತ್ಯದ ಮೇರೆಗೆ ನೀಡುವನು. ಇಲ್ಲಿ ಸತತವಾಗಿ ನಡೆದಿರುವದು ಪರಮಾತ್ಮನ ಪ್ರೀತಿಯನ್ನು ಪಡೆಯುವ ಹೆಣಗಾಟ. ಆದರೆ ಅದನ್ನು ಪ್ರತಿಯೊಬ್ಬನು ತನ್ನ ಪ್ರಯತ್ನದಿಂದ ಪಡೆಯಬೇಕಾಗುವದು. ಆ ಅನುಭೂತಿಯು ಒಳಗಿನಿಂದಲೇ ಬರಬೇಕಾಗುವದು. ಇಂಥ ಸಂತರ ಬಳಗವೇ ನಿಜವಾದ ಕಲ್ಯಾಣ-ರಾಜ್ಯ."

"Accumulation of wealth should be intended for universal welfare.... Inequality will vanish if material wealth is evenly destributed according to worth."[28]

"ಸಂಪತ್ತಿಯ ಸಂಗ್ರಹವನ್ನು ಸಾರ್ವಜನಿಕ ಕಲ್ಯಾಣಕ್ಕಾಗಿ ಉಪಯೋಗಿಸಬೇಕು.... ಭೌತಿಕ ಸಂಪತ್ತನ್ನು ಅವರವರ ಯೋಗ್ಯತೆಯಂತೆ, ಸರಿಯಾಗಿ ಹಂಚಲಾದರೆ, ವಿಷಮತೆಯೂ ಅಳಿಯಬಹುದು."

ಇಂಥ ದೈವೀ ಸಂಪತ್ತಿನ ಜನರ ಜ್ಯೋತಿರ್ಮಯ ಜೀವನವನ್ನು ಹಾಗೂ ಉದಾತ್ತ ಕಾರ್ಯಗಳನ್ನು ಕಂಡು, ಜನಸಾಮಾನ್ಯರು ಭಗವಂತನ ವೈಭವವನ್ನು ಭಕ್ತಿಭಾವದಿಂದ ಕೊಂಡಾಡುವರು. ಅದಕ್ಕಾಗಿ ಕ್ರಿಸ್ತ ಮಹಾತ್ಮರು ತಮ್ಮ ಶಿಷ್ಯರಿಗೆ ಈ ಬಗೆಯಾಗಿ ಬೋಧಿಸಿರುವರು

Ye are the light of the world. A city set on a hill cannot be hid. Neither do men light a candle and put it under a bhushel, but in a candle-stick; and it giveth light unto all that are in the house.

Let your light so shine before men that they may see your good works and glorify your father who is in heaven."[29]

"ನೀವು ಪ್ರಪಂಚಕ್ಕೆ ಬೆಳಕನ್ನು ನೀಡುವ ಜ್ಯೋತಿಗಳು. ಬೆಟ್ಟದ ಮೇಲೆ ನೆಲೆಸಿದ

27) Thus Spake Gurudev P - 125 28) P.G.H.P. 397 29) N.T. St. Mathew V 14-25-16

ನಗರವು ಮರೆಯಾಗಲರಿಯದು. ಜನರು ಮೇಣ ಬತ್ತಿಯನ್ನು ಹೊತ್ತಿಸಿ, ಅದನ್ನು ಮರೆಯಲ್ಲಿ ಇರಿಸುವದಿಲ್ಲ; ಅದರ ಕಂಬದ ಮೇಲೆಯೇ ಇರಿಸುವರು. ಮತ್ತು ಅದು ಮನೆಯಲ್ಲಿ ಎಲ್ಲರಿಗೂ ಬೆಳಕನ್ನು ನೀಡುವದು."

"ನಿಮ್ಮ ಬೆಳಕು ಜನರೆದುರು ಚೆನ್ನಾಗಿ ಬೆಳಗಲಿ! ಅಂದರೆ ನಿಮ್ಮ ಉತ್ತಮವಾದ ಜೀವನ-ಕಾರ್ಯವನ್ನು ಕಂಡು, ಅವರು ಭಕ್ತಿ-ಭಾವದಿಂದ ಭಗವಂತನ ವೈಭವವನ್ನು ಕೊಂಡಾಡಬಹುದು."

ರಾಜನೈತಿಕ ಅಂಗ :

ಈ ಕ್ಷೇತ್ರದಲ್ಲಿ ಇಂದು ಪ್ರಜಾಪ್ರಭುತ್ವವು ತುಂಬ ಗೌರವವನ್ನು ಪಡೆದಿದೆ. ಆದರೆ ನಮ್ಮ ಹಿರಿಯರ "**ಲೋಕ-ಸಂಗ್ರಹ**"ವೂ "**ಸ್ವರಾಜ್ಯ**"ವೂ ಅದನ್ನು ಮೀರಿರುವವು. ಮೊದಲು ಲೋಕ-ಸಂಗ್ರಹದ ಹಿರಿಮೆಯನ್ನು ನೋಡಿ

"Democracy is a word echoed by modern India : it is a great word: it is an echo of the political thought of the West. But there is a greater word-Lokasangraha, welfare of the world. It is one of the great thoughts of the Gita. India is forgetting this great thought of her ancient past : and so, while her politicians swear by democracy, they let capitalism grow. Supreme is capitalism today and India's villages lie broken and her masses are uncared for, lacking cohesion and discipline and dying daily for want of food and shelter. Hunger stalks the land and so many wander homeless. Bands of dedicated workeers with the watch-word "Lokasangraha" are needed. Bands of dedicated servants of India who would go forth to serve the poor... From the poor India would recruit her real strength, not from the rich capitalists, nor from their politicians who will turn to plutocracy and capitalism for re-building a New Indian Nation. From both must India escape if she is to fulfil her destiny."[30]

ಇಂದಿನ ಭಾರತದಲ್ಲಿ ಪ್ರಜಾಪ್ರಭುತ್ವ ಎಂಬ ಶಬ್ದವು ಮಾರ್ದನಿಗೊಂಡಿರುತ್ತದೆ. ಅದು ಪಾಶ್ಚಾತ್ಯ ರಾಜಕಾರಣಿಗಳ ವಿಚಾರದ ಮಾರ್ದನಿ. ಅದು ಒಂದು ಹಿರಿಯ ಶಬ್ದ. ಆದರೆ "**ಲೋಕ-ಸಂಗ್ರಹ**" ಅಂದರೆ "**ಪ್ರಪಂಚದ ಕಲ್ಯಾಣ**" ಎಂಬುದು ಅದಕ್ಕೂ ಹಿರಿದಾದ ಶಬ್ದವು. ಅದು ಗೀತೆಯ ಹಿರಿದಾದ ವಿಚಾರಗಳಲ್ಲಿ ಒಂದು. ಭಾರತವು ಇಂದು ತನ್ನ ಈ ಪ್ರಾಚೀನ ಮಹಾ ವಿಚಾರವನ್ನು ಮರೆಯಲಿರುವದು. ಆದ್ದರಿಂದ ಭಾರತದ ರಾಜಕಾರಣಿಗಳು ಪ್ರಜಾಪ್ರಭುತ್ವವನ್ನು ಗಟ್ಟಿಯಾಗಿ ನಂಬಿರುವರಾದರೂ, ಅವರು ಬಂಡವಾಳ-ಪದ್ಧತಿಯನ್ನು

30) G.M. PP 70-72

ಬೆಳೆಯಗೊಡಲಿರುವರು. ಇಂದು ಬಂಡವಾಳ ವಾದವು ಉಚ್ಚತಮ ಸ್ಥಾನವನ್ನು ಪಡೆದಿರುವದು. ಭಾರತದ ಹಳ್ಳಿಗಳು ಹಾಳಾಗಿರುವವು, ಮತ್ತು ಜನಸಾಮಾನ್ಯರು ಅಲಕ್ಷಿತರಾಗಿರುವರು; ಸಂಘಟನೆಯನ್ನು, ಶಿಸ್ತನ್ನೂ ಕಳೆದುಕೊಂಡಿರುವರು; ಅನ್ನ-ಆಶ್ರಯಗಳಿಲ್ಲದೆ, ದಿನಾಲು ಸಾಯಲಿರುವರು. ನಾಡಿನಲ್ಲೆಲ್ಲ ಹಸಿವು ಹರಿದಾಡುತ್ತಿದೆ. ಮತ್ತು ಅನೇಕರು ಆಶ್ರಯವಿಲ್ಲದೆ ಅತ್ತಿತ್ತ ಅಲೆದಾಡುತ್ತಿರುವರು. ಲೋಕ-ಸಂಗ್ರಹದ ಹಿರಿಮೆಯನ್ನು ಆರಾಧಿಸುವ ಜೀವನ-ದಾನಿಗಳ ಪಂಗಡಗಳು ಇಂದು ಬೇಕಾಗಿರುವವು. ಈ ಕಾರ್ಯಕ್ಕಾಗಿ ಜೀವನವನ್ನು ಮೀಸಲಾಗಿರಿಸಿದ ಭಾರತ-ಸೇವಕರ ತಂಡಗಳು, ಬಡವರ ಸೇವೆಗಾಗಿ ಮುಂದುವರೆಯಬೇಕು. ಬಡವರಿಂದಲೇ ಭಾರತವು ತನ್ನ ನೈಜ ಸಾಮರ್ಥ್ಯವನ್ನು ಪಡೆಯಬಲ್ಲದು. ಧನಿಕ, ಬಂಡವಾಳಗಾರರಿಂದಲ್ಲ ರಾಜಕಾರಣಿಗಳಿಂದಲೂ ಅಲ್ಲ ಅವರು ಧನಿಕರ ಪ್ರಭುತ್ವದಿಂದಲೂ, ಉದ್ಯಮ-ವೃದ್ಧಿಯಿಂದಲೂ ನವ ಭಾರತವನ್ನು ನಿರ್ಮಿಸಲಿರುವರು. ಅದು ಎಂದೂ ನೆರವೇರಲರಿಯದು. ಭಾರತವು ತನ್ನ ಭವಿಷ್ಯವನ್ನು ಬೆಳಗಿಸಬೇಕಾದರೆ ಅದು ಇವರೀರ್ವರ ಪ್ರಭಾವದಿಂದ ಮುಕ್ತ ಆಗಬೇಕು."

ಇನ್ನು ಈ ವಿಷಯದ ಬಗೆಗೆ ಗುರುದೇವರ "ಸ್ವರಾಜ್ಯ"ದ -ಆದರ್ಶರಾಜ್ಯದ ಕಲ್ಪನೆಯನ್ನು ಅರುಹಿ ವಿರಮಿಸುವೆ. ಗುರುದೇವರು ಆದರ್ಶ ರಾಜ್ಯವನ್ನು "ಸ್ವರಾಜ್ಯ", "ರಾಮರಾಜ್ಯ" ಎಂದು ಸಂಬೋಧಿಸಿರುವರು. ಅದು ನಿಂಬರಗಿ ಮಹಾರಾಜರವರ "ಸ್ವರಾಜ್ಯ" ವನ್ನು ಹೋಲುವದು. ಅದು ಈ ಬಗೆಯದಿರುವದು ;

"ಸ್ವರಾಜ್ಯ"ವೆನೆ ತನ್ನ ರಾಜ್ಯ, ಆತ್ಮನ ರಾಜ್ಯ,
ಆತ್ಮನಲ್ಲಿರುವ ಅವಿನಾಶ ಸುಖವು ।
ಈ ರಾಜ್ಯದೆಡೆಯಲ್ಲಿ ವ್ಯಾಜ್ಯ ಕೊರತೆಗಳಿಲ್ಲ
ದುಃಖ ಸೋಂಕದ ಸುಖದ ನಿತ್ಯ ಬೆಳೆಯು ॥

ಅದು ಮಹಾತ್ಮಾಜಿಯವರ ಮುಂದೆ ಕಾಣಿಸಲಾದ "ರಾಮರಾಜ್ಯ"ವನ್ನೂ ಕೆಲಮಟ್ಟಿಗೆ ಹೋಲುವದು.

"By Ramaraj I do not mean Hindu Raj, I mean by Ramaraj, Divine Raj, the kingdom of God..... The ancient ideal of Ramaraj is undoubtedly one of true democracy."[31]

"If national life becomes so perfect as to become self-regulated, no representation becomes necessary. There is then a state of enlightened anarchy. In such a state every-one is his own ruler. He rules himself in such a manner that he is never a hindrance to his neighbour. In this ideal state, therefore, there is no political

31) L.I.P. 216 32) L.I. PP 210-211

power because there is no state. But the ideal is never fully realised in life. Hence the classical statement of **Thoreau** that "that government is the best" which governs the least." [32]

ನನ್ನ "**ರಾಮರಾಜ್ಯ**" ವು "**ಹಿಂದು ರಾಜ್ಯ**"ವಲ್ಲ. "**ರಾಮರಾಜ್ಯ**"ವೆಂದರೆ "**ದೇವರ ರಾಜ್ಯ**"..... ಪ್ರಾಚೀನ ರಾಮರಾಜ್ಯದ ಆದರ್ಶವು ನಿಜವಾದ ಪ್ರಜಾರಾಜ್ಯವೇ ಆಗಿರುವದು. ಇದರಲ್ಲಿಸಂದೇಹವಿರುವದಿಲ್ಲ."

"ರಾಷ್ಟ್ರೀಯ ಜೀವನವು ಸ್ವಯಂ-ಶಾಸಕವಾಗುವಷ್ಟು ಪೂರ್ಣತೆಯನ್ನು ಪಡೆದದ್ದಾದರೆ, ಪ್ರತಿನಿಧಿಗಳ ಅಗತ್ಯವು ಅದಕ್ಕೆ ಉಳಿಯುವದಿಲ್ಲ. ಇಂಥ ರಾಜ್ಯದಲ್ಲಿ ವಿವೇಕಯುತ ಅರಾಜಕತೆಯು ನೆಲೆಸುವದು. ಅದರಲ್ಲಿಪ್ರತಿಯೊಬ್ಬರು ತಮ್ಮ ಶಾಸಕರು. ಅವರು ಅನ್ಯರಿಗೆ ತೊಂದರೆಯಾಗದಂತೆ ತಮ್ಮ ಶಾಸನವನ್ನು ನಡೆಸುವರು. ಇಂಥ ಆದರ್ಶ ರಾಜ್ಯದಲ್ಲಿ ರಾಜಕೀಯ ಶಾಸನವು ಇರುವದಿಲ್ಲ. ಯಾಕೆಂದರೆ, ಅಲ್ಲಿರಾಜ್ಯವೆಂಬುದು ಇರುವುದಿಲ್ಲ. ಆದರೆ ಇಂಥ ಆದರ್ಶವು ಪ್ರತ್ಯಕ್ಷ ಜೀವನದಲ್ಲಿ ಪೂರ್ತಿಯಾಗಿ ಎಂದೂ ಪಡೆಯಲರಿಯದು. ಅದುದರಿಂದ **ಥೋರೋ ಮಹಾಶಯನ** ಹಿರಿದಾದ ಹೇಳಿಕೆಯಂತೆ; "ಅತ್ಯಲ್ಪ ಶಾಸನ ನಡೆಸುವ ಶಾಸನವೇ ಸರ್ವಶ್ರೇಷ್ಠವಾದುದು."

ಗುರುದೇವರ ರಾಜಕೀಯ ಆದರ್ಶಗಳು ಎರಡು ಬಗೆಯವು ಇದ್ದಂತೆ ಕಾಣುವದು; ಒಂದು "**ಸ್ವರಾಜ್ಯ**" ಇನ್ನೊಂದು "**ಸಾಮ್ರಾಜ್ಯ**". ಒಂದು ರಾಷ್ಟ್ರೀಯ, ಇನ್ನೊಂದು ಜಾಗತಿಕ. ಅವರ ಸ್ವರಾಜ್ಯವು ಆತ್ಮವಿದರ ರಾಜ್ಯ. ಅದು ಸುಮಾರಾಗಿ ಪ್ಲೇಟೋನ "ದಾರ್ಶನಿಕ ರಾಜನ"(Philosopher king) ಶಾಸನವನ್ನು ಹೋಲುವದು ಪ್ಲೇಟೋ ಹೇಳಿರುವದೇನೆಂದರೆ :

"Until Philosophers are kings and Political greatness and wisdom meet in one, cities will never have rest from their evils, no, nor human race and then only will this our state have a possibility of life and behold the light of day." [33]

"ದಾರ್ಶನಿಕರು ಶಾಸಕರಾಗುವವರೆಗೆ, ಅಧಿಕಾರವೂ, ಜಾಣ್ಮೆಯೂ ಒಬ್ಬನಲ್ಲಿಯೇ ಕೂಡುವವರೆಗೆ, ನಗರಗಳಿಗೆ ಕಿಡಿಗೇಡಿಗಳಿಂದ ನೆಮ್ಮದಿ ದೊರೆಯದು. ಅದೇ ಮೇರೆಗೆ ಮಾನವ ಕುಲಕ್ಕೆಯೂ ಶಾಂತಿ ಲಭಿಸದು. ದಾರ್ಶನಿಕರು ಶಾಸಕರಾದಾಗಲೇ ನಮ್ಮ ರಾಜ್ಯಕ್ಕೆ ಜೀವನ ಲಭಿಸಬಹುದು. ಮತ್ತು ಅದು ಬೆಳಕನ್ನು ಕಾಣಬಲ್ಲದು."

ಆದರೆ ಗುರುದೇವರ "**ಸ್ವರಾಜ್ಯ**" ವು ದೈವೀ ಸಂಪತ್ತಿಯ ಸಾಧಕರ ಆದರ್ಶ ರಾಜ್ಯ. ಅದು ಕಲ್ಪನೆಯ ಕ್ಷೇತ್ರದಿಂದ ವ್ಯವಹಾರ ಕ್ಷೇತ್ರಕ್ಕೆ ಇಳಿಯಬೇಕಾದರೆ, ಅದು ಮೊದಲು "ರಾಮರಾಜ್ಯ"ವಾಗಬೇಕಾಗುವದು. ರಾಮರಾಜ್ಯದ ಪ್ರಧಾನ ಅಂಗಗಳು ಎರಡು; ಒಂದು "**ಏಕಾಧಿಪತ್ಯ**",ಇನ್ನೊಂದು ಬ್ರಾಹ್ಮ-ಕ್ಷಾತ್ರ ಸಹಯೋಗ ಶ್ರೀ ಬಾದರಾಯಣರು "ಅನನ್ಯಾಧಿ

33) V.C.T.P. 177

ಪತಿ" ಯನ್ನು ಬಣ್ಣಿಸಿರುವರು. "ಅನೇಕಾಧಿಪತ್ಯ"ವು ಯೋಗ್ಯವಾದ ಶಾಸನವನ್ನು ನೀಡಲರಿಯದು, ಎಂಬುದು ತಜರ ಅಭಿಮತ. ಎರಡನೆಯದು. ಶಾಸಕರಲ್ಲಿ ಶಕ್ತಿ-ಭಕ್ತಿಗಳ ಸಹಯೋಗ. ಪ್ರಜೆಗಳಲ್ಲಿ ದೈವೀ ಸಂಪತ್ತಿಯ ಜನ ಅಲ್ಪ. ಆಸುರೀ ಸಂಪತ್ತಿಯವರೇ ವಿಪುಲ. ಗುರುರಾತ್ಮವತಾಂ ಶಾಸ್ತಾ। ರಾಜಾ ಶಾಸ್ತಾ ದುರಾತ್ಮನಾಮ್ । "ದೈವೀ ಸಂಪತ್ತಿಯ ಜನರ ಶಾಸನವನ್ನು-ಮಾರ್ಗದರ್ಶನವನ್ನು-ಗುರುಗಳು ನೆರವೇರಿಸಬಲ್ಲರು. ಆದರೆ ಆಸುರೀ ಸಂಪತ್ತಿಯವರ ಶಾಸನವನ್ನು-ಅವರಿಗೆ ಶಿಕ್ಷೆಯನ್ನು-ರಾಜನೇ ನೀಡಬಲ್ಲ." ಆದುದರಿಂದ ಶಾಸಕರಲ್ಲಿ ಬ್ರಾಹ್ಮ-ಕ್ಷಾತ್ರ ವೃತ್ತಿಗಳ ಸಹಯೋಗವು ಅವಶ್ಯ. ಅವರು.

ಅಗ್ರತ: ಚತುರೋ ವೇದಾ: ಪೃಷ್ಠತ: ಸಶರಂ ಧನು: ।

ಇದಂ ಬ್ರಾಹ್ಮಂ ಇದಂ ಕ್ಷಾತ್ರಂ ವರಾದಪಿ ಶರಾದಪಿ ॥

ಇರಬೇಕಾಗುವದು. ಈ ಬಗೆಯ ಯುತಿಯು ಒಂದೇ ವ್ಯಕ್ತಿಯಲ್ಲಿರಬಹುದು, ಇಲ್ಲವೆ ಎರಡು ವ್ಯಕ್ತಿಗಳ ಯುತಿಯಲ್ಲಿರಬಹುದು. ಆದರೆ ಇವೆರಡರ ಹೊರತು ರಾಜ ಶಾಸನವು ಯಶಸ್ವಿಯಾಗಲರಿಯದು. ಇದೇ "ರಾಮರಾಜ್ಯದ" ಸ್ವರೂಪ. ಇದನ್ನು ಗುರುದೇವರು ಅರುಹಿರುವದಿಲ್ಲ. ಅವರ ಬೋಧೆಯು ಇದನ್ನು ಸಮರ್ಥಿಸಬಹುದು, ಎಂದು ಬಗೆದು ಈ ಸಾಹಸವನ್ನು ಮಾಡಿರುವೆ. ತಪ್ಪಾಗಿದ್ದರೆ ಗುರುದೇವರು ಹಾಗೂ ಬಲ್ಲವರು ಕ್ಷಮಿಸುವರೆಂದು ನಂಬಿರುವೆ.

ಜಾಗತಿಕ ಆದರ್ಶ :

ವಿಶ್ವದಲ್ಲಿ ಶಾಂತಿ, ಸೌಹಾರ್ದ, ಸಾಮರಸ್ಯಗಳು ನೆಲೆಗೊಳ್ಳಬೇಕು ಎಂಬುದು ಗುರುದೇವರ ಹಿರಿದಾದ ಆದರ್ಶ. ಅದಕ್ಕಾಗಿ ಮಾನವ-ಕುಲವು ಒಂದಾಗಬೇಕು. ಅದರಲ್ಲಿ ಬಂಧು-ಭಾವವು ಬೆಳೆಯಬೇಕು. ಆದರೆ ಇದಾಗುವದೆಂತು ? ಅದಕ್ಕೆ ಒಂದೇ ಪ್ರಭಾವಯುತ ಉಪಾಯ. ಆದಾವುದೆಂದರೆ ಮಾನವ ಕುಲವು ಏಕಮೇವ ಅದ್ವಿತೀಯನಾದ ಪರಮಾತ್ಮನನ್ನು ಪ್ರೀತಿಸಲು, ಮನ್ನಿಸಲು, ಗೌರವಿಸಲು ಕಲಿಯಬೇಕು.

ಇದನ್ನು ಕುರಿತು ಶ್ರೀ ಗುರುದೇವರು ಅರುಹಿರುವದೇನೆಂದರೆ :

"A study of the Philosophy of Religion would contribute greatly to the bringing together of all creeds, faiths and races.... It is only when all humanity comes to recognize the one **Spiritual Principle** which underlies all things, that we can bring about a harmony between different creeds, nations and races..... It is only by bringing them to a common consciousness of spiritual life that we can realize the end which we are striving for."[34]

ಧರ್ಮದರ್ಶನದ ಅಧ್ಯಯನವು ಬೇರೆ ಬೇರೆ ಧರ್ಮ, ಪಂಥ ಜಾತಿಗಳನ್ನು

34) P.E.P. 120

ಒಂದೆಡೆ ತರಲು ತುಂಬಾ ನೆರವಾಗಬಲ್ಲದು. ಇಡೀ ಮಾನವ ಕುಲವು ಎಲ್ಲ ವಸ್ತುಗಳಲ್ಲಿ ಅಂತರ್ಯಾಮಿ ಆಗಿರುವ ಏಕಮೇವ ಪಾರಮಾರ್ಥಿಕ ಚೈತನ್ಯವನ್ನು ಮನ್ನಿಸಿದಾಗಲೇ ನಾವು ಬೇರೆ ಬೇರೆ ಪಂಥ, ರಾಷ್ಟ್ರ, ಜಾತಿಗಳಲ್ಲಿ ಸಾಮರಸ್ಯವನ್ನು ನಿರ್ಮಿಸಬಲ್ಲೆವು. ಪಾರಮಾರ್ಥಿಕ ಜೀವನದ ಸಮಾನವಾದ ಅರಿವನ್ನು ಅವರಲ್ಲಿ ಉಂಟುಮಾಡಿದಾಗಲೇ ನಾವು ಯತ್ನಿಸುತ್ತಿರುವ ಆದರ್ಶವನ್ನು ಪಡೆಯ ಬಲ್ಲೆವು"

ಮಾನವ ಕುಲದ ಏಕತೆಯು ಪರಮಾರ್ಥದ ನೆರವಿನಿಂದಲೇ ಸಾಧ್ಯವಾಗಬಲ್ಲದು. ಬೇರೆ ಬಾಹ್ಯ ಯಾಂತ್ರಿಕ ವಿಧಾನಗಳಿಂದ ಅದು ಸಾಧ್ಯವಾಗಲರಿಯದು, ಎಂಬುದನ್ನು ಶ್ರೀ ಅರವಿಂದರು ಈ ರೀತಿ ಅರುಹಿರುವರು :

"The unity of human race, can only be secured and can only be made real if the religion of humanity spiritualises itself and becomes the general inner law of human life.[35] A spiritual religion of humanity is the hope of the future..... A religion of humanity means the growing realisation that there is a **Secret spirit, a Divine Reality,** in which we are all one. It implies a growing attempt to live out this knowledge and bring about a **Kingdom of the Divine Spirit** uponearth.... But the high hope of humanity lies in the growing number of men who will realise this truth and seek to develop it in themselves, so that when the mind of man is ready to escape from its mechanical bent.... the truth of the **Spirit** may step in and lead humanity to the path of its highest possible happiness and perfection.[36]

"ಮಾನವ ಕುಲದ ಏಕತೆಯು, ಮಾನವ ಧರ್ಮವು ಪಾರಮಾರ್ಥಿಕವಾದರೇನೇ ನಿಜವಾಗಿ ನೆಲೆಗೊಳ್ಳಬಲ್ಲದು. ಅದು ಮಾನವರ ಜೀವನದ ಆಂತರಿಕ ನಿಯಮವಾಗಬೇಕು. ಪಾರಮಾರ್ಥಿಕ ಧರ್ಮವೇ ಭವಿಷ್ಯಕಾಲದ ಆಶೆಯ ಕಿರಣ. ಈ ಮಾನವ-ಧರ್ಮವು ನಾವೆಲ್ಲ ಒಂದು ಗೂಢವಾದ ಚೈತನ್ಯದಲ್ಲಿ- ಒಂದು ದೈವೀಸತ್ ತತ್ವದಲ್ಲಿ ಒಂದಾಗಿರುವೆವು" ಎಂಬುದರ ಬೆಳೆಯಲಿರುವ ಅನುಭೂತಿ ಅರಿವು. ನಾವೆಲ್ಲ ಆ ಅರಿವಿನಲ್ಲಿ ಹೆಚ್ಚು ಹೆಚ್ಚಾಗಿ ಬಾಳಲು ಯತ್ನಿಸಿ, ಪರಮಾತ್ಮನ ರಾಜ್ಯವನ್ನು ಧರೆಯಲ್ಲಿ ತರಬೇಕೆಂಬ ವಿಷಯವನ್ನು ಅದು ಒಳಗೊಂಡಿರುವದು. ಆದರೆ ಈ ಸತ್ಯದ ಅನುಭೂತಿಯನ್ನು ಪಡೆದ ಮಹನೀಯರ ಬೆಳೆಯಲಿರುವ ಸಂಖ್ಯೆಯನ್ನೇ ಮಾನವತೆಯ ಹಿರಿಯಾಸೆಯು ನಂಬಿರುವದು. ಅವರದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಂದರೆ ಮಾನವನ ಮನಸ್ಸು ಯಾಂತ್ರಿಕ ಪ್ರವೃತ್ತಿಯಿಂದ ಮುಕ್ತವಾದಾಗ, ಸತ್-ಶಕ್ತಿಯು ಅದನ್ನು ಆಕ್ರಮಿಸಬಲ್ಲದು. ಮತ್ತು ಅದು ಮಾನವತೆಯನ್ನು ಪರತಮ ಸೌಖ್ಯದೆಡೆಗೆ ಹಾಗೂ ಪೂರ್ಣತೆಯೆಡೆಗೆ ಒಯ್ಯಬಲ್ಲದು."

35) I.H.U.P. 316 36) Ibid PP 323-324

ಇಂಥ ಪಾರಮಾರ್ಥಿಕ ಮಾನವ ಧರ್ಮವು ಜಾಗತಿಕ "**ಸಾಮ್ರಾಜ್ಯ**"ದಲ್ಲಿಯೇ ನೆಲೆಗೊಳ್ಳಬಲ್ಲದು. ರಾಷ್ಟ್ರೀಯ ಸ್ವರಾಜ್ಯವು ವಿಶಾಲವಾಗಿ ಜಾಗತಿಕ ಸ್ವರೂಪವನ್ನು ಪಡೆಯಿತೆಂದರೆ, ಅದೇ "**ಸಾಮ್ರಾಜ್ಯ**"ವಾಗುವದು. "**ದೇವರಾಜ್ಯ**" (Theopolity) ಆಗುವದು 'ಸ್ವರಾಜ್ಯ'ದಂತೆ ಅದನ್ನೂ ಆತ್ಮವಿದನೇ ಆಳಬಲ್ಲನು. ಗುರುದೇವರ ಶಾಸಕ ಆತ್ಮವಿದನು. "**ಆತ್ಮವಿದ್ ಆತ್ಮೈವ ಭವತಿ**" ಆತ್ಮಜ್ಞಾನಿಯು ಆತ್ಮನೇ ಆಗುವನು. ಈ ವಚನದ ಮೇರೆಗೆ ಗುರುದೇವರ ಸಾಮ್ರಾಜ್ಯದ ಶಾಸಕನು ದೇವರೇ ಇರುವನೆಂದರೂ ಅಡ್ಡಿಯಿಲ್ಲ. ಆದುದರಿಂದ ಅವರು ಅದನ್ನು ದೇವರಾಜ್ಯ(Theopolity) ಎಂದೂ ಕರೆದಿರುವರು. ಅದನ್ನು ಅವರು ಈ ರೀತಿ ಬಣ್ಣಿಸಿರುವರು.

"You have to build and thatch the '**City of God devotion.**' give shade and shelter to all those who may come to stay in it, and live in it yourself along with your brother devotees. It is a **Theopolis"** where God is the **Supreme Ruler** and all humanity, bound together by spiritual tie, become equal and aspiring denizens, whose only vocation is to fill the wold with the praise and glory of God."[37]

"ನೀವು ಪರಮಾತ್ಮನ "**ಭಕ್ತಿಯ ನಗರವನ್ನು**" ನಿರ್ಮಿಸಬೇಕು. ಅಲ್ಲಿ ವಾಸಿಸಲು ಬರಬಹುದಾದ ಎಲ್ಲರಿಗೆ ಆಶ್ರಯವನ್ನೂ ರಕ್ಷಣೆಯನ್ನೂ ನೀಡಬೇಕು. ಮತ್ತು ನೀವು ಅಲ್ಲಿಯ ವಾಸಿಸಬೇಕು. ಅದೊಂದು "**ದೇವರಾಜ್ಯ**". ಅಲ್ಲಿ ಪರಮಾತ್ಮನೇ ಪರಮ ಶಾಸಕನು. ಮತ್ತು ಪಾರಮಾರ್ಥಿಕ ಬಂಧನದಿಂದ ಬಂಧಿತರಾದ ಮಾನವರು ಅದರ ಸಮನಾದ ಮುಮುಕ್ಷು ನಾಗರಿಕರು. ಪ್ರಪಂಚದಲ್ಲೆಲ್ಲ ಪರಮಾತ್ಮನ ಕೀರ್ತಿಯನ್ನೂ ವೈಭವವನ್ನೂ ತುಂಬಿ ಬಿಡುವದೇ ಅವರ ಏಕಮೇವ ಕಾರ್ಯ."

ಕಲಿಸುವವರಾರು ?

ಆದರೆ ಈ ಬಗೆಯ ಪಾರಮಾರ್ಥಿಕ ಮಾನವಧರ್ಮವನ್ನು ಕಲಿಸುವವರಾರು ? ಆ ಯೋಗ್ಯತೆಯು ಮೇಲ್ಕಾಣಿಸಲಾದ ಅನುಭಾವಿಗಳಾದ ದಾರ್ಶನಿಕರಿಗೆಯೇ ಇರಬಲ್ಲದು. ಅಂತಹರೇ ಈ ಹಿರಿದಾದ ಹೊಣೆಯನ್ನು ನಿರ್ವಹಿಸಬಲ್ಲರು. ಯಾಕೆಂದರೆ ಗುರುದೇವರು ಅರುಹಿದ ಮೇರೆಗೆ :

"The mystics of all ages and countries have spoken the same language, as they are the denizens of the same spiritual world. There are no racial, no communal no national prejudices among them. Time and space have nothing to do with the eternal and infinite character of their mystical experience. These together con-

37) P.G.H.P. 294

stitute a band of divine musicians, each contributing his own note. and all together producing a harmony that is wonderful."[38]

"ಎಲ್ಲ ದೇಶ-ಕಾಲಗಳ ಅನುಭಾವಿಗಳು ಒಂದೇ ಪಾರಮಾರ್ಥಿಕ ಲೋಕದ ನಿವಾಸಿಗಳು ಇರುವುದರಿಂದ ಅವರು ಒಂದೇ ಭಾಷೆಯನ್ನು ಆಡುವರು. ಅವರಲ್ಲಿ ಜಾತೀಯ, ರಾಷ್ಟ್ರೀಯ ಪೂರ್ವಾಗ್ರಹಗಳಿಗೆ ಎಡೆಯಿರುವುದಿಲ್ಲ. ಅವರ ಶಾಶ್ವತವಾದ ಅನಂತವಾದ, ಅನುಭಾವವು ಸ್ಥಳ-ಕಾಲಗಳ ಮರ್ಯಾದೆಯನ್ನು ಮೀರಿರುವುದು. ಅವರೆಲ್ಲ ದೈವೀ ಸಂಗೀತಗಾರರು. ಪ್ರತಿಯೊಬ್ಬರು ತಮ್ಮ ತಮ್ಮ ರಾಗಗಳನ್ನು ಸಲ್ಲಿಸಿ, ಅವರು ಒಂದು ಅದ್ಭುತವಾದ ಸ್ವರಮೇಳವನ್ನು(Harmony) ನಿರ್ಮಿಸಿರುವರು."

ಕಲಿಸುವದೇನನ್ನು ? ಎಂತು ?

ಈ ಅನುಭಾವಿಗಳು **ಮಾನವ-ಧರ್ಮವನ್ನು** ಅದರ ಅಂಗಗಳಾದ ಒಬ್ಬ ದೇವರು (One God), **ಒಂದು ಜಗತ್ತು** (One World), ಒಂದು ಮಾನವತೆ (One Humanity), **ಒಂದೇ ಧರ್ಮ** (One Religion), ಎಂಬುದನ್ನು ಇವುಗಳ ಪ್ರಭಾವಯುತ ಪ್ರಚಾರದ ಮುಖಾಂತರ ಮಾನವರಿಗೆ ಮನವರಿಕೆ ಮಾಡಿಕೊಡುವರು. ಮತ್ತು ಮಾನವ-ಕುಲದ ಏಕತೆಯನ್ನು ಸಾಧಿಸಲು ಯತ್ನಿಸುವರು. ಅವರದು ಇದೊಂದು ಕರ್ತವ್ಯವೇ ಆಗಿರುವುದೆಂದು ಗುರುದೇವರು ಈ ರೀತಿ ಅರುಹಿರುವರು :

"One has only to remember that it becomes the mission of such a God-realiser to spread the Gospel of God, whenever and wherever,it becomes possible for him to do so. **One God, One World, One Humanity,** should be, his maxim; Theopolity,his doctrine. Who-ever realises the unity or presence of God, can never but direct his life, in such a way, that the greatness of God becomes, not merely understood, but also achieveable."[39]

"ಪರಮಾತ್ಮನ ದಿವ್ಯ ಸಂದೇಶವನ್ನು ಸಾಧ್ಯವಿರುವಾಗ, ಸಾಧ್ಯವಿರುವಲ್ಲಿ ಬೀರುವದು, ಇಂಥ ಅನುಭಾವಿಯ ಪ್ರಧಾನ ಕರ್ತವ್ಯವೇ ಆಗಿರುವದು, ಎಂಬುದನ್ನು ಮರೆಯಕೂಡದು. ಒಬ್ಬ ದೇವರು, ಒಂದು ಜಗತ್ತು ಒಂದು ಮಾನವತೆ, ಇದು ಆತನ ನೀತಿ-ಸೂತ್ರವಿರತಕ್ಕದ್ದು. ದೇವರಾಜ್ಯವು ಆತನ ಸಿದ್ಧಾಂತವಿರತಕ್ಕದ್ದು. ಪರಮಾತ್ಮನ ಏಕತೆಯನ್ನು ಇಲ್ಲವೆ ಸನ್ನಿಧಾನವನ್ನು ಅನುಭವಿಸಿದವನು, ತನ್ನ ಜೀವನ-ಪದ್ಧತಿಯ ಮುಖಾಂತರವಾಗಿ, ಪರಮಾತ್ಮನ ವೈಭವವನ್ನು ಅರಿಯದಿರನು. ಇಷ್ಟೇ ಅಲ್ಲದೇ ಅದನ್ನು ಪಡೆಯಬಹುದು ಎಂಬುದನ್ನು ಕಾಣಿಸದಿರನು."

ಅನುಭಾವಿಗಳಲ್ಲಿ ಕೆಲವರು ಬುದ್ಧಿಪ್ರಧಾನರು, ಕೆಲವರು ಭಾವಪ್ರಧಾನರು, ಬೇರೆ ಕೆಲವರು ಕರ್ಮ-ಪ್ರಧಾನರಿರುವರು. ಬುದ್ಧಿ ಪ್ರಧಾನರಾದ ದಾರ್ಶನಿಕ ಅನುಭಾವಿಗಳು, ದೇವರ ಏಕತೆಯನ್ನೂ ವೈಭವವನ್ನೂ ಮಾನವರಿಗೆ ಮನದಟ್ಟಾಗುವಂತೆ ಸಾರಬಹುದು.

38) P.G.H. Intro. P-2 39) B.P.G.P. 136

"ಅಯ್ಯಾ! ದೇವನೊಬ್ಬ, ನಾಮ ಹಲವು, ರೂಪ ಹಲವು. ಒಬ್ಬನಲ್ಲದೆ ಜಗಕ್ಕೆ ಇಬ್ಬರುಂಟೇ ? ಒಬ್ಬ ಸರ್ವಜ್ಞ ಕರ್ತನು ! ಜಗಕೆಲ್ಲ ಒಬ್ಬನೇ ದೇವ ಕಾಣಯ್ಯ ! ಅವನು ಸದ್ರೂಪನೂ, ಚಿದ್ರೂಪನೂ, ಆನಂದ ರೂಪನಿರುವ, ಆತನು ಸರ್ವಜ್ಞನೂ, ಸರ್ವಸಮರ್ಥನೂ, ಸರ್ವವ್ಯಾಪಿಯೂ, ಸರ್ವಾನಂದಮಯನೂ ಇರುವ ! ಅವನು ಕರುಣ ಸಾಗರನೂ, ಶಾಂತಿಸಾಗರನೂ ಇರುವ. ಆತನನ್ನು ಭಜಿಸಿರಯ್ಯಾ ! ಕಾಣಿರಯ್ಯಾ" ಎಂಬುದಾಗಿ ಪರಮಾತ್ಮನ ರೂಪ, ಗುಣ, ವೈಭವವನ್ನು ಜನತೆಯಲ್ಲಿ ಬೀರಿ, ಆತನ ಬಗೆಗೆ ಭಕ್ತಿಯನ್ನು ಅವರಲ್ಲಿ ಹುಟ್ಟಿಸಬಹುದು.

ಭಾವಪ್ರಧಾನ ಅನುಭಾವಿಗಳು ಏಕಮೇವ ಮಾನವ ಧರ್ಮದ ಪ್ರಸಾರವನ್ನು ಮಾನವ ಕುಲದಲ್ಲಿ ಮಾಡಿ, ಅದರಲ್ಲಿ ಏಕತೆಯನ್ನು ನಿರ್ಮಿಸಬಹುದು. "ಅಯ್ಯ ! ನೀವೆಲ್ಲ ಒಂದೇ ಪರಮಾತ್ಮನ ಮಕ್ಕಳು, ಬಾಂಧವರು, ಕೀಳು ಭೇದ-ಭಾವವನ್ನು ಮರೆಯಿರಿ ! ನೀತಿಯಿಂದ ನಡೆಯಿರಿ ! ಪ್ರೀತಿಯಿಂದ ಬಾಳಿರಿ ! ಒಂದೇ ಒಂದಾದ ಭಕ್ತಿ-ಧರ್ಮವನ್ನು ಆಚರಿಸಿರಿ ! ಪರಮಾತ್ಮನನ್ನು ಅನನ್ಯರಾಗಿ ಭಜಿಸಿರಿ ! ಸರ್ವಸಮರ್ಥನಾದ, ಕರುಣಾಮಯ ಪರಮಾತ್ಮನೇ ನೀವು ಬಯಸಿದ್ದನ್ನು ನೀಡಬಲ್ಲನು. ಅವನು ನೀಡಿದುದನ್ನು ನಿಮ್ಮ ಬಾಂಧವರೊಡನೆ ಪ್ರೀತಿಯಿಂದ ಸೇವಿಸಿರಿ ! ಅವನು ನಿಮ್ಮ ಪರಸ್ಪರ ಪ್ರೀತಿಯ ಬಂಧು-ಭಾವವನ್ನು ಕಂಡು, ನಿಮ್ಮಲ್ಲರಿಗೆ ವೈಭವವನ್ನೂ, ಚಿರಶಾಂತಿಯನ್ನೂ ನೀಡದಿರನು." ಈ ಬಗೆಯ ಏಕತೆಯ ಬಾಂಧವ್ಯವನ್ನು ಮಾನವ ಕುಲದಲ್ಲಿ ಯತ್ನಿಸುವರು.

ಅದೇ ಮೇರೆಗೆ ಕರ್ಮಪ್ರಧಾನ ಅನುಭಾವಿಗಳು ಜಾಗತಿಕ ಏಕತೆಗಾಗಿ ದೈವೀ ಸಾಮ್ರಾಜ್ಯವನ್ನು(Theopolity) ನಿರ್ಮಿಸಲು ಯತ್ನಿಸುವರು.

ಗುರುದೇವರು ಇಂಥ ಸಾಮ್ರಾಜ್ಯವನ್ನು-"**ಸ್ವರಾಜ್ಯ-ವೈರಾಜ್ಯ**" ಎಂದು ಹೆಸರಿಸಿರುವರು. ಮತ್ತು ಅದನ್ನು ಈ ರೀತಿ ಬಣ್ಣಿಸಿರುವರು:

"The realised soul becomes an Overlord. Merely by willing, he can get any desire fulfilled..... He is the overlord of all and suffers no compeer(Ananyadhipathi) and has omniscience, omnipotence and bliss. He is the one soverign (Ekarat); the Vedic Hymn proclaims, he has sway over all that exits and down to eternity. It is he who enjoys real Swaraja, (Samarajya), Thus, far from being poli-centric or even cosmo-centric, the ideal visualised by the ancient Rishis, at the dawn of human history, is the Kingdom, Immortal, (Amrtam Purim) which transcends and limits of here and now. The modern frantic cries for a League of Nations or United Nations, all aiming at universal brotherhood are but distant re-echoes of the encompassing oneness of all, tuned in Vedic sing-song, praising

the glories of Theopolity of the Philosopher-Saint-t the very ectype of God."[40]

"ಅನುಭಾವಿ ಮಹಾತ್ಮನು ಅನನ್ಯಾಧಿಪತಿ-ಸಮ್ರಾಟನಾಗುವನು. ಕೇವಲ ಸಂಕಲ್ಪ ಮಾತ್ರದಿಂದ ಅವನು ಬಯಸಿದ್ದನ್ನು ಪಡೆಯಬಲ್ಲನು (**ಸಂಕಲ್ಪಾದೇವ ತು ತತ್ ಶ್ರುತೇ:**). ಸರ್ವಾಧಿಪತಿಯಾದ ಅವನು ತನ್ನ ಸಮಾನ-ಸ್ಕಂದರನ್ನು ಸಹಿಸನು, ಆತನು ಸರ್ವಜ್ಞನೂ, ಸರ್ವಸಮರ್ಥನೂ, ಆನಂದಮಯನೂ ಇರುವನು. ವೇದದಲ್ಲಿ ಬಣ್ಣಿಸಲಾದ "ಏಕರಾಟ"ನಾದ ಅವನು ಇಡೀ ಭೂತಜಾತಗಳ ಮೇಲೆ ತನ್ನ ಅಧಿಪತ್ಯವನ್ನು ಅನಂತಕಾಲದವರೆಗೆ ನಡೆಸಬಲ್ಲನು. ಅವನೇ ನಿಜವಾದ ಸ್ವರಾಜ್ಯವನ್ನು (ಸಾಮ್ರಾಜ್ಯವನ್ನು) ಉಪಭೋಗಿಸುವನು. ಈ ಬಗೆಯಾಗಿ ನಮ್ಮ ಭಾರತೀಯ ಇತಿಹಾಸದ ಅರುಣೋದಯದಲ್ಲಿ ನಮ್ಮ ಪ್ರಾಚೀನ ಋಷಿಗಳು ಕಂಡ ಆದರ್ಶವು. ಅನೇಕ ಕೇಂದ್ರಿತವು ಇಲ್ಲವೇ ವಿಶ್ವಕೇಂದ್ರಿತವು ಇರಲಿಲ್ಲ. ಅದು ಸ್ಥಳ-ಕಾಲಗಳ ಮರ್ಯಾದೆಯನ್ನು ಮೀರಿರುವ ಅಮರ ಸಾಮ್ರಾಜ್ಯವು (**ಅಮೃತಂ ಪುರೀಮ್**) ಇದ್ದಿತು. ಆಧುನಿಕ ಕಾಲದಲ್ಲಿ "ರಾಷ್ಟ್ರಸಂಘ"(League of Nations) ಇಲ್ಲವೇ "ಸಂಯುಕ್ತ ರಾಷ್ಟ್ರಗಳು"(United Nations) ಎಂಬ ಭ್ರಾಂತ ಕೂಗು ಕೇಳ ಬರುತ್ತದೆ. ಅವೆಲ್ಲ ಸಾರ್ವತ್ರಿಕ ಬಾಂಧವ್ಯದ ಗುರಿಯನ್ನು ಇರಿಸಿಕೊಂಡಿವೆ. ಆದರೆ ಅವು ಪರಮಾತ್ಮನ ಪ್ರತೀಕನೇ ಆದ ದಾರ್ಶನಿಕ ಅನುಭಾವಿಯ "ದೇವ ಸಾಮ್ರಾಜ್ಯ" ವನ್ನು ಹೊಗಳುವ ವೇದದ ಗೀತ-ಮಂತ್ರದಲ್ಲಿ ಹಾಡಲಾದ ಸರ್ವವ್ಯಾಪಕ ಏಕತೆಯ ಕೇವಲ ದೂರದ ಪ್ರತಿಧ್ವನಿಗಳೇ ಆಗಿರುವವು."

ಇದು ಗುರುದೇವರ "ದೇವ ಸಾಮ್ರಾಜ್ಯ"ದ ದಿವ್ಯ, ಭವ್ಯ, ಆದರ್ಶ, ಇದು ಕೇವಲ ಕಲ್ಪನಾ ವಿಲಾಸ. ಗಾಳಿಗೋಪುರ, ಕೇವಲ ಒಲುವಿನ ಕನಸು. ಇದು ಎಂದಾದರೂ ನನಸಾಗಬಲ್ಲದೇ ? ಸತ್ಯ ಸೃಷ್ಟಿಯಲ್ಲಿ ಇಳಿಯಬಲ್ಲದೇ ? ಕಾಣಬರಬಲ್ಲದೇ ? ಎಂದು ತಾವು ಕೇಳಬಹುದು. ಸರಿ ! ಆದರೆ ಇದು ನಮ್ಮ ಕ್ರಾಂತ-ದರ್ಶಿಗಳಾದ ಋಷಿಗಳ ಕನಸು. **ಶ್ರೀ ಬಾದರಾಯಣರ ಕನಸು, ಶ್ರೀಗುರುದೇವರ ಕನಸು, ಶ್ರೀ ಅರವಿಂದರ ಕನಸು.** ಆದುದರಿಂದ ಅದು ಇಂದಿಲ್ಲ ಮುಂದೆ ಎಂದಾದರೂ ಪೂರ್ಣತ: ಇಲ್ಲದಿದ್ದರೂ ಅಂಶತ: ಏಕಾಗಲೊಲ್ಲದು, ನನಸಾಗದೇ ಇರದು ಎಂಬುದು ನನ್ನ ಭಾವನೆ !

ಈ ವಿಷಯವನ್ನು ಇನ್ನೊಂದು ದೃಷ್ಟಿಯಿಂದ ಕಾಣಬಹುದು. ಆದರ್ಶವು ಸದೈವ ಆದರ್ಶವಾಗಿಯೇ ಉಳಿಯಬೇಕು. ಅದೊಂದು ಧ್ರುವತಾರೆ, ನಾವು ಅದನ್ನು ಕಾಣುತ್ತ ನಮ್ಮ ಪ್ರಗತಿಯನ್ನು ಆ ದಿಕ್ಕಿನಿಂದ ಸಾಗಿಸಬೇಕು. ಆ ದಿಕ್ಕಿನಿಂದ ಕೆಲವೊಂದು ಹೆಜ್ಜೆ ಮುಂದೆ ಸಾಗಿದರೂ ನಡೆಯಬಹುದು. "ಸ್ವಲ್ಪಮಪಿ ಅಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ।" ಎಂಬಂತೆ ಅದರಲ್ಲಿಯ ನಮ್ಮ ಅಲ್ಪ ಪ್ರಗತಿಯೂ ಕೂಡ ಕಲ್ಯಾಣಕರ ಆಗದಿರದು. ನಾವು ಕ್ರಮಶ: ಒಂದೊಂದು ಮೆಟ್ಟಲನ್ನು ಏರುತ್ತ ಸಾಗಬಹುದು. ಪೂರ್ತಿಯಾಗಿ ಆದರ್ಶವನ್ನು ಸೇರುವ ಅಗತ್ಯವಿಲ್ಲ ಮತ್ತು ಅದು ಸಾಧ್ಯವೂ ಇಲ್ಲ. ಆದುದರಿಂದ ಈ ಕನಸು ಪೂರ್ತಿಯಾಗಿ ನನಸಾಗದಿದ್ದರೂ ಅದನ್ನು ನಡೆಯಬಹುದು. ಆದುದರಿಂದ ಈ ಆದರ್ಶದ ಬೆಲೆ ಏನೂ ಕಡಿಮೆಯಾಗಲರಿಯದು.

40) V.C.T.P. 177

ಓಂ

ಪ್ರಕರಣ ನಾಲ್ಕು

ಸಾಧನ-ಸಮನ್ವಯ-ಅನುಭೂತಿ-ಸಮನ್ವಯ

ವಿಷಯ ಪ್ರವೇಶ :

ಈವರೆಗೆ ನಾವು ಶ್ರೀಗುರುದೇವರು, ಸಮನ್ವಯ-ದರ್ಶನವನ್ನು ಕಾಣಲು ಹಾಗೂ ಕಾಣಿಸಲು ಪಡೆದ ಅಧಿಕಾರವನ್ನೂ, ಅವರು ಕಾಣಿಸಿದ ದರ್ಶನ-ಸಮನ್ವಯವನ್ನೂ ಆದರ್ಶವನ್ನೂ ಅರಿತದ್ದಾಯಿತು. ಇಂದು ಅವರ ಪರತಮ ಆದರ್ಶವಾದ ಪರಮಾತ್ಮನ ಸಾಕ್ಷಾತ್ಕಾರದ-ಅನುಭೂತಿಯ-ಏಕಮೇವ ಪ್ರಧಾನ ಸಾಧನದ ಸ್ವರೂಪವನ್ನೂ, ಅದರ ಕೆಲ ಪೋಷಕ-ಸಾಧನಗಳ ಸ್ವರೂಪವನ್ನೂ, ಅವೆಲ್ಲವುಗಳಲ್ಲಿ ಗುರುದೇವರು ಕಾಣಿಸಿದ ಸಮನ್ವಯವನ್ನೂ ಅರುಹಲಿರುವೆ. ಅದರ ಜತೆಯಲ್ಲಿ ಈ ಸಾಧನವು ಪಡೆಯಲಿರುವ, ಅನುಭೂತಿಯ ಸ್ವರೂಪವನ್ನೂ, ಅದರ ಅಂಗಾಂಗಗಳಲ್ಲಿಯೂ, ಪರಿಣಾಮಗಳಲ್ಲಿಯೂ ಗುರುದೇವರಿಂದ ಕಾಣಿಸಲಾದ ಸಮನ್ವಯವನ್ನೂ ವಿವರಿಸಲಿರುವೆ.

ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ ಅನುಭಾವಿ ಸದ್ಗುರುಗಳು ಅನುಗ್ರಹಿಸಿದ ಭಗವಂತನ **ದಿವ್ಯ ನಾಮದ ಸ್ಮರಣವು-ಧ್ಯಾನವು**, ಗುರುದೇವರ **ಪ್ರಧಾನ ಸಾಧನವು**. ಅವರ ಪರಮಾರ್ಥ-ಪಥವು ಜ್ಞಾನದೇವರ ಪಂಥರಾಜ. ಅದು ನಾಮ-ಯೋಗವೆಂತಲೂ ಕರೆಯಲಾಗಿರುವದು. ಇಂಥ ದಿವ್ಯ ನಾಮವನ್ನು ಭಕ್ತಿಭಾವದಿಂದ ಅಖಂಡ ನೆನೆಯುವದೇ, ಅದರ ಧ್ಯಾನದಲ್ಲಿ ತಲ್ಲೀನವಾಗುವದೇ, ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಒಂದೇ ಒಂದಾದ ಪ್ರಭಾವಶಾಲಿಯಾದ ಸಾಧನವು. ಈ ಸಾಧನವು **ಏಕಮೇವ ಅದ್ವಿತೀಯವಾದುದು**. ಬೇರೆ ಸಾಧನಗಳು ಅದಕ್ಕೆ ನೆರವ

ನ್ನು ನೀಡುವವು. ಅವು ಸ್ವತಂತ್ರವಾಗಿ ಸಾಕ್ಷಾತ್ಕಾರವನ್ನು ಪಡೆಯಲರಿಯವು. **ನಾಮ-ಧ್ಯಾನ** ಒಂದೇ ಅದನ್ನು ಪಡೆಯಬಲ್ಲವು. **ನಾನ್ಯ: ಪಂಥಾ ವಿದ್ಯತೇ ಅಯನಾಯ!** ಪರಮಾತ್ಮನನ್ನು ಸಾರಲು, ಸೇರಲು ಬೇರೆ ದಾರಿ ಇರುವದಿಲ್ಲ ಎಂಬುದು ಗುರುದೇವರ ಖಂಡಿತವಾದ ಅಭಿಮತ.

ಈ ಪ್ರಧಾನ ಸಾಧನವನ್ನೂ, ಅದರ ಅಂಗಾಂಗಗಳ ಸಮನ್ವಯವನ್ನೂ ವಿವರಿಸುವ ಪೂರ್ವದಲ್ಲಿ ಅದರ ಪೋಷಕ ಸಾಧನಗಳನ್ನೂ, ಅವುಗಳ ಸಮನ್ವಯವನ್ನೂ ಕಾಣಸಲಿರುವೆ.

ಪೋಷಕ ಸಾಧನಗಳು :

ಈ ಪೋಷಕ ಸಾಧನಗಳಲ್ಲಿ ಕೆಲವನ್ನು ಆಯ್ದು ಅವುಗಳಲ್ಲಿ **ಆರು ಗುಂಪು**ಗಳನ್ನು ಕಲ್ಪಿಸಿರುವೆ. ಅವುಗಳಲ್ಲಿ **ಎರಡು ಮಾನಸಿಕ, ಎರಡು ನೈತಿಕ,** ಮತ್ತು ಉಳಿದ **ಎರಡು ಪಾರಮಾರ್ಥಿಕ ವರ್ಗಕ್ಕೆ** ಸೇರಿರುವವು. ಪ್ರತಿಯೊಂದು ಗುಂಪಿನ ಸಮನ್ವಯವನ್ನು ಗುರುದೇವರು ಸಾಧಿಸಿದ ಬಗೆಯನ್ನು ವಿವರಿಸಲಿರುವೆ.

ವಿವೇಕ-ಶ್ರದ್ಧೆ ಸಮನ್ವಯ :

ವಿವೇಕ-ಶ್ರದ್ಧೆಗಳದು ಮೊದಲನೆಯ ಗುಂಪು, ಅದು ಮಾನಸಿಕ ವರ್ಗಕ್ಕೆ ಸೇರಿದುದು. ವಿವೇಕ ಅಂದರೇನು ? ಶ್ರದ್ಧೆಯ ಸ್ವರೂಪವೇನು ? ಅವುಗಳ ಪರಸ್ಪರ ಸಂಬಂಧವೆಂತಹದು? ಅವುಗಳ ಸಮನ್ವಯವನ್ನು ಹೇಗೆ ಸಾಧಿಸಬಹುದು ? ಮುಂತಾದ ವಿಷಯಗಳನ್ನು ಅರಿಯುವಾ!

ವಿವೇಕವು ವಸ್ತುಗಳ ನಿತ್ಯಾನಿತ್ಯತೆಯನ್ನು, ಒಳಿತು ಕೆಡಕುಗಳನ್ನು ಅರಿಯುವದು. ಅರಹುವದು. **ಶ್ರೀ ಶಂಕರಾಚಾರ್ಯರು** ಅದರ ಸ್ವರೂಪವನ್ನು ತಮ್ಮ **ಅಪರೋಕ್ಷಾನುಭೂತಿಯಲ್ಲಿ** ಈ ರೀತಿ ಬಣ್ಣಿಸಿರುವರು :

ನಿತ್ಯಮಾತ್ಮಸ್ವರೂಪಂ ಹೀ ದೃಶ್ಯಂ ತದ್ವಿಪರೀತಕಮ್ ।
ಏವಂ ಯೋ ನಿಶ್ಚಯ: ಸಮ್ಯಕ್, ವಿವೇಕೋ ವಸ್ತುನ: ಸ ವೈ ।

"ಆತ್ಮನು-ಪರಮಾತ್ಮನು ನಿತ್ಯನು, ದೃಶ್ಯ ಪ್ರಪಂಚವು ಅನಿತ್ಯ, ಈ ಬಗೆಯ ಸರಿಯಾದ ನಿಶ್ಚಯವೇ ವಿವೇಕ."

ಪರಮಾತ್ಮನು ನಿತ್ಯನು, ಪ್ರಪಂಚವು ಅನಿತ್ಯ ಎಂಬ ವಿವೇಕದ ಉದಯವು ಬುದ್ಧಿಯಲ್ಲಿ ಆದ ತರುವಾಯ, ನಿತ್ಯ ಪರಮಾತ್ಮನ ಬಗೆಗೆ ಪ್ರೀತಿಯು, ಆದರವು ಹಾಗೂ ಪ್ರಪಂಚದ ಬಗೆಗೆ ಸಾಪೇಕ್ಷ ಅಪ್ರೀತಿಯು ಮಾನವನ ಹೃದಯದಲ್ಲಿ ಜನಿಸುವದು. ಈ ಪ್ರೀತಿಯು ಸ್ಥಿರವಾಯಿತೆಂದರೆ, ಅದೇ ಶ್ರದ್ಧೆಯಲ್ಲಿ ಪರಿಣತವಾಗುವದು. ಈ ಶ್ರದ್ಧೆಯನ್ನು ಆಚಾರ್ಯರು ಈ ರೀತಿ ಬಣ್ಣಿಸಿರುವರು.

ನಿಗಮಾಚಾರ್ಯವಾಕ್ಯೇಷು ಭಕ್ತಿ: ಶ್ರದ್ಧೇತಿ ವಿಶ್ರುತಾ ॥

"ಶಾಸ್ತ್ರ ಹಾಗೂ ಆಚಾರ್ಯರ ವಚನಗಳಲ್ಲಿ ವಿಶ್ವಾಸವು ಶ್ರದ್ಧೆ ಎಂದೂ ಹೇಳಲಾಗಿರುವದು." ಈ ಶ್ರದ್ಧೆಯು ದೃಡವಾಯಿತೆಂದರೆ, ಅದು ನಿಷ್ಠೆ(Conviction) ಆಗುವುದುಂಟು. ಅದು ತುಂಬ ಹಿರಿದಾದುದು. ಶ್ರೀ ನಿಂಬರಗಿ ಮಹಾರಾಜರ ಆಭಿಮತದ ಮೇರೆಗೆ,

ನಿಷ್ಠೆಯಿಲ್ಲದೆ ಕೆಲಸ, ನಷ್ಟವಪ್ಪುದು ಸ್ಪಷ್ಟ,
ನಿಷ್ಠೆಯೇ ಎಲ್ಲೆಲ್ಲಿ ಇಷ್ಟವಿಹುದು ।
ನಿಷ್ಠೆ ನಿಷ್ಠೆಗಳಲ್ಲಿ, ಆತ್ಮನಿಷ್ಠೆಯೆ ಶ್ರೇಷ್ಠ.
ಆತ್ಮಗೆಯೆ ತನುಮನವನರ್ಪಿಸುವದು ॥ (ಜೋಧಸುಧೆ)

ಗುರುದೇವರದು ವಿವೇಕಯುತ ಪರಮಾರ್ಥ(Rational mysticism), ಅದು ವಿವೇಕಯುತ ಶ್ರದ್ಧೆಯನ್ನು ನಂಬಿರುವದು, ವಿವೇಕವು ಬುದ್ಧಿಯ ಕಾರ್ಯ, ಶ್ರದ್ಧೆನಂಬಿಯು ಭಾವದ ಕಾರ್ಯ. ಬುದ್ಧಿಯು ಕಣ್ಣು-ಮಾರ್ಗದರ್ಶಕ, ಭಾವವು ಕುರುಡು; ಭಾವದ ಬೆಂಬಲವಿಲ್ಲದೆ ಬುದ್ಧಿಯು ಬರಡು, ಬುದ್ಧಿಯು ಕಾಣಿಸಿದ ದಾರಿಯಿಂದ ಭಾವವು ಸಂಕಲ್ಪದ ನೆರವಿನಿಂದ ಸಾಗಿ, ಗುರಿಯನ್ನು ಸೇರಲು ಯತ್ನಿಸಬೇಕು. ಆಗ ಬಯಸಿದ ಕಾರ್ಯವು ಕೈಗೂಡಬಹುದು. ನಮ್ಮ ಬಾಳು ತನ್ನ ಆದರ್ಶದ-ಆತ್ಮಾನಂದದ ಗುರಿಯನ್ನು ಸಾರಬಹುದು-ಸೇರಬಹುದು.

ಗುರುದೇವರು ಅಂಧಶ್ರದ್ಧೆಯನ್ನು ಮೆಚ್ಚರು. ಅವರು ಸದೈವ ಗೌರವಿಸುವದು ಬುದ್ಧಿನಿಷ್ಠ ಶ್ರದ್ಧೆಯನ್ನು, ಅನುಭವನಿಷ್ಠ ಶ್ರದ್ಧೆಯನ್ನು, ಆದಿಯಲ್ಲಿ ಅದು ಬುದ್ಧಿಯನ್ನು-ವಿವೇಕವನ್ನು ನಂಬಬೇಕು, ಕೊನೆಯಲ್ಲಿ ಅನುಭವವನ್ನು ಆಶ್ರಯಿಸಬೇಕು, ಎಂಬುದು ಅವರ ಹೇಳಿಕೆ. ಒಮ್ಮೆ ಅವರಿಗೆ ನೀವು ಏನನ್ನು ನಂಬುವಿರಿ ? (What do you believer?) ಎಂದು ಒಬ್ಬರು ಕೇಳಿದಾಗ, ಗುರುದೇವರು "I don't believe anything. I only perceive !" "ನಾನು ಏನನ್ನೂ ನಂಬುವದಿಲ್ಲ! ನಾನು ಕಾಣುತ್ತೇನೆ;" ಎಂದು ಉತ್ತರಿಸಿದರು.

ಇಂಥ ದೃಡವಾದ ಶ್ರದ್ಧೆಯನ್ನು ಮಹಾತ್ಮಾಗಾಂಧಿಯವರು ಈ ಬಗೆಯಾಗಿ ಬಣ್ಣಿಸಿರುವರು:

"Faith is not a delicate flower, which would wither under the slighest stormy weather. It is faith that steers; faith that moves mountains and faith that jumps across the ocean. The faith is nothing but a living and wide-awake consciousness of God within. He who has achieved that faith, wants nothing. Bodily diseased, he is spiritually, healthy. Physically poor, he

1) L.I.P. 130

rolls in Spiritual riches."[1]

"ಶ್ರದ್ಧೆಯು ಬಿರುಗಾಳಿಯ ಅಲ್ಪಸೋಂಕಿನಿಂದ ಬಾಡುವ ಕೋಮಲ ಹೂವಲ್ಲ. ಶ್ರದ್ಧೆಯು ಪ್ರಕ್ಷುಬ್ಧ ಸಾಗರದೊಳಗಿಂದ ನಮ್ಮನ್ನು ಸುರಕ್ಷಿತವಾಗಿ ಪಾರು ಗಾಣಿಸಬಲ್ಲದು. ಅದು ಗಿರಿಗಳನ್ನು ಅಲ್ಲಾಡಿಸಬಹುದು, ಸಾಗರವನ್ನು ದಾಟಬಲ್ಲದು. ಶ್ರದ್ಧೆಯು ನಮ್ಮ ಅಂತರಂಗದಲ್ಲಿಯ ಭಗವಂತನ ಪ್ರಾಣಯುತ, ಪೂರ್ಣ ಜಾಗ್ರತ ಅರಿವು. ಅಂಥ ಶ್ರದ್ಧೆಯನ್ನು ಪಡೆದವನಿಗೆ ಯಾವ ಕೊರತೆಯೂ ಬೀಳದು. ಅವನು ದೈಹಿಕ ಅನಾರೋಗ್ಯವುಳ್ಳವನಿದ್ದರೂ, ಪಾರಮಾರ್ಥಿಕ ಆರೋಗ್ಯವನ್ನು ಪಡೆದಿರುವನು. ಭೌತಿಕ ಬಡವನಿದ್ದರೂ, ಅವನು ಪಾರಮಾರ್ಥಿಕ ಐಶ್ವರ್ಯದಲ್ಲಿ ತೇಲಾಡುತ್ತಿರುವನು.

ಇಂಥ ಅಲೌಕಿಕ ಶ್ರದ್ಧೆಯು ಕೇವಲ ವಿವೇಕಜನಿತ ಇರಲರಿಯದು. ಅದಕ್ಕೆ ಇನಿತು ಸಾಮರ್ಥ್ಯ ಲಭಿಸಿರುವದು ಅನುಭೂತಿಯ ಬೆಂಬಲದಿಂದಲೇ ಸರಿ. ಅದು ಶ್ರದ್ಧೆಯ ಬೆಳವಣಿಗೆಯ ಕೊನೆಯ ಮೆಟ್ಟಿಲು. ಪ್ರಾಥಮಿಕ ಶ್ರದ್ಧೆಯು ವಿಜ್ಞಾನಿಯು ತನ್ನ ಪ್ರಯೋಗಕ್ಕಾಗಿ ಸ್ವೀಕರಿಸಿದ ಗ್ರಹೀತಕೃತ್ಯದಂತೆ (Hypothesis) ಇರುವದು. ಇದು ಪರಮಾರ್ಥ-ಸಾಧನದ ತಳಹದಿ. ಅದಿಲ್ಲದಿದ್ದರೆ ಸಾಧನಕ್ಕೆ ಪ್ರಾರಂಭವೇ ಆಗಲರಿಯದು. ಮತ್ತು ಸಾಧನದ ಪ್ರಯೋಗವೇ ನಡೆಯದಿದ್ದರೆ, ಅನುಭಾವದ ಸತ್ಯ ಸಿದ್ಧಾಂತ ಲಭಿಸುವದೆಂತು? ಅದಕ್ಕಾಗಿ ವಿವೇಕಜನ್ಯ ಪ್ರಾಥಮಿಕ ಶ್ರದ್ಧೆಯು ಅತ್ಯವಶ್ಯವಾದುದು. ವಿವೇಕ-ಶ್ರದ್ಧೆಗಳ ಸಹಯೋಗವು ಪ್ರಾರಂಭದಲ್ಲಿ ಈ ಬಗೆಯದಿರುವದು.

ಈ ಪ್ರಾಥಮಿಕ ಶ್ರದ್ಧೆಯ ಪ್ರಧಾನ ಬಗೆಗಳು ಎರಡು. (1) ದೇವರಲ್ಲಿಯ ಶ್ರದ್ಧೆ ಒಂದು. (2) ಸದ್ಗುರುವಿನಲ್ಲಿಯ ಶ್ರದ್ಧೆ ಇನ್ನೊಂದು. ದೇವರು ಇರುವನೋ ಇಲ್ಲವೋ? ಇದ್ದರೆ ಅವನ ಗುಣ ಕರ್ಮಗಳು ಎಂತಹವು? ಇವೇ ಸಾಮಾನ್ಯರಲ್ಲಿಯ ಸಂದೇಹದ ವಿಷಯಗಳು. ಇವನ್ನು ವಿವೇಕದ ನೆರವಿನಿಂದ ನಿವಾರಿಸಲು ದಾರ್ಶನಿಕರೂ, ವಿಜ್ಞಾನಿಗಳೂ ಯತ್ನಿಸಿರುವರು, ಯತ್ನಿಸುತ್ತಿರುವರು. ಆದರೆ ಇವು ಅತೀಂದ್ರಿಯ ವಿಷಯಗಳಿರುವದರಿಂದ ಇದರ ಪರಿಹಾರವು ಬುದ್ಧಿಯ ಮರ್ಯಾದೆಯನ್ನು ಮೀರಿರುವದು. ಇದು ತನ್ನ ಕಾರ್ಯಕ್ಷೇತ್ರವಲ್ಲ; ಇದನ್ನು ಅರಿಯಲು ಸಾಕ್ಷಾತ್ ಅನುಭೂತಿಯೇ ಸಮರ್ಥವು, ಆ ಅನುಭೂತಿಯನ್ನು ನೀಡುವ ಪ್ರತಿಭೆಯನ್ನೇ ನಾವು ಅಶ್ರಯಿಸಬೇಕು. ಅದು ಸಾಧ್ಯವಾಗುವವರೆಗೆ ನಾವು ಅನುಭಾವಿಗಳ ವಚನಗಳನ್ನು ನಂಬಿ, ಅವರಲ್ಲಿ ಶ್ರದ್ಧೆಯನ್ನು ಇರಿಸಿ, ನಮ್ಮ ಜೀವನವನ್ನು ಸಾಗಿಸಬೇಕು. ಭಗವಂತನ ಅನುಭೂತಿಯನ್ನು ಪಡೆಯಲು ಯತ್ನಿಸಬೇಕು ಎಂಬುದನ್ನು ವಿವೇಕವೇ ಅರುಹುತ್ತದೆ. ಆದುದರಿಂದ ಈ ಅತೀಂದ್ರಿಯ ವಿಷಯಗಳಲ್ಲಿ "ಶಬ್ದ" ಪ್ರಾಮಾಣ್ಯವನ್ನು, ಆಪ್ತವಾಕ್ಯದ ಪ್ರಾಮಾಣ್ಯವನ್ನು ನಂಬಿ, ನಾವು ಸಾಧನರತರಾಗಬೇಕು.

ಭಗವಂತನ ಸ್ವರೂಪ-ಸಾಮರ್ಥ್ಯವನ್ನು ಕುರಿತು ಗುರುದೇವರು ಈ ಬಗೆಯಾಗಿ ಬರೆದಿರುವರು.

"God is that Spiritual Power that permeates and holds the universe. He is Antaryamin, "Inner Controler" as Shri Ramanujacharya puts it. It is due to His control that heaven and earth dwell in their places. But till He manifests Himself, how are we to believe in His existence ? Moreover, what is the use of mere belief unless we actually see Him ? Hence the belief that God is a great Spiritual Power is and should be a mere hypothesis to a seeker in the beginning, the basis for his future experiment. After spiritual experiences, the same hypothesis will become an Axiom and assume the form of an unchanging Thoery."[2]

"ಭಗವಂತನು ಇಡೀ ವಿಶ್ವವನ್ನು ವ್ಯಾಪಿಸಿರುವ ಹಾಗೂ ಅದನ್ನು ಧರಿಸಿರುವ **ಆಧ್ಯಾತ್ಮಿಕ ಚೈತನ್ಯ**. ಅತನೆ ಶ್ರೀರಾಮಾನುಜಾಚಾರ್ಯರ "**ಅಂತರ್ಯಾಮಿ**" ಯು-"ಆಂತರಿಕ ನಿಯಾಮಕನು". ಆತನ ನಿಯಂತ್ರಣವೇ ಭೂಮ್ಯಾಕಾಶಗಳನ್ನು ಆಯಾ ಸ್ಥಳಗಳಲ್ಲಿಸ್ಥಿರವಾಗಿ ನಿಲ್ಲಿಸಿರುವದು. ಆದರೆ ಭಗವಂತನು ನಮಗೆ ಕಾಣಿಸುವ ವರೆಗೆ ನಾವು ಆತನ ಇರವನ್ನು ನಂಬುವದೆಂತು ? ಮೇಲಾಗಿ, ನಾವು ಆತನನ್ನು ಕಾಣದವಿನಾ, ಕೇವಲ ಆತನ ನಂಬಿಕೆಯಿಂದ ಏನು ಫಲ ? ಆದುದರಿಂದ ಭಗವಂತನು ಹಿರಿದಾದ ಆಧ್ಯಾತ್ಮಿಕ ಚೈತನ್ಯ ಇರುವ ಎಂಬ ನಂಬಿಕೆಯು ಪ್ರಾರಂಭದ ಲ್ಲಿ, ಒಂದು ಬರಿ ಗ್ರಹೀತ ಕೃತ್ಯ ಇರುವದು. ಅದು ಸಾಧಕನ ಮುಂದಿನ ಪ್ರಯೋಗದ ತಳಹದಿ. ಅದೇ ಮುಂದೆ ಅನುಭಾವದ ತರುವಾಯ "ಪ್ರತ್ಯಕ್ಷ"ವಾಗಿ ಶಾಶ್ವತ ಸಿದ್ಧಾಂತವಾಗಿ ಪರಿಣಮಿಸುವದು".

ಭಗವಂತನ ಅಸ್ತಿತ್ವ-ಹಿರಿಮೆಗಳ ಬಗೆಗಿನ ಶ್ರದ್ಧೆಯು ವಿವೇಕಯುತ ಇರಬೇಕಾಗುವಂತೆ ಸದ್ಗುರುವಿನ ಮೇಲಿನ ಶ್ರದ್ಧೆಯೂ ವಿವೇಕಯುತ ಇರಲುಬೇಕು. ಅಲ್ಲಿಯೂ ವಿವೇಕ-ಶ್ರದ್ಧೆಗಳ ಸಹಯೋಗಬೇಕು. ಅದು ಕುರುಡು ನಂಬಿಕೆ ಇರಕೂಡದು. ಇಲ್ಲದಿದ್ದರೆ "**ಅಂಧೇನೈವ ನೀಯಮಾನಾ ಯಥಾಂಧಾ:** " "Blind leading the blind both fall into the ditch." "ಬಳ್ಳಿ ಕುರುಡರು ಕೂಡಿ ಕೊಳ್ಳದಲ್ಲಿ ಬಿದ್ದಂತೆ." ಅಂಥವರ ಅವಸ್ಥೆಯಾಗದಿರದು. ಇಂಥ ಮರುಳ ಜನರ ಹಾಗೂ ದುರುಳ ಗುರುಗಳ, ಬಣ್ಣನೆಯನ್ನು **ಶ್ರೀ ಸಮರ್ಥ ರಾಮದಾಸರು** ತಮ್ಮ "ಜನ ಸ್ವಭಾವ ಗೋಸಾವೀ" ಎಂಬ ಕವನದಲ್ಲಿ ಚೆನ್ನಾಗಿ ಮಾಡಿರುವರು. ಅವುಗಳಲ್ಲಿಯ ಕೆಲ ಪದ್ಯಗಳ ಆಂಗ್ಲ ಅನುವಾದವನ್ನು ಗುರುದೇವರು ಈ ರೀತಿ ಮಾಡಿರುವರು.

"Vainly do people believe every thing they hear. They throw away jewels and gather dung-cakes. Who can help these

2) How can humanity be made one ? (lecture)

men if they wander like blind cattle ? Wherever we see now, there are the so-called saints and in their company, people have mistaken the nature of real Saint-hood. Some say that their Gurupartakes of dung. Some say their Guru disappears at pleasure, and that he makes inanimate objects walk like animate ones. Some say that their Guru rides a tiger, uses serpent like a rope and defies death for thousand years. Others say that their Guru was buried alive in sand, woke up again from the sand after a number of days (3-63). Thus in a rationalistic manner does **Ramadas** dispose of, the ordinary notions of Gurudom. Miracles do not constitute spirituality, says **Ramadas** and such stories are not a true indication of spiritual greatness. Spiritual greatness lies only in the **Knowledge of the Self-Atmajnana,** which **Ramadas** is never wearied of praising."[3]

"ಜನರು ಸುಮ್ಮನೇ ಕೇಳಿದ್ದನ್ನೆಲ್ಲ ನಂಬುತ್ತಾರೆ. ಅವರು ರತ್ನಗಳನ್ನು ದೂರ ಎಸೆದು, ಕುರುಳುಗಳನ್ನು ಕೂಡಿಸುತ್ತಾರೆ.... ಕುರುಡು ದನಗಳಂತೆ ಅಲೆದಾಡುವವರಿಗೆ ಅದಾರು ನೆರವಾಗಬಲ್ಲರು ? ನಾವು ನೋಡುವಲ್ಲೆಲ್ಲ ತೋರಿಕೆಯ ಸಾಧುಜನರ ಹೇರಳತೆ. ಅವರ ಸಹವಾಸದ ಫಲವಾಗಿ ಜನರು ನಿಜವಾದ ಸಾಧುತ್ವವನ್ನೇ ಮರೆತಿರುವರು. ಕೆಲವರು ತಮ್ಮ ಗುರುಗಳು ಮಲಮೂತ್ರಗಳನ್ನು ಸೇವಿಸುತ್ತಾರೆ ಎಂದು ಹೇಳುವರು. ಕೆಲವರು ತಮ್ಮ ಗುರುಗಳು ಮನಬಂದಾಗ ಗುಪ್ತರಾಗುವರು ಮತ್ತು ಅಚೇತನ ವಸ್ತುಗಳನ್ನು ಸಚೇತನಗಳಂತೆ ನಡೆಸುವರು ಎಂದು ಹೇಳುವರು. ಕೆಲವರು ತಮ್ಮ ಗುರುಗಳು ಹುಲಿಗಳ ಮೇಲೆ ಕುಳಿತು, ಹಾವುಗಳನ್ನು ಹಗ್ಗಗಳಂತೆ ಉಪಯೋಗಿಸುವರು, ಮತ್ತು ಸಾವಿರ ವರುಷ ಮರಣವನ್ನು ದೂರೀಕರಿಸುವರು ಎಂದು ಹೇಳುವರು. ಬೇರೆ ಕೆಲವರು, ತಮ್ಮ ಗುರುಗಳು ಉಸುಬಿನಲ್ಲಿ ಸಜೀವ ಹೂಳಿಕೊಂಡು ಎಷ್ಟೋ ದಿನಗಳ ತರುವಾಯ ಅಲ್ಲಿಂದ ಮರಳಿ ಬರುವರು ಎಂದು ಉಸುರುವರು (3-63). ಈ ಬಗೆಯಾಗಿ ಬುದ್ಧಿಪ್ರಧಾನರಾದ **ರಾಮದಾಸರು** ಜನರ ಗುರುತ್ವದ ಬಗೆಗಿನ ಸಾಮಾನ್ಯ ಕಲ್ಪನೆಗಳನ್ನು ನಿರಾಕರಿಸಿರುವರು. **ರಾಮದಾಸರ** ಅಭಿಮತದ ಮೇರೆಗೆ ಚಮತ್ಕಾರಗಳು ಪಾರಮಾರ್ಥಿಕ ಜೀವನದ ಕುರುಹುಗಳಲ್ಲ ಮತ್ತು ಈ ಕಥೆಗಳು ಪಾರಮಾರ್ಥಿಕ ಹಿರಿಮೆಯ ನಿಜವಾದ ಲಕ್ಷಣಗಳಲ್ಲ. ನಿಜವಾದ ಪಾರಮಾರ್ಥಿಕ ಹಿರಿಮೆಯು ಕೇವಲ **ಆತ್ಮಜ್ಞಾನದಲ್ಲಿ** ನೆಲೆಸಿರುವದು ಎಂಬುದನ್ನು ರಾಮದಾಸರು ಪದೇ ಪದೇ ಹೊಗಳಿರುವರು."

ಅದೇ ಮೇರೆಗೆ ಶ್ರೀಗುರುದೇವರ ಸದ್ಗುರುಗಳಾದ ಶ್ರೀಭಾವುಸಾಹೇಬರವರು ಹೇಳಿರುವುದೇನಂದರೆ : - "ಶ್ರೀ ಸಮರ್ಥರು (ನಿಂಬರಗಿ ಮಹಾರಾಜರು) ಈ

3) M.M.P. 371

ರೀತಿ ಖಂಡಿತವಾಗಿ ಹೇಳಿರುವರು. "ಯಾರಾದರೂ ಸೂರ್ಯನನ್ನು ನಿಮ್ಮೆದುರು ನಿಲ್ಲಿಸಿದರೂ, ಇಲ್ಲವೆ ಭೂತ-ಭವಿಷ್ಯವನ್ನು ಅರುಹಿದರೂ, ಅವರನ್ನು ಆತ್ಮಜ್ಞಾನಿಗಳೆಂದು ಎಣಿಸಬೇಡಿರಿ. ಅವರದು ಮೋಸದ ಮಾರ್ಗ, ಆತ್ಮಜ್ಞಾನದ್ದಲ್ಲ." ಆದರೆ ಮರುಳ ಮಾನವರು ಅದನ್ನು ಮನ್ನಿಸದೆ, ಪವಾಡವನ್ನೇ ಅನುಭಾವವೆಂದು ಬಗೆದು, ಅಡ್ಡದಾರಿಯಿಂದ ಸಾಗುವರು."[4]

ಇಂಥ ವಿಷಮ ಪರಿಸ್ಥಿತಿಯಲ್ಲಿ ಸದ್ಗುರುಗಳ ಆಯ್ಕೆಯು ತುಂಬಾ ಕಠಿಣವಾಗಿದೆ. ಅದಕ್ಕಾಗಿ ಶ್ರದ್ಧೆಯು ವಿವೇಕದ ನೆರವನ್ನು ಪಡೆಯಲೇಬೇಕು. ನಾವು ಬಲ್ಲವರನ್ನು ಕೇಳಬೇಕು. ಉದ್ಗ್ರಂಥಗಳನ್ನು ಪರಿಶೀಲಿಸಬೇಕು. ಅವುಗಳಲ್ಲಿ ಅರುಹಲಾದ ಸಂತರ ಲಕ್ಷಣಗಳನ್ನು ಅರಿಯಬೇಕು. ನಮ್ಮ ಸಾತ್ವಿಕ ಸ್ನೇಹಿತರ ಸಲಹೆಯನ್ನು ಪಡೆದು, ನಾವು ಸರಿಯಾದ ಸದ್ಗುರುಗಳಿಂದ ಅನುಗ್ರಹ ಪಡೆಯಬೇಕು. ಅವರ ಬೋಧೆಯಂತೆ ಶ್ರದ್ಧೆಯಿಂದ, ನಿಷ್ಠೆಯಿಂದ ಸಾಧನವನ್ನು ಮಾಡಿ, ಅವರ ಕರುಣದಿಂದ ಭಗವಂತನ ಸಾಕ್ಷಾತ್ಕಾರ-ಪರಮಾನಂದಗಳನ್ನು ಪಡೆಯಬೇಕು. ಇದು ವಿವೇಕ-ಶ್ರದ್ಧೆಗಳ ಸಂಯೋಗದಿಂದಲೇ ಸಾಧ್ಯವೆಂಬುದನ್ನು ಮರೆಯಕೂಡದು, ಭಗವಂತನೂ ಗೀತೆಯಲ್ಲಿ ಈ ಬಗೆಯ ಅಶ್ವಾಸನವನ್ನು ನೀಡಿರುವನು.

ಶ್ರದ್ಧಾವಾಂಲ್ಲಭತೇ ಜ್ಞಾನಂ ತತ್ಪರ: ಸಂಯತೇಂದ್ರಿಯ: ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ।।4-39।।

"ಶ್ರದ್ಧೆಯುಳ್ಳವನು, ತಲ್ಲೀನನು ಮತ್ತು ಸಂಯಮಿಯು ಸಾಕ್ಷಾತ್ಕಾರವನ್ನು ಪಡೆಯುವನು. ತರುವಾಯ ಅವನಿಗೆ ಬೇಗನೇ ಪರಶಾಂತಿಯು ಲಭಿಸುವುದು."

ರಾಗ-ವಿರಾಗ ಸಮನ್ವಯ :

ಇದು ಮಾನಸಿಕ ವರ್ಗಕ್ಕೆ ಸೇರಿದ ಎರಡನೆಯ ಗುಂಪು. ರಾಗವೆಂದರೆ ಪ್ರೀತಿ; ವಿರಾಗವೆಂದರೆ ಪ್ರೀತಿ. ಇವು ವಿವೇಕದ ಆಪತ್ಯಗಳು. ವಿವೇಕವು ನಿತ್ಯ-ಅನಿತ್ಯ ವಿಷಯಗಳನ್ನು ಅರುಹಿದ ಮೇಲೆ, ನಿತ್ಯ ವಸ್ತುವಿನ ಬಗೆಗೆ ಪ್ರೀತಿಯೂ, ಅನಿತ್ಯ ವಸ್ತುವಿನ ಬಗೆಗೆ ಅಪ್ರೀತಿಯೂ ಜನಿಸುವದು ವಿವೇಕಿಗಳಲ್ಲಿ. ಭಗವಂತನು ನಿತ್ಯ, ವಿಷಯಗಳು ಅನಿತ್ಯ. ಆದುದರಿಂದ ಭಗವಂತನಲ್ಲಿ ಪ್ರೀತಿ ಹಾಗೂ ವಿಷಯಗಳಲ್ಲಿಯ ಅಪ್ರೀತಿಯು ವಿರಕ್ತಿ. ಈ ಭಕ್ತಿ-ವಿರಕ್ತಿಗಳು ಅನ್ಯೋನ್ಯ ಪೋಷಕ. ಭಕ್ತಿಯು ಬೆಳೆಯಿತೆಂದರೆ, ವಿರಕ್ತಿಯು ಬೆಳೆಯುವುದು; ವಿರಕ್ತಿಯು ಬೆಳೆಯಿತೆಂದರೆ ಭಕ್ತಿಯು ಬೆಳೆಯುವದು. ಈ ರೀತಿ ಬೆಳೆಯುತ್ತ ಸಾಗಿ ಕೊನೆಗೆ ಅವು ಭಗವಂತನ ಸಾಕ್ಷಾತ್ಕಾರದಲ್ಲಿ ಬೆರೆತು ಒಂದಾಗುವವು. ಅದೇ ಅವುಗಳ ಅಂತಿಮ ಸಮನ್ವಯದ ಸ್ಥಿತಿಯು.

ಇನ್ನು ಭಕ್ತಿ-ವಿರಕ್ತಿಗಳ ಬೆಳವಣಿಗೆಯು ಸ್ವತಂತ್ರವಾಗಿ ಆಗಲರಿಯದೇ ? ಒಂದನ್ನುಳಿದು ಇನ್ನೊಂದು ಬೆಳೆಯಲರಿಯದೇ ? ಅದು ಬೆಳೆಯಲರಿಯದು ಎಂಬುದೇ ಅದಕ್ಕೆ ಬಲ್ಲ ಸಂತರ ಉತ್ತರ. ಯಾಕೆಂದರೆ, ದೇವಭಕ್ತಿ ಹಾಗೂ ದೇಹಾಸಕ್ತಿ ಒಂದೆ

4) ಜೀವನ ಗಜಗೆ ಪುಟ 147-48

ಡೆ ಇರಲರಿಯವು; ಆತ್ಮಾನಂದ-ಭಗವದಾನಂದ ಮತ್ತು ವಿಷಯ ಸುಖ ಇವು ಏಕಕಾಲ ಕ್ಕೆ ಲಭಿಸಲರಿಯವು. ಆತ್ಮಾನಂದ ಬೇಕಾದರೆ ವಿಷಯ ಸುಖವನ್ನು ತ್ಯಜಿಸಬೇಕು. ಹಾಗೂ ವಿಷಯಸುಖವು ಬೇಕಾಗಿದ್ದರೆ, ಆತ್ಮಾನಂದವು ದೊರೆಯಲರಿಯದು. **ರಹಿಮಾನ್** ಸಂತರು ಹೇಳುವರು:

ರಹಿಮನ ಗಲಿ ಹೈ ಸಾಕರೀ ದೂಜೋ ನಾ ಠಹ ಠಾಹೀ।

ಆಪ ಹೈ ತೋ ಹರೀ ನಹೀ, ಹರಿತೋ ಆಪನ ನಾಹೀ ॥

"ರಹಿಮನನು ಹೇಳುವ - "ಭಗವಂತನೆಡೆ ಸಾಗುವ ದಾರಿಯು ಇಕ್ಕಟ್ಟಿನದಿರು ವದು. ಅದರಲ್ಲಿ ಎರಡನೆಯವನು ನಿಲ್ಲಲರಿಯ. ಅಹಂಕಾರವಿದ್ದೆಡೆ ಹರಿಯು ಇರಲರಿ ಯು. ಹರಿ ಇದ್ದಲ್ಲಿ ಅಹಂಕಾರ ಇರಲರಿಯದು."

When you are, God is not,
When God is, you are not,
Egosim or God ? Choose !

" ನೀನು ಇರುವಲ್ಲಿ ದೇವರು ಇರಲರಿಯ; ದೇವರಿರುವಲ್ಲಿ ನೀನು ಇರಲರಿ ಯೆ. ಆದುದರಿಂದ ಅಭಿಮಾನ ಇಲ್ಲವೇ ದೇವರು ? ಒಂದನ್ನು ಆರಿಸು ! " ಎಂಬುದು ರಹೀಮನ ಸಂತರ ಕರೆಯ ತಿರುಳು, ಎಂದು ಗುರುದೇವರು ಅರುಹಿರುವರು. ಆದುದ ರಿಂದ ದೇವರ ಭಕ್ತಿಯೂ, ವಿಷಯಾಸಕ್ತಿಯೂ, ದೇವ ಪ್ರೀತಿಯು ಹಾಗೂ ಅಹಂ ಭಾವ ವು ಇಲ್ಲವೆ ದೇವಭಾವವು ಒಂದೆಡೆ ಇರಲರಿಯವು. ಇನ್ನೊಬ್ಬ ಸಂತರು ಹೇಳುವರು:

ಪೀಯಾ ಚಾಹೈ ಪ್ರೇಮರಸ, ರಾಖಾ ಚಾಹೈ ಮಾನ ।
ಏಕ ಮ್ಯಾನ ಮೇ ದೋ ಖಡ್ಗ ಸುನಾ ನ ಕಾನ ॥

"ಪ್ರೀತಿಯ ರಸವನ್ನು ಕುಡಿಯ ಬಯಸುವಿ. ಅದೇ ಮೇರೆಗೆ ಮನ್ನಣೆಯನ್ನು ಪಡೆಯ ಬಯಸುವಿ. ಅದು ಹೇಗೆ ಸಾಧ್ಯ ? ಒಂದೇ ಒರೆಯಲ್ಲಿ ಎರಡು ಕತ್ತಿಗಳು ಇರ ಬಲ್ಲವೇ ? ಇದನ್ನು ನಾನು ಕಂಡಿಲ್ಲ, ಇಲ್ಲವೇ ಕೇಳಿಲ್ಲ."

ಭಕ್ತಿಯು ಬೆಳೆಯಲು ಮಾನಾಪಮಾನದ ಭಾವನೆಯು ಅಳಿಯಲೇಬೇಕು. ಕೀರ್ತಿಯು ಅಭಿಲಾಷೆಯೂ ಅದರಿಂದ ಲಭಿಸುವ ಸುಖದ ಆಸಕ್ತಿಯೂ ಅಳಿಯಲೇ ಬೇಕು. ಅದರ ಬಗೆಗೆ ಅನಾಸಕ್ತಿ ಇಲ್ಲವೆ ವಿರಕ್ತಿ ಅವಶ್ಯವಾದುದು. ಅದಕ್ಕಾಗಿಯೇ ಶ್ರೀ ಬಾವುಸಾಹೇಬ ಮಹಾರಾಜರವರು "**ಭಕ್ತಿಗೆ ವಿರಕ್ತಿಯು ಮೂಲ**" ಎಂದು ಅರುಹಿ ರುವರು.

ಆತ್ಮಾನಂದದ ದೃಷ್ಟಿಯಿಂದ ಅನಾತ್ಮ ವಿಷಯಗಳ ಸುಖವು ತೀರ ಕ್ಷುದ್ರವಾ ದುದು, ಅದನ್ನೇ ಪಡೆಯ ಬಯಸುವವನಿಗೆ ಆತ್ಮಾನಂದ ಲಭಿಸಲರಿಯದು. "**ವಿಷ ಯೀ ವೈರಾಗ್ಯ ಉಪಜಲೇ ತಯಾಸೀಚ ಜ್ಞಾನ ರಘೂಲೇ।**" "ವಿಷಯ ಸುಖದ

ಬಗೆಗೆ ವಿರಕ್ತನಾದವನೇ ಆತ್ಮಜ್ಞಾನವನ್ನು ಪಡೆಯಬಲ್ಲ" ಎಂಬುದು ಸಮರ್ಥ ರಾಮದಾಸರ ಹೇಳಿಕೆ. "**ಮುಕ್ತಿ ಮಿಚ್ಛಸಿ ಚೇತ್ ತಾತ, ವಿಷಯಾನ್ ವಿಷವತ್ ತ್ಯಜ।**" ನಿನಗೆ ಮುಕ್ತಿಯು ಆತ್ಮಾನುಭವವು ಬೇಕಾಗಿದ್ದರೆ, ವಿಷಯಗಳನ್ನು ವಿಷವೆಂದು ಬಗೆದು ಅವನ್ನು ತ್ಯಜಿಸು" ಎಂಬುದು ಹಿರಿಯರ ಬೋಧೆ.

ಆದರೆ ಕೆಲವರು ವಿಷಯ ಸುಖವು ಆತ್ಮಾನಂದದ ಅಲ್ಪಾಂಶ ಎಂದು ಬಗೆವರು. ಇದು ಗುರುದೇವರಿಗೆ ಸುತರಾಂ ಮಾನ್ಯವಿರಲಿಲ್ಲ. ಬ್ರಹ್ಮಾನಂದವು ಮಾನುಷಾನಂದದ ನೂರು ಪರಾರ್ಧದಷ್ಟು ಹಿರಿದಾದುದು ಎಂದು **ತೈತ್ತಿರೀಯ ಉಪನಿಷತ್ತಿನಲ್ಲಿ** ಆರುಹಲಾಗಿದೆ, ನಿಜ. ಆದರೆ ಗುರುದೇವರ ಅಭಿಪ್ರಾಯದ ಮೇರೆಗೆ, "They differ not in **degree** but in kind."[5],"ಅವುಗಳಲ್ಲಿ ಪ್ರಮಾಣಭೇದವಷ್ಟೇ ಇರುವದಿಲ್ಲ, ಗುಣಭೇದವೂ ಇರುವದು." "The bliss of Self-**Relisation** is entirely of its own kind, absolutely **Suigeneris**."[6] "ಆತ್ಮ ಸಾಕ್ಷಾತ್ಕಾರದಿಂದ ಲಭಿಸುವ ಆನಂದವು, ಪೂರ್ತಿಯಾಗಿ ತನ್ನದೇ ಆದ ಜಾತಿಯದಿರುವದು, ತುಂಬ ಅನನ್ಯ-ಸಾಮಾನ್ಯವಾದುದು ಇರುವದು" ಎಂದು ಗುರುದೇವರು ಅರುಹಿರುವರು.

ಇದೇ ಸಂದರ್ಭದಲ್ಲಿ ಗುರುದೇವರು ಇನ್ನೊಂದು ವಿಷಯವನ್ನು ಈ ರೀತಿ ವಿಶದಗೊಳಿಸಿರುವರು:

"To describe God as a beloved either in the masculine or in the feminine is equally wrong. The love of God stands in a category apart from any sex-relation, Eroticism has no place in mysticism."[8]

ಪರಮಾತ್ಮನನ್ನು ತನ್ನ ನಲ್ಲನೆಂದಾಗಲೀ, ನಲ್ಲೆಯೆಂದಾಗಲೀ ಬಣ್ಣಿಸುವದು ತೀರ ತಪ್ಪು. ಪರಮಾತ್ಮನ ಪ್ರೀತಿಯು ಲೈಂಗಿಕ ಸಂಬಂಧದಿಂದ ಪೂರ್ತಿಯಾಗಿ ಭಿನ್ನವಾದ ಒಂದು ಸ್ವತಂತ್ರ ತತ್ವವಿರುವದು. ಆದುದರಿಂದ ಶೃಂಗಾರಕ್ಕೆ ಪರಮಾರ್ಥದಲ್ಲಿ ಯಾವ ಬಗೆಯ ಸ್ಥಾನವೂ ಇರುವದಿಲ್ಲ." ಇದು ಶ್ರೀಗುರುದೇವರ ಖಂಡಿತವಾದ ಅಭಿಪ್ರಾಯ.

ಆದುದರಿಂದ ಭಕ್ತಿ-ವಿರಕ್ತಿಗಳ, ರಾಗ-ವಿರಾಗಗಳ, ಸಮನ್ವಯದಿಂದಲೇ ಅನುಭೂತಿಯು ಲಭಿಸಬಲ್ಲದು. ಅನುಭೂತಿಯಲ್ಲಿ ಇವೆರಡರ ಸಮನ್ವಯವು ಹೇಗೆ ಆಗುವದು ಎಂಬುದನ್ನು ಶ್ರೀ ಭಾಗವತವು ಈ ರೀತಿ ಬಣ್ಣಿಸಿರುವದು.

ಭಕ್ತಿ : ಪರೇಶಾನುಭವೋ ವಿರಕ್ತಿ :
ಅನ್ಯತ್ರ ಚೈಷ ತ್ರಿಕ್ ಏಕಕಾಲ: ।
ಪ್ರಪದ್ಯಮಾನಸ್ಯ ಯಥಾಶ್ನತ: ಸ್ಯು :
ತುಷ್ಟಿ : ಪುಷ್ಟಿ : ಕ್ಷುದಪಾಯೋನುಘಾಸವಮ್ ।।11-2-42।।

5-6) C.S.P. 221 8) P.G.H.P. 237

"ಭಗವಂತನಿಗೆ ಎಲ್ಲವನ್ನು ಅರ್ಪಿಸಿದ ಭಕ್ತನು ಏಕಕಾಲಕ್ಕೆ ಭಕ್ತಿ-ವಿರಕ್ತಿ-ಭಗವಂತನ ದರ್ಶನ- ಈ ಮೂರು ವರಗಳನ್ನು ಪಡೆವನು. ಭೋಜನವನ್ನು ಮಾಡುವ ಮನುಜನು ತುತ್ತು ತುತ್ತಿಗೆ ಪುಷ್ಟಿ-ತುಷ್ಟಿ-ಹಸಿವಿನ ಅಭಾವ ಇವನ್ನು ಅನುಭವಿಸುವಂತೆ, ಭಕ್ತನು ಅವನ್ನು ಅನುಭವಿಸುವನು."

ಏಕಾಂತ-ಲೋಕಾಂತ ಸಮನ್ವಯ :

ಇದು ನೈತಿಕ ವರ್ಗಕ್ಕೆ ಸೇರಿದ ಮೊದಲನೆಯ ಗುಂಪು, ಇವೆರಡರಲ್ಲಿ ಏಕಾಂತ-ಪ್ರೀಯರು ವಿರಲ, ಸಾಮಾನ್ಯವಾಗಿ ಎಲ್ಲರೂ ಲೋಕಾಂತಪ್ರಿಯರು. Man is a social animal "ಮನುಜನು ಸಮಾಜ ಪ್ರಿಯನು." ಅವನಿಗೆ ಏಕಾಂತದ ಬೇಸರಿಕೆ. O Solitude, where are thy charms that sages have seen in thy face ? "ಅಮ್ಮಾ, ಏಕಾಂತ ದೇವಿಯೇ ಸಾಧು-ಸಂತರು ನಿನ್ನ ಮುಖದಲ್ಲಿ ಕಂಡ ಸೌಂದರ್ಯವು ಅದೆಲ್ಲಿ?" ನನಗೇನೂ ಅದು ಕಾಣದಲ್ಲಾ! ಎಂದು ಗೊಣಗುವವರೇ ವಿಪುಲ. ಲೋಕಾಂತ-ಪ್ರಿಯರಲ್ಲಿಯೂ ಎರಡು ಬಗೆಯ ಜನ.

ಕಾವ್ಯ-ಶಾಸ್ತ್ರ-ವಿನೋದೇನ । ಕಾಲೋ ಗಚ್ಛತಿ ಧೀಮತಾಮ್ ।
ವ್ಯಸನೇನ ತು ಮೂರ್ಖಾಣಾಂ । ನಿದ್ರಯಾ ಕಲಹೇನ ವಾ॥

"ಬುದ್ಧಿವಂತರು ಕಾವ್ಯ, ಶಾಸ್ತ್ರ ವಿನೋದದಿಂದ ತಮ್ಮ ಕಾಲವನ್ನು ಕಳೆಯುವರು. ಆದರೆ ಮೂರ್ಖರು ವ್ಯಸನ-ನಿದ್ರೆ-ಕಲಗಹದಲ್ಲಿ ಕಾಲ ಕಳೆವರು."

ಲೋಕಾಂತದಲ್ಲಿ ಬುದ್ಧಿಶಾಲಿಗಳೂ, ಮೂರ್ಖರೂ ಇರುವಂತೆ, ಏಕಾಂತದಲ್ಲಿಯೂ ಈ ಎರಡೂ ಬಗೆಯ ಜನರು ಇರುವರು. ಲೋಕಾಂತದಲ್ಲಿ ವ್ಯಸನಿಗಳೂ, ಆಲಸಿಗರೂ ಇರುವಂತೆ, ಏಕಾಂತದಲ್ಲಿಯೂ ಅಂಥವರು ಇರುವರು ನಿಜ. ಆದರೆ ಏಕಾಂತವನ್ನು ಪ್ರೀತಿಸುವವರೆಲ್ಲರು ಆಲಸಿಗರು, ಸೋಮಾರಿಗಳು, ನಿಷ್ಕ್ರೀಯರು ಎಂದು ಬಗೆದು, ಏಕಾಂತವನ್ನೇ ಲೋಕಾಂತ-ಪ್ರಿಯರು ಹಳಿಯುವದುಂಟು. ಅದಕ್ಕಾಗಿ ಅವರ ತಪ್ಪು ತಿಳುವಳಿಕೆಯನ್ನು ತಿದ್ದಲು, ಗುರುದೇವರು ಯತ್ನಿಸಿರುವರು. ಆದುದರಿಂದ ಪರಮಾರ್ಥ ಪಥದಲ್ಲಿ ಏಕಾಂತದ ಸರಿಯಾದ ಪ್ರಯೋಜನವೇನು ? ಲೋಕಾಂತವನ್ನು ಸರಿಯಾಗಿ ಹೇಗೆ ಉಪಯೋಗಿಸಬೇಕು ? ಅವೆರಡರಲ್ಲಿ ಸಮನ್ವಯ ಸಾಧಿಸುವದೆಂತು ? ಎಂಬುದನ್ನು ಅವರ ಮಾತಿನಲ್ಲಿ ಅರುಹಲಿರುವೆ.

ಪ್ರಯೋಜನ : ಏಕಾಂತದಲ್ಲಿ ಆತ್ಮಜ್ಞಾನ, ಆತ್ಮಚಿಂತನ, ಆತ್ಮದರ್ಶನ, ಆತ್ಮಾನಂದ ಲಭಿಸಬಲ್ಲವು ಸಾಧಕನು ಅದರಲ್ಲಿ ಆತ್ಮಕಲ್ಯಾಣದೊಡನೆ ಲೋಕಕಲ್ಯಾಣಕ್ಕಾಗಿ ಅವಶ್ಯವಿರುವ ಬೆಳಕು, ಬಲಗಳನ್ನು ಪಡೆಯುವನು. ಮಿಲ್ಟನ್ ಕವಿಯು (Milton) ಬಣ್ಣಿಸುವ ಮೇರೆಗೆ:

"Solitude is the nurse of Virtue, where Virtue plumes her feathers, which were all too ruffled in the battle of active life."

"ಏಕಾಂತವು ಸದ್ಗುಣಗಳನ್ನು ಪೋಷಿಸುವದು. ಏಕಾಂತದಲ್ಲಿ ಸದ್ಗುಣ ಪಕ್ಷಿಯು ಸಕ್ರಿಯ ಜೀವನ-ಕಲಹದಲ್ಲಿ ಅಸ್ತವ್ಯಸ್ತವಾದ ತನ್ನ ಗರಿಗಳನ್ನು ಸರಿಪಡಿಸಿಕೊಳ್ಳುವದು."

ಗುರುದೇವರು ಏಕಾಂತದ ಅಗತ್ಯವನ್ನೂ ಹಿರಿಮೆಯನ್ನೂ ಈ ರೀತಿ ಬಣ್ಣಿಸಿರುವರು:

"Yoga in my opinion, may be defined as a positive, persistant and final determination to seek out the truth. Such a determination necessarily requires solitude in the initial stages, in order that the virtues necessary for active life, may be gathered in the secrets of retirement. Such a solitude is the fountaion-head of energy and strength, virtue, and joy. Activity to be productive, must be fed by retired thought..... Solitude is not meant for inaction; on the contrary, it is the nurse of supreme action. Human faculties require to be fed in solitude and in transcendental and fruitful inaction. "As oft as I have been among men." Says seneca "I have returned home less a man than I was before." And in order that this should not be the case, one must need have recourse to solitude and contemplation."[9]

"ನನ್ನ ಅಭಿಮತದ ಮೇರೆಗೆ **ಯೋಗ**ವೆಂದರೆ, ಸತ್ಯವನ್ನು ಅರಸುವ ನಿಶ್ಚಿತವಾದ, ಸುಧೀರ್ಘವಾದ ಧೃಢ ಸಂಕಲ್ಪ. ಇಂಥ ಸಂಕಲ್ಪ-ಸಿದ್ಧಿಗೆ ಪ್ರಾಥಮಿಕ ಮಟ್ಟದಲ್ಲಿ **ಏಕಾಂತವು** ಅವಶ್ಯವಾದುದು. ಆಗ ಬಾಹ್ಯ ಜೀವನದಲ್ಲಿಯ ಕಾರ್ಯ ನೆರವೇರಿಸಲು ಅಗತ್ಯವಾದ ಸದ್ಗುಣಗಳನ್ನು ಪಡೆಯುವದು, ರಹಸ್ಯವಾದ ಏಕಾಂತ ವಾಸದಲ್ಲಿ ಸಾಧ್ಯವಾಗಬಲ್ಲದು. ಅಂಥ ಏಕಾಂತವು ಚೈತನ್ಯ-ಬಲಗಳ, ಸದ್ಗುಣ-ಆನಂದಗಳ ಸೆಲೆಯಿರುವದು. ಕಾರ್ಯವು ಯಶಸ್ಸನ್ನು ಪಡೆಯಲು ರಹಸ್ಯದಲ್ಲಿಯ ವಿಚಾರಗಳ ಬೆಂಬಲವನ್ನು ಪಡೆಯಬೇಕಾಗುವದು.... ಏಕಾಂತವು ನಿಷ್ಕ್ರೀಯತೆಗಾಗಿ ಇರುವದಿಲ್ಲ. ಇದರ ಬದಲಾಗಿ, ಅದು ಶ್ರೇಷ್ಠತಮ ಕಾರ್ಯದ ದಾಯಿ ಇರುವದು. ಮಾನವನ ಅಂತ:ಶಕ್ತಿಗಳ ವಿಕಸನಕ್ಕೆ ಏಕಾಂತವಾಸದಲ್ಲಿಯ ಪೋಷಣೆ ಅವಶ್ಯವಾದುದು. ಅದಕ್ಕೆ ಅತೀತವಾದ ಅತಿ ಫಲಕಾರಿಯಾದ "ಅಕರ್ಮವು" ಬೇಕಾಗುವದು.... **ಸೆನೆಕಾ** ಎಂಬ ಸಂತ ಹೇಳುವ : "ನಾನು ಜನರಲ್ಲಿ ಅಲೆದಾಡುವಾಗ, ಪ್ರತಿಯೊಂದು ಸಲ ನನ್ನ ಮಾನವತೆಯನ್ನು ಕೆಲಮಟ್ಟಿಗೆ ಕಳೆದುಕಂಡು ಮನಗೆ ಮರಳಿರುವೆ." ಆದುದರಿಂದ ಈ ಬಗೆಯ ಪರಿಣಾಮ ಒದಗಬಾರದೆಂದು ಮನುಜನು ಏಕಾಂತವನ್ನು, ಧ್ಯಾನವನ್ನು ಮಾಡುವದು ಅವಶ್ಯವಾಗಿದೆ.

9) P. E. PP 177-178

ಲೋಕಾಂತವನ್ನು ಲೋಕ-ಕಲ್ಯಾಣಕ್ಕಾಗಿ ಉಪಯೋಗಿಸಬೇಕು. ಲೋಕ ಕಲ್ಯಾಣವು ಸಾಮಾನ್ಯ ವಿಷಯವಲ್ಲ. ಜನರ ದು:ಖ ನಿವಾರಣ, ಅವರಿಗೆ ಸನ್ಮಾರ್ಗ ದರ್ಶನ, ಅವರಲ್ಲಿ ಭಕ್ತಿಭಾವ ನಿರ್ಮಾಣ.... ಇವು ಲೋಕ-ಕಲ್ಯಾಣದ ಪ್ರಧಾನ ಅಂಗಗಳು. ಅವನ್ನು ನೆರವೇರಿಸಲು ಸಮರ್ಥ ವ್ಯಕ್ತಿಗಳೇ ಬೇಕು. "**ನಾಯಮಾತ್ಮಾ ಬಲಹೀನೇನ ಲಭ್ಯ :।**" "ಆತ್ಮನು ಬಲಹೀನರಿಗೆ ದೊರೆಯದಂತೆ" "**ನೇದಂ ಕಲ್ಯಾಣಂ ಬಲಹೀನೇನ ಸಾಧ್ಯಂ।**" "ಲೋಕ ಕಲ್ಯಾಣವು ಬಲಹೀನರಿಗೆ ಸಾಧ್ಯವಾಗಲರಿಯದು." ಅದಕ್ಕೆ ಬೇಕಾದ ಬೆಳಕು-ಬಲಗಳನ್ನು ಅವರು ಮೊದಲು ಏಕಾಂತದಲ್ಲಿ ಸಂಪಾದಿಸಬೇಕು. ತರುವಾಯ ಅವನ್ನು ಜನರಲ್ಲಿ ಬೀರಬೇಕು. ಆದುದರಿಂದ ಇವುಗಳ ಸಮನ್ವಯ ಅವಶ್ಯ. "**ಮಾಡಿ ಅಭ್ಯಾಸವನು ಮೂಡುವದು ಜಗದಲ್ಲಿ.**" ಈ ಬಗೆಯ ಸಮನ್ವಯದ ಅಗತ್ಯವನ್ನು ನಮ್ಮ ಹಿಂದಿನ ಹಿರಿಯರು ಬೋಧಿಸಿರುವರು. ಶ್ರೀ ರಾಮದಾಸರು ಹೇಳಿರುವುದೇನೆಂದರೆ :

ಅಖಂಡ ಏಕಾಂತ ಸೇವಾವಾ । ಅಭ್ಯಾಸಚಿ ಕರೀತ ಜಾವಾ ।
ಕಾಳ ಸಾರ್ಥಕಚಿ ಕರಾವಾ । ಜನಾಸಹಿತ ।।

"ಏಕಾಂತದಲ್ಲಿ ಅಖಂಡವಾಗಿ ಅಭ್ಯಾಸ ಮಾಡಬೇಕು. ತಾವು ಬೆಳಕು ಬಲವನ್ನು ಪಡೆಯಬೇಕು. ತರುವಾಯ ಜನರ ಕಲ್ಯಾಣ ಕಾರ್ಯದಲ್ಲಿ ತೊಡಗಿ, ಕಾಲವು ಸಫಲವಾಗುವಂತೆ ವರ್ತಿಸಬೇಕು" ಎಂಬುದು ಅವರ ಬೋಧೆಯ ತಿರುಳು. ನಮ್ಮ ಸರ್ವಜ್ಞನು ಇದೇ ಬಗೆಯ ಸಮನ್ವಯವನ್ನು ಅರುಹಿರುವ : 3

ಏಕಾಂತದಿ ಕುಳಿತು, ಪಿನಾಕಿಯನು ನೆನೆ ನೆನೆದು ।
ಲೋಕದ ನಡೆಯ ನಡೆದಾತ, ಸರುವರೊಳು ।
ಸಾಕಾಗಿ ಹೋಹ, ಸರ್ವಜ್ಞ ।।

"ಭಗವಂತನನ್ನು ಏಕಾಂತದಲ್ಲಿ ಸಂತತವಾಗಿ ನೆನೆದು, ಅತನ ಅನುಗ್ರಹವನ್ನೂ ಅನುಭೂತಿಯನ್ನೂ ಪಡೆದು, ಜನರ ಕಲ್ಯಾಣಕ್ಕಾಗಿ ಅವರಲ್ಲಿ ಬೆರೆಯುವ ಮಹಾತ್ಮನು ಕೊನೆಗೆ ಮುಕ್ತಿಯನ್ನು ಪಡೆಯದಿರನು." ಇಲ್ಲಿಯೂ ಏಕಾಂತ-ಲೋಕಾಂತದ ಸಮನ್ವಯ-ಸಂದೇಶವನ್ನು ಕಾಣಬಹುದು.

ನೀರ ಬೊಬ್ಬಳಿ ನೆಚ್ಚಿ । ಸಾರಿ ಕೆಡದಿರು ಮರುಳೆ ।
ಸಾರ ಗುಣಿಯಾಗು, ನಿಜತಿಳಿ, ಸರುವರೊಳು ।
ಕಾರಣಿಕನಾಗು, ಸರ್ವಜ್ಞ।।

"ಕ್ಷಣಭಂಗುರ ದೇಹವನ್ನು, ವಿಷಯಗಳನ್ನು ಪ್ರೀತಿಸಿ, ಅವುಗಳಲ್ಲಿ ಆಸಕ್ತನಾಗಿ ಕೆಡಬೇಡ. ಸಾರಭೂತನಾದ ಸದ್ಗುಣಗಳನ್ನು ಬೆಳಿಸಿ, ಅಂತರಾತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಸಕಲ ಲೋಕದ ಕಲ್ಯಾಣ ಕಾರ್ಯದಲ್ಲಿ ನಿರತನಾಗು."

ಪ್ರಯತ್ನ-ಪ್ರಸಾದ ಸಮನ್ವಯ :

ಇದು **ನೈತಿಕ ವರ್ಗದ** ಸಾಧನಗಳ ಎರಡನೆಯ ಗುಂಪು. ಇಲ್ಲಿ ಪ್ರಯತ್ನ-ಪ್ರಸಾದಗಳ ಸಂಬಂಧ. ಸಮನ್ವಯಗಳ ವಿಚಾರ ಮಾಡಲಿರುವೆ. ಜನರಲ್ಲಿ ಈ ವಿಷಯವನ್ನು ಕುರಿತು ಎರಡು ವಾದಗಳು ಪ್ರಚಲಿತವಿರುವವು: ಒಂದು **ಪ್ರಯತ್ನವಾದ**, ಎರಡನೆಯದು **ಪ್ರಸಾದವಾದ**. ಬಲ್ಲವರು ಇವೆರಡರಲ್ಲಿಯ ದೋಷಗಳನ್ನು ಅರುಹಿ, ಅವೆರಡರ ಸಮನ್ವಯವನ್ನು ಬೋಧಿಸಿರುವರು. ಕೇವಲ ಪ್ರಯತ್ನವಾದದಿಂದ ಅಹಂಕಾರ ಬೆಳೆಯುವದು. ಕೇವಲ ಪ್ರಸಾದವಾದದಿಂದ ಆಲಸ್ಯವು ಮೊಳೆಯುವದು. ಅವೆರಡರಿಂದಲೂ ಕಾರ್ಯಹಾನಿಯೇ ಆಗಲಿರುವದು. ಆದರೆ ಇವೆರಡರ ಸಂಗಮವಾದರೆ ಪ್ರಯತ್ನ-ಪ್ರಿಯತೆಯಿಂದ ಉತ್ಸಾಹವೂ, ಪ್ರಸಾದ-ಪ್ರಿಯತೆಯಿಂದ ವಿನಯವೂ, ಉಂಟಾಗಿ, ಅವುಗಳಿಂದ ಕೆಲಸವು ಕೈಗೂಡಲು ಅನುಕೂಲವಾಗುವದು. ಮೇಲಾಗಿ ಪ್ರಯತ್ನವು ಕೆಲಮಟ್ಟಿಗೆ ನಮ್ಮ ಅಧೀನವಿದ್ದರೂ, ಅದರ ಫಲವು ಪೂರ್ತಿಯಾಗಿ ಪರಮಾತ್ಮನ ಕೃಪೆಯ ಪ್ರಸಾದದ ಬೆಂಬಲವಿಲ್ಲದೆ, ನಮ್ಮ ಯತ್ನವು ಅದನ್ನು ಪಡೆಯಲರಿಯದು. ಶ್ರೀ ಗುರುದೇವರು ಪ್ರಯತ್ನ-ಪ್ರಸಾದಗಳ ಸಂಬಂಧವನ್ನು ಈ ಬಗೆಯಾಗಿ ಅರುಹಿರುವರು :

"Whatever man may do, God has the power, either to extend its goodness, or to destroy its badness. Man may make his own effort and yet it remains with God to crown that effort with success by His Grace."[10]

"ಮಾನವನು ಏನನ್ನೂ ಮಾಡಿದರೂ ಅದರ ಒಳಿತನ್ನು ಬೆಳೆಸುವ, ಇಲ್ಲವೆ ಕೆಡಕನ್ನು ಅಳಿಸುವ ಸಾಮರ್ಥ್ಯವು ಭಗವಂತನಲ್ಲಿರುವದು. ಮನುಜನು ತನ್ನ ಪ್ರಯತ್ನವನ್ನು ತಾನು ಮಾಡಬಲ್ಲ. ಆದರೆ ಅದಕ್ಕೆ ತನ್ನ ಕರುಣದ ಬಲದಿಂದ ಗೆಲುವನ್ನು ನೀಡುವದು ಭಗವಂತನನ್ನೇ ಕೂಡಿರುವುದು."

ಆದುದರಿಂದ, ನಮ್ಮ ಪ್ರಯತ್ನವು ಪರಮಾತ್ಮನ ದಿವ್ಯನಾಮದ ನೆನವನ್ನು ಒಳಗೊಂಡಿರಬೇಕು. "**ಕರಸೇ ಕಾಮ, ಮನಸೇ ಧ್ಯಾನ.**" "ಕೈಯಿಂದ ಕೆಲಸ, ಮನಸ್ಸಿನಿಂದ ಧ್ಯಾನ" ನಡೆಯಬೇಕು. ಅದು ಪರಮಾತ್ಮನಿಗೆ ಅರ್ಪಿತವಾಗಿರಬೇಕು. "ನನಗೆ ಸರಿದೋರಿದಂತೆ ನಾನು ಯತ್ನಿಸುವೆ, ನಿನಗೆ ಸರಿಕಂಡ ಫಲವನ್ನು ನೀನು ನೀಡು" "Let Thy will be done" "ನಿನ್ನಿಷ್ಟದಂತೆ ಆಗಲಿ!" ಎಂಬ ಸರ್ವಾರ್ಪಣ-ಭಾವದಿಂದ ಪ್ರಯತ್ನ ನಡೆಯಲಿ. ಅದೇ ಮೇರೆಗೆ, ಸಾಧ್ಯವಾದರೆ ಯತ್ನವು ಆತನ ಪ್ರೇರಣೆಯಿಂದ ಸಾಗಲಿ! ಈ ಬಗೆಯ ಪ್ರಯತ್ನಗಳೇ ಪರಮಾತ್ಮನ ಪ್ರಸಾದವನ್ನು ಪಡೆಯಬಲ್ಲವು.

ಪರಮಾತ್ಮನ ಪ್ರಸಾದವು ನಮ್ಮ ಪ್ರಯತ್ನಕ್ಕೆ ಅನುಗುಣವಾದುದು ಇರುವದು. ಇಷ್ಟೇ ಅಲ್ಲ, ಅವನು ನಮ್ಮ ಪ್ರಯತ್ನವನ್ನೂ ಎಣಿಸುವದಿಲ್ಲ. ನಮ್ಮ ಮೇಲೆ ಪ್ರಸಾದದ ಮಳೆಯನ್ನೇ ಕರೆಯುವನು. ಪರಮಾತ್ಮನು ಅತಿ ಉದಾರನು, ಅತಿ ಸಂಪನ್ನನು.

10) P. G. H. P. 120

ಆದರೆ ಇಂಥ ಪ್ರಸಾದ ಲಭಿಸಲು ನಮ್ಮ ಅಂತರಂಗದಲ್ಲಿ ಭಾವವು ಬಲಿಯಬೇಕು. ಶರಣಾಗತಿಯು ಬೆಳೆಯಬೇಕು. ಭಾವದಂತೆ ದೇವ, ಭಾವವಿರುವಲ್ಲಿ ದೇವನಿರುವ, ದೇವ ಬರುವ. ಇದು ಎಲ್ಲ ಸಂತರಂತೆ ಗುರುದೇವರ ಸನಾತನ ಸಿದ್ಧಾಂತ. ಆದುದರಿಂದ ಶ್ರೀ ನಿಂಬರಗಿ ಮಹಾರಾಜರು ಅರುಹಿದ ಮೇರೆಗೆ :

ಸರುವ ಕಾಲದಲಾತ್ಮ-ಧ್ಯಾನದಲಿಯಿರುತಲಿರು,
ದೇಹವೊಂದನೆ ದುಡಿಸಿ ಸವೆಯಿಸಯ್ಯ ।
ವರವಿವೇಕದಿ ತನ್ನ ಭಾವವನು ಜೀವವನು,
ಆತ್ಮನಲ್ಲಿಯೆಯಿರಿಸಿ ಬೆರೆಯಿಸಯ್ಯ ॥ (ಜೋಧಸುಧೆ)

ಈ ಬಗೆಯ ಪ್ರಯತ್ನ-ಪ್ರಸಾದಗಳ ಸಮನ್ವಯವೇ ನಮ್ಮ ಬಯಕೆಯನ್ನು ಪೂರೈಸಬಲ್ಲದು.

ಜ್ಞಾನೇಂದ್ರಿಯಗಳ ಸಮನ್ವಯ :

ಇನ್ನು **ಪಾರಮಾರ್ಥಿಕ ವರ್ಗದ** ಸಾಧನಗಳ ಸಮನ್ವಯವನ್ನು ಅರಿಯುವಾ. ಈ ವರ್ಗದ ಮೊದಲನೆಯ ಈ ಗುಂಪಿನಲ್ಲಿ ನಾಲ್ಕು ಜ್ಞಾನೇಂದ್ರಿಯಗಳು ಒಳಗೊಂಡಿರುವವು: ಬುದ್ಧಿ(Intellect), ಭಾವನೆ(Feeling), ಸಂಕಲ್ಪ(Will), ಮತ್ತು ಪ್ರತಿಭೆ ಇಲ್ಲವೇ ಅಂತ:ಪ್ರಜ್ಞೆ (Intuition). ಇವುಗಳಲ್ಲಿ ಮೊದಲನೆಯ ಮೂರು ಭೌತಿಕ ಹಾಗೂ ಮಾನಸಿಕ ಪ್ರಪಂಚದ ಜ್ಞಾನವನ್ನು ನೀಡುವವು. ನಾಲ್ಕನೆಯದು ಪರಮಾತ್ಮನ ಅನುಭೂತಿಯನ್ನು ದಯಪಾಲಿಸುವದು. ಪ್ರತಿಭೆಯು ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವ ಏಕಮೇವ ಅಂತರಿಂದ್ರಿಯವಿರುವದಾದರೂ, ಸುಪ್ತವಾಗಿರುವ ಅದನ್ನು ಜಾಗ್ರತಗೊಳಿಸುವ ಕಾರ್ಯವನ್ನು ಬುದ್ಧಿ ಭಾವನೆ, ಸಂಕಲ್ಪಗಳೇ ಮಾಡಬಲ್ಲವು. ಬುದ್ಧಿಯು ಭಗವಂತನ ವೈಭವದ ಅರಿವನ್ನು ನೀಡಿ, ಆತನ ಬಗೆಗೆ ಪ್ರೀತಿಯನ್ನು, ಭಕ್ತಿಭಾವವನ್ನು ಬೆಳೆಸುವದು. ತರುವಾಯ ಬೆಳೆದ ಭಕ್ತಿಯು ಸಂಕಲ್ಪವನ್ನು ಪ್ರೇರಿಸಿ, ಅದಕ್ಕೆ ಭಗವಂತನನ್ನು ಪಡೆಯುವ ಸಾಧನವನ್ನು ಮಾಡಹಚ್ಚುವದು. ಈ ಬಗೆಯಾಗಿ ಪಾರಮಾರ್ಥಿಕ ಸಾಧನವನ್ನು ಅನನ್ಯ ಭಾವದಿಂದ ನಡೆಸಿ, ಅದು ಪ್ರತಿಭೆಯನ್ನು ಎಚ್ಚರಿಸಬಹುದು. ಮತ್ತು ಕೊನೆಗೆ ಎಚ್ಚತ್ತ ಪ್ರತಿಭೆಯು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಈ ಬಗೆಯ ನಿಕಟ ಸಂಬಂಧ-ಸಹಯೋಗಗಳು ಇವುಗಳಲ್ಲಿ ನೆಲೆಸಿರುವವು.

ಇವುಗಳ ಪರಸ್ಪರ ಸಂಬಂಧ'ವನ್ನೂ ಸಮನ್ವಯವನ್ನೂ ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು :

"It has been very often supposed that for mystical experience, no separate faculty like intuition need be requisitioned, but that intellect, feeling and will might suffice, to have a full experience of God. Now, it is a matter of common knowledge

that even for heights to be reached in artistic, scientific or peotic activity, a certain amount of direct, immediate, intuitive contact with Reality is required. Far more is this the case, in the matter of mystical experience, Intuition. far from contradicting intelligence, feeling or will does penetrate and lie at the back of them all. Intuition would not deny to Mysticism, a title to philosophy if intellect required it. As it connotes a determinative effort towards the acquisition of Reality, it implies a definite. prolonged and continuous exercise of will. As feeling brings the subject and the object into more intimate contact, than any other psychological process, it also becomes a vital part of the process of realisation. Thus it seems that intelligence, will and feeling are all necessary in the case of mystical endeavour. Only intuition must back them all."[12]

"ಪಾರಮಾರ್ಥಿಕ ಅನುಭೂತಿಯನ್ನು ಪಡೆಯಲು, ಪ್ರತಿಭೆಯಂಥ ಸ್ವತಂತ್ರ ಇಂದ್ರಿಯವನ್ನು ಕಲ್ಪಿಸುವ ಅಗತ್ಯವಿಲ್ಲ ಎಂದು ಅನೇಕ ಸಲ ಭಾವಿಸಲಾಗಿದೆ. ಭಗವಂತನ ಪೂರ್ಣ ಅನುಭೂತಿಗಾಗಿ ಬುದ್ಧಿ ಭಾವನೆ, ಸಂಕಲ್ಪಗಳು ಸಾಕಾಗಬಹುದೆಂದು ಬಗೆಯಲಾಗಿದೆ. ಆದರೆ ಕಲಾತ್ಮಕ, ವೈಜ್ಞಾನಿಕ ಇಲ್ಲವೆ ಕವಿತ್ವದ ಕಾರ್ಯದಲ್ಲಿಕೂಡ ಉನ್ನತ ಮಟ್ಟವನ್ನು ಮುಟ್ಟಲು, ಸತ್-ತತ್ವದ ಪ್ರತ್ಯಕ್ಷ ನೇರವಾದ, ಪ್ರಾತಿಭಸಂಸ್ಪರ್ಶವು ಕೆಲ ಮಟ್ಟಿಗೆ ಬೇಕಾಗುವದು ಎಂಬುದು ಸರ್ವವಿದಿತ ವಿಷಯ. ಅಂದ ಮೇಲೆ, ಪಾರಮಾರ್ಥಿಕ ಅನುಭೂತಿಗೆ ಅದು ಇದಕ್ಕೂ ಮಿಗಿಲಾಗಿ ಬೇಕಾಗುವದು ಸಹಜವೇ ಸರಿ. ಪ್ರತಿಭೆಯು ಬುದ್ಧಿ ಭಾವನೆ, ಸಂಕಲ್ಪಗಳನ್ನು ನಿಷೇಧಿಸುವದಿಲ್ಲ. ಇಷ್ಟೇ ಅಲ್ಲ; ಅದು ಅವುಗಳನ್ನು ಆಳವಾಗಿ ಸೇರಿ, ಅವೆಲ್ಲವುಗಳನ್ನು ಬೆಂಬಲಿಸುತ್ತದೆ. ಬುದ್ಧಿಗೆ ಬೇಕಾಗಿದ್ದರೆ, ಪ್ರತಿಭೆಯು ಪರಮಾರ್ಥಕ್ಕೆ, ದರ್ಶನದ ಪದವಿಯನ್ನು ನಿರಾಕರಿಸಲರಿಯದು. ಸತ್-ತತ್ವವನ್ನು ಪಡೆಯುವ ನಿಶ್ಚಯಾತ್ಮಕ ಪ್ರಯತ್ನವನ್ನು ಸೂಚಿಸುವ ಮೂಲಕ, ಅದು ಸಂಕಲ್ಪದ ನಿರ್ದಿಷ್ಟವಾದ, ಸುದೀರ್ಘ, ಸತತವಾದ ಕಾರ್ಯವನ್ನು ಒಳಗೊಂಡಿರುವದು. ಮತ್ತು ಭಾವನೆಯು ವ್ಯಕ್ತಿ-ವಸ್ತುಗಳ ನಿಕಟ ಸಂಪರ್ಕವನ್ನು ಬೇರಾವ ಮಾನಸಿಕ ಪ್ರಕ್ರಿಯೆಗಳಿಗಿಂತ ಹೆಚ್ಚಾಗಿ ನಿರ್ಮಿಸಲಿರುವದರಿಂದ, ಅದೂ ಕೂಡ ಅನುಭೂತಿಯ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುವದು. ಈ ಬಗೆಯಾಗಿ ಬುದ್ಧಿ ಭಾವನೆ ಮತ್ತು ಸಂಕಲ್ಪಗಳು ಅನುಭೂತಿಯನ್ನು ಪಡೆಯುವ ಸಾಧನಕ್ಕೆ ಅವಶ್ಯವಾಗಿರುವವು ಮಾತ್ರ ಅವನ್ನು ಪ್ರತಿಭೆಯು ಬೆಂಬಲಿಸಬೇಕು.

12) Dhyana Gita P - 34

ಯೋಗ ಸಮನ್ವಯ :

ಇದು ಪಾರಮಾರ್ಥಿಕ ವರ್ಗದ ಸಾಧನಗಳ ಎರಡನೆಯ ಗುಂಪು. ಇದು ಗೀತೆಯಲ್ಲಿಯ ನಾಲ್ಕು ಪ್ರಧಾನ ಯೋಗಗಳನ್ನು ಒಳಗೊಂಡಿರುವದು. **ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ** ಮತ್ತು **ಧ್ಯಾನಯೋಗ**, ಇವು ಆ ನಾಲ್ಕು ಯೋಗಗಳು. ಇವುಗಳ ಸ್ವರೂಪ-ಕಾರ್ಯಗಳನ್ನೂ, ಪ್ರಧಾನ ಸಾಧನವಾದ ನಾಮಯೋಗದೊಡನೆ ಗುರುದೇವರು ಕಾಣಿಸಿದ ಇವುಗಳ ಸಮನ್ವಯವನ್ನೂ ಕಿರಿದರಲ್ಲಿ ವಿವರಿಸುವೆ.

ಈ ಯೋಗ-ಚತುಷ್ಪಯದ ಸ್ವರೂಪ ಕಾರ್ಯಗಳನ್ನು ಗುರುದೇವರ **"ಧ್ಯಾನಗೀತೆ"**ಯಲ್ಲಿ ಈ ಬಗೆಯಾಗಿ ಬಣ್ಣಿಸಲಾಗಿದೆ.

"The Yoga or the Path of union with Divinity of the Gita, has four avenues especially designed to train the four main faculties of a seeker. The **Jnanayoga** trains the intellect and teaches it discrimination and insight. The **Bhaktiyoga** sublimates the emotions and makes them culminate in dedicated devotion. the **Karmayoga** trains the will and teaches it detachment and dedication, while the **Dhyanayoga** trains the mind proper and teaches it concentration. When all these faculties are sufficiently developed. and when discrimination, devotion, dedication and concentration are fused together in **Nama Divine**, they would awaken the dormant intuition in the seeker, which would give him glimpses of Reality and enable him to enjoy the blessed vision and bliss of God.."[12]

"ಗೀತೆಯಲ್ಲಿ ಯೋಗವು-ಭಗವಂತನಲ್ಲಿ ಬೆರೆಯುವ ಪಥವು-ನಾಲ್ಕು ಕಿರಿಯ ವರ್ಗಗಳಿಂದ ಕೂಡಿರುವದು. ಅವು ಸಾಧಕನ ಪ್ರಧಾನ ಇಂದ್ರಿಯಗಳಿಗೆ ವಿಶೇಷ ತರಬೇತಿಯನ್ನು ನೀಡಲು ನಿರ್ಮಿತವಾಗಿವೆ. ಜ್ಞಾನಯೋಗವು ನಿತ್ಯಾ-ನಿತ್ಯ ವಿವೇಕವನ್ನೂ ಒಳನೋಟವನ್ನು ಕಲಿಸುವದು. ಭಕ್ತಿಯೋಗವು ಭಾವನೆಗಳನ್ನು ಉದಾತ್ತಗೊಳಿಸುವದು ಮತ್ತು ಅವನ್ನು ಅರ್ಪಣಯುಕ್ತ ಭಕ್ತಿಯಲ್ಲಿ ಪರಿಣತಗೊಳಿಸುವದು. ಕರ್ಮಯೋಗವು ಸಂಕಲ್ಪಕ್ಕೆ ಅನಾಸಕ್ತಿಯನ್ನೂ ಅರ್ಪಣಭಾವವನ್ನೂ ಕಲಿಸುವದು. ಮತ್ತು ಧ್ಯಾನಯೋಗವು ಮನಸ್ಸಿಗೆ ಏಕಾಗ್ರತೆಯನ್ನು ಕಲಿಸುತ್ತದೆ. ಈ ಬಗೆಯಾಗಿ, ಎಲ್ಲ ಇಂದ್ರಿಯಗಳು ಸಾಕಷ್ಟು ಬೆಳೆದವೆಂದರೆ, ಬಲವುಳ್ಳನಾದವೆಂದರೆ, ಅವುಗಳಲ್ಲಿಯ ವಿವೇಕವು, ಭಕ್ತಿಯು, ಅರ್ಪಣಭಾವವು, ಏಕಾಗ್ರತೆಯು, ಇವೆಲ್ಲ ಭಗವಂತನ ದಿವ್ಯನಾಮದಲ್ಲಿ ಬೆರೆತವೆಂದರೆ, ಅವು ಸಾಧಕನಲ್ಲಿಯ ಗುಪ್ತ ಪ್ರತಿಭೆಯನ್ನು ಜಾಗ್ರತಗೊಳಿಸು

ವವು. ಮತ್ತು ಆತನಿಗೆ ಭಗವಂತನ ದಿವ್ಯ ದರ್ಶನಾನಂದಗಳ ಅನುಭವಗಳನ್ನು ನೀಡುವವು."

ಇವುಗಳ ಸಮನ್ವಯದ ಪದ್ಧತಿಯನ್ನು ಗುರುದೇವರು ಈ ರೀತಿ ಕಾಣಿಸಿರುವರು:

ಈ ಯೋಗಗಳು ಭಗವಂತನನ್ನು ಸಾಕ್ಷಾತ್ಕರಿಸಬಲ್ಲ ಸ್ವತಂತ್ರ ದಾರಿಗಳಲ್ಲ. ಮೇಲೆ ವಿವರಿಸಿದ ಮೇರೆಗೆ ಇವು ಸಾಕ್ಷಾತ್ಕಾರದ ಏಕಮೇವ ಪ್ರಧಾನ ಯೋಗವನ್ನು ಸೇರುವ ಕಿರಿದಾರಿಗಳು. "They will lead only to the portal but will not take you inside the shrine." "ಅವು ನಿಮ್ಮನ್ನು ಹೆಬ್ಬಾಗಿಲಿನ ವರೆಗೆ ಮಾತ್ರ ವಯ್ಯಬಲ್ಲವು. ಆದರೆ ಗರ್ಭಗುಡಿಯಲ್ಲಿ ವಯ್ಯಲರಿಯವು" ಎಂದು ಗುರುದೇವರು ಅರುಹಿಹುವರು.

ಪ್ರಕೃತಿ ಭಿನ್ನತೆಯ ಮೂಲಕ, ಬೇರೆ ಬೇರೆ ಸಾಧಕರು ತಮ್ಮ ತಮ್ಮ ಪರಮಾರ್ಥ-ಯಾತ್ರೆಯನ್ನು ಒಂದೊಂದು ಯೋಗದ ದಾರಿಯಿಂದ ಪ್ರಾರಂಭಿಸಬಹುದು. ಬುದ್ಧಿಬಲವುಳ್ಳವರು ಜ್ಞಾನಯೋಗದ ದಾರಿಯಿಂದಲೂ, ಭಾವಬಲವುಳ್ಳವರು ಭಕ್ತಿಯೋಗದ ದಾರಿಯಿಂದಲೂ, ಸಂಕಲ್ಪ ಬಲವುಳ್ಳವರು ಕರ್ಮಯೋಗದ ದಾರಿಯಿಂದಲೂ, ಏಕಾಗ್ರತೆಯ ಬಲವುಳ್ಳವರು ಧ್ಯಾನಯೋಗದ ಮಾರ್ಗದಿಂದಲೂ ಸಾಗಬಹುದು. ಆದರೆ ಅವರೆಲ್ಲ ಕೆಲಕಾಲ ನಡೆದು, ಪರಮಾರ್ಥ-ಮಂದಿರದ ಹೆಬ್ಬಾಗಿಲ್ಲನ್ನು ತಲುಪಬಹುದು. ಮುಂದೆ ಮಾತ್ರ ಅವರು ಸಾಕ್ಷಾತ್ಕಾರಯೋಗದ ನಾಮಯೋಗದ ನೆರವನ್ನೇ ಪಡೆಯಬೇಕಾಗುವದು. ಇಲ್ಲದಿದ್ದರೆ ಅವರಿಗೆ ಪರಮಾತ್ಮನ ದಿವ್ಯ ಅನುಭಾವ-ಆನಂದಗಳು ಲಭಿಸಲರಿಯವು. ಅದೇ ಮೇರೆಗೆ ಅವರ ಭಿನ್ನ ಪ್ರಕೃತಿಯು, ಸಾಕ್ಷಾತ್ಕಾರದ ತರುವಾಯ ಕೂಡ, ಅವರವರಿಂದ ಆಯಾ ಕರ್ಮಗಳನ್ನೆ, ಲೋಕಕಲ್ಯಾಣಕ್ಕಾಗಿ ಮಾಡಿಸುವದು. ಬುದ್ಧಿಶಾಲಿಗಳು ಜ್ಞಾನ-ಪ್ರಸಾರ ಮಾಡುವರು. ಭಾವಿಕರು ಭಜನ-ಪೂಜನಾದಿಗಳನ್ನು ಮಾಡಿ, ಭಕ್ತಿಪ್ರಸಾರ ಮಾಡುವರು. ಕರ್ಮಕುಶಲರು ಸರ್ವಭೂತಹಿತ ಎಸಗತೊಡಗುವರು. ಅದರಲ್ಲಿ ರತರಾಗುವರು. ಮತ್ತು ಧ್ಯಾನಪ್ರಿಯರು, ಧ್ಯಾನರತರಾಗಿ, ಅದರ ಪ್ರಭಾವದಿಂದಲೇ ಲೋಕಕಲ್ಯಾಣ ಮಾಡುವರು. ಇದು ಅವುಗಳಲ್ಲಿಯ ಭಿನ್ನತೆಯ ಸಮನ್ವಯ-ಪದ್ಧತಿ ಎಂಬುದು ಗುರುದೇವರ ಹೇಳಿಕೆ.

ಈ ಪ್ರಕೃತಿ ಭಿನ್ನತೆಯ ವಿಷಯವನ್ನು ಅವರು ತಮ್ಮ ಗೀತೆಯ ಗ್ರಂಥದಲ್ಲಿ ಈ ರೀತಿ ವಿವರಿಸಿರುವರು.

"We are free to do our actions as we like, in the process of attainment of the highest illumination. If we are activists by temper, nothing can prevent us from doing actions, at any stage of our progress toward the attainment of our ideals. If we

are contemplatives, nothing can stir us from a life of God-enjoyment, to which we are naturally born, though we might not set aside the principle of action, to which we are not born. Finally it we are philosophers, the issue will be, how best to determine the nature of the Highest Reality and leave the rest to God. Temperamental differences may be modulated but they cannot be so radically changed, so as to wear an entirely new aspect altogether."[13]

"ನಾವು ಪರತಮ ಪ್ರಭೆಯನ್ನು ಪಡೆಯಲಿರುವಾಗ, ನಮಗೆ ರುಚಿಸುವ ಕರ್ಮಗಳನ್ನು ಮಾಡಲು ಸ್ವತಂತ್ರರಿರುವೆವು. ನಾವು ಕರ್ಮಪ್ರಿಯ ಪ್ರಕೃತಿಯವರಿದ್ದರೆ, ನಮ್ಮ ಪ್ರಗತಿಯ ಯಾವ ಮಟ್ಟದಲ್ಲಿಯೂ ನಮ್ಮ ಕರ್ಮಗಳನ್ನು ಯಾವ ಶಕ್ತಿಯೂ ತಡೆಯಲರಿಯದು. ನಾವು ಆಲೋಚನಾಪ್ರಿಯರಿದ್ದರೆ, ನಮ್ಮ ಸಹಜ ಸ್ವಭಾವವಾದ ಆತ್ಮಾನಂದ-ಸೇವನದಿಂದ ಯಾರೂ ನಮ್ಮನ್ನು ಕದಲಿಸಲಾರರು. ಆದರೆ ನಮಗೆ ಸಹಜವಲ್ಲದ ಕರ್ಮತತ್ವವನ್ನು ಮಾತ್ರ ನಾವು ಬಿಡಲು ಬಾರದು. ಕೊನೆಯದಾಗಿ, ನಾವು ದಾರ್ಶನಿಕರಿದ್ದರೆ, ಪರತಮ ಸತ್ತತ್ವದ ಸ್ವರೂಪವನ್ನು ನಿರ್ಣಯಿಸುವ ಅತ್ಯುತ್ತಮ ಬಗೆ ಯಾವುದೆಂಬುದನ್ನು ನಿರ್ಣಯಿಸುವದು. ನಮ್ಮ ಕರ್ತವ್ಯವಾಗುವದು. ಅದನ್ನುಳಿದು ಬೇರೆ ವಿಷಯಗಳನ್ನು ನಾವು ಪರಮಾತ್ಮನಿಗೆ ಒಪ್ಪಿಸಬಹುದು. ಪ್ರಕೃತಿ ಭಿನ್ನತೆಗಳನ್ನು ಕೆಲಮಟ್ಟಿಗೆ ಬದಲಿಸಬಹುದು. ಆದರೆ ಅವು ತೀರ ಹೊಸ ರೂಪವನ್ನು ತಳೆಯುವಂತೆ, ಅವನ್ನು ಪೂರ್ತಿಯಾಗಿ ಮಾರ್ಪಡಿಸುವದು ಸಾಧ್ಯವಿಲ್ಲ."

ಈ ಬಗೆಯಾಗಿ ಅನುಭೂತಿ-ಪೂರ್ವದಲ್ಲಿಯೂ, ಅನುಭೂತಿಯ ನಂತರದಲ್ಲಿಯೂ ಸಾಧಕನು ತನ್ನ ಪ್ರಕೃತಿಗೆ ಅನುಗುಣವಾಗಿಯೇ ವರ್ತಿಸುವನು, ಮತ್ತು ಅದರಿಂದಲೇ ಲೋಕಕಲ್ಯಾಣವನ್ನು ನೆರವೇರಿಸುವನು.

ಪ್ರಧಾನ ಸಾಧನ :

ಇನ್ನು ಭಗವಂತನ ಸಾಕ್ಷಾತ್ಕಾರದ ಪ್ರಧಾನ ಸಾಧನವಾದ "**ನಾಮಯೋಗ**"ವನ್ನು ವಿವರಿಸುವೆ. ಸಮರ್ಥ ಸದ್ಗುರುಗಳು ಸಚ್ಛೀಲ ಶಿಷ್ಯನಿಗೆ ಅನುಗ್ರಹಿಸಿದ. **ದಿವ್ಯನಾಮದ ಅನನ್ಯ ಧ್ಯಾನವು** ಈ "ನಾಮಯೋಗ"ದ ತಿರುಳು. ಇದರಲ್ಲಿ ಸದ್ಗುರುಗಳು. ಸತ್‌ಶಿಷ್ಯರು, ದಿವ್ಯನಾಮ ಹಾಗೂ ಅನನ್ಯ ಧ್ಯಾನ, ಇವುಗಳ ಸಂಗಮ ಇರುವದು. ಅದುದರಿಂದ ಸದ್ಗುರುಗಳ ಪ್ರಧಾನ ಲಕ್ಷಣ. ಹಿರಿಮೆ, ಅನುಗ್ರಹಿಸುವ ಪದ್ಧತಿ, ಸಚ್ಛಿಷ್ಯರ ಪ್ರಧಾನ ಲಕ್ಷಣ, ದಿವ್ಯನಾಮದ ಸ್ವರೂಪ, ಹಿರಿಮೆ, ಅದೇ ಮೇರೆಗೆ ಅನನ್ಯ ಧ್ಯಾನದ ಸ್ವರೂಪ ಪರಿಣಾಮಗಳು, ಇವುಗಳನ್ನು ಸ್ವಲ್ಪದರಲ್ಲಿ ಗುರು ದೇವರ ಬೋಧೆಯ ಬೆಳಕಿನಲ್ಲಿ ವಿವರಿಸಲಿರುವೆ. ಹಾಗೂ ಅವುಗಳ ಅಂಗಾಂಗಗಳಲ್ಲಿ ಅವರು ಕಾಣಿಸಿರುವ ಸಮನ್ವಯವನ್ನು ಅರುಹಲಿರುವೆ.

13) B.P.G. PP 207-208

ಸದ್ಗುರುಗಳು :

ಈ ಪ್ರಧಾನ ಸಾಧನವು ಸಮರ್ಥ ಸದ್ಗುರುಗಳ ಅನುಗ್ರಹದಿಂದ ಪ್ರಾರಂಭವಾಗುವದು. ಅಂಥ ಸದ್ಗುರುಗಳ ಪ್ರಧಾನ ಲಕ್ಷಣವಾವುದು ? ಭಗವಂತನ ದಿವ್ಯ ಭವ್ಯ ಸಾಕ್ಷಾತ್ಕಾರವನ್ನು ಪಡೆದು, ಭಗವದಾನಂದದಲ್ಲಿ-ಆತ್ಮಾನಂದದಲ್ಲಿ ತಲ್ಲೀನನಾದವನೇ ಸದ್ಗುರುವಿನ ಶ್ರೇಷ್ಠಪದವಿಯನ್ನು ಪಡೆಯಬಲ್ಲ. ಅವನು ಪರಮಾತ್ಮನಲ್ಲಿ ಸಾಮರಸ್ಯವನ್ನು-ಐಕ್ಯವನ್ನು ಪಡೆಯುವದರಿಂದ, ಅವನಿಗೆ ದೇವತ್ವ ಲಭಿಸಿರುವದು. ಅವನು ಸಗುಣ ಸಾಕಾರ ದೇವರೇ ಆಗಿರುವ. ಆದುದರಿಂದಲೇ ಆತನನ್ನು ಈ ರೀತಿ ವಂದಿಸಲು ಗುರು ಗೀತೆಯು ಬೋಧಿಸುವದು:

ಗುರುರ್ಬ್ರಹ್ಮಾ ಗುರುರ್ವಿಷ್ಣು : ಗುರರ್ದೇವೋ ಮಹೇಶ್ವರ : ।
ಗುರು: ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀಗುರವೇ ನಮ: ॥

ಅದೇ ಮೇರೆಗೆ

ಪರಮನಾ ರೂಪದಲಿ ನೆರವೀಯಲರಿಯದೆ ।
ನರನಾಗಿ ಬಂದು ವರವೀವ ಗುರುವಿಗೆ ।
ಸರಿ ಯಾರು ಕಾಣೆ, ಎನ್ನುವ ಸರ್ವಜ್ಞ ॥

"ದೇವನಲ್ಲವೇನೋ, ಸದ್ಗುರು ಮಹಾದೇವನಲ್ಲವೇನೋ।"

ಎಂದು ಕೇಳುವರು ಶರಣರು. ಆದುದರಿಂದ,

ಗುಪ್ತರೂಪದೊಳೇಕನಾದ ಸದ್ಗುರು ದೊರೆತು
ನಾವು ಲಭಿಸುವದೇನು ಸುಲಭವಲ್ಲ ।
ಸುಪ್ತ ಜನಗಳಿಗಿದರ ಅರಿವು-ಪರಿವೆಗಳಿಲ್ಲ
ಸ್ವೈರ ವಿಹರಿಸಿ ಭವದಿ ಬೀಳ್ವರಲ್ಲ ॥ (ಬೋಧಸುಧೆ)

ಎಂದು ಕನಿಕರ ಪಟ್ಟರು ನಿಂಬರಗಿ ಮಹಾರಾಜರವರು. ಗುರುವಿನಿಂದಲೇ ಭಕ್ತಿ ಗುರುವಿನಿಂದಲೇ ಮುಕ್ತಿ ಗುರುವಿನಿಂದಲೇ ಸಹಜ ಪರಮೇಶ-ಪ್ರಾಪ್ತಿ! ಇಂಥ ಹಿರಿಮೆ ಅವರದು.

ಗುರು ಗೋವಿಂದ ದೋನೋ ಖಡೇ। ಕಿನಕೋ ಲಾಗೂ ಪಾಯ ।
ಬಲಿಹಾರೀ ಗುರು ಆಪಕೀ । ಗೋವಿಂದ ದಿಯಾ ದಿಖಾಯ ॥

"ಸದ್ಗುರುಗಳು ಹಾಗೂ ಗೋವಿಂದನು ಇಬ್ಬರೂ ನಿಂತಿರುವರು. ಯಾರ ಪಾದಗಳಿಗೆ ಎರಗಲಿ ? ಗುರುವೇ ! ನಾನು ನಿನಗೆ ಸಮರ್ಪಿತ. ಯಾಕೆಂದರೆ ನೀನೇ ಗೋವಿಂದನನ್ನು ಕಾಣಿಸಿರುವಿ" ಎಂದರು ಹಿಂದೀ ಸಂತರು.

ಇಂಥ ಸದ್ಗುರುಗಳು ತಾವು ಸಾಕ್ಷಾತ್ಕರಿಸಿಕೊಂಡ, ತಮ್ಮ ಧ್ಯಾನದಲ್ಲಿ ಕಂಡ, ಇಲ್ಲವೇ ಕೇಳಿದ, ಭಗವಂತನ ದಿವ್ಯನಾಮವನ್ನು ಯೋಗ್ಯ ಶಿಷ್ಯರಿಗೆ ಅನುಗ್ರಹಿಸುವರು. ಅದನ್ನು ಅವನು ಅನನ್ಯ ಭಾವದಿಂದ ನೆನೆದು, ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬುದು ಆ ಬೋಧೆ. "**ಹಸ್ತ-ಮಸ್ತಕ-ಸಂಯೋಗ**", "**ಶಕ್ತಿಪಾತ**" ಇಂಥ ಅನುಗ್ರಹದ ಪದ್ಧತಿಯನ್ನು ಗುರುದೇವರು ನಂಬುತ್ತಿರಲಿಲ್ಲ. ಅವರ ಈ ಪದ್ಧತಿಯಲ್ಲಿ ದಿವ್ಯನಾಮದ ಪ್ರಸಾದ ಹಾಗೂ ಸಾಧನದ ಪ್ರಯತ್ನ ಇವುಗಳ ಸಂಗಮವಿರುವದು.

ಅಂತೂ ಶ್ರೀ ಗುರುದೇವರ ಅಭಿಮತದ ಮೇರೆಗೆ :

ಜ್ಞಾನದಂಜನ ನೀಡಿ ಸದ್ಗುರು ? ನಿಜಧನವನವ ತೋರುವ ।
ಒಳ್ಳೆ ಭಾಗ್ಯವನಿತ್ತು ಆತನು । ಸ್ವಾತ್ಮ-ಬೋಧದಿ ನಿಲಿಸುವ ॥
ಗುರು ಕರುಣವೇ ಕೀಲಿ ಕೈಯದು । ಅದುವೆ ಬುದ್ಧಿಯ ಬೆಳಗುದು।
ಬೇಗನೇ ಚಿದ್ರತ್ನಗಳ ಭಾಂಡಾರವನ್ನೇ ತೆರೆವುದು ॥

ಆದುದರಿಂದ

ಯಾವ "ನಾಮಕೆ ನಾಮ" ಪಡೆದಿಹ । ಅವನ ನಾಮವ ಪಡೆವುದು।
ಅದುವೆ "ದಿವ್ಯ" "ಸಬೀಜ" ನಾಮವು । ಅನುಭವಾಂಕುರ ತಳೆವುದು॥
(ಶ್ರೀ ಗುರುದೇವ-ಚರಿತಾಮೃತ)

ಎಂಬುದು ಅವರ ಬೋಧೆ.

"The distribution of Spiritual wealth becomes the chief task of a God-realiser. It becomes the duty of a Saint, not to keep his spiritual accumulation to himself but to utilise it for the upliftment of humanity."[14]

"ಪಾರಮಾರ್ಥಿಕ ಧನದ ವಿತರಣವು ಅನುಭಾವಿಯ ಪ್ರಧಾನ ಕರ್ತವ್ಯವಾಗುವುದು. ತನ್ನ ಪಾರಮಾರ್ಥಿಕ ಸಂಪತ್ತನ್ನು ತನ್ನಷ್ಟಕ್ಕೆ ಇಟ್ಟುಕೊಳ್ಳದೆ, ಅದನ್ನು ಮಾನವತೆಯ ಉದ್ಧಾರಕ್ಕಾಗಿ ಉಪಯೋಗಿಸುವದು ಸಂತರ ಕಾರ್ಯ."

ಸತ್-ಶಿಷ್ಯ :

ಸದ್ಗುರುಗಳು ಶಿಷ್ಯರ ಯೋಗ್ಯತೆಯನ್ನು ಕಂಡೇ ಅವರಿಗೆ ದಿವ್ಯನಾಮವನ್ನು ಅನುಗ್ರಹಿಸುವರು. ಅವರ ಯೋಗ್ಯತೆಯನ್ನು, ಅವರ ಬುದ್ಧಿ ಭಾವ, ನಡತೆಯನ್ನು ಅವಲಂಬಿಸಿರುವದು. ಅವರು ವಿವೇಕಿಗಳಿರಬೇಕು. ಅವರಲ್ಲಿ ಭಗವಂತನ ಬಗೆಗೆ ಭಕ್ತಿ ಸದ್ಗುರುವಿನಲ್ಲಿ ಶ್ರದ್ಧೆ, ಹೆಣ್ಣು-ಹೊನ್ನು-ಮಣ್ಣಿನ ಬಗ್ಗೆ ಸಂಯಮ, ಇವು ನೆಲೆಗೊಳ್ಳಬೇಕು.

ಶ್ರೀ ರಾಮದಾಸರು ಶಿಷ್ಯನ ಪ್ರಧಾನ ಗುಣಗಳನ್ನು ಈ ರೀತಿ ಬಣ್ಣಿಸಿರುವರು:

14) P. G. H. P. 397

ಶಿಷ್ಯ ಪಾಹಿಜೇ ಪ್ರಜ್ಞಾವಂತ । ಶಿಷ್ಯ ಪಾಹಿಜೇ ಪ್ರೇಮಳ ಭಕ್ತ ।
ಶಿಷ್ಯ ಪಾಹಿಜೇ ನೀತಿವಂತ । ಮರ್ಯಾದೇಚಾ ॥

"ಶಿಷ್ಯನು ಬುದ್ಧಿವಂತನಿರಬೇಕು, ಪ್ರೀತಿವಂತನಿರಬೇಕು, ನೀತಿವಂತನಿರಬೇಕು." ಅಂಥವನೇ ನಾಮಧ್ಯಾನವನ್ನು ಸರಿಯಾಗಿ ಮಾಡಬಲ್ಲ ಅನುಭೂತಿಯನ್ನು ಚೆನ್ನಾಗಿ ಪಡೆಯಬಲ್ಲ.

ದಿವ್ಯನಾಮ :

ಸದ್ಗುರುಗಳು ಅನುಗ್ರಹಿಸಿದ ನಾಮವೇ ದಿವ್ಯನಾಮ. ಅದೇ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಲ್ಲದು-ನೀಡಬಲ್ಲದು. ಬೇರೆ ಸಾಮಾನ್ಯ ನಾಮಗಳು ಅದನ್ನು ಪಡೆಯಲರಿಯವು. ಯಾಕೆಂದರೆ, ಸದ್ಗುರುಗಳು ತಮ್ಮ ತಪೋಬಲದಿಂದ ದಿವ್ಯನಾಮವನ್ನು ಭಗವಂತನಿಂದಲೇ ಪಡೆದಿರುವದರಿಂದ ಅದು ಭಗವಂತನ ಚೈತನ್ಯವನ್ನು ತಳೆದಿರುವದು.

"This Nama comes directly from God and is communicated to the disciple as God in **posse**."[15]

"ಈ ನಾಮವು ಸಾಕ್ಷಾತ ದೇವರಿಂದಲೇ ಬಂದಿರುವದು, ಮತ್ತು ಅದು "ಬೀಜ ದೇವ"ನೆಂದು ಶಿಷ್ಯನಿಗೆ ನೀಡಲಾಗುವದು." ಸದ್ಗುರುಗಳು ಅದನ್ನು ಹೇಗೆ ಪಡೆಯುವರು ಎಂಬುದನ್ನು ಗುರುದೇವರು ಕಬೀರದಾಸರ,

"ಅಜರ ಅಮರ ಏಕ ನಾಮು ಹೈ ಸುಮಿರನ ಜೋ ಆವೈ" ಎಂಬ ಪದದಲ್ಲಿಯ ಒಂದು ಸಾಲಿನ ಅರ್ಥವನ್ನು ವಿವರಿಸುವಾಗ ಈ ರೀತಿ ಅರುಹಿರುವರು :

"While we are meditating, says Kabir, there is a celestial **Nama** which unfolds itself to our auditary sense, at the height of medidation. That Nama is **Ajar** and **Amar**. So.when a man comes into possession of this Name his path God-ward becomes clear."[16]

ಕಬೀರರು ಹೇಳುವರು: "ನಾವು ಧ್ಯಾನವನ್ನು ಮಾಡುತ್ತಿರುವಾಗ, ನಮ್ಮ ಧ್ಯಾನದ ಪೂರ್ಣ ತಲ್ಲೀನತೆಯ ಅವಸ್ಥೆಯಲ್ಲಿ ಒಂದು ದಿವ್ಯನಾಮವು ನಮ್ಮ ಶ್ರವಣೇಂದ್ರಿಯಕ್ಕೆ ಪ್ರತೀತವಾಗುವದು. ಆದೇ **ಅಜರ-ಅಮರ** ನಾಮವು. ಅದನ್ನು ಪಡೆದಾಗಲೇ ಸಾಧಕನ ಪರಮಾರ್ಥ-ಪಥವು ಸುಗಮವಾಗುವದು."

ಈ ಬಗೆಯಾಗಿ ಯಾವ ನಾಮವನ್ನು ಅನುಭಾವಿ ಸದ್ಗುರುಗಳ ಪ್ರತಿಭೆಯು ಕೇಳಿರುವದೋ, ಇಲ್ಲವೆ ಕಂಡಿರುವದೋ, ಅದೇ ಪರಮಾತ್ಮನನ್ನು ಕಾಣುವ, ಕಾಣಿಸು

15) P.G.K.P. 184 16) P.G.H.P. 156

ವ ಅಲೌಕಿಕ ಶಕ್ತಿಯನ್ನು ಪಡೆದಿರುವದು. ಅದೇ ಪುರಂದರರ "**ದಿವ್ಯನಾಮ**" ಗುರುದೇವರ "**ಸಬೀಜ ನಾಮ**"-"**ಬೀಜಸದೃಶ ನಾಮ**". ಬೀಜದಲ್ಲಿ ಮರವು ಅವ್ಯಕ್ತವಾಗಿ ನೆಲೆಸಿರುವಂತೆ, ಇಂಥ ನಾಮದಲ್ಲಿ ಭಗವಂತನು ಅವ್ಯಕ್ತನಾಗಿ ನೆಲೆಸಿರುವನು. ಈ ನಾಮ-ಬೀಜಕ್ಕೆ ಸಾಧಕನು ಧ್ಯಾನದ-ನೆನವಿನ ನೀರನ್ನು ಸಂತತವಾಗಿ ಎರೆದರೆ, ಅದು ಪ್ರತೀತಿಯ-ಅನುಭವದ-ಅಂಕುರವನ್ನು ಪಡೆದು, ಬಗೆಬಗೆಯ ಅನುಭವಗಳ ಪೂ-ಹಣ್ಣುಗಳನ್ನು ತಳೆದು, ಸಾಧಕನನ್ನು ಸಂತಯಿಸಬಲ್ಲದು. ಈ ದಿವ್ಯನಾಮವನ್ನು ಕುರಿತು, ಗುರುದೇವರು ಕೆಳಗಿನಂತೆ ಬರೆದಿರುವರು.

"From the point of view of science, a **Nama** might have the highest potentiality of Spiritual Energy and another which has no such potentiality. The first kind of **Nama** would be the real atom-bomb of the Spiritual experience."[17]

"ವೈಜ್ಞಾನಿಕ ದೃಷ್ಟಿಯಿಂದ ಹೇಳಬೇಕಾದರೆ, ಒಂದು ನಾಮವು ಪಾರಮಾರ್ಥಿಕ ಚೈತನ್ಯದ ಅಧಿಕತಮ ಅಂತ:ಸತ್ವವನ್ನು ತಳೆದಿರಬಹುದು. ಬೇರೊಂದು ನಾಮವು ಅಂತಹ ಅಂತ:ಸತ್ವವನ್ನು ತಳೆಯದಿರಬಹುದು. ಮೊದಲನೆಯ ಜಾತಿಯ ನಾಮವೇ ಪಾರಮಾರ್ಥಿಕ ಅನುಭವವನ್ನು ನೀಡುವ ನಿಜವಾದ ಪರಮಾಣು ಬಾಂಬ್ (Atom-bomb) ಆಗಬಲ್ಲದು."

ಅವರು ಮತ್ತೂ ಹೇಳಿರುವದೇನೆಂದರೆ :

If we get this aeroplane, we may rise to any Spiritual height.

"ನಾವು ಈ ಆಕಾಶಯಾನವನ್ನು ಪಡೆದರೆ, ಯಾವ ಬೇಕಾದ ಪಾರಮಾರ್ಥಿಕ ಎತ್ತರವನ್ನು ಏರಬಹುದು." ಅದೇ ಮೇರೆಗೆ,

"**Nama** is a symbol that carries with it, **Divine Power** and **Smarana** or **Dhyana** is the process of identification with the **Infinite.**"

"ಭಗವಂತನ ದಿವ್ಯ ಚೈತನ್ಯವನ್ನು ತಳೆದಿರುವ ಪ್ರತೀಕವೇ-ಶಬ್ದವೇ-ನಾಮ. ಮತ್ತು ಅನಂತದೊಡನೆ ಬೆರೆಯುವ ಪ್ರತಿಕ್ರಿಯೆಯೇ ಸ್ಮರಣ ಇಲ್ಲವೇ ಧ್ಯಾನ."

ಇಂಥ ದಿವ್ಯನಾಮದ ಅಪಾರ ಮಹಿಮೆಯನ್ನು ಪ್ರತ್ಯಕ್ಷ ಅನುಭವಿಸಿದ ಮಹಾತ್ಮರು ಅದನ್ನು ಮನಸಾರೆ ಹೊಗಳಿರುವರು, ಹರಿನಾಮವು ಕಾಮಧೇನು ಕಲ್ಪವೃಕ್ಷವೆಂದು

17) P.G.H.P. 347

ನರವೃಂದವೆಂಬುವ ಕಾನನದಲ್ಲಿ
ಶ್ರೀಹರಿನಾಮವೆಂಬಂಥಾ ಕಲ್ಪವೃಕ್ಷ ಹುಟ್ಟಿತಯ್ಯಾ ।
ನೆರಳು ಸೇರಲುಂಟು, ಫಲವು ಮೆಲ್ಲಲುಂಟು.
ಇದೇ ಪುರಂದರ ವಿಠಲನ ವೈಕುಂಠ ಮಂದಿರ ॥
ನಾಮವೇ ನೆನೆವಂಗೆ ವಜ್ರಾಂಗಿಯಿಪ್ಪದು ।
ನಾಮವೊಂದು ನೆನೆಯ ವಿಜಯ ವಿಠಲನ
ಧಾಮವೇ ಆಗುವದು, ನಡೆಯದೆ ನಮಗೆಲ್ಲ.

ಈ ದಿವ್ಯನಾಮವು ನಮ್ಮನ್ನು ಸದೈವ ಕಾಯುವದು. ನಮ್ಮ ಸಂಕಟಗಳನ್ನು ಕಳೆಯುವದು, ವಿಘ್ನಗಳನ್ನು ಪರಿಹರಿಸುವದು. ಶ್ರೀ ನಿಂಬರಗಿ ಮಹಾರಾಜರು ಅರುಹಿದ ಮೇರೆಗೆ :

ಬಾಳ್ವೆಯಲಿ ನಾಮವೇ ನೇಮದಿಂ ಕಾಯುವದು.
ನೆನಪಿನಲಿ ಅದಕಾಗಿ ಮುಳುಗಬೇಕು ।

"ಹಾರೇ ಕೋ ಹರಿನಾಮ" "ಸೋತವರಿಗೆ, ದು:ಖಿತರಿಗೆ ಹರಿಯ ನಾಮವೇ ಬೆಂಬಲವನ್ನು ನೀಡುವದು", ಎಂದು ಸೂರದಾಸರ ಆಶ್ವಾಸನೆ, ಆದುದರಿಂದ,

ಬಾನಿನಿಂ ಪಿಡಿಲೆರಗಿದರು ನೆಲ । ಕುಸಿದರೂ ಕಾಲ್ತಳದಲಿ ।
ನಾಮವನು ತಾ ತೊರೆಯಬಾರದು । ಇನಿತು ನಿಷ್ಠೆಯು ಬೆಳೆಯಲಿ॥

ಎಂಬುದು ಶ್ರೀ ಗುರುದೇವರ ಬೋಧೆಯ ಸಾರ.

ಧ್ಯಾನ-ಪದ್ಧತಿ :

ಶ್ರೀ ಗುರುದೇವರ ಧ್ಯಾನ ಪದ್ಧತಿಯಲ್ಲಿ (ಅ) ಪಂಚ ಸಾಮಾನ್ಯ ಗುಣಗಳೂ, (ಆ) ಪಂಚ ವಿಶೇಷ ಅಂಗಗಳೂ ಒಳಗೊಂಡಿರುವವು. ಅವನ್ನು ಕ್ರಮಶ: ಸ್ವಲ್ಪದರಲ್ಲಿ ವಿವರಿಸಲಿರುವೆ. ಅವೆಲ್ಲ ಸಾಧಕರಿಗೆ ಒಳ್ಳೆ ಮಾರ್ಗದರ್ಶನವನ್ನು ಮಾಡಬಲ್ಲವು. ಅವು ಹಿಂದಿನ ಸಂತರ ಅನುಭವಗಳನ್ನು ಪಡೆದುದಲ್ಲದೇ, ಅವಕ್ಕೆ ಗುರುದೇವರ ಬೆಂಬಲವೂ ಲಭಿಸಿರುವದು.

(ಅ) **ಪಂಚ ಸಾಮಾನ್ಯ ಗುಣಗಳು :** ಈ ಧ್ಯಾನ ಪದ್ಧತಿಯಲ್ಲಿ ಮುಂದಿನ ಐದು ಸಾಮಾನ್ಯ ಗುಣಗಳು ಒಳಗೊಂಡಿರುವವು. (i) ಆಂತರಿಕತೆ, (ii) ಏಕಾಗ್ರತೆ, (iii) ಸುದೀರ್ಘತೆ, (iv) ನಿರಂತರತೆ ಹಾಗೂ (v) ಸತ್ಕಾರ ಪೂರ್ಣತೆ.

(i) ನಾವು ನಾಮವನ್ನು ಸದೈವ ಮನಸ್ಸಿನಿಂದ ನೆನೆಯಬೇಕು. ನಾಲಿಗೆಯಿಂದ ಉಚ್ಚರಿಸಬಾರದು. ಅದನ್ನು ನೆನೆವಾಗ ಸ್ವಲ್ಪ ಕಂಠ-ಕಂಪನ (Throatthrobbing) ಆಗಬಹುದು. ಆದರೆ ಅದಕ್ಕೂ ಹೆಚ್ಚಿನ ನಾಲಿಗೆಯ ಚಲನವು ಆಗಕೂಡದು. ನಾಮವನ್ನು ಉಸಿರಿನಲ್ಲಿ ಬೆರೆಸಬೇಕು. ಉಸಿರಿನ ದಾರದಲ್ಲಿ ನಾಮದ ಮಣಿಗಳನ್ನು ಪೋಣಿಸಿ,

ಅದರ ಮಾಲೆಯನ್ನು ತಯಾರಿಸಬೇಕು. ಇದು ಆಂತರಿಕತೆಯ ಅಂಶ.

(ii) ನಾಮಸ್ಮರಣವು ಏಕಾಗ್ರವಿರಬೇಕು. ಅನನ್ಯ ಭಾವದಿಂದ ನಾಮವನ್ನು ನೆನೆಯಬೇಕು. "Concentration should be so intense that as soon as you begin to concentrate, the form of God should appear before you." "ನಿಮ್ಮ ನೆನವು ತುಂಬ ಉತ್ಕಟವಾದುದು ಇರಬೇಕು. ಅಂದರೆ ದೇವರ ರೂಪವು ನಿಮ್ಮೆದುರು ಕಾಣಿಸಿಕೊಳ್ಳುವದು."

(iii) ನಾಮವು ಅಂತರಂಗದಲ್ಲಿ ದೃಢವಾಗಿ ಬೇರೂರಬೇಕಾದರೆ, ಅದರ ಧ್ಯಾನವು "**ದೀರ್ಘಕಾಲ, ನಿರಂತರ, ಸತ್ಕಾರ, ಸೇವಿತ**" ಆಗಬೇಕೆಂದು ಪತಂಜಲಿ ಮುನಿಗಳು ಅರುಹಿರುವರು. "**ಆಪ್ರಯಾಣಾತ್**", "ಆವರಣ" ಧ್ಯಾನವನ್ನು ನಡೆಸಲು ಶ್ರೀಬಾದರಾಯಣರು ಹೇಳಿರುವರು. "**ಚೇತನಾ ಹೈ ತೋ ಚೇತಲೇ ನಿಶಿ ದಿನಮೇ ಪ್ರಾಣೇ**" "ಎಲೈ ಮನುಜನೇ, ದೇಹದಲ್ಲಿ ಪ್ರಾಣವಿರುವವರೆಗೆ, ಹಗಲಿರುಳು ನಾಮವನ್ನು ನೆನೆಯಯ್ಯ !" ಎಂದು ಬೋಧಿಸಿರುವರು **ಶ್ರೀ ನಾನಕರು.**

(iv) ಇಷ್ಟೇ ಅಲ್ಲ ನಾಮವನ್ನು ನಿರಂತರವಾಗಿ ನೆನೆಯಬೇಕು. ಅದರಲ್ಲಿ ಸ್ಥಳದ, ಕಾಲದ ಹಾಗೂ ಅವಸ್ಥೆಯ ಅಂತರ ಬೀಳಕೂಡದು. ಎಲ್ಲ ಸ್ಥಳ, ಕಾಲ, ಅವಸ್ಥೆಯಲ್ಲಿ ಸ್ಮರಣವು ಸಂತತವಾಗಿ ಸಾಗಬೇಕು.

ಶ್ವಾಸ ಶ್ವಾಸ ಪರ ಹರ ಭಜೋ । ವೃಥಾ ಶ್ವಾಸ ಮತ್ ಖೋಯ ॥

"ಪ್ರತಿಯೊಂದು ಉಸಿರನ್ನು ಎಳೆವಾಗ ಹರನನ್ನು ನೆನೆಸು. ಒಂದು ಉಸಿರನ್ನೂ ವ್ಯರ್ಥ ಕಳೆಯಬೇಡ" ಎಂದು ಕಬೀರರು ಬೋಧಿಸಿರುವರು.

ಕಲ್ ಕರೋ ಸೋ ಆಜ ಕರ್, ಆಜ ಕರೋ ಸೋ ಅಬ ।
ಪಲವೇ ಪರಲೈ ಹೋಯಗೀ, ಬಹುರಿ ಕರೋಗೇ ಕಬ ॥

"ನಾಳಿನ ಧ್ಯಾನವನ್ನು ಇಂದೇ ಮಾಡು, ಇಂದಿನದನ್ನು ಈಗ ಮಾಡು ! ಒಂದರಗಳಿಗೆಯಲ್ಲಿ ಪ್ರಳಯ ಬರಬಹುದು. ತರುವಾಯ ನೀನು ಅದನ್ನು ಎಂತು ಮಾಡಬಲ್ಲೆ?"

(v) ಇದರ ಜತೆಯಲ್ಲಿ ಧ್ಯಾನವು ಭಕ್ತಿ-ಆದರಗಳಿಂದ ಕೂಡಿರಬೇಕು. "ನೇಮದಿ ಪ್ರೇಮದಿ ನೆನೆ ಮನವೇ।" ಎಂದು ದಾಸರಾಯರು ತಮ್ಮ ಮನಸ್ಸನ್ನು ಬೋಧಿಸಿರುವರು. ಭಕ್ತಿ-ಭಾವದಿಂದ ಮಾಡಿದ ಧ್ಯಾನವೇ ಭಗವಂತನನ್ನು ಸಂತೈಸುವದು. ಗುರುದೇವರು ಇದನ್ನು ಕುರಿತು ಈ ರೀತಿ ಹೇಳಿರುವರು :

"It is not simply a mechanical uttering of the **Nama** of God that will lead one to illunination . There must be **Bhava** accompanying the utterance of the **Nama.** So insistance may be laid on the quality of the heart rather than on utterance by

tongue."[18]

"ಭಗವಂತನ ನಾಮದ ಕೇವಲ ಯಾಂತ್ರಿಕ ಉಚ್ಚಾರದಿಂದಲೇ ಸಾಕ್ಷಾತ್ಕಾರವು ಲಭಿಸಲರಿಯದು. ಈ ನಾಮದ ಉಚ್ಚಾರವು (ನೆನವು) ಭಾವಪೂರ್ಣವಿರಬೇಕು. ಆದುದರಿಂದ ನಾಲಿಗೆಯ ಉಚ್ಚಾರಕ್ಕಿಂತ ಅಂತ:ಕರಣದ ಗುಣಕ್ಕೆಯೇ ಪ್ರಾಧಾನ್ಯವನ್ನು ಕೊಡಲುಬೇಕು."

ಈ ಬಗೆಯಾಗಿ ಈ ಐದೂ ಗುಣಗಳ ಸಹಯೋಗವು, ಸಮನ್ವಯವು ಧ್ಯಾನದಲ್ಲಿ ಅತ್ಯವಶ್ಯವಾದುದು.

ಅದೇ ಮೇರೆಗೆ ನಾಮಸ್ಮರಣವು ಸಾಧಕರ ಸನ್ನಿಧಿಯಲ್ಲಿ ಚೆನ್ನಾಗಿ ನಡೆಯುವದು. ಅದರ ಅವಧಿಯೂ, ಉತ್ಕಟತೆಯೂ ಬೆಳೆಯುವದು. ಅದರ ಫಲವಾಗಿ ಅನುಭವದಲ್ಲಿಯೂ ಪ್ರಗತಿಯಾಗುವದು. ಆದ್ದರಿಂದ ಸಾಮುದಾಯಕ ಧ್ಯಾನವು ಗುರುದೇವರ ಸಂಪ್ರದಾಯದಲ್ಲಿ ಪ್ರಾಧಾನ್ಯವನ್ನು ಪಡೆದಿದೆ.

ಸಾಮುದಾಯಿಕ ಧ್ಯಾನದಿಂ, ಸಾಧಕರ ಭಾವವು ಬೆಳೆವುದು ।
ಭಾವದಲೆಗಳ ಸಂಗಮವು, ಅನುಭಾವದಲೆಗಳ ಪಡೆವುದು ॥

(ಆ) ಪಂಚ ವಿಶೇಷ ಅಂಗಗಳು :

ಈ ಧ್ಯಾನದ ಅಂಗಗಳೂ ಐದು. (1) ಶಾರೀರಿಕ ಅಂಗ, (2) ಮಾನಸಿಕ ಅಂಗ, (3) ನೈತಿಕ ಅಂಗ, (4) ಭಕ್ತಿಭಾವದ ಅಂಗ ಹಾಗೂ (5) ಭಗವಂತನ ಪ್ರಸಾದದ ಅಂಗ. ಗುರುದೇವರು ಈ ಅಂಗಗಳನ್ನು ತಮ್ಮ ಗೀತೆಯ ಗ್ರಂಥದಲ್ಲಿ ಚೆನ್ನಾಗಿ ವಿವರಿಸಿರುವರು. ಇವೆಲ್ಲವುಗಳ ನೆರವಿನಿಂದ ಧ್ಯಾನವು ಸರಿಯಾಗಿ ಸಾಗಬಲ್ಲದು. ಆದರೆ ಇವುಗಳಲ್ಲಿಯ ತಾರತಮ್ಯವನ್ನು ಅರಿತು, ಇವನ್ನು ಉಪಯೋಗಿಸಬೇಕು. ಪ್ರತಿಯೊಂದು ಅಂಗದ ಸ್ಥಾನವನ್ನೂ, ಬೆಲೆಯನ್ನೂ ಅರಿತು, ಅದರ ಯೋಗ್ಯತೆಯಂತೆ ಅದಕ್ಕೆ ಮಹತ್ವವನ್ನು ಕೊಡಬೇಕು. ಅಂದರೆ ಇವುಗಳ ಉಪಯೋಗದಲ್ಲಿತೂಕವು ತಪ್ಪಿ ಧ್ಯಾನದಲ್ಲಿತಡೆ ಉಂಟಾಗಲಿಕ್ಕಿಲ್ಲ.

(1) **ಶಾರೀರಿಕ ಅಂಗ :** ಆಸನ, ಪ್ರಾಣಾಯಾಮ, ದೃಷ್ಟಿ, ಇವು ಧ್ಯಾನದ ಶಾರೀರಿಕ ಅಂಗಗಳು, "**ಸ್ಥಿರಸುಖಂ ಆಸನಂ**" "ಯಾವ ಆಸನದಲ್ಲಿ ಸ್ಥಿರವಾಗಿಯೂ, ಸುಖವಾಗಿಯೂ ಬಹುಕಾಲ ಕುಳಿತುಕೊಳ್ಳಲು ಬರುವದೋ ಅದೇ ತಮಗೆ ಉಪಯುಕ್ತವಾದ ಆಸನ. ಅದನ್ನೆಯೇ ಬೆಳೆಸಬೇಕು." ಎಂಬುದು ಗುರುದೇವರ ಅಭಿಮತ. ಪ್ರಾಣಾಯಾಮವು **ಪ್ರಾಣ-ನಿರೋಧ** ಹಾಗೂ ಪ್ರಾಣಾಪಾನ-ಸಮತೆ, ಈ ಎರಡಂಶಗಳಿಂದ ಕೂಡಿರುವದು. ಪ್ರಾಣ-ನಿರೋಧವು ಅಷ್ಟೊಂದು ಸುರಕ್ಷಿತವಾದ ಸಾಧನವಲ್ಲ. ಆದರೆ ಪ್ರಾಣಾಪಾನ-ಸಮತೆಯಿಂದ ಲಭಿಸುವ ಕೇವಲ-ಕುಂಭಕವು ಸುರಕ್ಷಿತ. ಪ್ರಾಣಾಪಾನಗಳಲ್ಲಿಯ ಸಾಮಾನ್ಯವಾದ ಅಸಮತೆಯನ್ನು ಉಸುರಿನಲ್ಲಿನಾಮ ನೆನೆಯುವ ಅಭ್ಯಾಸದಿಂದ ಅಳಿಸಿ, ಅವುಗಳಲ್ಲಿಸಮತೆಯನ್ನು ನಿರ್ಮಿಸಬೇಕು. ಶ್ವಾಸವನ್ನು ಏರಿಸುವಾಗ ಎಷ್ಟು ನಾಮಗಳನ್ನು ನೆನೆಯುವೆವೋ, ಅಷ್ಟೇ ನಾಮಗಳನ್ನು ಅದನ್ನಿಳಿಸುವಾಗ ನೆನೆಯುವ ಅಭ್ಯಾಸ ಮಾಡಿದರೆ, ಸಮತೆಯು ಉಂಟಾಗುವದು. ಮತ್ತು ಇದರ ಫಲವಾಗಿ ಜನಿಸಿದ ಸಮತೂಕವು (Balance) ಮನಸ್ಸಿನಲ್ಲಿಶಾಂತಿಯನ್ನು

18) P.G.H.P. 344

ನಿರ್ಮಿಸಬಲ್ಲದು ಎಂಬುದು ಗುರುದೇವರ ಹೇಳಿಕೆ. ಆದರ ಜತೆಯಲ್ಲಿ ನಮ್ಮ ಸಹಜವಾದ ಬಹಿರಂಗ ದೃಷ್ಟಿಯನ್ನು ನಾಸಾಗ್ರದಲ್ಲಿ ಸ್ಥಿರಪಡಿಸಿ, ಮನಸ್ಸನ್ನು ಅಂತರ್ಮುಖ ಮಾಡಲು ಯತ್ನಿಸಬೇಕು. ನಮ್ಮ ನಾಸಿಕದ ಎರಡು ಅಗ್ರಗಳಲ್ಲಿ-(ತುದಿಗಳಲ್ಲಿ)- ಒಂದರ ಮೇಲೆ ಅದನ್ನು ಸ್ಥಿರಗೊಳಿಸಿ, ಅರ್ಧ-ನಿಮೀಲಿತ ಮಾಡಬೇಕು. ಈ ಅರೆತೆರೆದ ದೃಷ್ಟಿಯು ಒಂದೆಡೆ ಮನಸ್ಸಿನ ಚಾಂಚಲ್ಯವನ್ನೂ, ಇನ್ನೊಂದೆಡೆ ನಿದ್ರೆಯನ್ನೂ ಅಳಿಸಿ, ಅದರ ಏಕಾಗ್ರತೆಯನ್ನು ಬೆಳೆಸಲು ಚೆನ್ನಾಗಿ ನೆರವಾಗುವದು. ಆದರೆ ಸಾಧಕನು ತನ್ನ ಸಾಧನವನ್ನು ಮರೆಯಲ್ಲಿ ಮಾಡಬೇಕು.

ತನ್ನ ಸಾಧನವನ್ನು ಮುನ್ನ ಬೇಸರಿಸದಲೆ
ಸತತ ಮರೆಯಲಿ ನಿಂತು ನಡೆಸಬೇಕು ।
ಅನ್ಯರರಿಯದ ತೆರದಿ ಚಿನ್ಮಯನ ಚಿಂತಿಸುತ
ಗುಟ್ಟನಾರಿಗದೆಂದೂ ತಿಳಿಸದಿಹುದು. (ಬೋಧಸುಧೆ)

ಎಂಬುದು ಶ್ರೀ ನಿಂಬರಗಿ ಮಹಾರಾಜರವರ ಬೋಧೆ.

(2) ಮಾನಸಿಕ ಅಂಗ : ಮನ:ಸಂಯಮವು ಧ್ಯಾನದ ಮಾನಸಿಕ ಅಂಗ. ಮನಸ್ಸಿನ ಅಲೆದಾಟವನ್ನು ತಡೆಯುವದು ಹಾಗೂ ಅದನ್ನು ನಾಮದಲ್ಲಿ ಆತ್ಮನಲ್ಲಿ ನಿಲ್ಲಿಸುವದು, ಸಂಯಮದ ಎರಡು ಬಗೆಗಳು.

ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ 116-26॥

"ಚಂಚಲವಾದ ಮನಸ್ಸು ಎಲ್ಲೆಲ್ಲಿ ಅಲೆಯುವದೋ ಅಲ್ಲಲ್ಲಿಂದ ಅದನ್ನು ನಿಯಂತ್ರಿಸಿ, ಆತ್ಮನಲ್ಲಿಯೇ ಸ್ಥಿರಗೊಳಿಸಬೇಕು" ಎಂದು ಗೀತಾಕಾರರು ಹೇಳಿರುವರು." **"ಚಕೋರನು ಚಂದ್ರಮನನ್ನು ಚಿಂತಿಸುವಂತೆ ಱ, ಱಅಂಬುಜವು ಭಾನುವನ್ನು ಚಿಂತಿಸುವಂತೆ"** ನಮ್ಮ ಮನಸ್ಸು ಭಗವಂತನನ್ನು - ಆತನ ದಿವ್ಯನಾಮವನ್ನು ಚಿಂತಿಸಬೇಕು. ಸಾಧಕನು ಭಗವಂತನನ್ನುಳಿದು, ಅನ್ಯ ವಿಷಯಗಳನ್ನು ತನ್ನ ಮನಸ್ಸಿನಲ್ಲಿ ಬರಗೊಡಬಾರದು. ಈ ಮಾದರಿಯ ಅನನ್ಯ ಏಕಾಗ್ರತೆಯೇ ತುಂಬ ಬೆಲೆಯುಳ್ಳದ್ದು ಎಂದು ಗುರುದೇವರು ಹೇಳಿರುವರು.

(3) **ನೈತಿಕ ಅಂಗ** : ಧ್ಯಾನದ ಪೂರ್ಣತೆಗೆ ಅವಶ್ಯವಾದ ಗುಣಗಳಲ್ಲಿ ಸಕ್ರಿಯ ಪ್ರಯತ್ನವು ಪ್ರಧಾನವಾದುದು. ಗುರುದೇವರು ಬೋಧಿಸಿರುವದೇನೆಂದರೆ :

"The aspirant must make an active search for the object of his realisation; no inaction would do, no indifference no complacency to allow things to come their own way and in their own time."[19]

19) P.G.H.P. 357

"ನಿಷ್ಕ್ರಿಯತೆ, ಉದಾಸೀನತೆ, ಆದಾಗ ಆಗಲಿ! ಬಂದಾಗ ಬರಲಿ! ಎಂದು ಬಗೆಯುವ ವೃತ್ತಿ-ಅಲ್ಪತೃಪ್ತಿ ಇವನ್ನು ತೊರೆದು, ಸಾಧಕನು ತನ್ನ ಸಾಕ್ಷಾತ್ಕಾರದ ಗುರಿಯನ್ನು ಮುಟ್ಟಲು ಸಕ್ರಿಯ ಪ್ರಯತ್ನವನ್ನು ಮಾಡಬೇಕು." ಉತ್ಸಾಹದಿಂದ ಸಾಧನದಲ್ಲಿ ನಿರತನಾಗಬೇಕು. ಪ್ರಪಂಚದಲ್ಲಿ ಉದಾಸನೂ. ಪರಮಾರ್ಥದಲ್ಲಿ ಉಲ್ಲಸಿತನೂ ಇರಬೇಕು. ಕಾಮನನ್ನು ಗೆಲ್ಲಬೇಕು. ಅಡಿಗಡಿಗೆ ನಡತೆಯನ್ನು ಪರೀಕ್ಷಿಸಿ, ಅದನ್ನು ತಿದ್ದುತ್ತಿರಬೇಕು.

(4) ಭಕ್ತಿ-ಭಾವದ ಅಂಗ: ಬೆಳೆದ ಉತ್ಕಟ ಭಕ್ತಿ-ಭಾವವು ಈ ಧ್ಯಾನದ ಪ್ರಧಾನ ಅಂಗ. ಭಗವಂತನು ಭಾವಪ್ರಿಯನು ಇರುವದರಿಂದ, ಅನನ್ಯ ಭಾವದಿಂದಲೇ ಸಾಧಕನು ಆತನನ್ನು ಅರಿಯಬಲ್ಲನು. ಕಾಣಬಲ್ಲನು, ಸೇರಬಲ್ಲನು. ಆದುದರಿಂದ ಸಾಧಕನು ಧ್ಯಾನವನ್ನು ಭಾವಪೂರ್ಣ ಅಂತ:ಕರಣದಿಂದ ಮಾಡಬೇಕು. ಭಾವದ ಅರ್ಥವನ್ನೂ, ಅವಶ್ಯಕತೆಯನ್ನು ಹಿರಿಮೆಯನ್ನೂ ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು.

Bhava is an Unexplained and an inexplicable love of God."ಭಾವವೆಂದರೆ ಅವರ್ಣಿತ, ಅವರ್ಣನೀಯವಾದ ಭಗವಂತನಲ್ಲಿಯ ಪ್ರೀತಿ."

"What is wanted is the quality of the heart which may enable him to conquer time. In order. however, that quality might be attained **Abhyasa** may be necessary, but it is not all. If you have reached a particular stage of **Bhava**, then neither much time not much practice would be needed. Normally, however, people are not endowed with that kind of Bhava. Therefore they have to depend upon practice and time."[20]

"ಅಂತ:ಕರಣದ ಆಂತರಿಕ ಗುಣವಾದ ಭಾವವು ಅವಶ್ಯವಾಗಿ ಬೇಕಾಗುವ ವಿಷಯ. ಅದರ ನೆರವಿನಿಂದ ಸಾಧಕನು ಕಾಲವನ್ನು ಗೆಲ್ಲಬಲ್ಲನು. ಈ ಗುಣವು ಬೆಳೆಯಲು ಅಭ್ಯಾಸವು ಬೇಕು. ಆದರೆ ಕೇವಲ ಅಭ್ಯಾಸದಿಂದಲೇ ಭಾವವು ಬೆಳೆಯಲರಿಯದು, ನಾವು ಭಾವದ ಬೆಳವಣಿಗೆಯ ಒಂದು ವಿಶೇಷವಾದ ಮಟ್ಟವನ್ನು ಮುಟ್ಟಿದೆವೆಂದರೆ, ತರುವಾಯ ಬಹಳ ಕಾಲ ಇಲ್ಲವೆ ಅಭ್ಯಾಸ ಬೇಕಾಗಲರಿಯದು. ಆದರೆ ಜನರು ಸಾಮಾನ್ಯವಾಗಿ ಇಂಥ ಭಾವವನ್ನು ಪಡೆದಿರುವದಿಲ್ಲ. ಆದುದರಿಂದ ಅವರು ಅಭ್ಯಾಸವನ್ನೂ, ಕಾಲವನ್ನೂ ಅವಲಂಭಿಸಬೇಕಾಗುವದು."

ಈ ಭಾವದ ಬೆಳವಣಿಗೆಯನ್ನು ಕುರಿತು ಗುರುದೇವರು ಒಮ್ಮೆ ಈ ರೀತಿ ಹೇಳಿರುವರು: "Religion is an instinet like hunger, and sex" "ಹಸಿವು, ರತಿ ಸುಖದಂತೆ ಭಕ್ತಿಯು ಒಂದು ಮೂಲ ಪ್ರವೃತ್ತಿ ಇರುವದು" ಎಂದು ಓರ್ವ ಮಹನೀಯರು ಉಸುರಿರುವರು. ಭಕ್ತಿಯ ಹಸಿವು ತೀವ್ರವಾಯಿತೆಂದರೆ, ಧ್ಯಾನಕ್ಕೆ ಕುಳಿತುಕೊಳ್ಳುವ

20) B.P.G.P. 238

ಪ್ರೇರಣೆಯು ತಾನಾಗಿಯೇ ಜನಿಸುವದು. ಮತ್ತು ಧ್ಯಾನವು ಚೆನ್ನಾಗಿ ಆಯಿತೆಂದರೆ, ಆ ಹಸಿವು ಶಾಂತವಾಗುವದು. ಆದರೆ ಈ ಹಸಿವು ಅನೇಕರಲ್ಲಿ ಸುಪ್ತವಿರುವದು, ಮಂದವಿರುವದು. ಅದನ್ನು ತೀವ್ರಗೊಳಿಸುವದೆಂತು ? ಎಂಬುದೇ ಮಹತ್ವದ ಪ್ರಶ್ನೆ. ಉತ್ತಮ ಸಾಧನದಿಂದ 'ವಸ್ತು' ದರ್ಶನವಾಗಿ, ಅದು Permanent ಅದು ಸ್ಥಿರವಾಯಿತೆಂದರೆ, ಈ ಹಸಿವು ಅಂಶತ: ತೀವ್ರವಾಯಿತೆಂದು ಬಗೆಯಬಹುದು. "It must be a part and parcel in our life." "ಅದು (ವಸ್ತು) ನಮ್ಮ ಜೀವನದಲ್ಲಿಯ ಒಂದು ಅವಿಭಾಜ್ಯ ಅಂಗವಾಗಬೇಕು." ಅಂದರೆ ನಾವು ಅದರ ಆಕರ್ಷಣ-ಕ್ಷೇತ್ರದಲ್ಲಿಸೇರಬಹುದು. ಮುಂದಿನ ಪ್ರಗತಿಯು ತರುವಾಯ ಸುಲಭವಾಗಬಹುದು. ಆಗ ನಮ್ಮ ಭಾವ ಅಳಿಯುವ ಭಯವು ಕಡಿಮೆ. ಅಲ್ಲಿಯವರೆಗೆ ನಾವು ಎಚ್ಚರ ವಹಿಸಬೇಕು.

ಅದೇ ಮೇರೆಗೆ ಈ ಧ್ಯಾನದಲ್ಲಿ ಸಾಧಕನ ಉತ್ಕಟ ಹಂಬಲವು ಪ್ರಧಾನವಾದುದು.

"The crowning piece of performance is the passionate longing of the aspirant for the realisation of God. It is the inner urge, this life of consecration for the ideal, which crowns the efforts of man for the attainment of God."[21]

"ಈ ಧ್ಯಾನದಲ್ಲಿಯ ಮುಕುಟಪ್ರಾಯ ಮಾತೆಂದರೆ, ಭಗವಂತನನ್ನು ಕಾಣುವ ಸಾಧಕನ ಅತ್ಯುತ್ಕಟ ಆಕಾಂಕ್ಷೆ. ಈ ಅಂತರಂಗದ ಪ್ರೇರಣೆಯು, ಈ ಅನನ್ಯ ಉತ್ಕಟ ಶೋಧವು. ಆದರ್ಶಪ್ರಾಪ್ತಿಯಾಗಿ ಧಾರೆ-ಎರೆದ ಜೀವನವು, ಭಗವಂತನನ್ನು ಪಡೆಯಲು ನಡೆಯಿಸಿದ ಆತನ ಪ್ರಯತ್ನಕ್ಕೆ ಯಶಸ್ಸನ್ನು ನೀಡುವವು."

"We must not, however, fail to note that **Bhava** or **Bhakti**, an unexplained and inexplicable love of God, is a fundamental requirement . Unless there is an element of **Saranagamana** or **Surrender** in our devotion and unless we resign ourselves completely to the power and will of God, no great achievement in spiritual life is possible. Finally the **Bhagavadgeeta** tells us that it is only through one-pointed devotion to God, that one may be able to know Him, see him and enter into Him."[22]

"ಭಾವ ಇಲ್ಲವೆ ಭಕ್ತಿಯು-ಅಪರ್ಣಿತ ಮತ್ತು ಅವರ್ಣನೀಯ ಭಗವಂತನ ಪ್ರೀತಿಯು-ಮೂಲಭೂತ ಅಗತ್ಯವಿರುವದು ಎಂಬುದನ್ನು ಮರೆಯಲಾಗದು. ನಮ್ಮ ಭಕ್ತಿಯಲ್ಲಿ ಶರಣಾಗಮನದ ಅಂಶವು ಇರದ ವಿನಾ, ನಾವು ಭಗವಂತನ ಸಾಮರ್ಥ್ಯ-ಸಂಕ

21) P. G. H.P. 362 22) B.P.G.P. 354-55

ಲ್ಪಗಳಿಗೆ ಪೂರ್ಣವಾಗಿ ಅಂಕಿತವಾಗದ ವಿನಾ, ನಮ್ಮ ಪರಮಾರ್ಥದಲ್ಲಿ ವಿಶೇಷ ಪ್ರಾಪ್ತಿಯು ಆಗಲರಿಯದು, ಕೊನೆಯದಾಗಿ ಗೀತೆಯು ಹೇಳಿರುವದೇನೆಂದರೆ, ಕೇವಲ ಅನನ್ಯ ಭಕ್ತಿಯಿಂದಲೇ ನಾವು ಭಗವಂತನನ್ನು ಅರಿಯಬಲ್ಲೆವು, ಕಾಣಬಲ್ಲೆವು ಹಾಗೂ ಸೇರಬಲ್ಲೆವು.

ಭಕ್ತ್ಯಾತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥11-54॥

(5) ಭಗವಂತನ ಪ್ರಸಾದದ ಅಂಗ : ನಮ್ಮ ಧ್ಯಾನವನ್ನು ಸಫಲಗೊಳಿಸುವ ಕೊನೆಯ ಅಂಗವು ಭಗವಂತನ ಕರುಣ-ಪ್ರಸಾದ. ಅದರ ಹಿರಿಮೆಯನ್ನು ಗುರುದೇವರು ಈ ಬಗೆಯಾಗಿ ಬಣ್ಣಿಸಿರುವರು.

"It is not simply by performing our devotional acts that we may be able to achieve our highest goal. God must be moved and it is only when he is moved that he will move the world by his Grace."[23]

"ನಾವು ಕೇವಲ ಭಕ್ತಿಭಾವದ ಕರ್ಮಗಳನ್ನು ನೆರವೇರಿಸಿ, ನಮ್ಮ ಉನ್ನತವಾದ ಸಾಕ್ಷಾತ್ಕಾರದ ಧ್ಯೇಯವನ್ನು ಪಡೆಯಲರಿಯೆವು. ನಮ್ಮ ಭಕ್ತಿಯಿಂದ ಭಗವಂತನ ಅಂತ:ಕರಣವು ಕರಗಬೇಕು. ಅದೊಮ್ಮೆ ಕರಗಿತೆಂದರೆ, ಅವನು ತನ್ನ ಕರುಣದಿಂದ ಇಡೀ ವಿಶ್ವವನ್ನು ಉದ್ಧರಿಸಬಹುದು."

ಅದಕ್ಕಾಗಿ, ಶ್ರೀ ನಿಂಬರಗಿ ಮಹಾರಾಜರವರ ಬೋಧೆಯ ಮೇರೆಗೆ,
ತನ್ನ ಸಂಸಾರವನು ಆತ್ಮನಿಗೆಒಪ್ಪಿಸುತ
ಅಪನ ಧ್ಯಾನದಿ ನಿರತನಿರಲು ಬೇಕು।
ತನ್ನದೆಲ್ಲವು ನಿತ್ಯ, ಆತ್ಮನನೆ ನೆಮ್ಮಿಹುದು
ಅಪನುಳಿದದೇನಯ್ಯ ಜರುಗಬೇಕು? ॥
ಅದಕೆಯವನನು ಸತತ ಸಾಧನದಿಒಲಿಸಿಕೊಳು
ಅಪನ ಬೆಳಕನೆ ಕಾಣುತಿರುವುದಯ್ಯ!।
ಅದನೆ ಕಾಣುತ, ಜಾಣತನದಿ ಬಾಳುತಲಿರಲು
ದೇವ ಕಂಗಳನು ಕೊಟ್ಟರುವನಯ್ಯ॥ (ಬೋಧಸುಧೆ)

ಕೊನೆಗೆ ಶ್ರೀ ಮಹಿಪತಿರಾಯರ ಕರುಳಿನ ಕರೆಯನ್ನು ಕೇಳಿ!
ಕರುಣಿಸೋ ಗುರು ಎನಗೆ ।
ಅರಗಳಿಗೆನ್ನ ಹೃದಯದಿಂದಗಲಧಾಂಗೆ ॥ ಪಲ್ಲ ॥
ಕಣ್ಣಿನಿಂದಲೆ ನಿನ್ನ ಕಾಣದಿದ್ದರೆ ಪೂರ್ಣ
ಪ್ರಾಣ ನಿಲ್ಲದೊ ನಿಮಿಷಾರ್ಧವಿಲ್ಲಿ ।

23) B.P.G.P. 255

ಕ್ಷಣ ಕ್ಷಣಕೆ ಒದಗಿನೀ ಋಣದೋರದಿದ್ದರೆ
ತನು ವಿಕಲಿತವಾಗಿ ಕ್ಷೀಣ ಹೊಂದುವದೋ ।।1।।

ಈ ಬಗೆಯಾಗಿ ದಿವ್ಯನಾಮ-ಧ್ಯಾನದಿಂದ ಭಗವಂತನ ಸಾಕ್ಷಾತ್ ಸಂಪರ್ಕ, ಸಂಸ್ಪರ್ಶ, ಸಂಯೋಗ, ಸಾಮರಸ್ಯಗಳು ಲಭಿಸುವದರಿಂದ, ಅದೊಂದೇ ನಿಜವಾದ ಸಾಕ್ಷಾತ್ಕಾರದ ಸಾಧನವಾಗಬಲ್ಲದು ಎಂಬುದು ಗುರುದೇವರ ಅಭಿಮತ.

ಅನುಭೂತಿ-ಸಮನ್ವಯ :

ಇನ್ನು ಈ ದಿವ್ಯನಾಮದಿಂದ ಲಭಿಸುವ ಅನುಭೂತಿ-ಸಮನ್ವಯವನ್ನು ವಿವರಿಸುವೆ. ಮೊದಲು ಅನುಭೂತಿಯ ಸರಿಯಾದ ಸ್ವರೂಪ ವೈಭವವನ್ನೂ, ಅದನ್ನು ಕುರಿತು ಗುರುದೇವರ ಒಂದು ವಿಶೇಷ ಸಿದ್ಧಾಂತವನ್ನೂ ಅರುಹಿ, ತರುವಾಯ ಅನುಭೂತಿಯ ಅಂಗಾಂಗಗಳಲ್ಲಿಯ ಸಮನ್ವಯವನ್ನು ಕಾಣಿಸುವೆ. ಕೊನೆಗೆ ಇಂಥ ಉಜ್ವಲ ಅನುಭೂತಿಯ ಶಿಖರವನ್ನು ಮುಟ್ಟಿದ ಆದರ್ಶ ಮಹಾತ್ಮರ ದಿವ್ಯ ಜೀವನದ ಹಿರಿಮೆಯನ್ನು, ನಮ್ಮ ಋಷಿಮುನಿಗಳ ಹಾಗೂ ಸಂತರ ಮಾತುಗಳಲ್ಲಿ ಬಣ್ಣಿಸಲು ಯತ್ನಿಸುವೆ.

ಸ್ವರೂಪ-ವೈಭವಗಳು : ಶ್ರೀ ಗುರುದೇವರ ಅಭಿಮತದ ಮೇರೆಗೆ, ಅನುಭೂತಿಯು ಒಮ್ಮೆ ಹೊಳೆದ ಒಂದು ಅತೀಂದ್ರಿಯ ಅನುಭವವಲ್ಲ; ಅದೊಂದು ಕ್ರಮಶ: ಬೆಳೆಯಲಿರುವ ಅನುಭಾವಗಳ ಮಾಲೆ.

"It is not an event, it is a process." "ಅದೊಂದು ಘಟನೆಯಲ್ಲ. ಒಂದು ಬೆಳೆಯಲಿರುವ ಪ್ರತಿಕ್ರಿಯೆ" ಎಂದು ಅವರು ಹೇಳುತ್ತಿದ್ದರು. ಅದು ಒಂದು "ಬಿಂದು"ವಿನ ದರ್ಶನದಿಂದ ಪ್ರಾರಂಭವಾಗಿ, "ಸಿಂದು"ವಿನ ದರ್ಶನದವರೆಗೆ ಬೆಳೆಯುವದು. "ಬಿಂದು" ಎಂದರೆ-Spiritual Atom ಪಾರಮಾರ್ಥಿಕ ಪರಮಾಣು. ಅದಕ್ಕವರು Spiriton ಎಂದು ಸಂಬೋಧಿಸುತ್ತಿದ್ದರು. ಅನುಭೂತಿಯ ಉಜ್ವಲ ವೈಭವವನ್ನು ಇಲ್ಲಿ ಬಣ್ಣಿಸುವದು ಸಾಧ್ಯವಿಲ್ಲ. ಅದನ್ನು ಗುರುದೇವರ ಗ್ರಂಥಗಳಿಂದಲೇ ಅರಿತುಕೊಳ್ಳಬೇಕು. ಅದರ ಅಲ್ಪಪರಿಚಯವನ್ನು ಮಾತ್ರ ಕೆಲ ಪದ್ಯಗಳ ಮುಖಾಂತರ ಮಾಡಿಕೊಡಲಿರುವೆ.

"ಬಿಂದು" ದರ್ಶನ ಆದಿ, ಅಂತ್ಯವು। ಬಿಂದು "ಸಿಂಧೂ" ಸಂಗಮ।
ನಡುವನಂತನು ತುಂಬ ವೈಭವ। ವನ್ನು ತೋರುವ ಅನುಪಮ ।।
ಮುತ್ತಿನಾ ಮಳೆ ಕರೆದು, ಬಹುವಿಧ। ಚಿಕ್ಕೆಗಳು ತಾ ಹೊಳೆವವು।
ಇರುಳು ರವಿ, ಚಂದಿರನು ಹಗಲಲಿ। ಬೆಳಗಿ ಸೋಜಿಗ ಗೊಳಿಪುವು।।
ಸೂರ್ಯನಿಲ್ಲದ ಸುಪ್ರಕಾಶವು। ಚಂದ್ರನಿಲ್ಲದ ತಿಂಗಳು।
ದಿವ್ಯ ಬೆಳಕಿನ ಭಾನು ನೀಡುದು। ಸಾಧಕರಿಗಚ್ಚರಿ ಯನು ।।
ವಿವಿಧನಾಹತ ನಾದಗಳು ಮೇಣ್। ಮಧುರ ಅಮೃತ ಧಾರೆಯು।

ಸುರಭಿ ಶೀತಲ ಅನಿಲ, ಸಾಧಕ। ರಿಂಗೆ ಸಂತಸಗೊಳಿಪವು ॥
ಆತ್ಮರೂಪವು ವಿಶ್ವರೂಪವು। ಶೂನ್ಯರೂಪ ಅರೂಪವು।
"ಸರ್ವಂ ಖಲ್ವಿದಂ ಬ್ರಹ್ಮ" ರೂಪವು। ಶಾಂತಿಯಲಿ ಮುಳುಗಿಸುವವು॥
ಶಾಂತಿ-ಸಾಗರದಲ್ಲಿ ಸಾಧಕ। ದೇಹದರಿವನು ಮರೆವನು।
ಮರಳಿವೃತ್ತಿಯು ಜನಿಸಲೋಸುಗ। ತುಂಬ ಯತ್ನವ ಮಾಳ್ಪನು ॥
(ಗುರುದೇವ ಚರಿತಾಮೃತ)

ಇದಾಯಿತು ಅನುಭೂತಿಯ ಸಾಮಾನ್ಯ ಸ್ವರೂಪ. ಅದರ ವೈಭವವನ್ನು ಮುಂದಿನ ಎರಡು ಪದಗಳ ಸಾಲುಗಳಲ್ಲಿ ಕಾಣಬಹುದು. ಜ್ಞಾನದೇವರ ಆರತಿಯಲ್ಲಿಯವು ಕೆಲವು, ಮಹಿಪತರಾಯರ ಪದಗಳಲ್ಲಿಯ ಕೆಲವು.

(1) ಆರತಿಯ ಅನುವಾದ

ಭಾಗ್ಯವಿಂದು ಬೆಳಗೆ ಎನ್ನ। ಧನ್ಯ ಧನ್ಯನಾದೆನಮ್ಮ ॥ಪ॥
.....
ಹೊಳೆದಿಹುದು ಆರತಿಯು ಇಂದೆನ್ನ ಹೃದಯದಲಿ।
ಬೆಳೆದ ಬೆಳಕದು ತುಂಬಿ ತುಳುಕಿಹುದು ನಭದಲ್ಲಿ॥
ಮೊಳಗುವವು ಅನಾಹತದ ದಿವ್ಯ ವಾದ್ಯಗಳಲ್ಲಿ।
ಮುಳುಗಿದರು ಚಂದ್ರ-ಸೂರ್ಯರು ಭವ್ಯ ಪ್ರಭೆಯಲ್ಲಿ॥
ಏನು ಹೇಳಲಿ। ಅಂದಿನಾನಂದ ಸಂಭ್ರಮ।
ಆರತಿಯ ಬೆಳಗುತಿರೆ ಅಳಿಯಿತೆನ್ನಯ ಹಮ್ಮ ॥1॥
ಆನಂದ ಸಾಗರದಿ ಪ್ರೇಮದಿಂ ಮುಳುಗಿದೆನು।
ಅರುಹಬಾರದ ಅಮಿತ ಸೌಖ್ಯವನು ಪಡೆದಿಹೆನು॥
ಹಿರಿಗುರುವಿನೊಡನಿಂಥ ಆರತಿಯ ಬೆಳಗಿಹೆನು।
ಪರಮಾನಂದದಲಿ ವೃತ್ತಿಯನೆ ಮರೆತಿಹೆನು॥
ಏನು ಹೇಳಲಿ। ಅಂದಿನಾನಂದ ಸಂಭ್ರಮ।
ಆರತಿಯು ಬೆಳಗುತಿದೆ। ಮರೆತ ಮೈ ಮನವಮ್ಮ॥

(2) ಪರಮಾತ್ಮನ ರೂಪದರ್ಶನ

ವಸ್ತು ಕಂಡೆನೋ ಒಂದು।
ಕರ್ತ ಸದ್ಗುರುವಿನ ದಯದಿಂದ ॥ ಪಲ್ಲ॥
ತೇಜ: ಪುಂಜದ ರೂಪಾ।
ಮೂರ್ಜಗದೊಳಗಿದು ಅಪರೂಪಾ॥
ನಿಜ ನಿರ್ವಿಕಲ್ಪಾ।
ಸಜ್ಜನ ಹೃದಯದಿ ಚಿದ್‌ಘನ ದೀಪಾ ॥1॥
ರೂಪಕ ನೆಲೆಯಲ್ಲ।

ವ್ಯಾಪಕವಾಗಿಹುದು ಮೂಜಗವೆಲ್ಲ।
ಗುಪ್ತಜ್ಞಾನಿಯೆ ಬಲ್ಲಾ।
ಜಪತಪಗಳಿಗಿದು ಸಿಲುಕುವದಲ್ಲ ॥2॥
ಬೈಲಿಗೆ ನಿರ್ಬೈಲಾ।
ಭಾವಿಕ ಬಲ್ಲನು ಇದರ ಹೊಯಿಲಾ॥
ಮಹಿಪತಿಗನುಕೂಲಾ।
ಜೀವನ್ಮುಕ್ತಿಗಿದೆ ಮೂಲಾ ॥3॥

ಅಸಂಪಾತ ಅನುಭೂತಿ : (Asymptotic Realisation)

ಭಗವಂತನು ಅನಂತನು ಆದುದರಿಂದ ಆತನ ಅನುಭೂತಿಗೆ ಅಂತವೇ ಇರುವದಿಲ್ಲ. ಗುರುದೇವರು ಈಅನುಭೂತಿಯ ಅನಂತತ್ವವನ್ನು ಕುರಿತು ತಮ್ಮದೇ ಆದ "**ಅಸಂಪಾತ ಅನುಭೂತಿ**" (Asymptotic Realisation) ಎಂಬ ಸಿದ್ಧಾಂತವನ್ನು ಅರುಹಿರುವರು. ಅದನ್ನವರು "**ಸನ್ನಿಧೀ-ಕರಣ ಸಿದ್ಧಾಂತ**" (Theory of Approximation)ಎಂದೂ ಕರೆಯುತ್ತಿದ್ದರು. ಅವರು ಅದನ್ನು ಈ ರೀತಿ ವಿವರಿಸಿರುವರು.

"ಅಸಂಪಾತ-ರೇಖೆಯು-(Asymptote), ಅಕ್ಷರೇಖೆಯನ್ನು (Axis)ಸಮೀಪಿಸುತ್ತಾಸಾಗುವಂತೆ ಹಾಗೂ ಅನಂತತ್ವದಲ್ಲಿಯೆ ಅದನ್ನು ಕೂಡುವಂತೆ, ಬೆಳೆಯಲಿರುವ ಅನುಭಾವಿಯು ಭಗವಂತನನ್ನು ನಿಧಾನವಾಗಿ ಸಮೀಪಿಸುತ್ತಾಸಾಗುವನು. ಮತ್ತು ಆತನನ್ನು ಅನಂತತ್ವದಲ್ಲಿಯೇ ಸೇರುವನು. ಅವರೀರ್ವರಲ್ಲಿ ಅಲ್ಪಭೇದ ಉಳಿದೇ ಉಳಿಯುವದು. ಅನುಭಾವಿಯು ದೇಹಧಾರಿಯಾಗಿ ಬಾಳುವವರೆಗೆ, ಅವನು ಭಗವಂತನಲ್ಲಿ ಬೆರೆತರೂ, ಅವನು ಭಕ್ತನಾಗಿಯೇ ಉಳಿಯುವನು. ಸಂತರು ತಮ್ಮ ದೈಹಿಕ ಕ್ರಿಯೆಗಳನ್ನು ನಡೆಯಿಸುವವರೆಗೆ ಸಂತರಾಗಿಯೇ ಉಳಿಯುವರು"[24] ಎಂದು ಜ್ಞಾನದೇವರು ಹೇಳಿರುವರು. ಇದು ಈ ಸಿದ್ಧಾಂತದ ತಿರುಳು.

ಸಾಮಾನ್ಯವಾಗಿ ಸಾಧಕನ ಅನುಭವಗಳು ಕ್ರಮಶ: ಬೆಳೆಯುತ್ತಹೋಗುವವು Perfection is only gradual. "ಅವುಗಳ ಪೂರ್ಣತೆಯು ನಿಧಾನವಾಗಿಯೇ ಸಾಗುವದು." ಆದುದರಿಂದ ಅನುಭೂತಿಯಲ್ಲಿ ಅನಂತ ಪ್ರಕಾರಗಳು ಮೈದಳೆಯುವವು. ಅವುಗಳಿಗ್ಲೆ ಅಂತವೇ ಇರಲರಿಯದು.

ಪ್ರಕಾರಗಳು-ಸಮನ್ವಯ :

ಈ ಅನುಭೂತಿಗಳ ಪ್ರಧಾನ ಪ್ರಕಾರಗಳು ಐದು. ನಾಮಧ್ಯಾನದಿಂದ ಜನಿಸಿದ ಆತ್ಮಚೈತನ್ಯವು ಸಾಧಕನ ಮಿದುಳಿನಲ್ಲಿಯ ಐದು ಜ್ಞಾನ ಕೇಂದ್ರಗಳನ್ನು ಜಾಗ್ರತಗೊಳಿಸುವ ಮೂಲಕ, ಅವುಗಳಿಗೆ ಅದು "**ರೂಪ, ನಾದ, ರಸ, ಗಂಧ, ಸ್ಪರ್ಶ**" ಎಂಬ ಐದು ಬಗೆಗಳಿಂದ ಪ್ರತೀತವಾಗುವದು. ಆದುದರಿಂದ ಈ ಅನುಭೂತಿಯಲ್ಲಿ

24) B.G.P. PP 70-71

ರೂಪಾನುಭವ, ನಾದಾನುಭವ, ರಸಾನುಭವ, ಗಂಧಾನುಭವ, ಹಾಗೂ ಸ್ಪರ್ಶಾನುಭವ ಎಂಬ ಪ್ರಧಾನ ಪ್ರಕಾರಗಳು ಉಂಟಾಗುವವು. ಆದರೆ ಇವುಗಳಲ್ಲಿಯ ಪ್ರತಿಯೊಂದು ಬಗೆಯಲ್ಲಿ ಅನಂತ ಬಗೆಗಳು. ಇವುಗಳ ಸಂಯೋಗ-ಸಮ್ಮಿಶ್ರಣಗಳಿಂದ ಮತ್ತೆ ಅನಂತ ಬಗೆಗಳು ಉಂಟಾಗುವವು. ಇವೆಲ್ಲ ಪ್ರಾತಿಭ ಅನುಭವಗಳು. ಕಾಮನ ಬಿಲ್ಲಿನಲ್ಲಿಯ ಬಣ್ಣಗಳಿಗೆ ಸೂರ್ಯಕಿರಣ ಕೇಂದ್ರವಾಗಿರುವಂತೆ, ಈ ಎಲ್ಲ ಅನುಭವಗಳಿಗೆ ಪ್ರತಿಭೆಯೇ ಕೇಂದ್ರ. ಪ್ರತಿಭೆಯಲ್ಲಿ ಅವೆಲ್ಲ ಸಮನ್ವಯಗೊಳ್ಳುವವು, ಸಮರಸವಾಗುವವು.

(1) **ಸಾಂತ-ಅನಂತ ಸಮನ್ವಯ :** ಕೆಲ ಅನುಭವಗಳು ಸಾಂತವಿರುವವು. ಅವುಗಳಲ್ಲಿ ಗುಣಸಾಮ್ಯ ಹಾಗೂ ಪರಿಮಾಣ-ವೈಷಮ್ಯವಿರುವದು. (Qualitative equality and quantitative difference) ಆದರೆ ಕೆಲವು ಅನಂತವಿರುವವು. ಉದಾಹರಣೆಗಾಗಿ : "ಬಿಂದು-ಬಯಲಿಗೆ ನಿರ್ಬೈಲ" (ಮಹಿಪತಿದಾಸರು) "ಹದ್-ಬೇಹದ್" (ಕಬೀರ)

ಹದ್ ಹದ್ ಪರ ಸಬ ಗಯೇ । ಬೇಹದ್ ಗಯಾ ನ ಕೋಯ ।
ಬೇಹದ್ ಕಾ ಮೈದಾನ ಮೇ । ಖೇಲತ ಕಬೀರಾ ಸೋಯ ॥

"ಕೆಲ ಮರ್ಯಾದೆಯ ವರೆಗೆ ಎಲ್ಲರೂ ಹೋಗಿರುವರು. ಅದರಾಚೆಗೆ ಯಾರೂ ತೆರಳಿಲ್ಲ. ಅಮರ್ಯಾದವಾದ ಅನಂತ ಬಯಲಿನಲ್ಲಿ ಕಬೀರನೊಬ್ಬನೇ ಆಡುತ್ತಿರುವ.

(ii) ನವ್ಯ-ಭವ್ಯ ಸಮನ್ವಯ: ನವ್ಯ(Beautiful), ಭವ್ಯ(Sublime), ಇವುಗಳ ಸಮನ್ವಯ ದಿವ್ಯದಲ್ಲಿ(Divine) ಆಗುವದು. ನವ್ಯವು ಆಕರ್ಷಿಸುವದು-Beauty attracts, ಮತ್ತು ಭವ್ಯವು ವಶಪಡಿಸಿಕೊಳ್ಳುವದು. Sublimity Conquers. ನವ್ಯತೆಯ ಅನುಭವದಲ್ಲಿ ಪ್ರೀತಿ-ಆನಂದಗಳಿದ್ದರೆ, ಭವ್ಯತೆಯಲ್ಲಿ ಭೀತಿ, ಆನಂದ, ಪ್ರೀತಿ, ಅದರ ಒಳಗೊಂಡಿರುವವು.

ಆದೃಷ್ಟಪೂರ್ವಂ ಹೃಷಿತೋ ಸ್ಮಿ ದೃಷ್ಟ್ವಾ ।
ಭಯೇನ ಚ ಪ್ರವ್ಯಥಿತಂ ಮನೋ ಮೇ ॥11-45॥

ಎಂದು ತನಗೆ ಭಗವಂತನ ವಿಶ್ವರೂಪ ದರ್ಶನದಿಂದ ಹರ್ಷ-ಭಯ ಉಂಟಾಯಿತೆಂದು ಅರ್ಜುನನು ಉಸುರಿರುವನು.

(iii) **ಆನಂದ-ಶಾಂತಿ ತಾರತಮ್ಯ :** ಶ್ರೀ ಗುರುದೇವರು ಇವುಗಳ ಪರಸ್ಪರ ಸಂಬಂಧವನ್ನೂ ಅವುಗಳಲ್ಲಿಯ ತಾರತಮ್ಯವನ್ನೂ ಈ ಕುರಿತು ಈ ರೀತಿ ಬರೆದಿರುವರು.

"Peace does not lead to joy, but joy leads to peace,

25) B.P.G.P. 265

and hence it is that peace might be regarded as the apex of joy."[25]

"ಶಾಂತಿಯು ಆನಂದದೆಡೆ ಒಯ್ಯುವದಿಲ್ಲ, ಆದರೆ ಆನಂದವು ಶಾಂತಿಯೆಡೆ ಒಯ್ಯುವುದು, ಶಾಂತಿಯಲ್ಲಿ ಪರಿಣಿತವಾಗುವದು. ಆದುದರಿಂದ ಶಾಂತಿಯು ಆನಂದದ ಶಿಖರವೆಂದು ಪರಿಗಣಿಸಬಹುದು.

(iv) **ಅನುಭಾವ ಸೋಪಾನ: ಸ್ವರೂಪ-ದರ್ಶನವು-ಆತ್ಮದರ್ಶನವು** ಶ್ರೀಗುರುದೇವರ ಸಂಪ್ರದಾಯದಲ್ಲಿ ವಿಶೇಷ ಪ್ರಾಧಾನ್ಯವನ್ನು ಪಡೆದಿರುವರು. ಆತ್ಮದರ್ಶನ ಪಡೆದ ಸಾಧಕನು **"ಅನುಭಾವ ಸೋಪಾನ"**ವನ್ನು (Spiritual Experience) ಏರಿ, ಅನುಭೂತಿಯ ಶಿಖರವನ್ನು ಪಡೆಯುವನೆಂದು ಗುರುದೇವರು ಹೇಳಿರುವರು. ಈ ಸೋಪಾನಕ್ಕೆ ಐದು ಮೆಟ್ಟಿಲುಗಳನ್ನು ಅವರು ಕಾಣಿಸಿರುವರು.

(1) **ಆತ್ಮಾ ವಾ ಅರೇ ದ್ರಷ್ಟವ್ಯ :** ಆತ್ಮನನ್ನು ಕಾಣತಕ್ಕದ್ದು. ಆತ್ಮದರ್ಶನವು ಈ ಸೋಪಾನದ ಮೊದಲನೆಯ ಮೆಟ್ಟಿಲು. ಇಲ್ಲಿ ತಾನು ಆತ್ಮನಿಂದ ಬೇರೆ ಇರುವೆನು ಎಂಬ ಭಾವನೆಯು ಸಾಧಕನಲ್ಲಿ ಇರುವದು.

(2) **ಆತ್ಮಾನಂ ವಿಜಾನೀಯಾತ್ ಅಯಮಸ್ಮೀತಿ ಪೂರುಷ :।** ಆ ಮೇಲೆ ತನ್ನಲ್ಲಿಯ "ನಾನು" ಎಂಬುವದನ್ನು ಈ ಆತ್ಮನೇ ಇರುವ ಎಂಬುದನ್ನು ಸಾಧಕನು ಅರಿಯಬೇಕು. ಅನುಭವಿಸಬೇಕು. ನಾನು ದೇಹ, ಮನ, ಬುದ್ಧಿಗಳಲ್ಲ ಶುದ್ಧ ಆತ್ಮ ಇರುವೆನು, ಎಂಬುದನ್ನು ಸಾಧಕನು ಅರಿಯಬೇಕು. ಅನುಭವಿಸಬೇಕು. ಇದು ಎರಡನೆಯ ಮೆಟ್ಟಿಲು.

(3) **ಅಯಮಾತ್ಮಾ ಬ್ರಹ್ಮ।** ತರುವಾಯ ಈ ಆತ್ಮನು ಬ್ರಹ್ಮನಿರುವ ಎಂಬುದನ್ನು ಅವನು ಅನುಭವಿಸಬೇಕು. ಇದು ಮೂರನೆಯ ಮೆಟ್ಟಿಲು.

(4) **ಅಹಂ ಬ್ರಹ್ಮ ಅಸ್ಮಿ। ತತ್ ತ್ವಮಸಿ।** "ನಾನು ಬ್ರಹ್ಮನಿರುವೆ ನೀನು ಅದು (ಬ್ರಹ್ಮ) ಇರುವಿ" ಎಂಬುದರ ಅರಿವು-ಅನುಭೂತಿಯು ಆ ಮೇಲೆ ಸಾಧಕನಲ್ಲಿ ಮೈದಳೆಯಬೇಕು. ನಾನು ಆತ್ಮನು, ಆತ್ಮನು ಬ್ರಹ್ಮನು. ಅಂದ ಮೇಲೆ ಸ್ವಾಭಾವಿಕವಾಗಿ ನಾನು ಬ್ರಹ್ಮ, ಎಂಬ ಅನುಮಾನವು ತರ್ಕದಿಂದ ಸಿದ್ಧವಾಗುವದು. ಅದೇ ಮೇರೆಗೆ "ನೀನು ಬ್ರಹ್ಮ" ಎಂಬ ಅನುಮಾನವೂ ಸಿದ್ಧವಾಗುವದು. ಈ ತರ್ಕಜನ್ಯ ಅನುಮಾನ, ಅನುಭವಜನ್ಯ ಅರಿವು ಆಗಬೇಕು. ಇದು ಸಾಲ್ಕನೆಯ ಮೆಟ್ಟಿಲು.

(5) **ಸರ್ವಂ ಖಲು ಇದಂ ಬ್ರಹ್ಮ।** "ಇದೆಲ್ಲವೂ ಬ್ರಹ್ಮ". ಇದು ಅದ್ವೈತ ಸಿದ್ಧಾಂತದ ಚರಮ ಸ್ಥಿತಿ. ಇದು ಕೇವಲ ಬುದ್ಧಿಯಿಂದ ಅರಿಯತಕ್ಕದ್ದಲ್ಲ. ಇದನ್ನು ಸಾಕ್ಷಾತ್ ಅನುಭವಿಸತಕ್ಕದ್ದು ಎಂದು ಗುರುದೇವರು ಹೇಳಿರುವರು.[26]

ಈ ಬಗೆಯಾಗಿ ದ್ವೈತ, ವಿಶಿಷ್ಟಾದ್ವೈತ ಹಾಗೂ ಅದ್ವೈತ ಸಿದ್ಧಾಂತಗಳ ಸಮನ್ವ

26) C.S. PP 210 - 202

ಯವನ್ನು ಗುರುದೇವರು ಕಾಣಿಸಿರುವರು.

ಪರಿಣಾಮ-ಆತ್ಮೋದ್ಧಾರ-ಲೋಕೋದ್ಧಾರ :

ಮೇಲ್ಕಾಣಿಸಿದ ಅದ್ವೈತಾನುಭವದಲ್ಲಿಯ ಆನಂದ-ಶಾಂತಿಗಳನ್ನು ಪಡೆದ. ಸಂತರು, ತಾವು ಪಡೆದುದನ್ನು ಭೂತದಯೆಯ ಮೂಲಕವೂ, ಭಗವಂತನ ಆಜ್ಞೆಯ ಮೂಲಕವೂ, ತಮ್ಮ ಸುತ್ತಲಿನ ಬಳಗದವರಿಗೆ ನೀಡಲು ಪ್ರಾರಂಭಿಸುವರು. ಯಾಕೆಂದರೆ, ಅದು ಅವರ ಸಹಜ ಸ್ವಭಾವವಾಗುವದು. ಗುರುದೇವರು ಅರುಹಿದ ಮೇರೆಗೆ :

"There is an inexpressible joy in partaking of bliss, not merely for oneself, but in the company of those who have been recipients of similar bliss. It is in this manner that the saints become responsible for the spread of God's Gospel....."[27]

"ತಾನು ಪಡೆದ ಪರಮಾನಂದವನ್ನು ತನ್ನಷ್ಟಕ್ಕೆ ತಾನೇ ಸೇವಿಸುವ ಬದಲು, ಅಂಥ ಆನಂದವನ್ನು ಪಡೆದ ಬೇರೆ ಜನರ ಸಹವಾಸದಲ್ಲಿ ಸೇವಿಸುವದರಲ್ಲಿ ಒಂದು ಅವರ್ಣನೀಯವಾದ ಅಲ್ಹಾದವಿರುವದು. ಈ ಬಗೆಯಾಗಿಯೇ ಸಂತರು ಭಗವಂತನ ಭಕ್ತಿಯನ್ನು ಹರಡಲು ಸಮರ್ಥರಾಗುವರು."

ಶ್ರೀ ಜ್ಞಾನೇಶ್ವರರು ಬಣ್ಣಿಸಿದ ಮೇರೆಗೆ :

"Like two adjacent lakes, sending out their waves into each other, one saint sends out waves of joy into the other and receives back from him similar waves of joy, when the wind of God's Grace blows over both of them."[28]

"ಬದಿಯಲ್ಲಿ ನೆಲೆಸಿದ ಎರಡು ಸರೋವರಗಳು ತಮ್ಮ ತಮ್ಮ ತರಂಗಗಳನ್ನು ಪರಸ್ಪರರಿಗೆ ಸಲ್ಲಿಸುವ ಮೇರೆಗೆ, ಒಬ್ಬ ಸಂತನು ತನ್ನ ಆನಂದ-ತರಂಗಗಳನ್ನು ಇನ್ನೊಬ್ಬನಿಗೆ ಸಲ್ಲಿಸುವ, ಮತ್ತೂ ಅವನಿಂದ ಅಂಥ ಆನಂದ ತರಂಗಗಳನ್ನು ಪಡೆಯುವ, ಯಾವ ಸಮಯಕ್ಕೆ ಭಗವಂತನ ಪ್ರಸಾದದ ತಂಗಾಳಿಯು ಬೀಸತೊಡಗುವದೋ ಆಗ ಈ ಬಗೆಯ ಆನಂದ-ತರಂಗಗಳ ವಿನಿಮಯವು ಭರದಿಂದ ಸಾಗುವದು."

ಇಂಥ ಸಂತರ ಬಳಗವನ್ನು ಕುರಿತು, ಗುರುದೇವರು ಮತ್ತೂ ಈ ರೀತಿ ಹೇಳಿರುವರು. "ಈ ಪ್ರಪಂಚದಲ್ಲಿ ನಿಜವಾದ ಪರಮಾರ್ಥವನ್ನು ಪಡೆದ ನೂರು ಇನ್ನೂರು ಮಹನೀಯರು ಉದಿಸಿದರೆ, ಮಾನವತೆಯ ಕಲ್ಯಾಣದ ಸಮಸ್ಯೆಯು ಬೇಗ ಬಿಡಬಹುದು. ಯಾಕೆಂದರೆ ಪಾರಮಾರ್ಥಿಕ ಅನುಭವವೇ ಸಮತೆಯ ಶಾಶ್ವತವಾದ ತಳಹದಿ ಆಗಬಹುದು." ಇಂಥ ಸಂತರ ಲೋಕೋದ್ಧಾರದ ಕಾರ್ಯವನ್ನು ಶ್ರೀ ಜ್ಞಾನದೇವರು ಚೆನ್ನಾಗಿ ಬಣ್ಣಿಸಿರುವರು. ಅದರ ಕನ್ನಡ ಅನುವಾದವು ಇಂತಿದೆ.

27) B.P.G.P. 169 28)Ibid P -269

ಪಾಪ ತಾಪವ ಕಳೆದು ಕಾಪಾ । ಡುತಲಿ ತೀರದ ತರುಗಳ ।
ಸಾಗರವ ಸೇರುವ ತೆರೆದಲಾ । ಗಂಗೆಯಾ ಪಾವನ ಜಲ ॥
ಜನರ ಅಂಧತೆಯನ್ನು ಅಳಿಸುತ । ತೆರೆದು ಬೆಳಕಿನಲಿ ದೇಗುಲ ।
ಜಗವ ಸುತ್ತುವ ತೆರದಿ ತೇಜದ । ತವರು ಭಗ್ಗವಾನ್ ಭಾಸ್ಕರ ॥
ಸಂತ ಬಂಧನವನ್ನು ಬಿಡಿಸುವ । ಮುಳುಗಿದವರನು ಎತ್ತುವ ।
ಬಳಲುತಿಹ ಔರ್ತರಿಗೆ ಸಂಕಟ । ದಲ್ಲಿ ತಾಕ್ಕೆ ನೀಡುವ॥
ಹಗಲಿರುಳು ಸಾಧಿಸಲು ಅನ್ಯರ । ಸೌಖ್ಯ ವನ್ನುನ್ನತಿಯನು ।
ದುಡಿದುಡಿದು ಅದರಲ್ಲಿ ನೋಡುವ । ತನ್ನ ಸ್ವಂತದ ಸುಖವನು ॥ (ಜಾ.16-199-202)

ಆದರ್ಶ ಮಹಾತ್ಮರು-ಅವರ ಸಾಮ್ಯದರ್ಶನ :

(1) ಆದರ್ಶ ಋಷಿ : (An Ideal Sage)

"He sees the Atman in all and sees the Atman alone.... All his desires have been at an end, because he has attained to the fulfilment of the highest desire namely the realisation of the **Atman**. As drops of water may not adhere to the leaf of a lotus. even so may sin never contaminate him.... He has attained to eternal tranquility and having realised the **Atman**, he has found eternal happiness every where."[29]

"He obtains infinite power, enjoys illimitable joy. He is free from all fear."[30]

"ಅವನು ಎಲ್ಲರಲ್ಲಿ ಆತ್ಮನನ್ನು ಕಾಣುವನು. ಅವನು ಎಲ್ಲ ಬಯಕೆಗಳು ಅಳಿಯುವವು. ಯಾಕೆಂದರೆ, ಆತ್ಮ-ಸಾಕ್ಷಾತ್ಕಾರರೂಪಿಯಾದ ಶ್ರೇಷ್ಠತಮ ಬಯಕೆಯನ್ನು ಆತನು ಪಡೆದಿರುವನು. ಕಮಲದಳಕ್ಕೆ ನೀರಿನ ಹನಿಗಳು ಅಂಟದಂತೆ, ಅವನನ್ನು ಪಾಪವು ಸೋಂಕಲರಿಯದು. ಅವನು ಶಾಶ್ವತ ಶಾಂತಿಯನ್ನು ಪಡೆದಿರುವನು. ಮತ್ತು ಆತ್ಮನನ್ನೇ ಸಾಕ್ಷಾತ್ಕರಿಸಿಕೊಂಡ ಮೂಲಕ ಅವನಿಗೆ ಎಲ್ಲೆಡೆ ಆನಂದವೇ ಲಭಿಸುವದು."

"ಅವನು ಅಪಾರ ಸಾಮರ್ಥ್ಯವನ್ನೂ, ಮಿತಿ ಮೀರಿದ ಪರಮಾನಂದವನ್ನೂ ಅನುಭವಿಸಿ, ನಿರ್ಭೀತನಾಗಿರುವನು."

(2) ಸ್ಥಿತಪ್ರಜ್ಞಾ. (Equanimous Saint) :

"The ideal sage of the Gita withdraws his mind and senses from the objects and maintains perfect equanimity. He

29) G.S.P. 231 30) I bid P 256

transcends the duality of pleasure and pain, honour and dishonour. He is free from desire of any kind. He is "Sarva-bhuta-hite-rata" or interested in working for the welfare of all beings. Wherenever his eye is cast, he sees God. He cannot remain to himself. He tries to come in contact with souls, similar to himself. He enjoys his bliss in their company and carries on his mission of spreading the Gospel of God."[31]

"ಗೀತೆಯ ಆದರ್ಶಸಂತನು ವಿಷಯಗಳಿಂದ ಮನಸ್ಸನ್ನೂ, ಇಂದ್ರಿಯಗಳನ್ನೂ ಬೇರ್ಪಡಿಸುವನು. ಮತ್ತು ಪೂರ್ಣ ಸಮತ್ವವನ್ನು ತಳೆಯುವನು. ಅವನು ಸುಖ-ದು:ಖ, ಮಾನ-ಅಪಮಾನ, ಈ ದ್ವಂದ್ವಗಳನ್ನು ಮೀರುವನು. ಅವನು ಎಲ್ಲ ಬಗೆಯ ಬಯಕೆಗಳಿಂದ ಮುಕ್ತನಿರುವನು. ಅವನು ಎತ್ತ ನೋಡಿದರೂ, ಪರಮಾತ್ಮನನ್ನು ಕಾಣುವನು. ಅವನು ತನ್ನಷ್ಟಕ್ಕೆ ತಾನು ಇರಲರಿಯನು. ಅವನು ತನ್ನಂಥ ಜೀವಿಗಳೊಡನೆ ಸಂಪರ್ಕ-ಸಂಬಂಧ ಬೆಳೆಸಲು ಬಯಸುವನು -ಯತ್ನಿಸುವನು. ಅವನು ತನ್ನ ಆತ್ಮಾನಂದವನ್ನು ಅವರ ಸಹವಾಸದಲ್ಲಿ ಪಡೆಯಲೆಳಸುವನು ಮತ್ತು ಪರಮಾತ್ಮನ ಭಕ್ತಿಯ ಸಂದೇಶವನ್ನು ಬೀರುವ ಕಾರ್ಯವನ್ನು ನೆಡಸುವನು."

(3) ಶ್ರೀಪ್ರಭುದೇವರ ಅನುಪಮ ಶರಣ :

ಕಂಡುದೆಲ್ಲ ಪಾವನ, ಹೇಳಿತ್ತೆಲ್ಲ ಪರಮ ಬೋಧೆ.
ಮುಟ್ಟಿತೆಲ್ಲವು ಪರುಷದ ಸೊಂಕು।
ಒಡನೆ ಕೂಡಿದವರೆಲ್ಲರು ಸದ್ಯೋನ್ಮುಕ್ತರು.
ಸುಳಿವ ಸುಳುಹೆಲ್ಲ ಜಗತ್ಪಾವನ।
ಮೆಟ್ಟಿದ ಧರೆಯೆಲ್ಲವು ಅವಿಮುಕ್ತಕ್ಷೇತ್ರ.
ಸೋಂಕಿದ ಜಲವೆಲ್ಲವು ಪುಣ್ಯತೀರ್ಥಂಗಳು.
ಶರಣೆಂದು ಭಕ್ತಿಯ ಮಾಡಿದವರೆಲ್ಲರು
ಸಾಯುಜ್ಯರು.
ಗುಹೇಶ್ವರ ನಿಮ್ಮ ಸುಳುಹಿನ ಸೊಗಸು
ಉಪಮಿಸಬಾರದು!

(4) ಶ್ರೀಗುರುದೇವರ ಆದರ್ಶ ಸಂತ :

"These God-realisers constitute a blessed community and on account of their intense love for afflicted humanity, they live only for its benefaction and betterment, proclaiming from pole to pole the Eternal Gospel of God, like a rumbling cloud,

31) Dhyana Gita PP 49-50 32) P. G. K. P. 314

from everlasting to everlasting."[32]

"ಈ ಆತ್ಮಾನುಭವಿಗಳದೇ ಒಂದು ಸುಮಂಗಲ ಸಮಾಜವಿರುವದು. ಬಳಲುವ ಮಾನವತೆಯ ಬಗೆಗೆ ಅವರು ತಳೆಯುವ ಉತ್ಕಟ ಪ್ರೀತಿಯ ಮೂಲಕ ಅವರು ಕೇವಲ ಅದರ ಕಲ್ಯಾಣಕ್ಕಾಗಿಯೇ, ಉದ್ಧಾರಕ್ಕಾಗಿಯೇ ಬಾಳುವರು. ವಿಶ್ವದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ, ಭಗವಂತನ ಶಾಶ್ವತ ಸಂದೇಶವನ್ನು ಗುಡುಗುವ ಮೋಡದಂತೆ, ಅನಾದಿ ಕಾಲದಿಂದ, ಅನಂತಕಾಲದವರೆಗೆ ಸಾರುತ್ತ ಸಾಗುವರು."

ಓಂ

ಪ್ರಕರಣ ಐದು :

ಉಪಸಂಹಾರ

ವಿಷಯ ಪ್ರವೇಶ :

ಕಳೆದ ನಾಲ್ಕು ದಿನ "ಶ್ರೀಗುರುದೇವರ ಸಮನ್ವಯ-ದರ್ಶನ" ದ ಪರಿಚಯವನ್ನು ಯಥಾಮತಿ, ಯಥಾಶಕ್ತಿ ಮಾಡಿಕೊಡಲು ಯತ್ನಿಸಿರುವೆ. ಇಂದಿನ ವಿಷಮ ಪರಿಸ್ಥಿತಿಯಲ್ಲಿ ಅದರ ಮಹತ್ವ ಹಾಗೂ ಅವಶ್ಯಕತೆ ಎಷ್ಟಿದೆ. ಎಂಬುದನ್ನು ತಮ್ಮಂಥವರಿಗೆ ಮರಳಿ ಹೇಳುವ ಅವಶ್ಯಕತೆ ಇರುವದಿಲ್ಲ. ಇಂದಿನದು ಕೊನೆಯ ಉಪನ್ಯಾಸ. ಇದರಲ್ಲಿ ಈವರೆಗೆ ಅರುಹಿದ ವಿಷಯಗಳಲ್ಲಿಯ ಕೆಲ ಪ್ರಧಾನ ಅಂಶಗಳ ಸಿಂಹಾವಲೋಕನ ಮಾಡಿ, ತರುವಾಯ ಶ್ರೀಗುರುದೇವರು ಮಾನವ ಕುಲಕ್ಕೆ ಸಲ್ಲಿಸಿದ ವಿಶ್ವ-ಸಂದೇಶವನ್ನು ಅರುಹಿ, ವಿರಮಿಸುವೆ. ಅದಕ್ಕೂ ಪೂರ್ವದಲ್ಲಿ ನಮ್ಮ ಋಷಿಗಳ ಸಮನ್ವಯ-ಸಂದೇಶವನ್ನು ಕೇಳಿ !

ಸಂಗಚ್ಛಧ್ವಂ ಸಂವದಧ್ವಂ । ಸಂ ವೋ ಮನಾಂಸಿ ಜಾನತಾಂ ।
ಸಮಾನೀ ವ ಆಕೂತಿ: । ಸಮಾನಾ ಹೃದಯಾನಿ ವ: ।
ಸಮಾನಮಸ್ತು ವೋ ಮನ: । ಯಥಾ ವ: ಸುಸಹಾಸತಿ ॥
(ಋಗ್ವೇದ X191-1-4)

"ಒಂದೆಡೆ ಕೂಡಿರಿ! ಪ್ರೀತಿಯಿಂದ ನುಡಿಯಿರಿ! ಒಮ್ಮನದಿಂದ ನಡೆಯಿರಿ! ನಿಮ್ಮ ಬಯಕೆಗಳು ಒಂದಾಗಲಿ! ಹೃದಯಗಳು ಒಂದಾಗಲಿ! ನಿಮ್ಮ ವಿಚಾರಗಳು ಒಂದಾಗಲಿ! ಅಂದರೆ ನಿಮ್ಮ ಏಕತೆಯು ಪೂರ್ಣವಾಗಬಲ್ಲದು."

ಓಂ ಸಹನಾವವತು । ಸಹ ನೌ ಭುನಕ್ತು ।
ಸಹ ವೀರ್ಯಂ ಕರವಾವಹೈ
ತೇಜಸ್ವಿನಾವಧೀತ ಮಸ್ತು ಮಾ ವಿದ್ವಿಷಾವಹೈ ।
ಓಂ ಶಾಂತಿ: ಶಾಂತಿ: ಶಾಂತಿ:

"ಪರಬ್ರಹ್ಮನು ನಮ್ಮಿಬ್ಬರನ್ನು-(ಗುರು-ಶಿಷ್ಯರನ್ನು) ರಕ್ಷಿಸಲಿ! ಆತನು ನಮ್ಮೀರ್ವರನ್ನು ಪೋಷಿಸಲಿ! ನಾವಿಬ್ಬರೂ ವೀರ್ಯವತ್ತಾದ ಕಾರ್ಯವನ್ನು ಮಾಡೋಣ. ನಮ್ಮ ಅಧ್ಯಯನವು ತೇಜಸ್ವಿಯಾಗಲಿ! ನಾವು ಪರಸ್ಪರರನ್ನು ದ್ವೇಷಿಸುವದು ಬೇಡ!"

ಕೂಡಿಯೇ ಬಾಳುವಾ । ಕೂಡಿಯೇ ಬೆಳೆಯುವಾ ।
ಕೂಡಿಯೇ ಹೊಳೆಯುವಾ । ತೇಜವನು ತಳೆದು ।
ಶಾಂತಿಯನು ಬೀರುವಾ । ದ್ವೇಷವನು ಕಳೆದು ।
ಶಾಂತಿ: ಶಾಂತಿ: ಶಾಂತಿ:

ಸಿಂಹಾವಲೋಕನ :

ಸಮನ್ವಯವು ಇಡೀ ಜೀವನದ ಜೀವಾಳ. ಅದೇ ನಮ್ಮ ಜೀವನಕ್ಕೆ ಶಾಂತಿ-ಸಮಾಧಾನಗಳನ್ನು ನೀಡಬಲ್ಲದು. ಅದರ ಅಭಾವವೇ ಅಶಾಂತಿಯ ಆಗರ. ಆದುದರಿಂದ ಜೀವನದ ವಿವಿಧಾಂಗಗಳಲ್ಲಿ ಅದನ್ನು ನೆಲೆಗೊಳಿಸುವದು ಅತ್ಯವಶ್ಯ. ಇಂದು ಸಮಾಜ-ರಾಷ್ಟ್ರ- ವಿಶ್ವಗಳಲ್ಲಿ ಶಾಂತಿಯನ್ನು ನೆಲೆಸಲು ಹಿರಿಯರು ಬಗೆಬಗೆಯಾಗಿ ಯತ್ನಿಸುತ್ತಿರುವರು. ಆದರೆ ಅವೆಲ್ಲ ಬಾಹ್ಯ ಸಾಧನಗಳಿರುವದರಿಂದ ಅವುಗಳಿಗೆ ಸರಿಯಾದ ಯಶಸ್ಸು ಲಭಿಸದಂತಾಗಿದೆ. ಅವರು ಸಮನ್ವಯದ ಸಾಧನವನ್ನು ಇಡೀ ಜೀವನದಲ್ಲಿ ಚೆನ್ನಾಗಿ ಉಪಯೋಗಿಸುವವರೆಗೆ ನಿಜವಾದ ಶಾಂತಿಯು ಕನಸಾಗಿಯೇ ಉಳಿಯುವದು. ತೋರಿಕೆಯ ಶಾಂತಿಯು ಕೆಲಕಾಲ ನೆಲೆಸಿದಂತೆ ಕಾಣಬಹುದು. ಆದರೆ ಜನಜೀವನದಲ್ಲಿ ವಿಪ್ಲವವನ್ನು ನಿರ್ಮಿಸದಿರದು. ಅದಕ್ಕಾಗಿಯೇ ಶಾಂತಿಯ ಏಕಮೇವ ಸಾಧನವಾದ ಸಮನ್ವಯದ ಸರಿಯಾದ ಪರಿಚಯವೂ, ಅನುಷ್ಠಾನವು ಅಪರಿಹಾರ್ಯ ವಿರುವದು. ಆದುದರಿಂದ **ಶ್ರೀಗುರುದೇವರು** ತಮ್ಮ ಇಡೀ ಜೀವನವನ್ನು, ಅದೆರ ಹಿರಿಮೆಯನ್ನೂ, ಅಗತ್ಯವನ್ನೂ ಅರುಹಲು, ಹಾಗೂ ಜನರ ಮನವರಿಕೆ ಮಾಡಿಕೊಡಲು ಮೀಸಲಾಗಿರಿಸಿದರು. ಸಾಮಾನ್ಯವಾಗಿ ಸಮನ್ವಯವನ್ನು ಕಾಣುವ ಹಾಗೆ ಕಾಣಿಸುವ ಯೋಗ್ಯತೆಯು ಎಲ್ಲರಲ್ಲಿ ಇರುವದಿಲ್ಲ. ಅದಕ್ಕಾಗಿ ಸಮಗ್ರ-ಜೀವನದ ಸಾಕ್ಷಾತ್-ದರ್ಶನವನ್ನು ಪಡೆದವರು ಬೇಕು. ಅವರು ಆತ್ಮಜ್ಞಾನವನ್ನೂ ಹಾಗೂ ವಿಶ್ವಜ್ಞಾನವನ್ನೂ ಪಡೆದಿರಬೇಕಾಗುವದು. ಕೇವಲ ಆತ್ಮಜ್ಞಾನಿಗಳು ಇಲ್ಲವೆ ಕೇವಲ ವಿಜ್ಞಾನಿಗಳು ಅದನ್ನು ಮಾಡಲರಿಯದು. ಅವರದು ಒಂದಂಗದ ಪರಿಚಯವಿರುವದರಿಂದ, ಅವರಿಗೆ ಸಮನ್ವಯದ ಪೂರ್ಣದರ್ಶನ ಲಭಿಸದು. **ಶ್ರೀಗುರುದೇವರು** ಉಭಯನಿಷ್ಣಾತರು. ಆದುದರಿಂದ ಅವರು ಇಡೀ ಜೀವನದಲ್ಲಿ ಸಮನ್ವಯವನ್ನು ಹೇಗೆ ನೆಲೆಸಬೇಕೆಂಬುದನ್ನು ಅರಿತು, ಅರುಹಲು ಸಮರ್ಥರಾದರು. ಆದರೆ "**ಊರ್ಧ್ವಬಾಹು, ವಿರೋಮ್ಯೇಷ, ನ ಚ ಕಶ್ಚಿತ್ ಶೃಣೋತಿ ಮಾಮ್।**" "ಬಾಹುಗಳನ್ನು ಎತ್ತರಿಸಿ ಕೂಗುತ್ತಿರುವೆ. ಯಾರೂ ನನ್ನ ಕೂಗನ್ನು ಕೇಳರು!" ಎಂಬುದಾಗಿ ಉಸುರಿರುವ ಪರಮಪೂಜ್ಯ ವ್ಯಾಸಮುನಿಗಳಂತೆ ಅವರ ಅವಸ್ಥೆಯಾಯಿತು. "**ನಾ ಕೋಇ ಜಾನೇ**

ನಾಕೋಇ ಮಾನೇ" ಎಂದು ಕಬೀರರು ಉಸುರಿರುವಂತೆ, "**ಹೇಳಬೇಕ, ಹೇಳ ಬೇಕ, ಹೇಳಬೇಕ ಅಂತೀನಿ, ಕೇಳಾವ್ರ ಯಾರಿಲ್ಲ**" ಎಂದು ಒಮ್ಮೆ ಅವರು ತಮ್ಮ ಶಿಷ್ಯರಿಗೆ ಹೇಳಿದರು. ಪ್ರಪಂಚಕ್ಕೆ ಅವರು **ಉಜ್ವಲ ಜೀವನದ** ಹಾಗೂ **ಪ್ರಬೋಧ ದ** ಅರಿವು ಇನ್ನು ಎಂದಾಗುವದು ನೋಡಬೇಕು.

ಗುರುದೇವರ **ಉದ್ಗ್ರಂಥಗಳು** ಜಾಗತಿಕ ವಿದ್ವಾಂಸರ ಮನ್ನಣೆಯನ್ನು ತುಂಬ ಪಡೆದಿರುವವು ನಿಜ. ಆದರೆ ಅವುಗಳ ಪ್ರಸಾರವು ಸಾಕಷ್ಟು ಆಗಿಲ್ಲ. ಮತ್ತು ಸ್ವಂತ ಪ್ರಕೃತಿಯ ಆಸ್ವಸ್ಥತೆಯ ಮೂಲಕ, ಅವರಿಗೆ ಬೇರೆ ದೇಶಗಳಿಂದ ಬಂದ ಔತಣ ವನ್ನು ಸ್ವೀಕರಿಸಿ, ಅವರಲ್ಲಿಗೆ ಹೋಗುವದೂ ಸಾಧ್ಯವಾಗಲಿಲ್ಲ. ಇತ್ತೀಚೆಗೆ ಅಮೇರಿಕೆ ಯ Californiaದಲ್ಲಿಯ Clearlake Highlands ಎಂಬ ಪಟ್ಟಣದಲ್ಲಿ Bubba Free John ಎಂಬ ಸತ್ಪುರುಷರು Free Divine Communion Church ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಪಾರಮಾರ್ಥಿಕ ಕ್ಷೇತ್ರದಲ್ಲಿ ಸಂಶೋಧನವನ್ನು ನಡೆಸಿರುವರು. ಅವರ ಸಂಶೋಧನದ ಕೇಂದ್ರವು Mount Vision Ceremony ಎಂಬುದು. ಅಲ್ಲಿ ಅವರು ಎಲ್ಲ ಧರ್ಮಗಳ ತಿರುಳನ್ನೂ, ಅವುಗಳಲ್ಲಿಯ ಸಮಾನ-ಅಂಶಗಳನ್ನು ಕಾಣ ಲು ಹಾಗೂ ಅವುಗಳ ನೆರವಿನಿಂದ **ವಿಶ್ವಧರ್ಮ**ವನ್ನು ರೂಪಿಸಲು ಬಯಸುತ್ತಿರುವ ರು-ಯತ್ನಿಸುತ್ತಿರುವರು. ಅವರು ಈ ಸಂಶೋಧನ ಕಾರ್ಯದಲ್ಲಿ ಗುರುದೇವರ ಸಾಹಿ ತ್ಯದಿಂದ ಮಾರ್ಗದರ್ಶನ ಪಡೆದಿರುವರು. ಆದುದರಿಂದ ಅವರು ಗುರುದೇವರ ಸಂಶೋಧನದ ರೀತಿಯನ್ನು ತುಂಬ ಮೆಚ್ಚಿರುವರು. ಗುರುದೇವರನ್ನು ಅತಿಯಾಗಿ ಗೌ ರವಿಸುತ್ತಿರುವರು. ಅವರು ಮುಂಬಯಿ ಬಳಿಯಲ್ಲಿರುವ ಗಣೇಶಪುರಿ ಆಶ್ರಮದ ಸ್ವಾಮಿ ಮುಕ್ತಾನಂದರ ಶಿಷ್ಯರು. ಅವರ ಮುಖಾಂತರ, ಹಾಗೂ ಬೆಳೆಯಲಿರುವ ಗುರುದೇವರ ಕೆಲ ಶಿಷ್ಯರ ಮುಖಾಂತರ, ಪಾರಮಾರ್ಥದ ಹಿರಿಮೆಯೂ ಅವರ ಪಾರಮಾರ್ಥಿಕ ವಿ **ಶ್ವ-ಸಂದೇಶವೂ** ಪ್ರಪಂಚದ ಆದರವನ್ನು ಆಕರ್ಷಿಸದಿರದು. ಶ್ರೀ ನಿಂಬರಗಿ ಮಹಾ ರಾಜರವರ ಪಾರಮಾರ್ಥಿಕ **ವಿಶ್ವ- ಸಂದೇಶ**ವನ್ನು ಅವರು ಇಡೀ ಜಗತ್ತಿನಲ್ಲಿ ಸಾರ ಬಹುದು ಎಂಬ ಭವಿಷ್ಯವನ್ನು ಅವರ ಸದ್ಗುರುಗಳು ಅವರು ವಿದ್ಯಾರ್ಥಿಗಳಿರುವಾಗಲೇ ವರ್ತಿಸಿದ್ದರು. ಮತ್ತು ಗುರುದೇವರು ತಮ್ಮ ಈ ಬಗೆಯ ಆಕಾಂಕ್ಷೆಯನ್ನು ಸದ್ಗುರುಗಳಿಗೆ ಬರೆದ ಕೆಲ ಪತ್ರಗಳಲ್ಲಿ ಅವರಿಗೆ ಅರುಹಿ, ಅವರ ಆಶೀರ್ವಾದವನ್ನು ಕೋರಿದ್ದರು.

ಆದೇ ಮೇರೆಗೆ, ಕ್ರಿ.ಶ. 1924ರಲ್ಲಿ ಗುರುದೇವರು ತಮ್ಮ ಒಬ್ಬ ಆಪ್ತಸ್ನೇಹಿತ ರಿಗೆ ಬರೆದ ಓಲೆಯೊಂದರಲ್ಲಿ ತಮ್ಮ ಜೀವನದ ಪರಮಾದರ್ಶವನ್ನು ಈ ರೀತಿ ಅರುಹಿ ರುವರು:

"The great (ideal of) Spirtitual life.... is the end not merely of my own spiritual existence, not merely that of others who would consent to cast their lot with me, but, I am sure, of humanity at large, which is consciously or unconsciously pur-

suing the Pathway to God. How far we shall be able to achieve such an ideal remains entirely at the will of God. It is only our business to wait, to watch, to work and to pray."

"ಪಾರಮಾರ್ಥಿಕ ಜೀವನದ **ಪರತಮ ಆದರ್ಶವು** ನನ್ನ ಆಧ್ಯಾತ್ಮಿಕ ಇರವಿನ ಗುರಿ ಇರುವದಷ್ಟೇ ಅಲ್ಲದೆ, ನನ್ನೊಡನೆ ಸಹಜೀವನವನ್ನು ನಡೆಸಲು ಒಪ್ಪಿರುವವರ ಇರವಿನ ಗುರಿ ಇರುವದಷ್ಟೇ ಅಲ್ಲದೇ, ಅದು ಇಡಿ ಮಾನವಕುಲದ ಗುರಿಯೂ ಇರುವದು. ಯಾಕೆಂದರೆ, ಮಾನವತೆಯು ಜ್ಞಾತವಾಗಿ ಇಲ್ಲವೆ ಅಜ್ಞಾತವಾಗಿ ಪರಮಾತ್ಮನ ಪಥವನ್ನೇ ಅನುಸರಿಸುತ್ತಿರುವದು. ಇಂಥ ಆದರ್ಶವನ್ನು ನಾವು ಎಷ್ಟರಮಟ್ಟಿಗೆ ಪಡೆಯಬಲ್ಲೆವು ಎಂಬುದು ಪೂರ್ತಿಯಾಗಿ ಭಗವಂತನ ಬಯಕೆಯನ್ನೇ ಅವಲಂಬಿಸಿರುವದು. ಅದಕ್ಕಾಗಿ ಕಾಯುವದು, ನಿರೀಕ್ಷಿಸುವದು, ದುಡಿಯುವುದು ಮತ್ತು ಪ್ರಾರ್ಥಿಸುವದು- ಇಷ್ಟೇ ನಮ್ಮ ಕಾರ್ಯ."

ಗುರುದೇವರು ಮೊದಲು ಸಮನ್ವಯದ ನಿಲಯವಾದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು, ಆತನಿಂದ ಸಮಗ್ರ-ಜೀವನದ ದರ್ಶನವನ್ನು ಪಡೆದರು. "**ತಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಮ್ ಅಭವತ್ ।**" "ಆತನನ್ನು ಅರಿತೊಡನೆ ಅವರಿಗೆ ಇಡೀ ಪ್ರಪಂಚದ ಸಮಗ್ರ ಜೀವನದ ಪರಿಚಯವಾಯಿತು." ಮತ್ತು ಅದರ ಸತ್ಯತೆಯನ್ನು ಪರೀಕ್ಷಿಸಲು, ಹಾಗೂ ಅದನ್ನು ಬುದ್ಧಿನಿಷ್ಠರಿಗೆ ಮನವರಿಕೆ ಮಾಡಿಕೊಡಲು, ಅವರು ದರ್ಶನದ ಅಧ್ಯಯನವನ್ನು ಮಾಡಿದರು. ತರುವಾಯ ಅದರ ನೆರವಿನಿಂದ ತಮ್ಮ ಸಾಹಿತ್ಯದ ಮುಖಾಂತರ ತಾವು ಕಂಡ ಸಮನ್ವಯವನ್ನು ಜಗತ್ತಿನಲ್ಲಿಯ ವಿದ್ವಾಂಸರಿಗೆ ಅರುಹಲು ಯತ್ನಿಸಿದರು. ಅವರ ಈ ಸಮನ್ವಯ-ದರ್ಶನದ ಕಿರುಪರಿಚಯವನ್ನು ಕಳೆದ ನಾಲ್ಕು ದಿನ ಮಾಡಿಕೊಡಲಾಗಿದೆ.

ಮೊದಲು ನಾವು ವೈಚಾರಿಕ ಕ್ಷೇತ್ರದಲ್ಲಿ- ದಾರ್ಶನಿಕ ಕ್ಷೇತ್ರದಲ್ಲಿ- ಗುರುದೇವರು ಕಾಣಿಸಿದ ಸಮನ್ವಯವನ್ನು ಅರಿತೆವು. ಪ್ರಾರಂಭದಲ್ಲಿ ಅನುಭೂತಿಯುತ ದರ್ಶನದ ಒರಿಮೆಯನ್ನು ಕಂಡು, ದರ್ಶನ-ಧರ್ಮ-ವಿಜ್ಞಾನಗಳಲ್ಲಿಯ ಸಮನ್ವಯವನ್ನು ಅರಿತೆವು. ತರುವಾಯ ದರ್ಶನದ ಪ್ರಧಾನ ಅಂಗಗಳಾದ **ಪರತತ್ವಶಾಸ್ತ್ರ-ನೀತಿಶಾಸ್ತ್ರ ಹಾಗು ಅನುಭೂತಿಶಾಸ್ತ್ರ** ಇವುಗಳಲ್ಲಿ ಹಾಗೂ ಇವುಗಳ ಅಂಗಾಂಗಗಳಲ್ಲಿ ಗುರುದೇವರು ಕಾಣಿಸಿದ ಸಮನ್ವಯವನ್ನು ಕಂಡೆವು. ಆ ಮೇಲೆ ನಮ್ಮ ಪ್ರಸ್ಥಾನತ್ರಯದಲ್ಲಿಯ ಹಾಗೂ ಸಂತರ ಬೋಧೆಯಲ್ಲಿಯ ಸಮಾನಾಂಶಗಳನ್ನು ಅರಿತೆವು. ಈ ಬಗೆಯಾಗಿ ವೈಚಾರಿಕ ಜೀವನದಲ್ಲಿಯ ಸಮನ್ವಯದ ಫಲವಾಗಿ ಮಾನವನ ಜೀವನದ ಶ್ರೇಷ್ಠತಮ ಆದರ್ಶವಾವುದು, ಹಾಗೂ ಅದನ್ನು ಪಡೆಯುವ ಪ್ರಧಾನ ಸಾಧನವಾವುದು ಎಂಬುದನ್ನು ಅರಿತೆವು. ಗುರುದೇವರ ಅಭಿಮತದ ಮೇರೆಗೆ **ಭಗವಂತನ ಸಾಕ್ಷಾತ್ಕಾರವೇ ಶ್ರೇಷ್ಠತಮ ಜೀವನಾದರ್ಶ.** ಅದೇ ವಿಚಾರ-ಕ್ಷೇತ್ರದಲ್ಲಿಯ ಬಗೆಬಗೆಯ ಪರಸ್ಪರ ವಿರುದ್ಧವಾದ ಸಿದ್ಧಾಂತಗಳನ್ನು ಸಮನ್ವಯಿಸಬಲ್ಲದು ಎಂಬುದನ್ನು ಕಂಡೆವು.

ತರುವಾಯ ಗುರುದೇವರು ತೋರಿಸಿದ ಆದರ್ಶ-ಸಮನ್ವಯದ ಸ್ವರೂಪವನ್ನು ಅರಿಯಲು ಯತ್ನಿಸಿದೆವು. ಸಾಕ್ಷಾತ್ಕಾರ ರೂಪಿಯಾದ ಪರತಮ ಆದರ್ಶವು ಒಂದೇ ಆಗಿದ್ದರೂ, ಪ್ರತ್ಯಕ್ಷವ್ಯವಹಾರದಲ್ಲಿ ಬಗೆಬಗೆಯ ಉನ್ನತ ಅಧೀನ ಆದರ್ಶಗಳು ಪ್ರಚಲಿತವಿರುವವು. ಅವನ್ನು ಪರತಮ ಆದರ್ಶದೊಡನೆ ಸಮನ್ವಯಗೊಳಿಸುವ ಅವಶ್ಯಕತೆಯನ್ನೂ, ರೀತಿಯನ್ನೂ ಕಂಡೆವು. ಅದಕ್ಕೂ ಪೂರ್ವದಲ್ಲಿ ನಮ್ಮ ಹಿರಿಯರ **ಯೋಗ-ಪ್ರಧಾನ** ಸನಾತನ ಆದರ್ಶಗಳನ್ನೂ, ಆಧುನಿಕರ ಭೋಗ-ಪ್ರಧಾನ ಅವನತ-ಉನ್ನತ ಆದರ್ಶಗಳನ್ನೂ ಅರಿತೆವು. ನಮ್ಮ **ವೈಯಕ್ತಿಕ ಜೀವನದಲ್ಲಿಯ** ಸದ್ವರ್ತನ, ಪ್ರಪಂಚ-ಪಾಲನ, ಸತ್ಯಶೋಧನ, ಸೌಂದರ್ಯ ಉಪಾಸನೆ ಹಾಗೂ ಕಲ್ಯಾಣಕರಣ, ಸಾಮಾಜಿಕ ಜೀವನದಲ್ಲಿಯ ಶೈಕ್ಷಣಿಕ, ಆರ್ಥಿಕ ಹಾಗೂ ರಾಜನೈತಿಕ ಸಮಸ್ಯೆಗಳು, ಅದೇ ಬಗೆಯಾಗಿ **ಜಾಗತಿಕ ಜೀವನದಲ್ಲಿಯ** ಶಾಸನ-ವಿಷಯಯುಕ್ತ ಸಮಸ್ಯೆಗಳು-ಇವನ್ನೆಲ್ಲ ಪಾರಮಾರ್ಥಿಕ ಆದರ್ಶದೊಡನೆ ಸಮನ್ವಯಗೊಳಿಸಿದಾಗಲೇ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಶಾಂತಿ-ಸಾಮರಸ್ಯಗಳು ನೆಲೆಗೊಳ್ಳಬಹುದು ಎಂಬ ಗುರುದೇವರ ಏಕಮೇವ ಸಮನ್ವಯ-ರೂಪಿಯಾದ, ಪರಿಹಾರದ ಸ್ವರೂಪವನ್ನೂ ಅರಿತೆವು. ಅವರು ತೋರಿಸಿದ **ದೈವೀ ವಿಶ್ವಸಾಮ್ರಾಜ್ಯದ ಭವ್ಯ ಕನಸನ್ನು** ಕಂಡೆವು.

ಕೊನೆಗೆ, ಇವೆಲ್ಲ ಆದರ್ಶಗಳ ಮೂಲಭೂತ ಪರಮಾದರ್ಶದ-ಭಗವಂತನ ಸಾಕ್ಷಾತ್ಕಾರದ-ಒಂದೇ ಒಂದಾದ **ಪ್ರಧಾನ-ಸಾಧನದ** ಸ್ವರೂಪವನ್ನು ಅದರ ಅಂಗಾಂಗಗಳಲ್ಲಿಯ ಹಾಗೂ ಅದರ ಪೋಷಕ ಸಾಧನಗಳಲ್ಲಿಯ ಸಮನ್ವಯವನ್ನೂ ಅರಿತುಕೊಂಡೆವು. ಸದ್ಗುರು, ಸತ್-ಶಿಷ್ಯ ಇವರ ಲಕ್ಷಣ, ದಿವ್ಯನಾಮದ ಸ್ವರೂಪ ಹಿರಿಮೆ, ಧ್ಯಾನ ಪದ್ಧತಿಯ ಪಂಚ ಅಂಗಗಳು, ಇವುಗಳ ಪರಿಚಯ ಮಾಡಿಕೊಂಡೆವು. ತರುವಾಯ **ಅನುಭೂತಿಯಲ್ಲಿಯ ಗುರುದೇವರ ಅಸಂಪಾತ ಸನ್ನಿಧೀಕರಣದ** (Asymptotic Approximation) ಸಿದ್ಧಾಂತವನ್ನು ಕಂಡೆವು. ಆಮೇಲೆ ಅನುಭೂತಿಯ ಕೆಲ ಅಂಗಗಳ ಸಮನ್ವಯವನ್ನು ಅರಿತೆವು ಹಾಗೂ ಆತ್ಮೋದ್ಧಾರ ಲೋಕೋದ್ಧಾರಗಳ ನಿಕಟ ಸಂಬಂಧವನ್ನು ಕಂಡೆವು. ಕೊನೆಗೆ ಹಿರಿಯ ಸತ್ಪುರುಷರು ತೋರಿಸಿದ ಆದರ್ಶ-ಮಹಾತ್ಮರ ದಿವ್ಯ-ಭವ್ಯ ಜೀವನದ ದರ್ಶನವನ್ನು ಪಡೆದು ವಿರಮಿಸಿದೆವು.

ವಿಶ್ವ-ಸಂದೇಶ :

ಇನ್ನು ಮೊದಲು ನಮ್ಮ **ಆದರ್ಶ ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನ ಸನಾತನ ಸಂದೇಶವನ್ನು** ಅರುಹಿ, ತರುವಾಯ ಶ್ರೀಗುರುದೇವರ ಸಂದೇಶವನ್ನು ಅರುಹುವೆ.

Krishna Religion : how simple, how sublime ! The Gita interpretes a Path which knows no East, no West : a Faith without a dogma, without a rite, a Faith, without restriction of race

or creed: a Religion of Brotherhood, of the One Life in all: a Religion of Sprit of Love ! The Gita teaches how man may be perfect as the Parama Purusa is perfect. The Gita teaches how all low 'egoism', all sense of separation may be eliminated. The Gita is a master-piece of thought, is a canticle of action, is a creation of spontaneous art, is a poem of beauty which has ravished the hearts of men and women throughout the ages of Indian's history. The gita enshrines the wisdom utttered on the battlefield-the wisdom of a Divine Poet, a Supreme Artist, a Masterman who stands as on a rock, unmoved by time and untouched by revolution."[1]

"ಶ್ರೀಕೃಷ್ಣನ ಧರ್ಮ ಅದೆಷ್ಟುಸರಳ! ಅದೆಂಥ ಭವ್ಯ ! ಗೀತೆಯು ವಿವರಿಸಲಿರುವ ಧರ್ಮವು ಪೂರ್ವ-ಪಶ್ಚಿಮಗಳನ್ನರಿಯದು;ಮೂಢ ನಂಬಿಕೆಮತಾಚಾರಗಳನ್ನು ಅರಿಯದು; ಜಾತಿ-ಮತ-ಪಂಥಗಳ ನಿಯಂತ್ರಣಗಳನ್ನು ಅರಿಯದು, ಅದೊಂದು ವಿಶ್ವಬಾಂಧವ್ಯದ ಧರ್ಮ; ಎಲ್ಲೆಲ್ಲಿಯೂ ನೆಲೆಸಿದ ಏಕಚೇತನದ ಧರ್ಮ. ಪರಮ ಪುರುಷನಂತೆ ಮಾನವನು ಪೂರ್ಣತೆಯನ್ನು ಪಡೆಯುವ ಯೋಗವನ್ನು ಗೀತೆಯು ಬೋಧಿಸುವದು. ಎಲ್ಲ ಬಗೆಯ ಕೀಲು "ಅಹಂಭಾವ"ವನ್ನೂ, ಬೇದ-ಭಾವನೆಯನ್ನೂ ಅಳಿಸುವ ವಿಧಿಯನ್ನು ಗೀತೆಯು ಅರುಹುವದು. ಗೀತೆಯು ಉಜ್ವಲ ವಿಚಾರಗರ್ಭಿತ ನಾಯಕ ಕೃತಿ. ನಿಷ್ಕಾಮ-ಕರ್ಮದ ಅಂದವಾದ ಗೀತ. ಸ್ವಯಂಸ್ಫುರಿತ ಕುಶಲ ಕಲೆಯ ನಿರ್ಮಿತಿ. ಭಾರತದ ಇತಿಹಾಸದ ಎಲ್ಲ ಯುಗಗಳಲ್ಲಿ ನರನಾರಿಯರ ಅಂತರಂಗಗಳನ್ನು ಆನಂದ ಭರಿತ ಮಾಡಿ, ಅವರನ್ನು ಮೈಮೆರೆಯಿಸಿದ ಅಂದವಾದ ಕವನ. ಗೀತೆಯು ದೈವೀ ಕವಿಯ, ಕುಶಲತಮ ಕಲಾವಿದನ, ಕಾಲಾಂತರಗಳಲ್ಲಿ ಅಚಲನಾಗಿ, ಕ್ರಾಂತಿಗಳ ಸೋಂಕನರಿಯದೆ, ಸ್ಥಿರವಾದ ಬಂಡೆಗಲ್ಲಿನ ಮೇಲೆ ನಿಂತಿರುವ ಪುರುಷೋತ್ತಮನ ದಿವ್ಯ ಬೋಧೆಯನ್ನೇ ಅರುಹುತ್ತಿದೆ."

ಇನ್ನು ಗುರುದೇವರ ಸಂದೇಶವನ್ನು ಕೇಳಿ !

"ಆತ್ಮಜ್ಞಾನವೇ ನಿಜವಾದ ಜ್ಞಾನ !
ಬೇರೆ ಜ್ಞಾನ ಜ್ಞಾನವಲ್ಲ.
ಆತ್ಮಜ್ಞಾನವೆಂದರೆ, ಬೌದ್ಧಿಕ ಜ್ಞಾನವಲ್ಲ.
ಅದು ಭಗವಂತನ ಪ್ರಾತಿಭ ಸಾಕ್ಷಾತ್ಕಾರ.
ಅದರಿಂದಲೇ ಜೀವನಕ್ಕೆ ಧನ್ಯತೆ,
ದಿವ್ಯತೆ, ಭವ್ಯತೆ, ಶಾಂತಿ-ಆನಂದಗಳು !

1) G.M.P. 84

"ಸದ್ಗುರುಗಳಿಂದ ದಿವ್ಯನಾಮ ಪಡೆದು, ಅದನ್ನು ಅನನ್ಯ ಭಾವದಿಂದ ಸ್ಮರಿಸಬೇಕು, ಧ್ಯಾನಿಸಬೇಕು, ಚಿಂತಿಸಬೇಕು, ಅದರ ಸತತ ಅನುಸಂಧಾನವಿರಬೇಕು. ಅದರಿಂದ ಸಾಕ್ಷಾತ್ಕಾರ ಲಭಿಸುವದು. ಅದರಿಂದಲೇ ಆತ್ಮೋದ್ಧಾರ, ಲೋಕೋದ್ಧಾರ" ಎಂಬುದು ಶ್ರೀ ಮಹಾರಾಜರವರ ಸಂದೇಶ. ಅದನ್ನೇ ನಾನು ಹೇಳಿರುವೆ.

ಶ್ರೀಗುರುದೇವರ ಈ ಸಂದೇಶವನ್ನು ಶ್ರೀ ರಾಮದಾಸರ ಮಾತಿನಲ್ಲಿ ಈ ರೀತಿ ಬಣ್ಣಿಸಬಹುದು:

ಸಾಧೇ ಔಷಧ ಪರೀ ಗುಣವಂತ ।
ಸಾಧೇ ಬೋಲಣೇ ಸಪ್ರಚೀತ ॥

"ಸಾಮಾನ್ಯ ಔಷಧ, ಆದರೂ ಅಸಾಮಾನ್ಯ ಗುಣ; ಮಾತು ಲೌಕಿಕ ಆದರೆ, ಅನುಭೂತಿ ಅಲೌಕಿಕ." ಇಂಥ ಹಿರಿಮೆ ಈ ಸಂದೇಶದ್ದು. "ಭಗವದಾನಂದ ಗುರಿ! ದಿವ್ಯನಾಮ-ಧ್ಯಾನ ದಾರಿ" ಇದು ಅದರ ತಿರುಳು.

ಇದನ್ನು ಕೆಳಗಿನ ಸಂದೇಶಗಳೊಡನೆ ಹೋಲಿಸಬಹುದು.

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ। ಕಥಿತಂ ಗ್ರಂಥ ಕೋಟಿಭಿ: ।
"ಬ್ರಹ್ಮ ಸತ್ಯಂ ಜಗನ್ಮಿಥ್ಯಾ । ಜೀವೋ ಬ್ರಹ್ಮೈವ ನಾಪರ:" ॥

"ಸಾವಿರ ಗ್ರಂಥಗಳಲ್ಲಿ ಅರುಹಲಾದುದನ್ನು ಅರ್ಧ ಶ್ಲೋಕದಲ್ಲಿ ಅರುಹುವೆ." "ಬ್ರಹ್ಮ ಸತ್ಯ, ಜಗತ್ತು ಅಸತ್ಯ, ಜೀವನು ಬ್ರಹ್ಮನಲ್ಲದೆ ಬೇರೆ ಅಲ್ಲ."

ಇದು ಶ್ರೀಶಂಕರಾಚಾರ್ಯರ ಸಂದೇಶದ ಸಾರ ।

ಆಲೋಕ್ಯ ಸರ್ವ ಶಾಸ್ತ್ರಾಣಿ । ವಿಚಾರ್ಯ ಚ ಪುನ: ಪುನ: ।
ಇದಮೇಕಂ ಸುನಿಷ್ಪನ್ನಂ । "ಧ್ಯೇಯೋ ನಾರಾಯಣ: ಸದಾ" ॥

"ಎಲ್ಲ ಶಾಸ್ತ್ರಗಳನ್ನು ಆಳವಾಗಿ ಅಭ್ಯಸಿಸಿ, ಮರ-ಮರಳಿ ವಿಚಾರ ಮಾಡಿ, ಈ ಒಂದೇ ಮಾತನ್ನು ಅರಿತೆ. ನಿರಂತರ ನಾರಾಯಣನನ್ನು ನೆನೆಯತಕ್ಕದ್ದು"

ಇದು ಶ್ರೀಮಧ್ವಾಚಾರ್ಯರ ಸಂದೇಶದ ಸಾರ ।

ಆಲೋಕ್ಯ ಸಂತಸಾಹಿತ್ಯಂ । ಲಬ್ಧಂ ನವನೀತವುತ್ತಮಂ ।
ಭೋಕ್ತವ್ಯ : ಪರಮಾನಂದ :। ಪೀತ್ವಾ ನಾಮಾಮೃತಂ ಪರಮ್॥

"ಸಂತರ ಸಾಹಿತ್ಯವನ್ನು ಕಡೆದು, ಈ ಬೆಲೆಯುಳ್ಳ ಬೆಣ್ಣೆಯನ್ನು ಪಡೆದೆ. "ದಿವ್ಯ ನಾಮಾಮೃತ"ವನ್ನು ಸೇವಿಸಿ, ಪರಮಾನಂದವನ್ನು ಸವಿಯಿರಿ!"

ಇದು ಶ್ರೀಗುರುದೇವರ ಸಂದೇಶದ ಸಾರ.

ಶ್ರೀಗುರುದೇವರು ತಮ್ಮ ಈ ಸೂತ್ರಮಯ ಸಂದೇಶವನ್ನು ಬೆಳೆಸಿ, ಭಾರತೀಯ ಜೀವನದ ಪ್ರಧಾನ ಕ್ಷೇತ್ರಗಳಲ್ಲಿಯ ಗಣ್ಯ ಮಹನೀಯರಿಗೆ ಅದನ್ನು ಈ ಬಗೆಯಾಗಿ ಸಲ್ಲಿಸಬಹುದು. ಅದು ಬೇರೆ ದೇಶದವರಿಗೂ ಉಪಯೋಗವಾಗದಿರದು ಎಂಬುದು ನನ್ನ ಭಾವನೆಯಾದುದರಿಂದ ಅದನ್ನು ಅರುಹಿ ವಿರಮಿಸುವೆ.

ಸಂತರಿಗೆ :

ಬಂಧುಗಳೇ ! ಭಗವಂತನು ತಮಗೆ ತನ್ನ ದಿವ್ಯ ದರ್ಶನವನ್ನು, ಪರಮಾನಂದವನ್ನು ದಯಪಾಲಿಸಿರುವ. ಅದರ ಜತೆಯಲ್ಲಿ ತನ್ನ ಕೆಲ ಶಕ್ತಿಗಳನ್ನು ನೀಡಿರುವ. ಅವನು ತಮಗೆ ತನ್ನ ಭಕ್ತಿಯನ್ನು ಜನರಲ್ಲಿ ಬೀರಲು ಆಜ್ಞಾಪಿಸಿರುವ. ಆದರೆ, ಆ ಶಕ್ತಿಗಳನ್ನು ಉಪಯೋಗಿಸಿ, ಚಮತ್ಕಾರಗಳನ್ನು ಕಾಣಿಸಿ, ಜನರನ್ನು ತಮ್ಮೆಡೆ ಸೆಳೆಯಲು ತಾವು ಯತ್ನಿಸಕೂಡದು. ಇದು ಇಬ್ಬರಿಗೂ-ತಮಗೂ ಹಾಗೂ ಮುಮುಕ್ಷುಗಳಿಗೂ ಅಪಾಯಕರ ಆಗದಿರದು. ಅದರಿಂದ ತಮ್ಮಲ್ಲಿ ಅಹಂಕಾರವು ಬೆಳೆಯಬಹುದು. ಮತ್ತು ಮುಮುಕ್ಷುಗಳಲ್ಲಿ ಅಂಧಶ್ರದ್ಧೆ ನಿರ್ಮಾಣವಾಗಬಹುದು, ಇವೆರಡೂ ಪಾರಮಾರ್ಥಿಕ ಸಾಧನಕ್ಕೆ ತುಂಬ ಅಪಾಯಕರ. ಆದುದರಿಂದ, ತಾವು ಕೇವಲ ತಮ್ಮ ಪವಿತ್ರ ಹಾಗೂ ಉದಾತ್ತ ಜೀವನದ ಮುಖಾಂತರವಾಗಿ, ಹಾಗೂ ತಮ್ಮ ಭಾವಪೂರ್ಣ, ಸ್ಫೂರ್ತಿಯುತ ಪ್ರವಚನಗಳ, ಭಜನಗಳ ಮುಖಾಂತರವಾಗಿ ಭಕ್ತಿಪ್ರಸಾರವನ್ನು ಮಾಡಲು ಯತ್ನಿಸಬೇಕಾಗಿ ಭಿನ್ನಹ. ಇದೇ ತುಂಬ ಪರಿಣಾಮಕಾರಿಯಾದ ಪದ್ಧತಿ.

ದಾರ್ಶನಿಕರಿಗೆ :

"ಬಾಂಧವರೇ ನಿಮ್ಮದು ಪರತತ್ವದ ಬೌದ್ಧಿಕ ಸಂಶೋಧನ. ಇದರಲ್ಲಿ ನೀವು ಕೆಲಮಟ್ಟಿಗಾದರೂ ಯಶಸ್ಸನ್ನು ಪಡೆಯಬೇಕಾದರೆ, ನಿಮ್ಮ ಪೂರ್ವಾಗ್ರಹಗಳನ್ನು ತೊರೆದು, ಮುಕ್ತ ಮನಸ್ಸುಳ್ಳವರಾಗಬೇಕು. ನಿಮ್ಮ ದರ್ಶನವು ಬರೀ ವೈಚಾರಿಕ ಇರಕೂಡದು. ಅದು ಪೂರ್ತಿಯಾಗಿ ವ್ಯಾವಹಾರಿಕ ಇರಬೇಕು. ಅದರ ಸತ್ಯತೆಯೂ, ಸತ್ವಯುತತೆಯೂ, ಜೀವನಕ್ಕೆ ಅದು ನೀಡುವ ಉದಾತ್ತತೆಯನ್ನೂ ದಿವ್ಯತೆಯನ್ನೂ ಪೂರ್ತಿಯಾಗಿ ಅವಲಂಬಿಸಿರುವದು. ನಿಮ್ಮ ಅನುಭವ, ಭಾವನೆ. ಅನುಭೂತಿಗಳೇ ನಿಮ್ಮ ದರ್ಶನದಲ್ಲಿ ಮೈದಳೆಯಬೇಕು. ಅದು ಜೀವನದಿಂದ ಅಗಲಕೂಡದು. ಅದಕ್ಕಾಗಿ ನೀವು ಧರ್ಮದ ನೆರವನ್ನು ಪಡೆಯಬೇಕು. ಯಾಕೆಂದರೆ, ಧರ್ಮದ ಬೆಂಬಲವಿಲ್ಲದ ದರ್ಶನವು ಕುಂಟು. ಅದೇ ಮೇರೆಗೆ ದರ್ಶನದ ನೆರವಿಲ್ಲದ ಧರ್ಮವು ಕುರುಡು ಆಗುವುದುಂಟು. ಆದುದರಿಂದ ದರ್ಶನ-ಧರ್ಮಗಳು ಪರಸ್ಪರ ನೆರವನ್ನು ಪಡೆದು, ಜೀವನಕ್ಕೆ ವೈಭವವನ್ನು ನೀಡಬೇಕು.

ಮೇಲಾಗಿ, ನೀವು ಈ ಮಾತನ್ನು ಮರೆಯಕೂಡದು, "ತನ್ನಲ್ಲಿ ಮನಃಶಾಂತಿಯನ್ನು ಪಡೆಯುವದಷ್ಟೇ ದಾರ್ಶನಿಕನ ಕಾರ್ಯವಲ್ಲ, ಅಲ್ಲಿಯೇ ಅದು ನಿಲ್ಲಕೂಡದು. ಸಮಾಜದಲ್ಲಿ, ರಾಷ್ಟ್ರಗಳಲ್ಲಿ ಹಾಗೂ ಇಡಿ ಜಗತ್ತಿನಲ್ಲಿ ಶಾಂತಿಯನ್ನೂ ಸಾಮರಸ್ಯವನ್ನೂ

ನಿರ್ಮಿಸುವದು ಆತನ ಪರಮ ಕರ್ತವ್ಯವಾಗಿರುವದು. ಈ ದೃಷ್ಟಿಯಿಂದ ಜಗತ್ತಿನ ಭವಿತವ್ಯವು ದಾರ್ಶನಿಕರನ್ನು ಆಶ್ರಯಿಸಿರುವದು ಎಂದು ಹೇಳಬಹುದು."

ಭಾವಿಕ ಭಕ್ತರಿಗೆ :

"ಸ್ನೇಹಿತರೇ! ನೀವು ನಿಮ್ಮ ಬಗೆಯಿಂದ ಭಗವಂತನನ್ನು ಆರಾಧಿಸುತ್ತಿರುವಿರಿ. ಇದೊಂದು ಒಳ್ಳೆಯ ಪುಣ್ಯಕಾರ್ಯ. ಆದರೆ ನಿಮ್ಮ ಪಾವನ ಕ್ಷೇತ್ರದಲ್ಲಿ ಸೇರಿರುವ ಎರಡು ಭೂತಗಳ ಬೆಗೆಗೆ ನೀವು ತುಂಬ ಎಚ್ಚರವಹಿಸಬೇಕು. **ಅಂಧಶ್ರದ್ಧೆಯು** ಒಂದು, **ಅಶ್ರದ್ಧೆಯು** ಇನ್ನೊಂದು. ಎರಡನ್ನೂ ನೀವು ಹೊರದೂಡಬೇಕು. ಅದನ್ನು ಮಾಡಲು, ನೀವು ನಿಜವಾದ ದಾರ್ಶನಿಕ ಸಂತರಿಂದ ಮಾರ್ಗದರ್ಶನ ಪಡೆಯಬೇಕು. ಅವರು ನಿಮಗೆ ಭಗವಂತನ ಬಗೆಗೂ, ಭಕ್ತಿಯ ಬಗೆಗೂ ಸರಿಯಾದ ಜ್ಞಾನವನ್ನು ನೀಡಬಹುದು. ನೀವು ಅವರ ಬೋಧೆಯನ್ನೂ ಸಾಧನವನ್ನೂ ಅಂತ:ಕರಣ-ಪೂರ್ವಕ ಅನುಸರಿಸಿದರೇನೇ ಪರಮಾರ್ಥದಲ್ಲಿ ನೀವು ನಿಜವಾದ ಪ್ರಗತಿಯನ್ನು ಪಡೆಯಬಲ್ಲಿರಿ! ಅಲ್ಲಿಯವರೆಗೆ ನಿಮ್ಮ ಪ್ರಗತಿಯು ಆಗಲರಿಯದು."

ನೀತಿ-ನಿಪುಣರಿಗೆ :

"ಸ್ನೇಹಿತರೇ! ನೀವು ದುರ್ಗುಣಗಳನ್ನು ಅಳಿಸಿ, ಸದ್ಗುಣಗಳನ್ನು ಬೆಳೆಯಿಸಲು ಬಯಸುವಿರಿ. ಆದರೆ ಮೊದಲು ನೀವು ಅವುಗಳ ನಿಜವಾದ ಸ್ವರೂಪವನ್ನು ಅರಿಯಲು ಯತ್ನಿಸಬೇಕು. ಭಗವಂತನೆಡೆ ಒಯ್ಯಲಿರುವದೇ ಸದ್ಗುಣ. ಅವನಿಂದ ದೂರ ಒಯ್ಯುವದೇ ದುರ್ಗುಣ. ಈ ಮೇರೆಗೆ, ಭಗವಂತನ ಭಕ್ತಿಯೇ ಕೇಂದ್ರಭೂತವಾದ ಸದ್ಗುಣ. ನೀವು ಭಕ್ತಿಯನ್ನು ಬೆಳೆಸಿದರೆ, ಬೇರೆ ಸದ್ಗುಣಗಳನ್ನು ಸುಲಭವಾಗಿ ಬೆಳೆಸಬಹುದು. ಮೇಲಾಗಿ, ನೀವು ಸದ್ಭಾವದ-ಕಲ್ಯಾಣದ (Goodness) ಆದರ್ಶವನ್ನು ಆರಾಧಿಸುವಿರಿ. ಆದರೆ ಸದ್ಭಾವವು ಭಗವಂತನಲ್ಲಿಯೇ ನೆಲೆಸಿರುವರು ಎಂಬುದನ್ನು ನೀವು ಮರೆಯಕೂಡದು. ಭಗವಂತನನ್ನುಳಿದು ಅದಕ್ಕೆ ಅಸ್ತಿತ್ವವೇ ಇರಲರಿಯದು-ಬೆಲೆಯೇ ಇರಲರಿಯದು. ಆದುದರಿಂದ ಭಕ್ತಿಯಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡರೇನೇ ನಿಜವಾದ ಸದ್ಭಾವವನ್ನು ಪಡೆಯಬಲ್ಲಿರಿ.

ಅದಕ್ಕಾಗಿ ನೀತಿಯು, ಬುದ್ಧಿನಿಷ್ಠ ಪಾರಮಾರ್ಥಿಕ ಅನುಭೂತಿಯನ್ನು ಪಡೆಯಲೆಳೆಸಬೇಕು. ನೈತಿಕ ಪರಮ-ಕಲ್ಯಾಣವು, ಪಾರಮಾರ್ಥಿಕ ಪರಮಕಲ್ಯಾಣದಲ್ಲಿ ಬೆರೆಯಬೇಕು. ಅಂದಾಗಲೇ ಅದು ಸ್ಥಿರತೆಯನ್ನೂ ಪೂರ್ಣತೆಯನ್ನೂ ಪಡೆಯಬಲ್ಲದು.

ಕಲಾವಂತರಿಗೆ :

"ಗೆಳೆಯರೇ! ನೀವು ಆರಾಧಿಸುತ್ತಿರುವ ಸೌಂದರ್ಯವು ಭಗವಂತನಲ್ಲಿಯೇ ನೆಲೆಸಿರುವ ನಿಜವಾದ ಸೌಂದರ್ಯದ ಮಸುಕಾದ ಪ್ರತಿಬಿಂಬ. ನೀವು ಈವರೆಗೆ ಪ್ರೀತಿಸುತ್ತಿರುವ, ಅಂದವೆಂದು ಕರೆಯಲಾದ, ರೂಪ-ವರ್ಣಗಳು, ಮಧುರ ಸಂಗೀತ, ಸುವಾಸನೆ, ಸವಿಯಾದ ರಸ, ಸುಖದ ಸ್ಪರ್ಶ- ಇವೆಲ್ಲ ಕೇವಲ ಹುರುಳಿಲ್ಲದೆ ನೆರಳುಗಳು.

ಅವುಗಳ ತಿರುಳು ಪಾರಮಾರ್ಥಿಕ ಸೃಷ್ಟಿಯಲ್ಲೇ ದೊರೆಯಬಲ್ಲದು. ಆದುದರಿಂದ ಇಂಥ ತೆರಳಲಿರುವ ನೆರಳುಗಳನ್ನು ಹಿಂಬಾಲಿಸುವುದನ್ನು ತೊರೆದು, ನಿಜವಾದ ವಸ್ತುಗಳನ್ನೂ ಪಡೆಯಲು ಯತ್ನಿಸಿ, ನೀವು ಅವುಗಳಿಂದ ದೊರಕಿಸಿದ ಪ್ರತಿಕ್ರಿಯೆಗಳನ್ನೂ, ಅನುಭವಗಳನ್ನೂ ನಿಮ್ಮ ಕಲಾಕೃತಿಗಳಲ್ಲಿ ಕಾಣಿಸಬೇಕು. ದಯವಿಟ್ಟು ವಿಷಯಸುಖದ ಆದರ್ಶವನ್ನೇ ಗೌರವಿಸಬೇಡಿ. ಕಲೆಯ ಪರಮೋನ್ನತ ಗುರಿಯು ಭಗವಂತನ ವೈಭವವನ್ನು ಬೆಳೆಸುವದು. ಹಾಗೂ ಮಾನವನ ಜೀವನವನ್ನು ಉನ್ನತಗೊಳಿಸುವದು ಆಗಿರುವದು. ಆದುದರಿಂದ ನೀವು ಭಗವದ್ಭಕ್ತಿಯನ್ನೂ, ಭಗವದಾನಂದವನ್ನೂ, ಹರಡುವ ಕಾರ್ಯದಲ್ಲಿ ತೊಡಗಬೇಕು. ಮತ್ತು ನಿಮ್ಮ ಅಪ್ರತಿಮ ಕೌಶಲ್ಯದಿಂದ, ಜನರಲ್ಲಿ ಅವುಗಳ ಬಗೆಗೆ ಪ್ರೀತಿಯನ್ನು ಬೆಳೆಸಬೇಕು. ಆಂದಾಗಲೇ ನಿಮ್ಮ ಕಲೆಯು ಪ್ರಪಂಚದಲ್ಲಿ ಶಾಂತಿ-ಸಾಮರಸ್ಯಗಳನ್ನು ನಿರ್ಮಿಸಲು ನೆರವಾಗಬಲ್ಲದು. ಮತ್ತು ಅದು ಮಾನವತೆಗೆ ಒಂದು ವರವಾಗಿ ಪರಿಣಮಿಸಬಲ್ಲದು.

ವಿಜ್ಞಾನಿಗಳಿಗೆ :

"ಗೆಳೆಯರೇ! ನೀವು ನಿಸರ್ಗದಲ್ಲಿಯ ಗುಪ್ತ ಶಕ್ತಿಗಳನ್ನು ಕಂಡು ಹಿಡಿಯುವ ಕಾರ್ಯದಲ್ಲಿ ತೊಡಗಿರುವಿರಿ. ಮತ್ತು ಅದನ್ನು ಮಾನವನ ಜೀವನದಲ್ಲಿಯ ಸುಖ ಸೌಕರ್ಯಗಳನ್ನು ಬೆಳೆಸಲು, ಉಪಯೋಗಿಸಲು ಯತ್ನಿಸುತ್ತಿರುವಿರಿ. ಅದಕ್ಕಾಗಿ ನೀವು ಮಾನವತೆಯ ಕೃತಜ್ಞತೆಯನ್ನೂ, ಧನ್ಯವಾದಗಳನ್ನೂ ಪಡೆಯಲು ತುಂಬಾ ಪಾತ್ರರಾಗಿರುವಿರಿ. ಆದರೆ ನೀವು ನಿರ್ಮಿಸಿದ ಘೋರವಾದ ವಿನಾಶಕಾರಕ ಯಂತ್ರಗಳು, ಮಾನವತೆಯನ್ನು ಸರ್ವನಾಶದ ಸನಿಹಕ್ಕೆ ತಂದಿರಿಸಿರುವವು. ಇತ್ತೀಚೆಗೆ ನೀವು ಭೌತಿಕ ಪರಮಾಣುವನ್ನು ಸ್ಫೋಟಗೊಳಿಸಿರುವಿರಿ. ಅದರಲ್ಲಿ ಹುದುಗಿಕೊಂಡಿರುವ ಭೀಕರವಾದ ಶಕ್ತಿಯನ್ನು ಮುಕ್ತಗೊಳಿಸಿರುವಿರಿ. ನಿರಪರಾಧಿ ಜನರ ಮೇಲೆ ಬೆಂಕಿಯ ಮಳೆಯನ್ನೇ ಕರೆದಿರುವಿರಿ. ಕೋಟ್ಯಾವಧಿ ಜನರನ್ನು ಸುಟ್ಟು ಬಿಟ್ಟಿರುವಿರಿ. ಕೋಟ್ಯಾವಧಿ ಜನರನ್ನು ಅಂಗವಿಕಲರನ್ನಾಗಿ ಮಾಡಿರುವಿರಿ. ಮತ್ತು ಅಂದವಾದ ಪೃಥ್ವಿಯ ಮೇಲೆ ನಿಜವಾದ ನರಕವನ್ನೇ ತಂದಿರಿಸಿರುವಿರಿ. ನೀವು ಪಸರಿಸಿದ ಅಪಾರ ದು:ಖ ಪರಂಪರೆಗಾಗಿ, ನಿಮಗೆ ಪಶ್ಚಾತ್ತಾಪ ಆಗುವದಿಲ್ಲವೇ ? ಇದೀಗ ನಿಮ್ಮ ವರ್ತನೆಯನ್ನು ಬದಲಿಸಿ, ನಿಮ್ಮ ದೃಷ್ಟಿಯನ್ನು ಅಂತರ್ಮುಖಿ ಮಾಡಿ, ಪರಮಾರ್ಥ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸಿ, ಪಾರಮಾರ್ಥಿಕ ಪರಮಾಣುವನ್ನು (Spiritual Atom) ಕಂಡು ಹಿಡಿದು, ಅದನ್ನು ಸ್ಫೋಟಗೊಳಿಸಲು ಯತ್ನಿಸುವ ಸಮಯವು ಬಂದಿಲ್ಲವೆ ? ಅದನ್ನು ನೀವು ಮಾಡಬಲ್ಲವರಾದರೆ, ಅದರಲ್ಲಿ ಅಡಗಿದ ಅಪಾರ ಆನಂದಪೂರ್ಣ ಶಕ್ತಿಯನ್ನು ಹೊರಹೊಮ್ಮಿಸಿ, ಕೂಳಿಲ್ಲದೆ ಕೃಶವಾಗಿರುವ ಜನತೆಯ ಮೇಲೆ, ಅಮೃತದ ಮಳೆಯನ್ನೇ ಕರೆಯಬಲ್ಲಿರಿ. ಅವರಲ್ಲಿ ನವಜೀವನವನ್ನು ನಿರ್ಮಿಸಬಲ್ಲಿರಿ. ಈ ಬಗೆಯಾಗಿ ನೀವು ಪೃಥ್ವಿಯ ಮೇಲೆ ಸ್ವರ್ಗೀಯ ಸಾಮ್ರಾಜ್ಯವನ್ನೇ ಇಳಿಸುವ ಸೌಭಾಗ್ಯವನ್ನು ಪಡೆಯಬಲ್ಲಿರಿ! ಇಂಥ ದೈವೀ ಕಾರ್ಯವನ್ನು ನೀವು ಕೈಕೊಂಡ ದಿನವು ನಿಜವಾಗಿ ಧನ್ಯಧನ್ಯವಾಗದಿರದು.

ಸರ್ವೋದಯದವರಿಗೆ :

"ಸ್ನೇಹಿತರೇ! ಸಾರ್ವತ್ರಿಕ ಕಲ್ಯಾಣದ ನಿಮ್ಮ ಆದರ್ಶವು ನಿಜವಾಗಿ ಸ್ತುತ್ಯವಾದುದು. ಆದರೆ ಈ ಸರ್ವೋದಯವು ನೈಜ ಸ್ವರಾಜ್ಯದಲ್ಲಿಯೇ ಪೂರ್ತಿಯಾಗಿ ಸಾಧ್ಯವಾಗಬಲ್ಲದು, ಎಂಬುದನ್ನು ದಯವಿಟ್ಟು ಮರೆಯಬೇಡಿರಿ. ಈ ಸ್ವರಾಜ್ಯವು- ಆತ್ಮನ ರಾಜ್ಯ- ಭಗವಂತನ ರಾಜ್ಯ. ಅದರಲ್ಲಿ ಭಗವಂತನೇ ಪ್ರಭು. ಅನುಭಾವಿಗಳೇ ಪ್ರಜೆಗಳು. ಅವರೆಲ್ಲ ಪಾರಮಾರ್ಥಿಕ ಪ್ರಪಂಚದ ನಾಗರೀಕರು ಇರುವದರಿಂದ, ಅವರೆಲ್ಲ ಸಮಾನರು. ಅವರಲ್ಲಿ ಕುಲ, ಜಾತಿ, ರಾಷ್ಟ್ರಗಳ ದುರಭಿಮಾನವು ನೆಲೆಸಿರುವುದಿಲ್ಲ. ಅವರು ತಮ್ಮ ಸಾಮರ್ಥ್ಯದ ಮೇರೆಗೆ, ಅವರಿಗೆ ಅದನ್ನು ಸಲ್ಲಿಸುವರು. ಅವರು ಪೂರ್ತಿಯಾಗಿ ಭಯರಹಿತರು, ಚಿಂತಾರಹಿತರು, ದು:ಖರಹಿತರು. ಅವರು ತುಂಬ ಆನಂದಪೂರ್ಣರು. ಮತ್ತು ಅದನ್ನು ಸದೈವ ಅನ್ಯರಿಗೆ ನೀಡಿ, ತಮ್ಮದನ್ನು ಬೆಳೆಸಿಕೊಳ್ಳುವರು. ನಾವು ಅಲ್ಲಿ ಕಾಣುತ್ತಿರುವ ಹೆಣಗಾಟವು ಒಂದೇ ವಿಷಯಕ್ಕಾಗಿ. ಅದಾವುದೆಂದರೆ, ಭಗವಂತನ ಅನಂತ ಭಕ್ತಿಯನ್ನು, ಆನಂದವನ್ನು ಪಡೆಯಲು, ಆದರೆ ಪ್ರತಿಯೊಬ್ಬನು ಅದನ್ನು ತಾನೇ ಪಡೆಯಬೇಕಾಗಿರುವದರಿಂದ, ಅವರಲ್ಲಿ ಮತ್ಸರ ಇರುವದಿಲ್ಲ. ಆ ಆನಂದಾನುಭವವು ಅವರ ಅಂತರಂಗದಿಂದಲೇ ಹೊರಬರುವದು. ಅವರ ಈ ಅನಂತವಾದ, ಶಾಶ್ವತವಾದ ಪಾರಮಾರ್ಥಿಕ ಅನುಭೂತಿಯು ದಿಕ್ ಕಾಲಾತೀತವಾದುದು. ಈ ದೈವೀ ಸಂಗೀತಗಾರರ ಬಳಗವು ತಮ್ಮ ತಮ್ಮ ಸ್ವರವನ್ನು ಸಲ್ಲಿಸಿ, ಅವುಗಳ ಮಧುರ ಮಿಲನದಿಂದ ಒಂದು ಅದ್ಭುತವಾದ ಸ್ವರಮೇಳವನ್ನು ನಿರ್ಮಿಸುವದು. ಅದರಿಂದಲೇ ಸರ್ವರ ಸರ್ವವಿಧದ ಉದಯ- ಕಲ್ಯಾಣ."[2]

ಪರಮಾರ್ಥ ಸಾಧನವೇ ಶ್ರೀ ಮಹಾರಾಜರ ಪರಮ ಮಾನವಧರ್ಮ ಅದನ್ನು ಎಡೆಬಿಡದೆ ಆಚರಿಸಲು, ಅವರು ಇತ್ತೀಚೆಗೆ ಈ ರೀತಿ ಆಜ್ಞಾಪಿಸಿರುವರು. ಅದೇ ಮಾನವತೆಗೆ ಅವರು ನೀಡಿದ ಸನಾತನ ವಿಶ್ವ-ಸಂದೇಶ.

ಧರ್ಮ ಬಿಡಬೇಡಿರೈ। ಧರ್ಮ ಬಿಡಬೇಡಿರೈ।
ಧರ್ಮವೇ ಜೀವನದ ಜೀವಾಳವು॥
ಧರ್ಮದಿಂ ನಡೆಯಿರೈ! ಧರ್ಮದಿಂ ನಡೆಯಿರೈ।
ಧರ್ಮದಿಂ ಜೀವನಕೆ ದಿವ್ಯತ್ವವು॥

ಶಾಂತಿ : ಶಾಂತಿ : ಶಾಂತಿ : !

★ ★ ★ ★

2) R. M. PP 76 to 79

ಗ್ರಂಥಕರ್ತನ ಬೇರೆ ಗ್ರಂಥಗಳು

ಅ ವಿಭಾಗ

ಕನ್ನಡ ಗ್ರಂಥಗಳು :

1. ಸರ್ವಜ್ಞನ ಸಚೇತನ ಸಂದೇಶ
2. ಪ್ರಭುವಿನ ಪ್ರಭೆ
3. ಶ್ರೀ ಬಸವಣ್ಣನವರ ದಿವ್ಯ ಜೀವನ
4. ಶ್ರೀ ಗುರುದೇವ ರಾನಡೆಯವರ ಜೀವನಜ್ಯೋತಿ
5. ಶ್ರೀ ನಿಂಬರಗಿ ಮಹಾರಾಜರ ಭೋಧ ಸುಧೆ (ಪದ್ಯಮಯ)
6. ಶ್ರೀ ಭಾವುಸಾಹೇಬ ಮಹಾರಾಜರ ಜೀವನ-ಗಂಗೆ
7. ಶ್ರೀ ಮಹಿಪತಿರಾಯರ ಸ್ವಾನಂದ-ಸಾಮ್ರಾಜ್ಯ
8. ಶ್ರೀ ಗುರುದೇವ ರಾನಡೆಯವರ ಸಮನ್ವಯ ದರ್ಶನ
9. ಅಕ್ಕರದ ಅಂಜಲಿಗಳು (ಕಾವ್ಯ ಸಂಗ್ರಹ)
10. ಭಗವದ್ಗೀತೆಯ ಸಾಕ್ಷಾತ್ಕಾರ ದರ್ಶನ (ಅನುವಾದ)

ಕ ವಿಭಾಗ

ಮರಾಠಿ ಗ್ರಂಥಗಳು :

१) सर्वज्ञाचा अभंग संदेश
२) श्री भाऊसाहेब महाराजांचि जीवन गंगा.
३) श्री गुरूदेव चरितामृत (काव्वमय)
४) गीत गुरूदेव (कवन संग्रह)

ಕ ವಿಭಾಗ

ಇಂಗ್ಲೀಷ ಗ್ರಂಥಗಳು :

1. Light of India (Message of Mahatmaji)
2. Dr. Ranade's Life of Light
3. Dr. Ranade's Gospel of God-Realisation
4. Thus Spake Gurudev
5. Saint Ekanatha's Gospel of God Devotion
6. Dr. Ranade's Dhyana Gita

ಗ್ರಂಥವನ್ನು ಕುರಿತು ...

ಸಮನ್ವಯವು ಜೀವನದ ಜೀವಾಳ. ಅದು ನಮ್ಮ ಜೀವನಕ್ಕೆ ಶಾಂತಿ ಸಮಾಧಾನಗಳನ್ನು ನೀಡಬಲ್ಲದು. ಅದರ ಅಭಾವವೇ ಅಶಾಂತಿಯ ಆಗರ. ಅನೇಕತೆಯಲ್ಲಿಯ ಏಕತೆಯನ್ನು ಗುರುತಿಸುವದು. ಏಕತೆಯಲ್ಲಿಯ ಅನೇಕತೆಯ ಸ್ಥಳ ಮೂಲ್ಯಗಳ ಪರಿಚಯ ಮಾಡಿಕೊಳ್ಳುವದು ಸಮನ್ವಯ ದೃಷ್ಟಿ

ವಿವಿಧ ಬಗೆಯ ಸಂಘರ್ಷಗಳಿಂದ ಕೂಡಿದ ಇಂದಿನ ಜಗತ್ತಿನಲ್ಲಿ ಸಮನ್ವಯ ದೃಷ್ಟಿ ಅತ್ಯವಶ್ಯವಾಗಿದೆ. ಈ ದೃಷ್ಟಿಯನ್ನು ನೀಡಿ ಮಾರ್ಗದರ್ಶನ ಮಾಡಬಲ್ಲ ದರ್ಶನದ ಅವಶ್ಯಕತೆ ಇಂದು ಹೆಚ್ಚಾಗಿದೆ. ಇಂಥ ದರ್ಶನವನನು ಜಗತ್ತಿಗೆ ನೀಡಿ ಉಪಕಾರ ಮಾಡಿದ ಮಹಾನುಭಾವರು ಆಧುನಿಕ ಭಾರತದ ಅನುಭಾವಿ-ತತ್ವಜ್ಞಾನಿಯಾದ ಶ್ರೀ ಗುರುದೇವ ರಾನಡೆ ಅವರು. ಸಮನ್ವಯದ ನಿಲಯನಾದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು, ಆತನಿಂದ ಸಮಗ್ರ ಜೀವನದ ದರ್ಶನವನ್ನು ಪಡೆದ ಅವರು ನೀಡಿದ 'ಸಮನ್ವಯ -ದರ್ಶನವು', ತತ್ತ್ವಜ್ಞಾನದಲ್ಲಿಯ ವಿವಿಧ ಸಿದ್ಧಾಂತಗಳನ್ನು, ವಿಚಾರಗಳನ್ನು ಮತ್ತು ಜೀವನದ ವಿವಿಧ ಅಂಗಗಳನ್ನು ಸಮನ್ವಯಗೊಳಿಸುತ್ತದೆ. ಶ್ರೀ ಗುರುದೇವರ ಇಂಥ ಅಪೂರ್ವವಾದ 'ಸಮನ್ವಯ-ದರ್ಶನ'ವನ್ನು ಈ ಗ್ರಂಥದಲ್ಲಿ ಅವರ ಪ್ರಿಯ ಶಿಷ್ಯರಲ್ಲೊಬ್ಬರಾದ ಶ್ರೀ ಮನೋಹರರಾವ ದೇಶ ಪಾಂಡೆ ಅವರು ಸಮರ್ಥ ರೀತಿಯಿಂದ ಪ್ರಸ್ತುತ ಪಡಿಸಿದ್ದಾರೆ.